ಮಂಗಳವಾರ, ಡಿಸೆಂಬರ್ 7, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 338 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
'ಕೊಲ್ಲುವ ಪರವಾನಗಿ' ವಿರುದ್ಧ ಮತ್ತೆ ಕೂಗು
ಹ್ಯಾಟ್ರಿಕ್ ಗೆಲುವಿಗೆ ಲಗಾಮು? 5
'ಲಿಂಗಾಯತರ ಮತಾಂತರ ವಿಷಾದನೀಯ' 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,747 ▼	16,912 ▼	₹49,300 (ಬೆಂಗಳೂರು)	₹62,700 (ಬೆಂಗಳೂರು)	75.45 ▼

ಸಶಸ್ತ್ರ ಪಡೆಗಳಿಗೆ ವಿಶೇಷಾಧಿಕಾರ ಕಾಯ್ದೆ ಹಿಂದಕ್ಕೆ ಪಡೆಯಲು ಲೋಕಸಭೆಯಲ್ಲಿ ಒತ್ತಾಯ

ನಾಗರಿಕರ ಹತ್ಯೆ: ಸಂಸತ್‌ನಲ್ಲಿ ಪ್ರತಿಧ್ವನಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಗಾಲ್ಯಾಂಡ್‌ನಲ್ಲಿ ಸೈನಿಕರಿಂದ 14 ನಾಗರಿಕರ ಹತ್ಯೆ ಪ್ರಕರಣವು ಲೋಕಸಭೆ ಕಲಾಪದಲ್ಲಿಯೂ ಸೋಮವಾರ ಪ್ರತಿಧ್ವನಿಸಿದೆ. ಲೋಕಸಭೆಯ ಹಲವು ಸದಸ್ಯರು ಹತ್ಯೆಯನ್ನು ಖಂಡಿಸಿದ್ದಾರೆ. ಜತೆಗೆ, ರಾಜ್ಯದ ಮೇಲೆ ಹೇರಲಾಗಿರುವ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯನ್ನು (ಆಫ್‌ಸ್ಪ) ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದ್ದಾರೆ.

ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಯ್ದುಕೊಳ್ಳಲು ಗಡಿ ಪ್ರದೇಶಗಳಲ್ಲಿ ನೆಲೆಸಿರುವ ಜನರ ಜತೆಗೆ ಭಾವನಾತ್ಮಕ ನಂಟು ಅಗತ್ಯ ಎಂದು ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಪ್ರತಿಪಾದಿಸಿದರು. ದುರದೃಷ್ಟಕರ ಹತ್ಯಾಕಾಂಡದ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿಯಿಂದ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು.

'ಜನರನ್ನು ಮನಸೋ ಇಚ್ಛೆ ಕೊಲ್ಲುವ ಅಧಿಕಾರವನ್ನು ಭದ್ರತಾ ಪಡೆಗಳಿಗೆ ಆಫ್‌ಸ್ಪ ನೀಡುವುದಿಲ್ಲ' ಎಂದು ನ್ಯಾಷನಲಿಷ್ಟ್ ಪ್ರೋಗ್ರೆಸ್ಸಿವ್ ಪಾರ್ಟಿಯ (ಎನ್‌ಡಿಪಿಪಿ) ಸಂಸದ ತೊಖೆಹೊ ಯೆಪ್ಥೊಮಿ ಹೇಳಿದರು.

ಕಾನೂನು ಮತ್ತು ಸುವ್ಯವಸ್ಥೆ ಉಲ್ಲಂಘನೆ ಸಂದರ್ಭದಲ್ಲಿ ಎಚ್ಚರಿಕೆ ನೀಡಿದ ನಂತರ ಬಲ ಪ್ರಯೋಗಿಸುವ ಮತ್ತು ಗುಂಡು ಹಾರಿಸುವ ಅಧಿಕಾರವನ್ನು ಭದ್ರತಾ ಪಡೆಗಳಿಗೆ ಆಫ್‌ಸ್ಪ ನೀಡುತ್ತದೆ.

ನಾಗಾಲ್ಯಾಂಡ್‌ನ ಪರಿಸ್ಥಿತಿ ಹದಗೆಡಲು ಅವಕಾಶ ನೀಡಬಾರದು. ಮೃತರ ಕುಟುಂಬಗಳಿಗೆ ಗರಿಷ್ಠ ಪರಿಹಾರ ನೀಡಬೇಕೆಂದು ತೃಣಮೂಲ ಕಾಂಗ್ರೆಸ್ ಸದಸ್ಯ ಸುದೀಪ್ ಬಂದೋಪಾಧ್ಯಾಯ ಹೇಳಿದರು. ಗುಪ್ತಚರ ಸಂಸ್ಥೆಗಳು, ಭದ್ರತಾ ಪಡೆಗಳಿಗೆ ದಾರಿ ತಪ್ಪಿಸುವ ಗುಪ್ತಚರ ಮಾಹಿತಿ ನೀಡಿದ್ದು ಹೇಗೆ ಎಂದು ಶಿವಸೇನಾದ ಸಂಸದ ವಿನಾಯಕ್ ರಾವುತ್ ಪ್ರಶ್ನಿಸಿದರು.

ನಾಗಾಲ್ಯಾಂಡ್‌ನ ಮೊನ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳಿಂದ ಹತ್ಯೆಗೀಡಾದ ನಾಗರಿಕರ ಸಾಮೂಹಿಕ ಅಂತ್ಯಕ್ರಿಯೆಯಲ್ಲಿ ಸೋಮವಾರ ಸಾರ್ವಜನಿಕರು ಪಾಲ್ಗೊಂಡರು – ರಾಯಿಟರ್ಸ್ ಚಿತ್ರ

ಮುಖ್ಯಾಂಶಗಳು

- ಕಾಂಗ್ರೆಸ್‌ನ ನಾಲ್ವರು ಸದಸ್ಯರ ಸಮಿತಿಯಿಂದ ವಾರದಲ್ಲಿ ವರದಿ
- ನಾಗಾ ಸ್ಟೂಡೆಂಟ್ಸ್ ಫೆಡರೇಷನ್ ಕರೆ ನೀಡಿದ್ದ ಬಂದ್ ಶಾಂತಿಯುತ

ನಾಗಾಲ್ಯಾಂಡ್ ಮತ್ತು ನಾಗಾ ಜನರು ಆಫ್‌ಸ್ಪವನ್ನು ಸದಾ ವಿರೋಧಿಸುತ್ತಲೇ ಬಂದಿದ್ದಾರೆ. ಈ ಕಾಯ್ದೆಯನ್ನು ಹಿಂದಕ್ಕೆ ಪಡೆಯಲೇಬೇಕು

ನೆಫಿಯು ರಿಯೊ, ನಾಗಾಲ್ಯಾಂಡ್ ಮುಖ್ಯಮಂತ್ರಿ

ಸೇನೆಯ ವಿರುದ್ಧ ಕೊಲೆ ಪ್ರಕರಣ

ಕೊಹಿಮಾ (ಪಿಟಿಐ): 'ನಾಗರಿಕರನ್ನು ಕೊಲ್ಲುವ ಉದ್ದೇಶದಿಂದಲೇ ಸೈನಿಕರು ಕಾರ್ಯಾಚರಣೆ ನಡೆಸಿದ್ದಾರೆ' ಎಂದು ಸೇನೆಯ 21ನೇ ಪ್ಯಾರಾ ಸ್ಪೆಶಲ್ ಫೋರ್ಸ್ ವಿರುದ್ಧ ನಾಗಾಲ್ಯಾಂಡ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸೈನಿಕರ ವಿರುದ್ಧ ಕೊಲೆ, ಕೊಲೆ ಯತ್ನ ಮತ್ತು ಏಕ ಉದ್ದೇಶದಿಂದ ಸಂಘಟಿತ ಕೃತ್ಯ ಎಸಗಿದ ಆರೋಪಗಳ ಅಡಿ ಎಫ್‌ಐಆರ್ ದಾಖಲಿಸಲಾಗಿದೆ.

ವಿವರ 11

ಹತ್ಯಾಕಾಂಡಕ್ಕೆ ಕೇಂದ್ರದ ವಿಷಾದ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಾಗಾಲ್ಯಾಂಡ್‌ನಲ್ಲಿ ನಡೆದ ನಾಗರಿಕರ ಹತ್ಯೆಗೆ ವಿಷಾದ ವ್ಯಕ್ತಪಡಿಸಿದ್ದಾರೆ. ನುಸುಳುಕೋರರ ವಿರುದ್ಧ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಇಂತಹ ಘಟನೆಯು ಮರುಕಳಿಸದಂತೆ ಎಲ್ಲ ಸಂಸ್ಥೆಗಳು ಎಚ್ಚರ ವಹಿಸಬೇಕು. ಪ್ರಕರಣದ ಬಗ್ಗೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯು ಒಂದು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಅವರು ಹೇಳಿದ್ದಾರೆ.

ಪರಿಸ್ಥಿತಿಯ ಮೇಲೆ ಕೇಂದ್ರ ಸರ್ಕಾರವು ನಿಗಾ ಇರಿಸಿದೆ. ನಾಗಾಲ್ಯಾಂಡ್‌ನಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಖಾತರಿಪಡಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ.

11ನೇ ಪುಟ ನೋಡಿ

ಕೊಹ್ಲಿ ಬಳಗಕ್ಕೆ 'ದಾಖಲೆ' ಜಯ

ಮುಂಬೈಯಲ್ಲಿ ನಡೆದ ನ್ಯೂಜಿಲೆಂಡ್ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಜಯ ಗಳಿಸಿದ ಭಾರತ ತಂಡದ ಆಟಗಾರರು ಪ್ರೇಕ್ಷಕರಿಗೆ ಕೃತಜ್ಞತೆ ಸಲ್ಲಿಸಿದರು. ವಿರಾಟ್ ಕೊಹ್ಲಿ ಬಳಗ 372 ರನ್‌ಗಳಿಂದ ಗೆದ್ದು 1-0ಯಿಂದ ಸರಣಿ ತನ್ನದಾಗಿಸಿಕೊಂಡಿತು. ಇದು, ಟೆಸ್ಟ್ ಕ್ರಿಕೆಟ್‌ನಲ್ಲಿ (ರನ್‌ಗಳ ಅಂತರದಲ್ಲಿ) ಭಾರತದ ಅತಿದೊಡ್ಡ ಗೆಲುವು. ಈ ಜಯದೊಂದಿಗೆ ತಂಡ ಐಸಿಸಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿತು –ಪಿಟಿಐ ಚಿತ್ರ (ವಿವರ ಪುಟ 12)

'ಅಗತ್ಯಬಿದ್ದರೆ ಶಾಲೆ ಬಂದ್'

ಪ್ರಜಾವಾಣಿ ವಾರ್ತೆ



ಬಿ.ಸಿ. ನಾಗೇಶ್

ಬೆಂಗಳೂರು: 'ಕೋವಿಡ್ ಮೇಲೆ ಸರ್ಕಾರ ನಿಗಾ ವಹಿಸಿದೆ. ಒಂದು ವೇಳೆ ಶಾಲೆಗಳನ್ನು ಮುಚ್ಚಬೇಕಾದ, ಪರೀಕ್ಷೆಗಳನ್ನು ಸ್ಥಗಿತಗೊಳಿಸಬೇಕಾದ ಪರಿಸ್ಥಿತಿ ಎದುರಾದರೆ, ಆ ವಿಷಯದಲ್ಲಿ ಹಿಂದೇಟು ಹಾಕುವುದಿಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸ್ಪಷ್ಟಪಡಿಸಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸದ್ಯ ಅಂಥ ಯಾವುದೇ ಪರಿಸ್ಥಿತಿ ಇಲ್ಲ. ಪೋಷಕರು ಆತಂಕಕ್ಕೆ ಒಳಗಾಗಬೇಕಿಲ್ಲ' ಎಂದರು.

'ಮಕ್ಕಳ ಮೇಲೆ ಕೋವಿಡ್ ಯಾವುದೇ ಪರಿಣಾಮ ಬೀರುವುದಿಲ್ಲವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದರೂ ನಮಗೆ ಮಕ್ಕಳ ಆರೋಗ್ಯ ಬಹಳ ಮುಖ್ಯ. ಪರಿಸ್ಥಿತಿ ಕೈ ಮೀರಿದರೆ ಪರ್ಯಾಯ ಏನು ಮಾಡಬೇಕು ಎಂದೂ ಯೋಚನೆ ಮಾಡುತ್ತೇವೆ. ತಜ್ಞರ ಸಲಹೆ ಪಡೆದು, ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

'ವಸತಿ ಶಾಲೆಗಳಲ್ಲಿ ಕೊರೊನಾ ಸೋಂಕು ಹೆಚ್ಚಿನ ಸಂಖ್ಯೆಯಲ್ಲಿ ದೃಢಪಟ್ಟಿರುವ ಕುರಿತಂತೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಆಯುಕ್ತರ ಜೊತೆ ಸಮಾಲೋಚನೆ ನಡೆಸಿದ್ದೇನೆ' ಎಂದರು.

ಒಮೈಕ್ರಾನ್ ನಿಯಂತ್ರಣಕ್ಕೆ ಸರ್ಕಾರ ಸನ್ನದ್ಧ: ಸಿ.ಎಂ

ಬೀದರ್: 'ತಜ್ಞರ ಸಲಹೆ ಆಧರಿಸಿ ಕೋವಿಡ್ ಮಾರ್ಗಸೂಚಿಗಳನ್ನು ಕಾಲಕಾಲಕ್ಕೆ ಬದಲಿಸಲಾಗುವುದು. ಒಮೈಕ್ರಾನ್ ನಿಯಂತ್ರಣಕ್ಕೆ ಸರ್ಕಾರ ಎಲ್ಲ ರೀತಿಯಿಂದಲೂ ಸನ್ನದ್ಧವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಹಲವು ಶಾಲೆ ಹಾಗೂ ಹಾಸ್ಟೆಲ್‌ಗಳನ್ನು ಸೇರಿಸಿ ರಚಿಸಲಾದ ಕ್ಲಸ್ಟರ್‌ನಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ' ಎಂದರು.

'ಚಿಕ್ಕಮಗಳೂರಿನ ಇಂತಹ ಕ್ಲಸ್ಟರ್‌ವೊಂದರಲ್ಲಿ ಎಲ್ಲ ವಿದ್ಯಾರ್ಥಿಗಳ ತಪಾಸಣೆ ಮಾಡಿದಾಗ ಸೋಂಕು ಪತ್ತೆಯಾಗಿದೆ. ಸದ್ಯ ಹಾಸ್ಟೆಲ್ ಅನ್ನು ಸೀಲ್‌ಡೌನ್ ಮಾಡಲಾಗಿದೆ' ಎಂದರು.

ಒಳ ಪುಟಗಳು
ರಷ್ಯಾ ಜತೆಗೆ ರಕ್ಷಣಾ ಸಹಕಾರ ವಿಸ್ತರಣೆ 9
ಒಮೈಕ್ರಾನ್ ಭೀತಿಗೆ 949 ಅಂಶ ಕುಸಿದ ಸೆನ್ಸೆಕ್ಸ್ 10

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
Together We Can
ಗೃಹ ಸಾಲದ ಬಡ್ಡಿದರವನ್ನು ಕಡಿತಗೊಳಿಸಲಾಗಿದೆ
ಯಾವುದೇ ಮೊತ್ತಕ್ಕೆ
6.65% ಪ್ರ.ವ.
ಸೀಮಿತ ಅವಧಿಯ ಕೊಡುಗೆ
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ಮತ್ತು ತಕ್ಷಣ ಅನುಮೋದನೆ ಪಡೆಯಿರಿ • ಸಂಸ್ಕರಣೆ ಮತ್ತು ದಸ್ತಾವೇಜು ಶುಲ್ಕಗಳಿಲ್ಲ
ಕೆನರಾ ಕರೆ ಮಾಡಿ 1800 425 0018

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ತಯಾರಕರು
SDM ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
Ph: 0820-2520852, 8970977513

ಸಿದ್ದರಾಮಯ್ಯ ಮತ್ತೆ ಬಾದಾಮಿಯಲ್ಲಿ ಸ್ಪರ್ಧೆ: ಚಿಮ್ಮನಕಟ್ಟಿ ವಿರೋಧ

'ಸ್ವಕ್ಷೇತ್ರದಲ್ಲಿ ಗೆಲ್ಲುವ ಯೋಗ್ಯತೆ ಇಲ್ಲಂದ್ರ ಇಲ್ಲಿ ಯಾಕ ನಿಲ್ಲಬೇಕು?'

ಪ್ರಜಾವಾಣಿ ವಾರ್ತೆ



ಬಿ.ಬಿ. ಚಿಮ್ಮನಕಟ್ಟಿ

ಬಾಗಲಕೋಟೆ: 'ಸ್ವಕ್ಷೇತ್ರದಲ್ಲಿ ಗೆಲ್ಲುವ ಯೋಗ್ಯತೆ ಇಲ್ಲಂದ್ರ ಇಲ್ಲಿ ಯಾಕ ನಿಲ್ಲಬೇಕು? ನಮಗ ಯಾಕ ಗಂಟ ಬಿದ್ರಿ ನೀವು' ಎಂದು ವಿಧಾನ ಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಮಾಜಿ ಶಾಸಕ ಬಿ.ಬಿ.ಚಿಮ್ಮನಕಟ್ಟಿ ಸೋಮವಾರ ನೇರವಾಗಿಯೇ ಪ್ರಶ್ನಿಸಿದರು.

ಬಾದಾಮಿಯಲ್ಲಿ ವಿಧಾನ ಪರಿಷತ್ ಚುನಾವಣಾ ಪ್ರಚಾರಸಭೆಯಲ್ಲಿ ಸಿದ್ದರಾಮಯ್ಯ ಎದುರೇ ಅವರು ಆಕ್ರೋಶ ಹೊರಹಾಕಿದರು.

ಕಳೆದ ಚುನಾವಣೆಯಲ್ಲಿ ಚಿಮ್ಮನಕಟ್ಟಿ ಅವರು ಸಿದ್ದರಾಮಯ್ಯ ಅವರಿಗೆ ಬಾದಾಮಿ ಕ್ಷೇತ್ರ ಬಿಟ್ಟುಕೊಟ್ಟಿದ್ದರು. ಮತ್ತೆ ಬಾದಾಮಿಯಿಂದಲೇ ಸ್ಪರ್ಧಿಸುವುದಾಗಿ ಬೆಳಿಗ್ಗೆಯಷ್ಟೇ ಸಿದ್ದರಾಮಯ್ಯ ಹೇಳಿದ್ದರು.

ಅದಕ್ಕೆ ಪ್ರತಿಕ್ರಿಯೆಯಾಗಿ ತಮ್ಮ ಭಾಷಣದಲ್ಲಿ ವಿರೋಧ ವ್ಯಕ್ತಪಡಿಸಿದರು. ಚಿಮ್ಮನಕಟ್ಟಿ ಭಾಷಣ ಆರಂಭಿಸುತ್ತಿದ್ದಂತೆಯೇ ಬೆಂಬಲಿಗರು 'ಹೌದಾ ಹುಲಿಯಾ' ಎಂದು ಕೂಗಿದರು.

ಅದಕ್ಕೆ ಚಿಮ್ಮನಕಟ್ಟಿ ಅವರು, 'ನಾನು ಮೊದಲು ಹುಲಿ ಆಗಿದ್ದೆ. ಈಗ ಇಲಿ ಮಾಡ್ಯಾರ. ನೀವು (ಬೆಂಬಲಿಗರು) ಮನಸ್ಸು ಮಾಡಿದರ ಮತ್ತ ಹುಲಿ ಅಕ್ಕೀನಿ. ಮಂತ್ರಿ ಅಕ್ಕೀನಿ, ಮುಖ್ಯಮಂತ್ರಿನೂ ಆಕ್ಕೀನಿ' ಎಂದರು. ಆಗ ಬೆಂಬಲಿಗರು ಚಪ್ಪಾಳೆ, ಕೇಕೆ ಹಾಕಿದರು.

6ನೇ ಪುಟ ನೋಡಿ

'ಜನರ ಪ್ರೀತಿ ಇರುವೆಡೆ ಸ್ಪರ್ಧೆ'

ಸಿದ್ದರಾಮಯ್ಯ

ಬಾಗಲಕೋಟೆ: 'ನನಗೆ ಜನರು ಎಲ್ಲಿ ಪ್ರೀತಿಯಿಂದ ಕರೆಯುತ್ತಾರೆಯೋ ಅಲ್ಲಿ ಚುನಾವಣೆಗೆ ನಿಲ್ಲುವೆ. ಬಾದಾಮಿಯಲ್ಲಿ ಕರೆಯುತ್ತಾರೆ, ಮುಂದಿನ ಬಾರಿಯೂ ಇಲ್ಲಿಯೇ ಸ್ಪರ್ಧಿಸುವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬಾದಾಮಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಬಾದಾಮಿ ಬದಲು ಮುಸ್ಲಿಮರ ಮತ ಹೆಚ್ಚಿರುವ ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಲ್ಲಿ ನಿಲ್ಲಲಿದ್ದಾರೆ' ಎಂಬ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿಕೆಗೆ ಹೀಗೆ ಪ್ರತಿಕ್ರಿಯಿಸಿದರು.

'ಎಲ್ಲಿ ಸ್ಪರ್ಧಿಸಬೇಕು ಎಂದು ಈಶ್ವರಪ್ಪನನ್ನು ಕೇಳಿ ನಿರ್ಧರಿಸಲು ಆಗುತ್ತದೆಯೇ? ನಾನು ಚಾಮರಾಜಪೇಟೆಯಲ್ಲಿ ನಿಲ್ಲುವುದಾಗಿ ಹೇಳಿದ್ದೇನಾ? ಈಶ್ವರಪ್ಪ ಯಾರು ನನಗೆ ಹೇಳಲು?' ಎಂದು ತಿರುಗೇಟು ನೀಡಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

1,300 ಎಕರೆ ಟೀ ತೋಟ ವಶಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ವಿರಾಜಪೇಟೆ (ಕೊಡಗು): ಟಾಟಾ ಸಂಸ್ಥೆಯ ಸ್ವಾಧೀನದಲ್ಲಿದ್ದ 1,300 ಎಕರೆ ಟೀ ತೋಟವನ್ನು ಸರ್ಕಾರದ ವಶಕ್ಕೆ ನೀಡಬೇಕು ಎಂದು ಸ್ಥಳೀಯ ಸಿವಿಲ್ ನ್ಯಾಯಾಲಯವು ಮಹತ್ವದ ಆದೇಶ ನೀಡಿದೆ.

ಜಿಲ್ಲೆಯ ಟಿ.ಶೆಟ್ಟಿಗೇರಿ, ಹುದಿಕೇರಿ ಹಾಗೂ ಬಿರುನಾಣಿ ಗ್ರಾಮದ ವ್ಯಾಪ್ತಿಯಲ್ಲಿ ಇರುವ ಟೀ ತೋಟವು ಟಾಟಾ ಸಂಸ್ಥೆಯ ಸ್ವಾಧೀನದಲ್ಲಿತ್ತು.

ಬ್ರಿಟಿಷ್ ಸರ್ಕಾರವು 1914–15ರಲ್ಲಿ ಟೀ ಸಾಗುವಳಿಗಾಗಿ ಮೆಕ್ ಡೋಗಲ್ ಗ್ಲೆನ್ ಲೋರ್ನಾ ಸಂಸ್ಥೆಗೆ 999 ವರ್ಷಗಳಿಗೆ ಗುತ್ತಿಗೆ ನೀಡಿತ್ತು. ನಂತರದ ವರ್ಷಗಳಲ್ಲಿ ಅವಧಿಯನ್ನು 99 ವರ್ಷಕ್ಕೆ ಸೀಮಿತಗೊಳಿಸಲಾಗಿತ್ತು. ಪ್ರತಿಯಾಗಿ ಬಾಡಿಗೆ ನಿಗದಿಪಡಿಸಲಾಗಿತ್ತು. 1928ರಲ್ಲಿ ಗ್ಲೆನ್ ಲೋರ್ನಾ ಸಂಸ್ಥೆಯು ಅನಾರ್ಕಲ್ ಟೀ ಕಂಪನಿಗೆ, ನಂತರ 1985ರಲ್ಲಿ ಈಗಿನ ಟಾಟಾ ಕಾಫಿ ಸಂಸ್ಥೆಯಾದ ಆಗಿನ ಕನ್ಸಾಲಿಡೇಟೆಡ್ ಸಂಸ್ಥೆಗೆ ಹಸ್ತಾಂತರಿಸಿತ್ತು.

ಈ ಜಾಗದ ಆರ್‌.ಟಿ.ಸಿಯಲ್ಲಿದ್ದ 'ಪೈಸಾರಿ' ಎಂಬ ನಿಬಂಧನೆಯನ್ನು ಕಾನೂನು ಬಾಹಿರವಾಗಿ 'ಸಾಗುವಳಿ' ಎಂದು ಬದಲಾಯಿಸಲಾಗಿದೆ ಎಂದು ಸರ್ಕಾರ ಹೇಳಿತ್ತು. 1914ರಲ್ಲಿ ಜಾಗವನ್ನು ಗುತ್ತಿಗೆ ಕೊಡುವಾಗ ಇದ್ದಂತೆಯೇ ಸರಿಪಡಿಸಿ, ತನ್ನ ವಶಕ್ಕೆ ಜಮೀನು ನೀಡುವಂತೆ ಸರ್ಕಾರವು ಹೇಳಿತ್ತು. ಜತೆಗೆ, 99 ವರ್ಷಗಳ ಗುತ್ತಿಗೆ ಅವಧಿ ಮುಕ್ತಾಯವಾಗಿದ್ದರಿಂದ ಜಾಗವನ್ನು ಮೀಸಲು ಅರಣ್ಯ ಎಂದು ಪರಿಗಣಿಸಲು ಅರಣ್ಯ ಇಲಾಖೆಯು ಪ್ರಕ್ರಿಯೆ ಆರಂಭಿಸಿತ್ತು.

6ನೇ ಪುಟ ನೋಡಿ

ಸಹಾಯಕ ತೋಟಗಾರಿಕಾ ಅಧಿಕಾರಿಗಳ 309 ಹುದ್ದೆ: ಆಯ್ಕೆಯಾದವರ ಅಳಲು

'ಆದೇಶ ಪತ್ರ'ಕ್ಕೆ ಬೇಕಿದೆ ಸಚಿವರ ಒಪ್ಪಿಗೆ!

• ರಾಜೇಶ್ ರೈ ಚಟ್ಲ

ಬೆಂಗಳೂರು: ಸಹಾಯಕ ತೋಟಗಾರಿಕೆ ಅಧಿಕಾರಿಗಳ 309 (ಕಲ್ಯಾಣ ಕರ್ನಾಟಕದ 88) ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮೂಲಕ ಆಯ್ಕೆಯಾಗಿ, ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡರೂ ಅಭ್ಯರ್ಥಿಗಳಿಗೆ ತೋಟಗಾರಿಕೆ ಇಲಾಖೆ ನೇಮಕಾತಿ ಆದೇಶ ಪತ್ರ ನೀಡಿಲ್ಲ.

'ನೇಮಕಾತಿಗೆ ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಆದರೆ, ಸರ್ಕಾರದ (ತೋಟಗಾರಿಕೆ ಸಚಿವ ಮುನಿರತ್ನ) ಅನುಮತಿ ಸಿಕ್ಕಿಲ್ಲ. ಹೀಗಾಗಿ, ನೇಮಕಾತಿ ಆದೇಶ ನೀಡಲು ಸಾಧ್ಯವಾಗಿಲ್ಲ' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಆದರೆ, ನೇಮಕಾತಿ ಆದೇಶ ನೀಡಲು ಹಣದ ಬೇಡಿಕೆ ಇಡಲಾಗುತ್ತಿದೆ. ಆದ್ದರಿಂದ ನೇಮಕಾತಿ ಆದೇಶ ಪತ್ರ ನೀಡುತ್ತಿಲ್ಲ ಎಂದು ಕೆಲವು ಅಭ್ಯರ್ಥಿಗಳು ಆರೋಪಿಸಿದ್ದಾರೆ.

ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಅಂಕಪಟ್ಟಿ, ಮೀಸಲಾತಿ ಸಿಂಧುತ್ವ, ಪೊಲೀಸ್ ವರದಿ, ವೈದ್ಯಕೀಯ ತಪಾಸಣೆ ಇತ್ಯಾದಿ ದಾಖಲೆಗಳ ಪರಿಶೀಲನೆ ನಡೆಸಲು ಸಹಮತಿ ನೀಡಿದ್ದ ಆರ್ಥಿಕ ಇಲಾಖೆ, ನೇಮಕಾತಿ ಆದೇಶ ನೀಡುವುದಕ್ಕೂ ಮೊದಲು ಅನುಮತಿ ಪಡೆಯಬೇಕೆಂಬ ಷರತ್ತು ವಿಧಿಸಿತ್ತು. ನೇಮಕಾತಿ ಪೂರ್ವ ಎಲ್ಲ ಪ್ರಕ್ರಿಯೆಗಳು ಈಗಾಗಲೇ ಪೂರ್ಣಗೊಂಡಿವೆ. ಅಲ್ಲದೆ, ನೇಮಕಾತಿ ಮಾಡಿಕೊಳ್ಳುವಂತೆ ಆರ್ಥಿಕ ಇಲಾಖೆ ಅ.30ರಂದು ಅನುಮತಿ ಕೂಡಾ ನೀಡಿದೆ. ನೇಮಕಾತಿ ಆದೇಶ ನೀಡುವಂತೆ ಅಭ್ಯರ್ಥಿಗಳು ಮುಖ್ಯಮಂತ್ರಿ ಮತ್ತು ಸಚಿವ ಮುನಿರತ್ನ ಅವರಿಗೆ ಮನವಿ ಸಲ್ಲಿಸಿದ್ದಾರೆ.

6ನೇ ಪುಟ ನೋಡಿ

ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಈಗ ನೀತಿ ಸಂಹಿತೆ ಜಾರಿಯಲ್ಲಿದೆ. ನೀತಿ ಸಂಹಿತೆ ಮುಗಿದ ತಕ್ಷಣ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು.

ಮುನಿರತ್ನ, ತೋಟಗಾರಿಕೆ ಸಚಿವ

ಪ್ರಜಾವಾಣಿ ವಿಶೇಷ

'ಅನುಮೋದನೆ ಸಿಕ್ಕಿದರೆ ನಾಳೆಯೇ ಆದೇಶ ಪತ್ರ'

'ನೇಮಕಾತಿಯ ಎಲ್ಲ ಪ್ರಕ್ರಿಯೆಗಳು ಮುಗಿದಿವೆ. ಆದೇಶ ಪತ್ರ ನೀಡುವ ಬಗ್ಗೆ ನಾವು ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲ. ಇಲಾಖೆಯ ಸಚಿವರು ಅನುಮತಿ ನೀಡಬೇಕು. ಅವರು ಅನುಮೋದನೆ ನೀಡಿದರೆ ನಾಳೆಯೇ ಆದೇಶ ಪತ್ರ ಕೊಡಲು ಸಿದ್ಧ' ಎಂದು ತೋಟಗಾರಿಕೆ ಇಲಾಖೆಯ ನಿರ್ದೇಶಕ ಕೆ. ನಾಗೇಂದ್ರ ಪ್ರಸಾದ್ ಹೇಳಿದರು.

'ಕೋವಿಡ್, ಲಾಕ್‌ಡೌನ್ ಕಾರಣದಿಂದ ವೈದ್ಯಕೀಯ ಪರೀಕ್ಷಾ ವರದಿ 3 ತಿಂಗಳು ವಿಳಂಬವಾಯಿತು. ಅಲ್ಲದೆ, ಬೀದರ್ ಜಿಲ್ಲೆ ಆರು ಮಂದಿ ಸೇರಿ 12 ಅಭ್ಯರ್ಥಿಗಳು ಇನ್ನೂ ಸಿಂಧುತ್ವ ಪ್ರಮಾಣಪತ್ರವನ್ನೇ ನೀಡಿಲ್ಲ. ಈ ಬಗ್ಗೆ ಆರ್ಥಿಕ ಇಲಾಖೆಗೆ ಮಾಹಿತಿ ನೀಡಿ, ಅಷ್ಟು ಮಂದಿಯನ್ನು ಹೊರತುಪಡಿಸಿ ಉಳಿದವರ ನೇಮಕಾತಿಗೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಕಡತ ಸಲ್ಲಿಸಲಾಗಿದೆ' ಎಂದರು.

www.licindia.in

LIC ಪಾಲಿಸಿದಾರರ ಅವಗಾಹನೆಗೆ :
ಸದಾ ಸಿದ್ಧರಾಗಿರುವುದು ಜೀವನದ ಅತ್ಯುತ್ತಮ ಕೆಲಸ.

ಭಾರತ ಸರಕಾರವು ಲೈಫ್ ಇನ್ಶುರನ್ಸ್ ಕಾರ್ಪೊರೇಶನ್ ಆ್ಯಕ್ಟ್, 1956ನ್ನು ಪರಿಷ್ಕರಿಸಿ ಕಾರ್ಪೊರೇಶನ್‌ಗೆ ತನ್ನ ಪ್ರಸ್ತಾವಿತ ಪಬ್ಲಿಕ್ ಇಶ್ಯೂದಲ್ಲಿ ಪಾಲಿಸಿದಾರರಿಗೆ ಪ್ರೈಪೋಟಿಯ ಆಧಾರದಲ್ಲಿ ಶೇರ್‌ಗಳನ್ನು ರಿಜರ್ವ್ ಮಾಡಿರಿಸಲು ಅನುಮತಿ ನೀಡಿದೆ.*
ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು, ಪಾಲಿಸಿದಾರರು ಕೆಳಗಿನ ಎರಡು ಹೆಜ್ಜೆಗಳನ್ನು ಕೈಗೊಳ್ಳಬೇಕಾಗುತ್ತದೆ.

1 LICಯಲ್ಲಿ ನಿಮ್ಮ ವೈಯಕ್ತಿಕ ದಾಖಲೆಗಳನ್ನು ನವೀಕರಿಸಬೇಕು

- www.licindia.inನಲ್ಲಿ ಸಂದರ್ಶಿಸಿರಿ ಮತ್ತು ಆನ್‌ಲೈನ್‌ನಲ್ಲಿ ನಿಮ್ಮ ಪರಮನೆಂಟ್ ಅಕೌಂಟ್ ನಂಬರ್ (PAN) ನೋಂದಾಯಿಸಲು ಐಕಾನ್‌ನ ಮೇಲೆ ಕ್ಲಿಕ್ ಮಾಡಿರಿ.
- ನಿಮ್ಮ ಜನನ ತಾರೀಖು, ಲಿಂಗ, ಈಮೇಲ್ ಐಡಿ, PAN, ಪೂರ್ತಿ ಹೆಸರು, ಮೊಬೈಲ್ ನಂಬರ್ ಮತ್ತು LIC ಪಾಲಿಸಿ ನಂಬರ್ ದಾಖಲು ಮಾಡಿರಿ.
- ನಿಮ್ಮ ಎಲ್ಲಾ LIC ಪಾಲಿಸಿಗಳಿಗಾಗಿ PAN ನವೀಕರಣಕ್ಕಾಗಿ ನಿರ್ದೇಶನಗಳನ್ನು ಪಾಲಿಸಿರಿ.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ LIC ಏಜೆಂಟರನ್ನು ಸಂಪರ್ಕಿಸಿರಿ.

2 ಒಂದು DEMAT ಅಕೌಂಟ್ ತೆರೆಯಿರಿ (ಈಗಾಗಲೇ ನಿಮ್ಮಲ್ಲಿ ಇಲ್ಲದಿದ್ದರೆ)

- DEMAT ಅಕೌಂಟ್ ತೆರೆಯಲು ರಿಜಿಸ್ಟರ್ಡ್ ಡಿಪಾಜಿಟರಿ ಪಾರ್ಟಿಸಿಪೆಂಟ್‌ಗಳಿಗಾಗಿ (DP) ಈ ಕೆಳಗಿನ ಯಾವುದಾದರೂ ವೆಬ್‌ಸೈಟನ್ನು ಸಂದರ್ಶಿಸಿರಿ :
  NSDL:
  https://sebi.gov.in/sebiweb/other/OtherAction.do?doRecognisedFpi=yes&intmId=19
  CDSL:
  https://sebi.gov.in/sebiweb/other/OtherAction.do?doRecognisedFpi=yes&intmId=18
- DEMAT ಅಕೌಂಟ್ ತೆರೆಯಲು DPಗೆ ನೀವು ಈ ಕೆಳಗಿನವುಗಳನ್ನು ಒದಗಿಸಬೇಕಾಗುತ್ತದೆ :
  - ಇತ್ತೀಚಿನ ಫೋಟೊಗ್ರಾಫ್
  - PAN ಕಾರ್ಡ್
  - ವಿಳಾಸದ ಪುರಾವೆ
  - ಕ್ಯಾನ್ಸಲ್ಡ್ ಚೆಕ್
- ಇನ್ನೂ ಹೆಚ್ಚಿನ ಮಾಹಿತಿಯನ್ನು DP ನೀಡ ಬೇಕಾಗಬಹುದು.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ ಬ್ಯಾಂಕರ್ ಅಥವಾ ಬ್ರೋಕರನ್ನು ಸಂಪರ್ಕಿಸಿರಿ.

ಈ ಕೆಳಗಿನವುಗಳನ್ನು ದಯವಿಟ್ಟು ಗಮನಿಸಿರಿ
ಈ ನೋಟೀಸು ಅಥವಾ ನಮ್ಮ ಶೇರ್‌ಹೋಲ್ಡರ್‌ಗಳೊಂದಿಗೆ ನಾವು ಹಂಚಿಕೊಂಡಿರುವ ಯಾವುದೇ ಮಾಹಿತಿಯು ಕಾರ್ಪೊರೇಶನ್‌ನ ಇಕ್ವಿಟಿ ಶೇರ್‌ಗಳ ಆಫರ್ ಎಂದು ತಿಳಿಯಬಾರದು. | ಡಿಪಾಜಿಟರಿ ಪಾರ್ಟಿಸಿಪೆಂಟರನ್ನು ಸ್ವತಃ ಪಾಲಿಸಿದಾರಕರೇ ಸಂಪರ್ಕಿಸಬೇಕು ಮತ್ತು DEMAT ಅಕೌಂಟ್ ಮತ್ತು ಅದರ ಕಾರ್ಯ ನಿರ್ವಹಣೆ ಅವರದ್ದೇ ಜವಾಬ್ದಾರಿಯಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ವೆಚ್ಚಗಳನ್ನು ಪಾಲಿಸಿದಾರಕರೇ ವಹಿಸಿಕೊಳ್ಳಬೇಕಾಗುತ್ತದೆ. | ಯಾವುದೇ ಪ್ರಸ್ತಾವಿತ ನೀಡಿಕೆಯಲ್ಲಿ ಶೇರ್‌ಗಳ ರಿಜರ್ವೇಶನ್ ಆಗಿದ್ದರೂ ಕೂಡ, ಅರ್ಜಿ ಮಾಡಿದ ಯಾವುದೇ ಅಥವಾ ಎಲ್ಲಾ ಇಕ್ವಿಟಿ ಶೇರ್‌ಗಳನ್ನು ಪಾಲಿಸಿದಾರಕರಿಗೆ ಆಲಾಟ್ ಮಾಡಲಾಗುವುದೆಂಬ ಯಾವುದೇ ಆಶ್ವಾಸನೆ ನೀಡಲಾಗುತ್ತಿಲ್ಲ. | ತಮ್ಮ ಇಕ್ವಿಟಿ ಶೇರ್‌ಗಳ ಕಾರ್ಯದಕ್ಷತೆಯ ಯಾವ ಗ್ಯಾರಂಟಿಯನ್ನೂ ಕಾರ್ಪೊರೇಶನ್ ನೀಡುತ್ತಿಲ್ಲ ಮತ್ತು ತಮ್ಮ ಇಕ್ವಿಟಿಗಳಲ್ಲಿ ಮಾಡಲಾಗುವ ಪಬ್ಲಿಕ್ ಆಫರಿಂಗ್‌ನಲ್ಲಿನ ವಿನಿಯೋಜನೆಗಳಿಗೆ ಸಂಬಂಧಿಸಿದ ಅಪಾಯ ಸಾಧ್ಯತೆಗಳ ಬಗ್ಗೆ ವಿನಿಯೋಜಕರು ಜಾಗೃತರಾಗಿರಬೇಕು. ಪಾಲಿಸಿದಾರಕರಿಗಾಗಿ ಶೇರ್‌ಗಳ ಪ್ರಸ್ತಾವಿತ ರಿಜರ್ವೇಶನ್ ಬಗ್ಗೆ ಅತಿ ಮುಖ್ಯ ಮಾಹಿತಿಗಾಗಿ ಸಂದರ್ಶಿಸಿರಿ https://licindia.in/ipo
*ಪ್ರಸ್ತಾವಿತ IPO ವಿವರಗಳನ್ನು ಅದು ಒಮ್ಮೆ ಅಂತಿಮ ರೂಪ ಪಡೆದಾಗ ತಿಳಿಸಲಾಗುತ್ತದೆ.

ನಮ್ಮನ್ನು ಫಾಲೋ ಮಾಡಿರಿ : LIC India Forever | IRDAI Regn No.: 512

LIC
ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ
LIC/RKS/2021-22/39/KAN

ಎರಡನೇ ಹಂತದ ವಿಸ್ತರಣೆ ಪೂರ್ಣಗೊಂಡ ಬಳಿಕ ಈ ಪ್ರಮಾಣ ನಾಲ್ಕು ಪಟ್ಟು ಹೆಚ್ಚುವ ನಿರೀಕ್ಷೆ

ಪ್ರತಿ 10ಲಕ್ಷ ಜನರಿಗೆ 3.5 ಕಿ.ಮೀ ಮೆಟ್ರೊ

● ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾದ ಬೆಂಗಳೂರಿನಲ್ಲಿ 'ನಮ್ಮ ಮೆಟ್ರೊ' ಜಾಲ ವಿಸ್ತರಣೆಯ ನಿಟ್ಟಿನಲ್ಲಿ ಆಗಬೇಕಾದ ಕೆಲಸ ಬಹಳಷ್ಟಿದೆ. ಲಂಡನ್ ಹಾಗೂ ದೆಹಲಿ ನಗರಗಳಿಗೆ ಹೋಲಿಸಿದರೆ ನಗರದಲ್ಲಿ ಮೆಟ್ರೊ ಸೌಕರ್ಯ ತೀರಾ ಕಡಿಮೆ. ದೆಹಲಿಯಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 12.8 ಕಿ.ಮೀ ಮೆಟ್ರೋ ಜಾಲ ಇದ್ದರೆ, ಬೆಂಗಳೂರಿನಲ್ಲಿ ಇಷ್ಟು ಜನಸಂಖ್ಯೆಗೆ 3.5 ಕಿ.ಮೀ ಮೆಟ್ರೊ ಜಾಲವಿದೆ.

ಸಾರ್ವಜನಿಕ ಸಾರಿಗೆಯ ಅಂತರರಾಷ್ಟ್ರೀಯ ಸಂಸ್ಥೆ 'ಯುಐಟಿಪಿ'ಯು ಭಾರತದ ಮೆಟ್ರೊ ಯೋಜನೆಗಳನ್ನು ಅಧ್ಯಯನ ಮಾಡಿದ್ದು, ಇದರ ಮುಖ್ಯಾಂಶಗಳನ್ನು ಜಗತ್ತಿನ ಇತರ ರಾಷ್ಟ್ರಗಳ ಮೆಟ್ರೊ ಯೋಜನೆಗಳ ಜೊತೆ ಹೋಲಿಸಿ ವಿಶ್ಲೇಷಣೆ ನಡೆಸಿದೆ. ಇದರ ಫಲಿತಾಂಶವನ್ನು ಆಧರಿಸಿದ ವರದಿಯನ್ನು 2021ರ ನವೆಂಬರ್‌ನಲ್ಲಿ ಪ್ರಕಟಿಸಿದೆ. ಅದರ ಪ್ರಕಾರ ಲಂಡನ್‌ನಲ್ಲಿ 93 ಲಕ್ಷ ಜನಸಂಖ್ಯೆ ಇದ್ದು ಒಟ್ಟು 436 ಕಿ.ಮೀ ಉದ್ದದ ಮೆಟ್ರೊ ಜಾಲವಿದೆ. ಅಂದರೆ ಅಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 46.9 ಕಿ.ಮೀ ಉದ್ದದ ಮೆಟ್ರೊ ಜಾಲ ಲಭ್ಯ. ಬೆಂಗಳೂರಿನಲ್ಲಿ 2020ರ ಅಂಕಿ-ಅಂಶಗಳ ಪ್ರಕಾರ 1.23 ಕೋಟಿ ಜನಸಂಖ್ಯೆ ಇದೆ. ಆಗ 42 ಕಿ.ಮೀ ಉದ್ದದ ಮೆಟ್ರೊ ಜಾಲ ಮಾತ್ರ ಇತ್ತು. ಅಂದರೆ ಪ್ರತಿ 10 ಲಕ್ಷ ಜನಸಂಖ್ಯೆಗೆ 3.4 ಕಿ.ಮೀ ಉದ್ದದ ಮೆಟ್ರೊ ಜಾಲ ಮಾತ್ರ ಇತ್ತು.

2021ರಲ್ಲಿ ಎರಡು ವಿಸ್ತರಿತ ಮಾರ್ಗಗಳು (ಪುಟ್ಟೇನಹಳ್ಳಿ- ರೇಷ್ಮೆ ಸಂಸ್ಥೆ ಮತ್ತು ಮೈಸೂರು ರಸ್ತೆ- ಕೆಂಗೇರಿ) ಲೋಕಾರ್ಪಣೆಗೊಂಡ ಬಳಿಕ ನಗರದ ಮೆಟ್ರೊ ಜಾಲ 56 ಕಿ.ಮೀಗೆ ವಿಸ್ತರಣೆಯಾಗಿದೆ. ನಮ್ಮ ಮೆಟ್ರೊ ಯೋಜನೆಯ ಎರಡನೇ ಹಂತದ (2, 2ಎ, 2ಬಿ ಹಂತಗಳು ಸೇರಿ) ವಿಸ್ತರಣೆಯ ಕಾಮಗಾರಿಗಳನ್ನು 2024ರ ಒಳಗೆ ಪೂರ್ಣಗೊಳಿಸುವ ಉದ್ದೇಶವನ್ನು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಹೊಂದಿದೆ. ಎರಡನೇ ಹಂತದ ವಿಸ್ತರಣೆ ಪೂರ್ಣಗೊಂಡ ಬಳಿಕ ಮೆಟ್ರೊ ಜಾಲವು 175 ಕಿ.ಮೀ.ಗೆ ವಿಸ್ತರಣೆ- ಗೊಳ್ಳಲಿದೆ. ಆಗಲೂ ಪ್ರತಿ 10 ಲಕ್ಷ ಜನಸಂಖ್ಯೆಗೆ (ಮೂರು ವರ್ಷದಲ್ಲಿ ಜನಸಂಖ್ಯೆ ಸುಮಾರು 12ಲಕ್ಷಹೆಚ್ಚಳವಾಗುವಅಂದಾಜಿನಂತೆ) 12.96 ಕಿ.ಮೀ ಮೆಟ್ರೊ ಜಾಲ ಮಾತ್ರ ನಿರ್ಮಾಣವಾಗಲಿದೆ. ಲಂಡನ್‌ನಷ್ಟು ಪ್ರಮಾಣದಲ್ಲಿ ಮೆಟ್ರೊ ಜಾಲವನ್ನು ಹೊಂದಲು ನಗರದ ಮೆಟ್ರೊ ಜಾಲವನ್ನು ಈಗ ಯೋಜಿಸಿರುವ ಪ್ರಮಾಣಕ್ಕಿಂತ ನಾಲ್ಕುಪಟ್ಟು ಹೆಚ್ಚು ವಿಸ್ತರಿಸಬೇಕಾಗುತ್ತದೆ.

ಪ್ರತಿ ಕಿ.ಮೀ.ಮೆಟ್ರೊ ಬಳಕೆ ಪ್ರಮಾಣ

(2020ರಲ್ಲಿ ದೈನಂದಿನ ಸರಾಸರಿ)

ನಗರ	ಪ್ರಯಾಣಿಕರ ಸರಾಸರಿ
ದೆಹಲಿ	14,653
ಮುಂಬೈ	40,650
ಬೆಂಗಳೂರು	9,456
ಚೆನ್ನೈ	2,553
ಲಂಡನ್	9,129
ಹಾಂಗ್‌ಕಾಂಗ್	20,106
ಸಿಂಗಪುರ	15,118

ಪ್ರಮುಖ ಮಹಾನಗರಗಳ ಮೆಟ್ರೊ ಜಾಲ (2020ರಲ್ಲಿ)

ನಗರ	ಜನಸಂಖ್ಯೆ (ಲಕ್ಷ)	ಮೆಟ್ರೊ ಜಾಲ (ಕಿ.ಮೀ)	ಪ್ರತಿ 10 ಲಕ್ಷ ಜನಸಂಖ್ಯೆಗೆ ಮೆಟ್ರೊ ಜಾಲ (ಕಿ.ಮೀ)
ದೆಹಲಿ	303	389	12.8
ಮುಂಬೈ	204	11	0.5
ಬೆಂಗಳೂರು	123	42	3.4
ಚೆನ್ನೈ	109	45	4.1
ಲಂಡನ್	93	436	46.9
ಹಾಂಗ್‌ಕಾಂಗ್	76	194	25.5
ಸಿಂಗಪುರ	59	232	39.7

ಲಂಡನ್‌ಗಿಂತ ಬೆಂಗಳೂರು ಮುಂದು

ಲಂಡನ್‌ಗೆ ಹೋಲಿಸಿದರೆ ಬೆಂಗಳೂರಿನಲ್ಲಿ 'ಮೆಟ್ರೊ' ಜಾಲ ಕಡಿಮೆ ಇದ್ದರೂ ಪ್ರತಿ ಕಿ.ಮೀ ಮಾರ್ಗವನ್ನು ಬಳಸುವ ಪ್ರಯಾಣಿಕರ ದೈನಂದಿನ ಸರಾಸರಿ ಆ ನಗರಕ್ಕಿಂತ ತುಸು ಹೆಚ್ಚೇ ಇದೆ.

ಲಂಡನ್‌ನಲ್ಲಿ ಪ್ರತಿ ಕಿ.ಮೀ ಮೆಟ್ರೊ ಮಾರ್ಗವನ್ನು ನಿತ್ಯ ಸರಾಸರಿ 9,129 ಪ್ರಯಾಣಿಕರು ಬಳಸುತ್ತಾರೆ. ಬೆಂಗಳೂರಿನಲ್ಲಿ ಈ ಪ್ರಮಾಣ 9,456ರಷ್ಟಿದೆ. ಮುಂಬೈ ಮೆಟ್ರೊಗೆ ಹೋಲಿಸಿದರೆ ಇದು ತೀರಾ ಕಡಿಮೆ. ಮುಂಬೈನಲ್ಲಿ ಈ ಪ್ರಮಾಣ 40,650ರಷ್ಟಿದೆ. ದೆಹಲಿ ಮೆಟ್ರೊದಲ್ಲಿ ಈ ಸಂಖ್ಯೆ 14 ಸಾವಿರದಷ್ಟಿದೆ.

'ನಗರದಲ್ಲಿ ನಮ್ಮ ಮೆಟ್ರೊ ಜಾಲ ವಿಸ್ತರಣೆಯಾದಂತೆ ಪ್ರಯಾಣಿಕರ ಸಂಖ್ಯೆಯು ಹೆಚ್ಚಲಿದೆ. ಈಗ ನಗರದ ಆಯ್ದ ಪ್ರದೇಶಗಳಿಗೆ ಮಾತ್ರ ಮೆಟ್ರೊ ಸಂಪರ್ಕ ಇದೆ. ಹಾಗಾಗಿ ಪ್ರಯಾಣಿಕರು ಸ್ವಲ್ಪ ದೂರ ಮೆಟ್ರೊದಲ್ಲಿ, ಮತ್ತೆ ಸ್ವಲ್ಪ ದೂರ ಬಸ್ ಅಥವಾ ಆಟೊಗಳಲ್ಲಿ ಪ್ರಯಾಣಿಸ ಬೇಕಾಗುತ್ತದೆ. ನಗರದ ಎಲ್ಲ ಪ್ರದೇಶಗಳಿಗೂ ಮೆಟ್ರೊ ಸಂಪರ್ಕ ಕಲ್ಪಿಸಿದ ಬಳಿಕ ಪ್ರಯಾಣಿಕರ ಸಂಖ್ಯೆಯು ತನ್ನಿಂದ ತಾನೆ ಹೆಚ್ಚಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್.

ಅನರ್ಹರಿಗೆ ಪರಿಹಾರ; 6 ನೌಕರರ ಅಮಾನತು

ಹಾವೇರಿ: ಪ್ರಕೃತಿ ವಿಕೋಪದ ಪರಿಹಾರವನ್ನು ಅನರ್ಹ ಫಲಾನುಭವಿಗಳಿಗೆ ನೀಡಲು ಶಿಫಾರಸು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಿಲ್ಲೆಯ ಸವಣೂರ ಪುರಸಭೆ ಮುಖ್ಯಾಧಿಕಾರಿ ಹಾಗೂ ಐವರು ಸರ್ಕಾರಿ ನೌಕರರನ್ನು ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮೇಲ್ನೋಟಕ್ಕೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಕೃಷ್ಣಾ ಡಿ.ಕಟ್ಟಿಮನಿ, ಲೋಕೋಪಯೋಗಿ ಇಲಾಖೆ ಸಹಾಯಕ ಎಂಜಿನಿಯರ್ ಎಚ್.ಡಿ.ಬಂಡಿವಡ್ಡರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಎಂಜಿನಿಯರ್ ಹನುಮಂತಪ್ಪ ಮಾದರ, ಶಿರಬಡಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶೈಲಾ ಮಂಟೂರ, ಗ್ರಾಮ ಲೆಕ್ಕಾಧಿಕಾರಿ ಆರ್. ಬಿ.ಮಾಚಕನೂರ ಮತ್ತು ಕುಮಾರ ಬಾಲೇಹೊಸೂರ ಅವರನ್ನು ಅಮಾನತುಗೊಳಿಸಿದ್ದಾರೆ.

ಮತದಾನಕ್ಕೆ ಮುನ್ನ ಪ್ರಚಾರಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ದ್ವೈವಾರ್ಷಿಕ ಚುನಾವಣೆಯ ಮತದಾನ ಡಿ.10 ರಂದು ನಡೆಯಲಿದೆ. ಚುನಾವಣಾ ಆಯೋಗದ ಸೂಚನೆಯಂತೆ ಮತದಾನದ ಮುನ್ನ 48 ಗಂಟೆಗಳ ಕಾಲ ಅಂದರೆ ಡಿಸೆಂಬರ್ 9 ಹಾಗೂ 10ರಂದು ಮುದ್ರಣ ಮಾಧ್ಯಮದಲ್ಲಿ ಜಾಹೀರಾತು ನೀಡಲು ಇಚ್ಛಿಸುವ ಅಭ್ಯರ್ಥಿ ಅಥವಾ ರಾಜಕೀಯ ಪಕ್ಷಗಳು ಕಡ್ಡಾಯವಾಗಿ ಜಿಲ್ಲಾ ಮಾಧ್ಯಮ ಮೇಲ್ವಿಚಾರಣಾ ಮತ್ತು ದೃಢೀಕರಣ ಸಮಿತಿಯ (ಎಂಸಿಎಂಸಿ) ಅನುಮತಿ ಪಡೆಯಬೇಕೆಂದು ಚುನಾವಣಾಧಿಕಾರಿ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದ್ದಾರೆ. ಜಾಹೀರಾತುಗಳಿಗಾಗಿ ಅರ್ಜಿಯೊಂದಿಗೆ ಸ್ವ-ದೃಢೀಕರಿಸಿದ ನಮೂನೆಯನ್ನು ದ್ವಿಪ್ರತಿಯಲ್ಲಿ ಭರ್ತಿಮಾಡಿ ಎಂಸಿಎಂಸಿ ಸಮಿತಿಗೆ ಡಿ.7ರ ಒಳಗೆ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಅಲ್ಲದೆ, ಡಿ.9 ಹಾಗೂ 10 ರಂದು ಎಲ್ಲ ವಿದ್ಯುನ್ಮಾನ ಮಾಧ್ಯಮಗಳು ಮತದಾರರ ಮೇಲೆ ಪ್ರಭಾವ ಬೀರುವ ಯಾವುದೇ ರಾಜಕೀಯ ಪಕ್ಷಗಳ ಅಥವಾ ಚುನಾವಣಾ ಅಭ್ಯರ್ಥಿಯ ಪರ ಅಥವಾ ವಿರುದ್ಧ ಅಭಿಪ್ರಾಯ ಮೂಡುವ ಅಂಶಗಳನ್ನು ಬಿತ್ತರಿಸಬಾರದು ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಡಿ.ಜೆ ಹಳ್ಳಿ ಗಲಭೆ ಪ್ರಕರಣ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಡಿಜೆ ಹಳ್ಳಿ ಮತ್ತು ಕೆಜಿ ಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಗಲಭೆಗೆ ಸಂಬಂಧಿಸಿದಂತೆ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿದ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

'ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಹಾಗೂ ಗಲಭೆಯಲ್ಲಿ ಉಂಟಾದ ಹಾನಿಯನ್ನು ಅಂದಾಜಿಸಿ ನಷ್ಟದ ಹೊಣೆ- ಗಾರಿಕೆಯನ್ನು ನಿಗದಿಪಡಿಸಲು ಕ್ಲೇಮ್ ಕಮಿಷನರ್ ನೇಮಕ ಮಾಡಬೇಕು' ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಹಾಯಕ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್, ಗಲಭೆಗೆ ಸಂಬಂಧಿಸಿದ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ವರದಿ ಪರಿಶೀಲಿಸಿದ ಪೀಠ, ಸರ್ಕಾರಕ್ಕೆ ಕೆಲ ನಿರ್ದೇಶನ ನೀಡಿ ಎಲ್ಲ ಅರ್ಜಿಗಳನ್ನು ಇತ್ಯರ್ಥಪಡಿಸುವು- ದಾಗಿ ತಿಳಿಸಿತು. ಅಂತೆಯೇ, 'ಈ ಅರ್ಜಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರಣೆಯ ಅಗತ್ಯ ಕಂಡು ಬರುತ್ತಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ತೀರ್ಪು ಕಾಯ್ದಿರಿಸಿರು- ವುದಾಗಿ ಹೇಳಿತು.

11ಕ್ಕೆ ಆದಿಜಾಂಬವರ ಪಾದಯಾತ್ರೆ

ಬೆಂಗಳೂರು: ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಆದಿಜಾಂಬವ (ಮಾದಿಗ) ಸಂಘಟನೆಗಳ ಒಕ್ಕೂಟವು ಇದೇ 11ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪಾದಯಾತ್ರೆ ಹಮ್ಮಿಕೊಂಡಿದೆ.

'ಆದಿಜಾಂಬವ ಸಮುದಾಯಕ್ಕೆ ಶೇ 6ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕು. ಮೀಸಲಾತಿ ಶಿಫಾರಸು ಮಾಡಿರುವ ಸದಾಶಿವ ವರದಿ ಅನುಷ್ಠಾನ ವಿಳಂಬವಾಗುತ್ತಿದೆ. ಇದನ್ನು ಖಂಡಿಸಿ ಹಾಗೂ ವರದಿ ಅನುಷ್ಠಾನಕ್ಕೆ ಆಗ್ರಹಿಸಿ ಸಮುದಾಯದ ಜನರು ಪಾದಯಾತ್ರೆ ನಡೆಸಲಿದ್ದಾರೆ. ಬಳಿಕ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶಗೊಂಡು ಸಾರ್ವಜನಿಕ ಸಭೆ ನಡೆಸಲಿದ್ದೇವೆ' ಎಂದು ರಾಜ್ಯ ಆದಿಜಾಂಬವ ಸಂಘದ ಕಾರ್ಯಾಧ್ಯಕ್ಷ ಜಂಬೂದ್ವೀಪ ಸಿದ್ಧರಾಜು ತಿಳಿಸಿದ್ದಾರೆ.

ಕೊಠಡಿಯಿಂದ ಪರಾರಿ ಎಫ್‌ಐಆರ್ ದಾಖಲು

ಬೆಂಗಳೂರು: ಬಿಬಿಎಂಪಿ ಆರೋಗ್ಯ ಅಧಿಕಾರಿ ಅವರಿಗೆ ಮಾಹಿತಿ ನೀಡದೇ ಹೋಟೆಲ್ ಕೊಠಡಿಯಿಂದ ಪರಾರಿಯಾಗಿರುವ ಸೋಂಕಿತ ವ್ಯಕ್ತಿ ಹಾಗೂ ಅವರನ್ನು ಕಳುಹಿಸಿಕೊಟ್ಟ ಹೋಟೆಲ್ ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಬಿಬಿಎಂಪಿ ಆರೋಗ್ಯ ಅಧಿಕಾರಿ ಡಾ. ಎಂ. ನವೀನ್‌ಕುಮಾರ್ ದೂರು ನೀಡಿದ್ದಾರೆ. ಸೋಂಕಿತರಾದ ದಕ್ಷಿಣ ಆಫ್ರಿಕಾ ಪ್ರಜೆ ಹಾಗೂ ಶ್ಯಾಂಗ್ರಿಲಾ ಹೋಟೆಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಲಾಗಿದೆ' ಎಂದು ಹೈಗ್ರೌಂಡ್ಸ್ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ದಕ್ಷಿಣ ಆಫ್ರಿಕಾದ ಪ್ರಜೆ, ನ. 20ರಂದು ಬೆಂಗಳೂರಿಗೆ ಬಂದಿದ್ದರು. ವಿಮಾನ ನಿಲ್ದಾಣದಲ್ಲಿ ಪರೀಕ್ಷಿಸಿದಾಗ ಪಾಸಿಟಿವ್ ವರದಿ ಬಂದಿತ್ತು. ನಂತರ, ಅವರನ್ನು ಶ್ಯಾಂಗ್ರಿಲಾ ಹೋಟೆಲ್‌ನ ಕೊಠಡಿಯಲ್ಲಿ 14 ದಿನದ ಮಟ್ಟಿಗೆ ಇರಿಸಲಾಗಿತ್ತು. ಅವರನ್ನು ಕೊಠಡಿಯಿಂದ ಹೊರಗೆ ಕಳುಹಿಸದಂತೆ ಹೋಟೆಲ್ ಸಿಬ್ಬಂದಿಗೂ ಸೂಚನೆ ನೀಡಲಾಗಿತ್ತು.'

'ನ. 27ರಂದೇ ಕೊಠಡಿಯಿಂದ ಸೋಂಕಿತ ಪರಾರಿಯಾಗಿ- ದ್ದಾನೆ. ಹೋಟೆಲ್ ಸಿಬ್ಬಂದಿ ಸಹ ಅದಕ್ಕೆ ಸಹಕರಿಸಿದ್ದಾರೆ ಎಂಬುದಾಗಿ ದೂರಿನಲ್ಲಿ ಆರೋಪಿಸಲಾಗಿದೆ. ಎಸ್.ಆರ್. ಲ್ಯಾಬೋರೇಟರಿ ವತಿಯಿಂದ ನೀಡಿದ್ದ ನೆಗಟಿವ್ ವರದಿ ಪರಿಶೀಲಿಸಿ ಸೋಂಕಿತನನ್ನು ಕೊಠಡಿಯಿಂದ ಕಳುಹಿಸಿರುವುದಾಗಿ ಹೋಟೆಲ್‌ನವರು ಹೇಳುತ್ತಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕಾಮಗಾರಿ ಕೈಗೊಂಡಿರುವುದರಿಂದ ಇದೇ 7ರಂದು ಬೆಳಿಗ್ಗೆ 10ರಿಂದ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ವಿನಾಯಕ ಬಡಾವಣೆ, ನಾಗರಬಾವಿ 9ನೇ ಬ್ಲಾಕ್, ರಾಜೀವ ಗಾಂಧಿ ನಗರ, ಭೈರವೇಶ್ವರ ನಗರ, ಹನುಮಂತರಾಯನಪಾಳ್ಯ, ದೊಡ್ಡಬೆಲೆ ರಸ್ತೆ, ಬಿಎಚ್‌ಇಎಲ್ ಬಡಾವಣೆ, ಪಟ್ಟಣಗೆರೆ, ಗಂಗಾನಗರ, ಯಮುನಾ ನಗರ, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಚಂದಾಪುರ ವಿಭಾಗದ ಚಂಬೇನಹಳ್ಳಿ, ವಿ. ಕಲ್ಲಹಳ್ಳಿ, ಸೋಂಪುರ, ಚಂಬೇನಹಳ್ಳಿ ರಸ್ತೆ, ಟ್ರಿನಿಟಿ ಕಾಂಪ್ಲೆಕ್ಸ್, ಕಾಡಅಗ್ರಹಾರ, ಹೊಸರಹಳ್ಳಿ ರಸ್ತೆ ಸುತ್ತಮುತ್ತ ಪ್ರದೇಶ- ಗಳಲ್ಲೂ ವಿದ್ಯುತ್ ವ್ಯತ್ಯಯವಾಗಲಿದೆ

ಇದೇ 24ಕ್ಕೆ 'ಪ್ರತಿಭಾ ವೇದಿಕೆ' ಸ್ಪರ್ಧೆಗಳು

ಬೆಂಗಳೂರು: ಆರ್ಟ್‌ರಿಫ್ಲೆಕ್ಟ್ಸ್ ಅಕಾಡೆಮಿ ವತಿಯಿಂದ 'ಪ್ರತಿಭಾ ವೇದಿಕೆ' ಶೀರ್ಷಿಕೆಯಡಿ ವಿವಿಧ ಸ್ಪರ್ಧೆ- ಗಳನ್ನು ಡಿ.24ರಂದು ಹಮ್ಮಿಕೊಂಡಿದೆ.

ಸಂಗೀತ, ನೃತ್ಯ, ಚಿತ್ರಕಲೆ, ರಂಗೋಲಿ ಬಿಡಿಸುವುದು, ಮಿಮಿಕ್ರಿ, ವೇಷಭೂಷಣ, ವಾದ್ಯಗಳನ್ನು ನುಡಿಸುವುದು ಸೇರಿದಂತೆ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಇರಲಿದೆ.

ಭಾಗವಹಿಸುವ ಎಲ್ಲರಿಗೂ ಬಹುಮಾನ ವಿತರಿಸಲಾಗುವುದು. ಸ್ಪರ್ಧೆಗಳಲ್ಲಿ ಭಾಗವಹಿಸುವ ಆಸಕ್ತರು ಹೆಸರು ನೋಂದಣಿ ಮಾಡಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ಸ್ಪರ್ಧೆಗಳು ನಡೆಯುವ ಸ್ಥಳ: ಪೂರ್ಣ ವಿಕಾಸ ವಿದ್ಯಾಲಯ, ಜೆ.ಪಿ.ನಗರ 8ನೇ ಹಂತ

ಸಂಪರ್ಕ: 9380671947

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಎಸ್‌ಎಂಇಸಿ. ಬಾಣಸವಾಡಿ (21014)

ಲಕ್ಷ್ಮೀ ರಿಕವರಿ ಏಜೆನ್ಸಿ, ಉದಯ ಲೇಔಟ್, ಮಂಗನಹಳ್ಳಿ, ಬೆಂಗಳೂರು ವಿಳಾಸದಲ್ಲಿ ನಿಲುಗಡೆ ಮಾಡಲಾಗಿರುವ ಕಾರ್‌ಗಳ ಇ-ಹರಾಜು ದಿ. 15.12.2021 ಸಂಪರ್ಕಿಸಿ : ಪರಮೇಶ್‌ರೆಡ್ಡಿ – 8618048183

ಕ್ರಸಂ.	ಅಗ್ರೀಮೆಂಟ್ ನಂ.	ಹೆಸರು	ಮಾಡೆಲ್	ನೋಂದಣಿ ನಂ.	ಉತ್ಪಾದಿತ ವರ್ಷ	ಮೀಸಲು ಬೆಲೆ
1	64189097919 (ಬೆಂಗಳೂರು ಮುಖರಸ್ತೆ ಯಲಹಂಕ – 21733)	ವೇಣುಗೋಪಾಲ್	ಟೊಯೊಟಾ ಇಟಿಯೋಸ್ ಜಿಡಿ (ಎಂ)/ಸಿಲ್ಕಿ ಸಿಲ್ವರ್	KA-03 AC-9527	2016	274000
2	38039306636 (80 ಅಡಿ ರಸ್ತೆ ಇಂದಿರಾನಗರ – 70679)	ಮೆ. ನಂದು ಟ್ರಾವೆಲ್ಸ್	ಟೊಯೊಟಾ ಇನ್ನೋವಾ ಕ್ರಿಸ್ಟಾ/ಸಿಲ್ವರ್ ಗ್ರೇ	KA-02-AG-9429	2018	1020000
3	38039306636 (80 ಅಡಿ ರಸ್ತೆ ಇಂದಿರಾನಗರ – 70679)	ಮೆ. ನಂದು ಟ್ರಾವೆಲ್ಸ್	ಟೊಯೊಟಾ ಇನ್ನೋವಾ ಕ್ರಿಸ್ಟಾ/ಸಿಲ್ವರ್ ಗ್ರೇ	KA-02-AG-9428	2018	1020000

ಸದರಿ ವಾಹನಗಳನ್ನು "ಹೇಗಿದೆಯೊ ಎಲ್ಲಿದೆಯೊ", "ಹೇಗಿದೆಯೊ ಏನಿದೆಯೊ" ಮತ್ತು "ಅಲ್ಲಿ ಏನೇನಿದೆಯೊ" ಆಧಾರದಲ್ಲಿ ಇ-ಹರಾಜು ಮಾರಾಟ ಮಾಡಲಾಗುತ್ತಿದೆ ಮತ್ತು ಹರಾಜು ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ಕೈಗೊಳ್ಳಲಾಗುತ್ತದೆ. ಬ್ಯಾಂಕ್‌ನಿಂದ ಅನುಮೋದನೆ ಪಡೆದಿರುವ ಮೆ. ಸಿ1 ಇಂಡಿಯಾ ರವರ https://www.bankeauctions.com ವೆಬ್ ಪೋರ್ಟಲ್ ಮುಖಾಂತರ ಹರಾಜು ಮಾಡಲಾಗುತ್ತದೆ. ಆನ್‌ಲೈನ್ ಹರಾಜು ಮಾರಾಟಕ್ಕೆ ಸಂಬಂಧಿತ ಇ-ಹರಾಜು ಟೆಂಡರ್ ದಸ್ತಾವೇಜುಗಳನ್ನು ಹೊಂದಿರುವ ಆನ್‌ಲೈನ್ ಹರಾಜು ಬಿಡ್ ನಮೂನೆ, ಡಿಕ್ಲರೇಶನ್, ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳನ್ನು ಹೊಂದಿರುವ ವಿವರಗಳು https://www.bankeauctions.com ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.
ಸಂಪರ್ಕಿಸಿ: ಶ್ರೀ ಗಂಗಾಧರ್ ನಾಯ್ಕ್ ಗೊಂಕರ್ ಮೊಬೈಲ್: +91–9900711744 ಸೇವಾ ಪೂರೈಕೆದಾರ (ಸಿ1 ಇಂಡಿಯಾ).

ಆಸಕ್ತಿಯುಳ್ಳ ಬಿಡ್‌ದಾರರು ಬಿಡ್‌ಗಳನ್ನು ಸಲ್ಲಿಸುವದಕ್ಕೂ ಮುನ್ನವೇ ತಮ್ಮ ತೃಪ್ತಿಗೆ ಅನುಗುಣವಾಗಿ ವಾಹನಗಳನ್ನು ಪರಿಶೀಲಿಸಿಕೊಳ್ಳುವುದು ಅವರವರ ಜವಾಬ್ದಾರಿ ಆಗಿರುತ್ತದೆ. ಟೆಂಡರ್ ಸಲ್ಲಿಸುವುದಕ್ಕೂ ಮುಂಚೆಯೇ ಟೆಂಡರ್‌ದಾರರು ತಮ್ಮ ವೈಯಕ್ತಿಕ ಪರಿಶೀಲನೆ ಕಯಗೊಂಡಿರುತ್ತಾರೆ ಎಂದು ಪರಿಗಣಿಸಲಾಗುತ್ತದೆ. ಆಸಕ್ತಿಯುಳ್ಳ ಖರೀದಾರ/ಬಿಡ್‌ದಾರರು 14.12.2021 ರೊಳಗೆ ಮೀಸಲು ಬೆಲೆಯ ಶೇಕಡ 10 ರಷ್ಟು ಮೊತ್ತದ ಇಎಂಡಿ ಮೊಬಲಗನ್ನು, ಖಾತೆ ಸಂ. 37608315500 ಖಾತೆಗೆ 'ಪಾರ್ಕಿಂಗ್ ಅಕೌಂಟ್' ಭಾರತೀಯ ಸ್ಟೇಟ್ ಬ್ಯಾಂಕ್, ಎಸ್‌ಎಂಇಸಿ ಬಾಣಸವಾಡಿ, ಬೆಂಗಳೂರು ಶಾಖೆ ಕೋಡ್: 21014, ಐಎಫ್‌ಎಸ್ ಕೋಡ್: SBIN0021014 ಹೆಸರಿಗೆ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ವರ್ಗಾವಣೆ ಅಥವಾ ಆನ್‌ಲೈನ್ ವರ್ಗಾವಣೆ ಮುಖಾಂತರ ಪಾವತಿಸತಕ್ಕದ್ದು. ಚಲನ್/ರಸೀದಿ, ಕೆವೈಸಿ ಪ್ರತಿ (ಆಧರ್-ಪಾನ್) ಗಳಂತಹ ಪೂರಕ ದಾಖಲಾತಿಗಳನ್ನು ಬಿಡ್ ನಮೂನೆಯೊಂದಿಗೆ ಲಗತ್ತಿಸುವುದು ಕಡ್ಡಾಯ. **ಇ-ಹರಾಜು ಸಮಯ 15ನೇ ಡಿಸೆಂಬರ್ 2021 ರಂದು ಬೆಳಗ್ಗೆ 11.30 ರಿಂದ 12.30 ಗಂಟೆ. ಬಿಡ್ ಮೊತ್ತದಲ್ಲಿ ಜಿಎಸ್‌ಟಿ ಸೇರಿರುತ್ತದೆ.** ಯಾವುದೇ ಕಾರಣ ನೀಡದೆಯೇ, ಯಾವುದೇ ಸಂದರ್ಭದಲ್ಲಾದರೂ ಸರಿ, ಯಾವುದೇ ಬಿಡ್ ಅನ್ನು ಸ್ವೀಕರಿಸುವ/ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ಸಹಾಯಕ ಮಹಾ ಪ್ರಬಂಧಕರು

PUBLIC NOTICE

The General Public is hereby informed that, our client intends to PURCHASE the immovable property more fully described in the Schedule Property hereunder from its present owner i.e., **Mr. P.RAJESH,** aged about 50 years, Son of P. Ramachandra Reddy, Residing at No.15, "Golden Woods", 1st Cross, Sarjapur Road, Kasavanahalli, Bangalore-560 035.

Any persons, financial institutions having any sort of claim / rights / interest / charge on the below said property or any objections for the said sale of the property may file their objections in writing along with supporting documents, addressed to the undersigned within 07 days from the date of publication of this notice, failing which, it shall be construed that there are no claims of any sort over the below said property and our client shall be advised to proceed with the proposed transaction. Any claims thereafter shall not be entertained.

SCHEDULE PROPERTY

ALL THAT PIECE AND PARCEL of Southern Portion of the land bearing Sy No.53, having BBMP katha No.513/473/53,converted vide No.ALN.SR.2560 dated 29.06.1967 by the Thasildar, Bangalore South taluk and the Property thereafter bearing Old bering No.233, New No.392/1 present CMC Katha No.473, situated at St.Albane Opposite to Martin's House, Panchayat Church Road, Whitefield Village, Whitefield K.R.PuramHobli, Bangalore South Taluk, measuring (66.7+68.11)/2 X(80.1+82.2)/2 Feet, in totally measuring 5470 square feet, along with One Squares Shed built with mud and brick, and bounded on the;

East by : Panchayath Church Road;
West by : Private Property;
North by : Remaining Portion of the same Property;
South by : Property belonging to Ranjeet Farm.

LAW PARK ASSOCIATES,
Advocate, 6th Sector, HSR Layout, Bangalore-560 102.
helpdesk@lawpark.in
+91 80 41715959, +91 98456 65379

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು – 55.

8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55 ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 23442648, 23449450, ಮೊಬೈಲ್ 98455 15981.**

ಸುಸಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀಮತಿ. ರಕ್ಷಾ ಎಮ್  ಶ್ರೀ. ಮಂಜುನಾಥ್ ಎಸ್ ಆರ್	ಎ.ಆರ್.ಆ/ಯು.ಬಿ.ಎಕ್ಸ್/71, 72, 73/2021–22	ಅಪಾರ್ಟ್‌ಮೆಂಟ್ ನಂ.ಎ–3, ಎರಡನೇ ಮಹಡಿ, ಮುನಿಸಿಪಲ್ ನಂ.170/5, 2ನೇ ಮುಖ್ಯರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ಬಿ.ಬಿ.ಎಮ್.ಪಿ ವಾರ್ಡ್ ನಂ.07 (ಮಲ್ಲೇಶ್ವರಂ) (ಪಿ.ಐ.ಡಿ ನಂ.7–1–170/5), ಬೆಂಗಳೂರು. ಇಲ್ಲಿರುವ 227 ಚ.ಅಡಿ ಅವಿಭಜಿತ ಭಾಗ ಮತ್ತು 1365 ಚ.ಅಡಿಗಳ ಕಟ್ಟಡಲ್ಲಿನ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ :–ಸ್ಥಿರಾಸ್ತಿ ಸಂಖ್ಯೆ.171 ಮತ್ತು ಸಂಪಿಗೆರಸ್ತೆ ಪಶ್ಚಿಮಕ್ಕೆ :–ಸ್ಥಿರಾಸ್ತಿ ಸಂಖ್ಯೆ.170/1 ಮತ್ತು ಕರ್ನ್ಸರ್ವೆನ್ಸಿ ಉತ್ತರಕ್ಕೆ:– ಬೇರೆಯವರ ಸ್ವತ್ತು ದಕ್ಷಿಣಕ್ಕೆ : ಸಂಪಿಗೆ ರಸ್ತೆಗೆ ಪ್ಯಾಸೇಜು ಮತ್ತು ಬೇರೆ ಸ್ವತ್ತು.	ಅಪಾರ್ಟ್‌ಮೆಂಟ್ ನಂ.ಎ–3, ಎರಡನೇ ಮಹಡಿ, ಮುನಿಸಿಪಲ್ ನಂ.170/5, 2ನೇ ಮುಖ್ಯರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03 ದಿನಾಂಕ: 09.12.2021.ರ ಬುಧವಾರ ಬೆಳಿಗ್ಗೆ 11–30 ಘಂಟೆಗೆ ರೂ.64,00,000/– (ದಿನಾಂಕ.30.09.2021 ವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ ಯಾವ ರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.1,00,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.
4. ಹರಾಜಿನಲ್ಲಿ ಬಿಡ್ ನಿಂತ ತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.
5. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್. ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
6. ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
7. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತು ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಯಾವುದಾದರೂ ತಪ್ಪುಗಳಿದ್ದರೆ ಸರ್ಕಾದವರು ಜವಾಬ್ದಾರರಾಗುವುದಿಲ್ಲ.
8. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
9. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗಳೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ 5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ್ದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಮೊತ್ತ ಮತ್ತು ಅದರಮೇಲೆ ಶೇ 5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಹರಾಜಿನಲ್ಲಿ ಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 29.10.2021
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು – 55.

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 080–23300497–41159606, 23359600, Email: jscbinfo@jscbl.com

ಟೆಂಡರ್/ಸ್ಥಿರಾಸ್ತಿಯ ಬಹಿರಂಗ ಹರಾಜು

ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರಡಿಯಲ್ಲಿ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ: ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104 ರ ಇವರಿಗೆ ಈ ಸಾಲಗಾರರಿಂದ ಬರಬೇಕಾದ ಸಾಲ ವಸೂಲಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಾಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

ಶ್ರೀ ಸೋಮಶೇಖರ್ ಎಸ್ S/o. ಶಿವರಾಂ ಆರ್.

ಶ್ರೀಮತಿ ರೇಣುಕ ಎಸ್. W/o. ಸೋಮಶೇಖರ್ ಎಸ್

ಸಾಲಗಾರರ ಹೆಸರು ಮತ್ತು ವಿಳಾಸ

ಅದಾಗಿ ಮೆ|| ಕ್ಷೇಮ ಮೆಡಿಕಲ್ ಕಾರ್ಪೊರೇಷನ್, ನಂ.02, 9ನೇ "ಕೆ" ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560 040, ಇದರ ಮಾಲೀಕರಾದ ಶ್ರೀ ಸೋಮಶೇಖರ್ ಎಸ್. ಬಿನ್ ಶಿವರಾಂ ಆರ್. ಇವರಿಂದ ಪ್ರತಿನಿಧಿಸಲ್ಪಡುವುದು, ಜಾಮೀನುದಾರರಾದ **ಶ್ರೀಮತಿ ರೇಣುಕ ಎಸ್.** ಶ್ರೀ ಸೋಮಶೇಖರ್ ಎಸ್. ಇವರ ಪತ್ನಿ ಇವರಿಬ್ಬರೂ ನಂ. 22, ಹೊಸ ನಂ. 03, 1ನೇ "ಎ" ಅಡ್ಡರಸ್ತೆ, ವಿ.ಎಸ್.ಎಸ್. ಸ್ಕೂಲ್ ಸಮೀಪ, ಎಸ್.ಬಿ.ಎಂ. ಕಾಲೋನಿ, ಬಿ.ಎಸ್.ಕೆ. 1ನೇ ಹಂತ, ಬನಶಂಕರಿ, ಬೆಂಗಳೂರು – 560 050, ಇಲ್ಲಿನ ನಿವಾಸಿ ಇವರು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು, ಇಲ್ಲಿಂದ ಪಡೆದಿರುವ ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿದ್ದಾರೆ. ಇವರು ಸ್ವತಃ ಮತ್ತು ಇತರೆಯಾಗಿ ಒಪ್ಪಿದ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಪಾವತಿ ಮಾಡಬೇಕಿರುವ ಮತ್ತು ಬಾಕಿಯಿರುವ ಒಟ್ಟು ಮೊತ್ತ ದಿನಾಂಕ 30–11–2021 ರಂದು ಇದ್ದಂತೆ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು ಸೇರಿದಂತೆ ರೂ.50,38,645/ (ಐವತ್ತು ಲಕ್ಷದ ಮೂವತ್ತೆಂಟು ಸಾವಿರದ ಆರುನೂರ ನಲವತ್ತೈದು ರೂಪಾಯಿಗಳು ಮಾತ್ರ).

ಹರಾಜಿಗಿರುವ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ನಡೆಯುವ ದಿನಾಂಕ ಹಾಗೂ ಸಮಯ ಸ್ಥಳ	ಕನಿಷ್ಠ ವಿಮಾತ್ತು ಬೆಲೆ ಮುಂಗಡ ಠೇವಣಿ (ಇ.ಎಂ.ಡಿ)
ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಇದರ ಗುಬ್ಬಲಾಳು ಗ್ರಾಮದ ಸರ್ವೆ ನಂ. 54/1, 54/4, ಮತ್ತು 55/5 ಮತ್ತು ತುರಹಳ್ಳಿ ಗ್ರಾಮದ ಸರ್ವೆ ನಂ. 13/1, 13/3, 16/1, 16/2, 16/3, 46/2, 49, 52/1, 52/2, 53/1ಬಿ ಮತ್ತು 67 (ಪಿ) ಜಮೀನು ಒಳಗೊಂಡಂತೆ ಗುಬ್ಬಲಾಳು ಮತ್ತು ತುರಹಳ್ಳಿ ಲೇಔಟ್, 1ನೇ ಹಂತದಲ್ಲಿ ಜಯನಗರ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ. ನಿರ್ಮಿಸಿರುವ ತುರಹಳ್ಳಿ ಗ್ರಾಮದಲ್ಲಿರುವ (ವಜ್ರಮುನಿನಗರ) ಪೂರ್ವದಿಂದ ಪಶ್ಚಿಮಕ್ಕೆ : 40–0 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : (31+26)/2 ಅಡಿ ಹೀಗೆ ಒಟ್ಟಾರೆ 1140 ಚದರ ಅಡಿ ವಿಸ್ತೀರ್ಣದ ನಂ. 621/ಸಿ, ಮೂಲೆ, ಬಿ.ಬಿ.ಎಂ.ಪಿ. ಖಾತಾ ನಂ. 621/411/621ಸಿ ಹೊಂದಿರುವ ಸ್ಥಿರಾಸ್ತಿ, ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು : ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂ. 620.	ದಿನಾಂಕ: 07/01/2022, ಶುಕ್ರವಾರ, ಬೆಳಗ್ಗೆ 11.00 ಘಂಟೆಗೆ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು,	ರೂ.61,00,000/– (ರೂ. ಅರವತ್ತು ಒಂದು ಲಕ್ಷ ಮಾತ್ರ) ರೂ.6,10,000/– (ಮೀಸಲು ಬೆಲೆಯ ಶೇ.10) (ರೂ ಅರು ಲಕ್ಷದ ಹತ್ತು ಸಾವಿರ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಹಿಂತಿರುಗಿಸಲಾಗುವ ಇ.ಎಂ.ಡಿ.ಗಾಗಿ ಕಾಯ್ದಿಟ್ಟ ಬೆಲೆಯ ಶೇಕಡ 10% ರಷ್ಟನ್ನು ಡಿ.ಡಿ/ಪೇ ಆರ್ಡರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ವಿಜಯನಗರ ಶಾಖೆ, ಬೆಂಗಳೂರು.** ಇವರ ಹೆಸರಿಗೆ ಮೇಲೆ ತಿಳಿಸಿರುವ ಸ್ಥಿರಾಸ್ತಿಯ ಹರಾಜಿನ ದಿನ ಅಥವಾ 06/01/2022, ಸಂಜೆ 5:30ರ ಒಳಗೆ ಪಾವತಿಸಿ ರಸೀದಿ ಮತ್ತು ಟೆಂಡರ್ ಪಾರಂನ್ನು ಪಡೆಯುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್ಡ್‌ದಾರರು ಬ್ಯಾಂಕಿನಿಂದ ನೀಡಲಾಗುವ ಫಾರಂನಲ್ಲಿ ಮುಚ್ಚಿದ ಲಕೋಟೆಯಲ್ಲಿ ಬಿಡ್ಡನ್ನು ಸಲ್ಲಿಸುವುದು. ಎಲ್ಲಾ ಲಕೋಟೆಗಳು ಬಂದ ನಂತರ ಬಿಡ್ಡುದಾರರ ಸಮ್ಮುಖದಲ್ಲಿ ದಿನಾಂಕ:07/01/2022, ಶುಕ್ರವಾರ, 11.00 ಘಂಟೆಗೆ ಅಧಿಕೃತ ಅಧಿಕಾರಿಯು ಲಕೋಟೆಯನ್ನು ತೆರೆದು ಅಂತಿಮಗೊಳಿಸುವರು.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ಇ.ಎಂ.ಡಿ. ಹಣವನ್ನು ತಕ್ಷಣವೇ ಮರುಪಾವತಿಸಲಾಗುವುದು. ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್ಡುದಾರರು ಹರಾಜಿನ ಮೊಬಲಿಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು 24 ಗಂಟೆಯೊಳಗೆ ಪಾವತಿಸತಕ್ಕದ್ದು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ ಐಡಿ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಅಧಿಕೃತ ಅಧಿಕಾರಿಯು ಮಾರಾಟ ದೃಢೀಕರಣ ಪತ್ರವನ್ನು ನೀಡುತ್ತಾರೆ. ಉಳಿದ ಹಣವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು.
5. [illegible]
6. [illegible]
7. [illegible]
8. [illegible]
9. [illegible]
10. [illegible]
11. [illegible]
12. [illegible]
13. [illegible] Email: jscbinfo@jscbl.com

ಸ್ಥಳ : ಬೆಂಗಳೂರು
ದಿನಾಂಕ : 04–12–2021

ಸಹಿ/– ಅಧಿಕೃತ ಅಧಿಕಾರಿ,
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.

ಹೂಡಿ ಕೆರೆ: ಮಳೆಗೆ ಕೊಚ್ಚಿ ಹೋದ ದಂಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿ ಕೆರೆಯ ದಂಡೆ ಇತ್ತೀಚೆಗೆ ಸುರಿದ ಮಳೆಗೆ ಕೊಚ್ಚಿ ಹೋಗಿದೆ. ಇಲ್ಲಿ ಹೆಚ್ಚುವರಿ ನೀರು ಹರಿಯಲು ಅಳವಡಿಸಿದ್ದ ಪೈಪ್‌ಗಳು ಕಿತ್ತು ಹೋಗಿ 10 ದಿನಗಳಾದರೂ ದುರಸ್ತಿ ಮಾಡಿಲ್ಲ ಎಂದು ಸ್ಥಳೀಯರು ದೂರಿದ್ದಾರೆ. ತಕ್ಷಣ ದುರಸ್ತಿಪಡಿಸದಿದ್ದರೆ ಕೆರೆಗೆ ಮತ್ತಷ್ಟು ಹಾನಿ ಆಗಲಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ

ಹೂಡಿ ಕೆರೆ 15 ಎಕರೆ 10 ಗುಂಟೆ ವಿಸ್ತೀರ್ಣವಿದೆ. ಈ ಕೆರೆಯು ಕಸ, ಕೊಳಚೆ ಸೇರಿ ಕೆಟ್ಟು ಹೋಗಿತ್ತು. ಕೆರೆಯನ್ನು ಬಿಬಿಎಂಪಿಯು ವರ್ಷದ ಹಿಂದೆ ₹2.5 ಕೋಟಿ ವೆಚ್ಚದಲ್ಲಿ ಇದನ್ನು ಅಭಿವೃದ್ಧಿಪಡಿಸಿತ್ತು. ಈ ಮಳೆಗಾಲದಲ್ಲಿ ಕೆರೆ ಸ್ವಚ್ಛ ನೀರಿನಿಂದಲೇ ಭರ್ತಿಯಾಗಿತ್ತು.

‘ಕಳೆದ ವರ್ಷ ಕೆರೆಯನ್ನು ಅಭಿವೃದ್ಧಿಪಡಿಸಿದ್ದರು. ದಂಡೆಗೆ ಮಣ್ಣು ತುಂಬಿ ಬಲಪಡಿಸಿದ್ದರು. ಜಲಕಾಯಕ್ಕೆ ಕೊಳಚೆ ನೀರು ಸೇರದಂತೆ ಕ್ರಮ ಕೈಗೊಂಡಿದ್ದರು. ಬಳಿಕ ಕೆರೆ ಸ್ವಚ್ಛವಾಗಿತ್ತು. ಇತ್ತೀಚೆಗೆ ಸುರಿದ ಮಳೆಗೆ ದಂಡೆ ಕೊಚ್ಚಿ ಹೋಗಿದೆ’ ಎಂದು ಸ್ಥಳೀಯ ನಿವಾಸಿ ವಿರೂಪಾಕ್ಷಪ್ಪ ಮಾಹಿತಿ ನೀಡಿದರು.

‘ಕೆರೆ ದಂಡೆಯನ್ನು ಗಟ್ಟಿಮುಟ್ಟಾಗಿ ನಿರ್ಮಿಸಿಲ್ಲ. ದಂಡೆ ಕೊಚ್ಚಿ ಹೋಗುವ ಸೂಚನೆ ಸಿಕ್ಕಿದಾಗಲೇ ಇದನ್ನು ದುರಸ್ತಿಪಡಿಸುತ್ತಿದ್ದರೆ ಪೈಪ್‌ಗಳು ಕೊಚ್ಚಿ ಹೋಗುವ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ದಂಡೆ ಕೊಚ್ಚಿ ಹೋಗಿ 10 ದಿನಗಳು ಕಳೆದ ಬಳಿಕವೂ ಬಿಬಿಎಂಪಿ ಅದನ್ನು ದುರಸ್ತಿಪಡಿಸುವ ಗೋಜಿಗೇ ಹೋಗಿಲ್ಲ. ಈಗಲಾದರೂ ದಂಡೆಯನ್ನು ಬಲಪಡಿಸಬೇಕು. ಇಲ್ಲದಿದ್ದರೆ ಭಾರಿ ಮಳೆಯಾದಾಗ ದಂಡೆ ಪೂರ್ತಿ ಕಿತ್ತು ಹೋಗಲಿದೆ’ ಎಂದು ಕೆರೆಗಳ ಸಂರಕ್ಷಣೆಯ ಜಾಗೃತಿಯಲ್ಲಿ ತೊಡಗಿರುವ ಬಾಲಾಜಿ ರಘೋತ್ತಮ್ ಬಾಲಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೆರೆ ಅಭಿವೃದ್ಧಿಗೆ ಅಗತ್ಯ ಇರುವಷ್ಟು ಅನುದಾನ ಮಂಜೂರಾಗದ ಕಾರಣ ಮುಖ್ಯ ದಂಡೆಯ ಐಬಳಿ ಕೋಡಿ ಯನ್ನು ಸಮರ್ಪಕವಾಗಿ ನಿರ್ಮಿಸಿಲ್ಲ. ದಂಡೆಗೆ ಮಣ್ಣು ಹಾಕಿ ಅಲ್ಲೇ ಕಾಂಕ್ರೀಟ್ ಕೊಳವೆಗಳನ್ನು ಅಳವಡಿಸಲಾಗಿತ್ತು. ಕಿತ್ತು ಹೋದ ಕೊಳವೆ ಸರಿಪಡಿಸುವುದಕ್ಕೂ ಬಿಬಿಎಂಪಿ ಬಳಿ ದುಡ್ಡಿಲ್ಲ. ತಕ್ಷಣ ದುರಸ್ತಿ ಪಡಿಸದಿದ್ದರೆ ಮಳೆಯಿಂದ ಭರ್ತಿಯಾದ ಕೆರೆಯಷ್ಟೂ ನೀರು ಕಳೆದು ಕೊಳ್ಳಬೇಕಾದೀತು’ ಎಂದು ಸ್ಥಳೀಯರು ಕಳವಳ ವ್ಯಕ್ತಪಡಿಸಿದರು.

ಬಿಬಿಎಂಪಿ ದಾಖಲೆಗಳ ಪ್ರಕಾರ ಇದರಲ್ಲಿ ರಸ್ತೆಗೆ 33 ಗುಂಟೆ, ಸ್ಮಶಾನಕ್ಕೆ 36 ಗುಂಟೆ ಒತ್ತುವರಿಯಾಗಿದೆ. ಖಾಸಗಿಯವರು ಈ ಕೆರೆ ಒತ್ತುವರಿ ಮಾಡಿಲ್ಲ.

ಹೂಡಿ ಕೆರೆ ದಂಡೆಯಲ್ಲಿ ಅಳವಡಿಸಿದ್ದ ಕಾಂಕ್ರೀಟ್ ಕೊಳವೆಗಳು ಕಿತ್ತು ಹೋಗಿರುವುದು

‘ಕೆರೆ ಕೋಡಿ ಸುರಕ್ಷಿತವಾಗಿದೆ’

‘ಹೂಡಿ ಕೆರೆಯ ಕೋಡಿ ಸುರಕ್ಷಿತವಾಗಿದೆ. ಮಳೆಯಿಂದ ಕೋಡಿಗೆ ಯಾವ ಹಾನಿಯೂ ಆಗಿಲ್ಲ. ಆದರೆ, ಕೋಡಿ ಮೇಲೆ ತುಂಬಿದ್ದ ಮಣ್ಣು ಮಾತ್ರ ಕೊಚ್ಚಿ ಹೋಗಿದೆ. ಅನಧಿಕೃತವಾಗಿ ಅಳವಡಿಸಿದ್ದ ಕೊಳವೆ ಕಿತ್ತು ಹೋಗಿದೆ’ ಎಂದು ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ ಒಬ್ಬರು ತಿಳಿಸಿದರು.

‘ಕೋಡಿಯ ಮೇಲೆ ಮಣ್ಣು ತುಂಬಿದ್ದು ಬಿಬಿಎಂಪಿ ಅಲ್ಲ. ಇಲ್ಲಿನ ನಿಕಟಪೂರ್ವ ಕಾರ್ಪೊರೇಟರ್ ದಂಡೆಗೆ ಮಣ್ಣು ಹಾಕಿಸಿ, ಜನ ಓಡಾಡಲು ದಾರಿ ಮಾಡಿಸಿ ಕೊಟ್ಟಿದ್ದರು. ಇಲ್ಲಿ ಅಳವಡಿಸಿದ್ದ ಕೊಳವೆ ಇಲ್ಲಿನ ಕೋಡಿಗಿಂತ ಎತ್ತರದಲ್ಲಿತ್ತು. ಕೊಳವೆ ಕಿತ್ತು ಹೋದರೂ ಕೆರೆಯ ನೀರಿನ ಮಟ್ಟ ಕಡಿಮೆ ಆಗಿಲ್ಲ’ ಎಂದರು.

ನಗರದಲ್ಲಿ ಇಂದು

‘ಹವಾಮಾನ ಬದಲಾವಣೆ – ಉಪರಾಷ್ಟ್ರೀಯ ನೀತಿಯ ಪಾತ್ರ’ ಕುರಿತು ದುಂಡು ಮೇಜಿನ ಸಭೆ: ಆಯೋಜನೆ–ಹಾನ್ಸ್ ಶೀಲ್ಡ್ ಫೌಂಡೇಷನ್ಸ್ಥಳ–ಜಿಯಾನ್ ಹೋಟೆಲ್, ಹನುಮಂತಪ್ಪ ರಸ್ತೆ, ಗಾಂಧಿ ನಗರ, ಬೆಳಿಗ್ಗೆ 9.30

ಬೆಂಗಳೂರು ಗಾಯನ ಸಮಾಜದ 51ನೇ ಸಂಗೀತ ಸಮ್ಮೇಳನ: ಬೆಳಿಗ್ಗೆ 10ಕ್ಕೆ ವಿದ್ವಾನ್ ಚಂದ್ರಸಿಂಘ್ ಅವರ ಜೀವನ ಸಾಧನೆ, ಮುತ್ತುಸ್ವಾಮಿ ದೀಕ್ಷಿತರ ಗಣೇಶಪರ ಕೃತಿಗಳು ಕುರಿತು ಗೋಷ್ಠಿ, ಆಯೋಜನೆ ಮತ್ತು ಸ್ಥಳ–ಬೆಂಗಳೂರು ಗಾಯನ ಸಮಾಜ, ಕೆ.ಆರ್.ರಸ್ತೆ. ಸಂಜೆ 6ಕ್ಕೆ

ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ: ಅತಿಥಿ–ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಅಧ್ಯಕ್ಷತೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಗೃಹ ಸಚಿವ ಆರಗ ಜ್ಞಾನೇಂದ್ರ, ನಿವೃತ್ತ ಮೇಜರ್ ಜನರಲ್ ಹರೀಶ್ ಎಸ್.ಶಾನಭಾಗ್, ಆಯೋಜನೆ–ಸೈನಿಕ ಕಲ್ಯಾಣ ಪುನರ್ವಸತಿ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 4.30

‘ಜಾತಿ ಬ್ರ್ಯಾಂಡ್ ಮಾಡುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿಯನ್ನು ತೊರೆದು ಬಾಳಿರಿ ಎಂದವರನ್ನೇ ಜಾತಿಯ ಬ್ರ್ಯಾಂಡ್ ಆಗಿ ಮಾಡಲಾಗುತ್ತಿದೆ. ದಾಸರ ತತ್ವಗಳನ್ನು ಅಳವಡಿಸಿಕೊಳ್ಳುವ ಬದಲಿಗೆ ಅವರ ಹೆಸರನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲಾಗುತ್ತಿದೆ’ ಎಂದು ಗಾಯಕ ಎಸ್.ಶಂಕರ್ ಶಾನಭಾಗ ಹೇಳಿದರು.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಕನಕ ಕೀರ್ತನ ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ‘ಕನಕದಾಸರ ತತ್ವಗಳನ್ನು ಸಾರುವ ಪ್ರಯತ್ನ ಇದು. ಐದು ದಿನಗಳ ಕಾರ್ಯಾಗಾರದಲ್ಲಿ ಸಾಧ್ಯವಾದಷ್ಟು ಕಲಿತುಕೊಂಡು, ಅದನ್ನು ಇದೇ ವೇದಿಕೆಯಲ್ಲಿ ಪ್ರದರ್ಶಿಸುವ ಮೂಲಕ ಅವಕಾಶಗಳನ್ನು ಸೃಷ್ಟಿಸಿಕೊಳ್ಳಿ’ ಎಂದು ಹೇಳಿದರು.

ಗಾಯಕಿ ಟಿ.ಎಸ್.ಸತ್ಯವತಿ, ‘ಕನಕದಾಸರ ಕೀರ್ತನೆಗಳು ಸಂಗೀತದ ಎಲ್ಲಾ ಪ್ರಕಾರಗಳಿಗೆ ಹೊಂದಿಕೊಳ್ಳುತ್ತವೆ’ ಎಂದರು.

ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್.ಸುರೇಶ್, ‘ಕನಕದಾಸರ ದಾಸರ ಕೀರ್ತನೆಗಳು ಸಾರ್ವಕಾಲಿಕ. ಆ ಕೀರ್ತನೆಗಳು ಮನೆ ಮನಗಳನ್ನು ತಲುಪಲಿ’ ಎಂದರು.

ಕಾರ್ಯಕ್ರಮದಲ್ಲಿ ಕನಕದಾಸರ ಭಾವಚಿತ್ರಕ್ಕೆ ಎಚ್.ಎನ್.ಸುರೇಶ್, ಎಂ.ಆರ್.ಸತ್ಯನಾರಾಯಣ, ಎಸ್.ರಂಗಪ್ಪ ಹಾಗೂ ಎಸ್.ಶಂಕರ್ ಶಾನಭಾಗ ಪುಷ್ಪನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ವಿಕ್ಟೋರಿಯಾ ಆಸ್ಪತ್ರೆಯಿಂದ ಪರಾರಿಯಾಗಿದ್ದ ಆರೋಪಿ • ಅಸ್ಸಾಂನಲ್ಲಿ ಮದ್ಯದಂಗಡಿ ನಡೆಸುತ್ತಿದ್ದ

ಪತ್ನಿ, ಮಕ್ಕಳ ಕೊಲೆ: 11 ವರ್ಷಗಳ ಬಳಿಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಕೊಲೆ ಮಾಡಿದ ಆರೋಪದಡಿ ಬಂಧಿತನಾಗಿ ವಿಕ್ಟೋರಿಯಾ ಆಸ್ಪತ್ರೆಯಿಂದ ಪರಾರಿಯಾಗಿದ್ದ ಧರ್ಮಸಿಂಗ್ ಯಾದವ್ (53) ಎಂಬಾತ, 11 ವರ್ಷಗಳ ನಂತರ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಚಾರಣಾಧೀನ ಕೈದಿ ಧರ್ಮಸಿಂಗ್, ಚಿಕಿತ್ಸೆಗೆಂದು ವಿಕ್ಟೋರಿಯಾ ಆಸ್ಪತ್ರೆಯ ಮೂತ್ರಪಿಂಡ ವಿಭಾಗಕ್ಕೆ ಬಂದಿದ್ದ. ತನ್ನನ್ನು ಕರೆತಂದಿದ್ದ ಪೊಲೀಸರ ಕಣ್ಣಿಗೆ ಖಾರದ ಪುಡಿ ಎರಚಿ ಪರಾರಿಯಾಗಿದ್ದ. ಈ ಬಗ್ಗೆ ಪ್ರಕರಣ

ಧರ್ಮಸಿಂಗ್ ಯಾದವ್

ದಾಖಲಾಗಿತ್ತು' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ತಿಳಿಸಿದರು.

'ಬೆಂಗಳೂರಿನಿಂದ ಅಸ್ಸಾಂಗೆ ಹೋಗಿದ್ದ ಧರ್ಮಸಿಂಗ್, ಅಲ್ಲಿ ಬೇರೊಬ್ಬರ ಹೆಸರಿನಲ್ಲಿ ಪರವಾನಗಿ ಪಡೆದು ಮದ್ಯದಂಗಡಿ ನಡೆಸುತ್ತಿದ್ದ. ಇತ್ತೀಚೆಗೆ ಆತನ ಬಗ್ಗೆ ತಾಂತ್ರಿಕ ಪುರಾವೆಗಳು ದೊರೆತಿದ್ದವು. ಅಸ್ಸಾಂಗೆ ಹೋದ ವಿ.ವಿ.ಪುರ ಠಾಣೆ ಪೊಲೀಸರ ತಂಡ ಆತನನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದೂ ಹೇಳಿದರು.

ಎರಡನೇ ಮದುವೆಯಾಗಲು ಹತ್ಯೆ: 'ಹರಿಯಾಣದ ಧರ್ಮಸಿಂಗ್, ಪತ್ನಿ ಅನು ಹಾಗೂ ಮಕ್ಕಳಾದ ಕೀರ್ತಿ, ಶುಭಂ ಜೊತೆ ಬೆಂಗಳೂರಿನ ವಿದ್ಯಾರಣ್ಯಪುರ ಬಳಿಯ ಸಿಂಗಾಪುರ ಬಡಾವಣೆಯಲ್ಲಿ ವಾಸವಿದ್ದ. ಖಾಸಗಿ ಕಂಪನಿಯೊಂದರಲ್ಲಿ ಕೆಲಸಕ್ಕೂ ಹೋಗುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎರಡನೇ ಮದುವೆಯಾಗಲು ಯೋಚಿಸಿದ್ದ ಆತ, ಜೀವನ್‌ಸಾಥಿ ಡಾಟ್ ಕಾಮ್ ವೈವಾಹಿಕ ಜಾಲತಾಣದಲ್ಲಿ ಖಾತೆ ತೆರೆದಿದ್ದ. ಆತನಿಗೆ ರಾಜಾಜಿನಗರದ ಮಹಿಳೆಯೊಬ್ಬರ ಪರಿಚಯವಾಗಿತ್ತು. ಅವರನ್ನು ಮದುವೆಯಾಗಲು ತೀರ್ಮಾನಿಸಿದ್ದ ಆತ, ಮಾತುಕತೆ ಸಹ ನಡೆಸಿದ್ದ.'

'ತನ್ನ ಮದುವೆಗೆ ಪತ್ನಿ ಹಾಗೂ ಇಬ್ಬರು ಮಕ್ಕಳು ಅಡ್ಡಿಯಾಗುತ್ತಾರೆಂದು ಭಾವಿಸಿದ್ದ ಆತ, ಮೂವರನ್ನೂ ಕೊಲೆ ಮಾಡಲು ಸಂಚು ರೂಪಿಸಿದ್ದ. 2008ರ ಅಕ್ಟೋಬರ್ 19ರಂದು ಮನೆಯಲ್ಲಿ ಪತ್ನಿ ಹಾಗೂ ಮಕ್ಕಳ ಮೇಲೆ ದಾಳಿ ಮಾಡಿದ್ದ. ಮರದ ಕಟ್ಟಿಗೆಯಿಂದ ಹೊಡೆದು, ಚಾಕುವಿನಿಂದ ಕತ್ತು ಕೊಯ್ದು ಮೂವರನ್ನೂ ಹತ್ಯೆ ಮಾಡಿದ್ದ' ಎಂದೂ ಮೂಲಗಳು ವಿವರಿಸಿವೆ.

ಠಾಣೆಗೆ ಹೋಗಿ ದೂರು ಕೊಟ್ಟಿದ್ದ: 'ಕೊಲೆ ನಂತರ ಠಾಣೆಗೆ ಹೋಗಿದ್ದ ಧರ್ಮಸಿಂಗ್, ಚಿನ್ನಾಭರಣ ಸುಲಿಗೆಗಾಗಿ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು ಪತ್ನಿ ಹಾಗೂ ಮಕ್ಕಳನ್ನು ಕೊಂದು ಪರಾರಿಯಾಗಿರುವುದಾಗಿ ದೂರು ಕೊಟ್ಟಿದ್ದ. ತನಿಖೆ ನಡೆಸಿದ್ದ ಪೊಲೀಸರಿಗೆ, ಧರ್ಮಸಿಂಗ್ ಮೇಲೆ ಅನುಮಾನ ಬಂದಿತ್ತು. ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡಿದ್ದ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಆತನನ್ನು ಬಂಧಿಸಿದ್ದ ಪೊಲೀಸರು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿದ್ದರು. 2 ವರ್ಷ 2 ತಿಂಗಳು ಜೈಲಿನಲ್ಲಿದ್ದ ಆತ, ಮೂತ್ರ ಪಿಂಡದ ತೊಂದರೆ ಇರುವುದಾಗಿ ಅಧಿಕಾರಿಗಳಿಗೆ ಸುಳ್ಳು ಹೇಳಿದ್ದ. ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಂಡಿದ್ದ ಜೈಲು ಅಧಿಕಾರಿಗಳು, ನಗರ ಸಶಸ್ತ್ರ ಮೀಸಲು ಪಡೆಯ ಇಬ್ಬರು ಪೊಲೀಸರ ಭದ್ರತೆಯಲ್ಲಿ 2010ರ ಡಿಸೆಂಬರ್ 4ರಂದು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದ್ದರು.'

'ತಪ್ಪಿಸಿಕೊಳ್ಳಲು ಮೊದಲೇ ಯೋಚಿಸಿದ್ದ ಧರ್ಮಸಿಂಗ್, ಜೈಲಿನ ಅಡುಗೆ ಮನೆಯಲ್ಲಿದ್ದ ಖಾರವನ್ನು ಜೇಬಿನಲ್ಲಿಟ್ಟುಕೊಂಡಿದ್ದ. ಆಸ್ಪತ್ರೆಯಲ್ಲಿದ್ದಾಗ ಪೊಲೀಸರ ಕಣ್ಣಿಗೆ ಖಾರದ ಪುಡಿ ಎರಚಿ ಪರಾರಿಯಾಗಿದ್ದ' ಎಂದೂ ಮೂಲಗಳು ವಿವರಿಸಿವೆ.

ಅಸ್ಸಾಂನಲ್ಲೂ ಮದುವೆ: 'ವೈವಾಹಿಕ ಜಾಲತಾಣದ ಮೂಲಕ ಪರಿಚಯವಾಗಿದ್ದ ಅಸ್ಸಾಂನ ಮಹಿಳೆಯೊಬ್ಬರನ್ನು ಮದುವೆಯಾಗಿದ್ದ ಧರ್ಮಸಿಂಗ್, ಅವರ ಜೊತೆ ನೆಲೆಸಿದ್ದ. ದಂಪತಿಗೆ ಇಬ್ಬರು ಮಕ್ಕಳು ಸಹ ಇದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಹಳೇ ವೈಷಮ್ಯ; ಶಿಕ್ಷೆ ಅನುಭವಿಸಿ ಬಂದಿದ್ದವನ ಮೇಲೆ ಹಲ್ಲೆ

ಬೆಂಗಳೂರು: ಶಿವಾಜಿನಗರದ ರೌಡಿ ಮನ್ಸೂರ್ ಅಲಿಯಾಸ್ ದೂನ್ ಮೇಲೆ ಹಲ್ಲೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಪುಲಿಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮೊಹಿನುದ್ದೀನ್, ಅರ್ಫಾತ್, ಅರ್ಬಾಜ್ ಹಾಗೂ ಅದ್ನಾನ್ ಬಂಧಿತರು. ಹಲ್ಲೆಯಿಂದ ಗಾಯಗೊಂಡಿರುವ ಮನ್ಸೂರ್ ಚಿಕಿತ್ಸೆ ಪಡೆಯುತ್ತಿದ್ದಾನೆ. ಹಲ್ಲೆ ಬಗ್ಗೆ ಆತನು ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರೌಡಿ ಮನ್ಸೂರ್ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ 20ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ ಆತನಿಗೆ 10 ವರ್ಷ ಜೈಲು ಶಿಕ್ಷೆಯಾಗಿತ್ತು. ಇತ್ತೀಚೆಗಷ್ಟೇ ಶಿಕ್ಷೆ ಅವಧಿ ಮುಗಿಸಿ ಹೊರಗೆ ಬಂದಿದ್ದ. ಉಳಿದ ಪ್ರಕರಣಗಳ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದ.'

'ವೈಷಮ್ಯ ಹೊಂದಿದ್ದ ಆರೋಪಿಗಳು, ನ. 27ರಂದು ಮನ್ಸೂರ್ ಮೇಲೆ ದಾಳಿ ಮಾಡಿ ಹಲ್ಲೆ ಮಾಡಿದ್ದರು. ಚಾಕುವಿನಿಂದ ಇರಿದು ಪರಾರಿಯಾಗಿದ್ದರು' ಎಂದೂ ಮೂಲಗಳು ತಿಳಿಸಿವೆ.

'ಸಂವಿಧಾನ ಪೂರ್ಣ ಜಾರಿಯಾದರೆ ಸಮಾನತೆ'

ಕೆ.ಆರ್.ಪುರ: ಯುವಕರು ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು ಹಾಗೂ ಬರಹಗಳನ್ನು ಹೆಚ್ಚಾಗಿ ಓದಿದಾಗ ಮಾತ್ರ ಹೆಚ್ಚು ತಿಳಿದುಕೊಂಡಂತೆ ಆಗುತ್ತದೆ ಎಂದು ಕೆಪಿಸಿಸಿ ಎಸ್ಸಿ ಘಟಕದ ಉಪಾಧ್ಯಕ್ಷ ನಲ್ಲೂರಹಳ್ಳಿ ನಾಗೇಶ್ ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನದ ಅಂಗವಾಗಿ ಕೆ.ಆರ್.ಪುರ ಸಮೀಪದ ನಲ್ಲೂರಹಳ್ಳಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

'ಅಂಬೇಡ್ಕರ್ ಅವರು ಪರಿಶಿಷ್ಟ ಸಮುದಾಯದಲ್ಲಿ ಜನಿಸದೆ ಇದ್ದಿದ್ದರೆ, 2,500 ವರ್ಷಗಳಿಂದ ದಾಸ್ಯದ ಸಂಕೋಲೆಯಲ್ಲಿದ್ದ ನಮ್ಮ ಸಮುದಾಯವನ್ನು ಹೊರಗೆ ತರಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅಂಬೇಡ್ಕರ್ ನೀಡಿರುವ ಸಂವಿಧಾನ ಯಥಾವತ್ತಾಗಿ ಜಾರಿ ಮಾಡಿದರೆ, ಸಂವಿಧಾನದಲ್ಲಿ ಪ್ರತಿಪಾದಿಸಿದಂತೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮಾನತೆ ಸಿಗುತ್ತದೆ' ಎಂದರು.

'ಅಂಬೇಡ್ಕರ್ ಅವರ ಕಠಿಣ ಪರಿಶ್ರಮದಿಂದಾಗಿ ಇಡಿ ವಿಶ್ವಕ್ಕೆ ಮಾದರಿಯಾದ ಸಂವಿಧಾನ ನಮಗೆ ಸಿಕ್ಕಿದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮಾನತೆ ಸಿಗಲು ಸಂವಿಧಾನದ ಪಾತ್ರ ಮುಖ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ರೂಪ್ ಸಿಂಗ್, ಗೋವಿಂದರಾಜ್ ನಾಗರಾಜ್, ನಂದೀಶ, ರಂಜಿತ್ ಚಂದ್ರು, ಕಿರಣ್, ವಿನೋದ ಉಪಸ್ಥಿತರಿದ್ದರು.

ಮಂತ್ರಿ ಮಾಲ್‌ಗೆ ಬೀಗ

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಕಾರಣಕ್ಕೆ ಮಲ್ಲೇಶ್ವರದ ಮಂತ್ರಿ ಮಾಲ್‌ಗೆ ಬಿಬಿಎಂಪಿಯ ಕಂದಾಯ ಅಧಿಕಾರಿಗಳು ಸೋಮವಾರ ಬೀಗ ಹಾಕಿದರು

ಪ್ರಜಾವಾಣಿ ಚಿತ್ರ

ಪ್ಯಾನ್ ಕಾರ್ಡ್, ಆಧಾರ್ ದುರುಪಯೋಗ

ಹಣದ ಆಮಿಷವೊಡ್ಡಿ ವಂಚನೆ ಆರೋಪಿ ದುಬೈಗೆ ಪರಾರಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: 'ಯೋಜನೆಯೊಂದರ ಪಾಲುದಾರರಾದರೆ, ಉತ್ತಮ ಲಾಭದ ಜೊತೆಯಲ್ಲಿ ಪ್ರತಿ ತಿಂಗಳು ಹಣ ಬರುತ್ತದೆ' ಎಂಬುದಾಗಿ ಆಮಿಷವೊಡ್ಡಿ ಸಾರ್ವಜನಿಕರ ಪ್ಯಾನ್ ಕಾರ್ಡ್ ಹಾಗೂ ಆಧಾರ್ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಪುಲಿಕೇಶಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಿದ್ಯಾರಣ್ಯಪುರ ಎಂ.ಎಸ್. ಪಾಳ್ಯದ ನಿವಾಸಿ ನಯೀಮಾ ತಾಜ್ ಎಂಬುವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳಾದ ಮಹಮ್ಮದ್ ಇಮ್ರಾನ್, ಲೋಕೇಶ್, ಕಾರ್ತಿಕ್, ಮುಜಾಹಿದ್, ಹಫೀಜ್, ಮನ್ಸೂರ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಮುಖ ಆರೋಪಿ ಮಹಮ್ಮದ್ ಇಮ್ರಾನ್ ದುಬೈಗೆ ಹೋಗಿರುವುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲಾಕ್‌ಡೌನ್‌ನಲ್ಲಿ ಆಹಾರ ಸಾಮಗ್ರಿ ವಿತರಿಸುವ ವೇಳೆಯಲ್ಲಿ ನಯೀಮಾ ಅವರಿಗೆ ಆರೋಪಿಗಳ ಪರಿಚಯವಾಗಿತ್ತು. ಯೋಜನೆಯೊಂದನ್ನು ಆರಂಭಿಸಿರುವುದಾಗಿ ಹೇಳಿದ್ದ ಆರೋಪಿಗಳು, ಯಾರಾದರೂ ಸದಸ್ಯರಾದರೆ ಪ್ರತಿ ತಿಂಗಳು ಉತ್ತಮ ಲಾಭ ಬರುವುದಾಗಿ ತಿಳಿಸಿದ್ದರು. ಅದನ್ನು ನಂಬಿದ್ದ ನಯೀಮಾ, ಮೊಬೈಲ್ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಗಳ ಭೇಟಿಯಾಗಿದ್ದರು.'

'ನಯೀಮಾ ಪ್ಯಾನ್ ಕಾರ್ಡ್ ಹಾಗೂ ಆಧಾರ್ ಪಡೆದಿದ್ದ ಆರೋಪಿಗಳು, ಮೊಬೈಲ್‌ನಲ್ಲಿ ನೋಂದಣಿ ಪ್ರಕ್ರಿಯೆ ನಡೆಸಿದ್ದರು. ಒನ್ ಟೈಂ ಪಾಸ್‌ವರ್ಡ್ ಸಹ ದಾಖಲಿಸಿದ್ದರು. ನಂತರ, ನಯೀಮಾ ಅವರಿಗೆ ಆರಂಭದ ಲಾಭವೆಂದು ಹೇಳಿ ₹ 1,000 ನೀಡಿದ್ದರು. ಅದಾದ ನಂತರ ನಯೀಮಾ, 23 ಮಂದಿಯನ್ನು ಆರೋಪಿಗಳಿಗೆ ಪರಿಚಯ ಮಾಡಿಕೊಟ್ಟಿದ್ದರು. ಅವರೆಲ್ಲ ಪ್ಯಾನ್ ಕಾರ್ಡ್ ಹಾಗೂ ಆಧಾರ್ ಕೊಟ್ಟು ನೋಂದಣಿ ಮಾಡಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

ಮೊಬೈಲ್, ವಾಹನ ಖರೀದಿ: 'ಯೋಜನೆ ಒಪ್ಪಂದವೆಂದು ಹೇಳಿ ಸಾರ್ವಜನಿಕರನ್ನು ಮೊಬೈಲ್ ಹಾಗೂ ದ್ವಿಚಕ್ರ ವಾಹನ ಮಳಿಗೆಗಳಿಗೂ ಆರೋಪಿಗಳು ಕರೆದೊಯ್ದಿದ್ದರು. ಅಲ್ಲಿಯೂ ವೈಯಕ್ತಿಕ ಮಾಹಿತಿಗಳನ್ನು ಒಟಿಪಿ ಸಮೇತ ದಾಖಲಿಸಿಕೊಂಡು ವಾಪಸು ಕಳುಹಿಸಿದ್ದರು' ಎಂದೂ ಮೂಲಗಳು ಹೇಳಿವೆ.

'ಸಾರ್ವಜನಿಕರು ನೀಡಿದ್ದ ದಾಖಲೆಗಳನ್ನೇ ಬಳಸಿಕೊಂಡು ಆರೋಪಿಗಳು, ಮೊಬೈಲ್ ಹಾಗೂ ದ್ವಿಚಕ್ರ ವಾಹನಗಳನ್ನು ಖರೀದಿಸಿದ್ದರು. ಆದರೆ, ತಿಂಗಳ ಕಂತು ತುಂಬಿರಲಿಲ್ಲ. ಮಳಿಗೆ ಪ್ರತಿನಿಧಿಗಳು, ದಾಖಲೆಯಲ್ಲಿ ಹೆಸರಿರುವ ಸಾರ್ವಜನಿಕನ್ನು ಸಂಪರ್ಕಿಸಿ ಕಂತು ತುಂಬುವಂತೆ ಹೇಳಿದ್ದರು. ತಾವು ಯಾವುದೇ ಮೊಬೈಲ್ ಹಾಗೂ ವಾಹನ ಖರೀದಿಸಿಲ್ಲವೆಂದು ಹೇಳಿದ್ದ ಸಾರ್ವಜನಿಕರು, ಪ್ರತಿನಿಧಿಗಳ ಬಳಿ ಹೋಗಿ ವಿಚಾರಿಸಿದಾಗ ಆರೋಪಿಗಳ ವಂಚನೆ ಗೊತ್ತಾಗಿದೆ' ಎಂದೂ ಮೂಲಗಳು ಹೇಳಿವೆ.

ನಿವಾಸಿಗಳ ಚಪ್ಪಲಿ, ಶೂ, ಬಟ್ಟೆ ಕಳವು: ದೂರು

ಬೆಂಗಳೂರು: ಕೆಂಗೇರಿ ಬಳಿಯ ಮೂರು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ವಾಸವಿರುವ ನಿವಾಸಿಗಳ ಚಪ್ಪಲಿ, ಶೂ ಹಾಗೂ ಬಟ್ಟೆಗಳನ್ನು ಕಳವು ಮಾಡಲಾಗಿದ್ದು, ಈ ಬಗ್ಗೆ ದೂರು ದಾಖಲಾಗಿದೆ.

'ಸಮುಚ್ಚಯಗಳಿಗೆ ಭಾನುವಾರ ತಡರಾತ್ರಿ ನುಗ್ಗಿದ್ದ ನಾಲ್ವರ ತಂಡ, ಚಪ್ಪಲಿ, ಶೂ ಹಾಗೂ ಬಟ್ಟೆಗಳನ್ನು ಕದ್ದೊಯ್ದಿದೆ. ಕಳ್ಳತನದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ನಿವಾಸಿಗಳಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭದ್ರತಾ ಸಿಬ್ಬಂದಿ ಇರದ ಹಾಗೂ ಒಬ್ಬರೇ ಸಿಬ್ಬಂದಿ ಇರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ಗುರುತಿಸಿ ಕೃತ್ಯ ಎಸಗಲಾಗಿದೆ. ಚೀಲಗಳ ಸಮೇತ ಸಮುಚ್ಚಯಗಳಿಗೆ ನುಗ್ಗಿ ಹಲವು ಫ್ಲ್ಯಾಟ್‌ಗಳ ಬಳಿ ಆರೋಪಿಗಳು ಸುತ್ತಾಡಿದ್ದರು. ಮನೆ ಎದುರು ಬಿಚ್ಚಿಟ್ಟಿದ್ದ ಚಪ್ಪಲಿಗಳು, ಶೂಗಳು ಹಾಗೂ ಒಣಗಲು ಹಾಕಿದ್ದ ಬಟ್ಟೆಗಳನ್ನು ಚೀಲದಲ್ಲಿ ತುಂಬಿಕೊಂಡು ಪರಾರಿಯಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

'ಹಳೇ ವಸ್ತುಗಳನ್ನು ಮಾರಾಟ ಮಾಡುವ ತಂಡವೇ ಕೃತ್ಯ ಎಸಗಿರುವ ಸಾಧ್ಯತೆ ಇದೆ' ಎಂದೂ ಹೇಳಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call: 080-45687736

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/7676760399

BUSINESS

Business Offers

Finance

WANTED BUSINESS Partner For Hotel Investment 2 to 3 Cr Good Returns Contact: 9606701007/ 8892501007

NRI'S INVESTMENT And Finance AvailableOn LowInterest Against Properties, Land & Building, Sites,Flats,Converted &Agriculture Lands Call: 7411265189

WANTED BUSINESS PARTNER with 5 Lakhs to 10 Lakhs Investment, Good Returns. Contact: 9606701007/ 8892501007

PERSONAL

Change of Name

I, RASITHA K, spouse of JC 819596F Ex Subedar Dineshan K.V resident of No.04, 16th Cross Anepalya, Adugodi Post, Bangalore -560030 have changed my Name from Rasitha K to Rasitha Kappadankandy vide Affidavit dated 04/12/2021 before Bangalore Metropolitan.

I, SATHISH KUMAR KADIRVELU R/at No.633, 4th A Main, OMBR Layout, Banasawadi, Bangalore-560043 have changed my name to SATISH KUMAR. K vide affidavit dated: 4/12/2021 Before Notary K.C.Pemmaiah Bangalore.

I, SRUTHY PRVATHY, Residing at #1682, Nandagokula, S. Ramesh Road, 3rd cross, Prashanthnagar, T. Dasarahalli Post, Bangalore-57 have changed my name as SHRUTHY PARVATHY, vide affidavit dated 27/11/2021 before Notary V. Anjanappa, Bangalore

I, SERVICE No:14378099H, Rank: Ex- NK, ISSAC LINUS S/o Late Lourdu Swamy residing at #773, 2nd Main Road, L.R.Nagar, Viveknagar Post, Bangalore-47 have changed my daughter's name from MARY JOHNCY to MARY JANCY. I. Vide affidavit dated 04-12-2021 before Notary L. Gopalakrishna, Bangalore

WE MAHENDRA. S., S/o, R Subramani, aged about 40 years and PRASANNA M aged about 33 years both are residing at No. 5 B.M.P 63, 1st Main road, Muneshwaranagar, subramanyapura road, Bangalore 560061, have changed our daughter's name from Kiranya. M to JESHIKA. M vide affidavit dated 02.12.2021 sworn before notary BKR Krishnamurthy, Bangalore.

I, SAMEER AMAR PATIL S/o. Amardas Maniram Patil R/a Flat #1266, Tower-1, Prestige Lakeside Habitat, Gunjur Road, Varthur, Bengaluru- 560087 Have Changed My Name to SAMEER AMARDAS PATIL vide Affidavit Dated: 04.12.2021 Sworn Before Notary A.M. Rajasekar, Bangalore.

BALA DEVI M/o 17018106N- CFN/ ATOELEBV- SANDEEP, R/a Chusala, Chaushala, Kaithal, Kalayat, Haryana changed name from BALA DEVI to VALA notary K.V Mani Bangalore.

I, VIDHYA VENUGOPALA, changed my name to VIDHYA CHINNAPPA dated 04-12-2021 Sworn before notary H.S. Sakalesh Aradhya, Bengaluru

Lost

I, SYAM. S have lost my B.B.M Convocation Certificate Reg. no. 11P3C18011, Nov- 2016, Bangalore University, while travelling. If found, please contact: The Counselor, Pariksha Bhavan, Bangalore University, Gandhibhavan Road, Jnanabharathi, Bangalore-56.

FUTURE FOCUS

Astrology

GURU KABIR Bharati. Solution of all Problems on Phone. Love affairs, Relief from Enemy, Dispute Between Husband- Wife, Marriage, Court- Cases, Career, Politics. 9311241624

OTHERS

Furniture & Furnishings

OWNER LEAVING Immediate Sale Leather Sofa, King Size Cot, Teak Dinning, Box Diwan, Teapoy: 9845414482

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ
BOOK YOUR REAL ESTATE
Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಓಕಳಿಪುರ ಕೆಳ ಸೇತುವೆಯಲ್ಲಿ ಅಪಘಾತ • ಸ್ಥಳೀಯರ ಪ್ರತಿಭಟನೆ

ಬಿಎಂಟಿಸಿ ಬಸ್ ಹರಿದು ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಕಳಿಪುರ– ರಾಜಾಜಿನಗರ ಮಾರ್ಗದಲ್ಲಿರುವ ಕೆಳ ಸೇತುವೆಯಲ್ಲಿ ಬಿಎಂಟಿಸಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ವಿಶ್ವನಾಥ್ (23) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಕೋಲಾರ ಜಿಲ್ಲೆಯ ಮುಳಬಾಗಿಲಿನ ವಿಶ್ವನಾಥ್, ನಗರದ ಕಾಲೇಜೊಂದರಲ್ಲಿ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರೆಂದು ಗೊತ್ತಾಗಿದೆ. ಬಸವೇಶ್ವರನಗರದಲ್ಲಿ ವಾಸವಿದ್ದ ಅವರು, ಸ್ನೇಹಿತ ಜಗನ್ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಮಲ್ಲೇಶ್ವರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ವಿಶ್ವನಾಥ್ ಬೈಕ್ ಚಲಾಯಿಸಿಕೊಂಡು ಮೆಜೆಸ್ಟಿಕ್ ಕಡೆಯಿಂದ ಓಕಳಿಪುರ– ರಾಜಾಜಿನಗರ ಮಾರ್ಗವಾಗಿ ಬಸವೇಶ್ವರ ನಗರಕ್ಕೆ ಹೊರಟಿದ್ದರು. ಲುಲು ಹೈಫರ್ ಮಾರ್ಕೆಟ್ ಸಮೀಪದ ಕೆಳ ಸೇತುವೆಯಲ್ಲಿ ತೆರಳುತ್ತಿದ್ದಾಗ, ಅವರ ಬೈಕ್‌ಗೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದಿತ್ತು. ಕೆಳಗೆ ಬಿದ್ದ ವಿಶ್ವನಾಥ್ ಅವರ ತಲೆ ಹಾಗೂ ಎದೆ ಮೇಲೆ ಬಸ್ಸಿನ ಹಿಂಬದಿ ಚಕ್ರ ಹರಿದು ಹೋಗಿತ್ತು.'

'ತೀವ್ರ ರಕ್ತಸ್ರಾವದಿಂದ ವಿಶ್ವನಾಥ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಜಗನ್ ಸಹ ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಜಗನ್ ಹಾಗೂ ಪ್ರತ್ಯಕ್ಷದರ್ಶಿಗಳು ನೀಡಿರುವ ಹೇಳಿಕೆ ಆಧರಿಸಿ, ಬಿಎಂಟಿಸಿ (ಡಿಪೊ–35) ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಚಾಲಕ ಸದ್ಯ ತಲೆಮರೆಸಿಕೊಂಡಿದ್ದಾನೆ' ಎಂದೂ ತಿಳಿಸಿದರು.

'ಸಂಚಾರ ಸಿಗ್ನಲ್ ಬಿಡುತ್ತಿದ್ದಂತೆ ಚಾಲಕ, ಅತೀ ವೇಗವಾಗಿ ಬಿಎಂಟಿಸಿ ಬಸ್ ಓಡಿಸಿ ಓವರ್‌ಟೇಕ್ ಮಾಡಲು ಹೋಗಿದ್ದರಿಂದ ಅಪಘಾತ ಸಂಭವಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.

ರಸ್ತೆ ಸಂಚಾರ ತಡೆದು ಪ್ರತಿಭಟನೆ: ಅಪಘಾತ ನಡೆದ ಸ್ಥಳದಲ್ಲಿ ಸೇರಿದ್ದ ಸ್ಥಳೀಯರು, ವಾಹನಗಳ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

'ಮೆಜೆಸ್ಟಿಕ್‌ಗೆ ಹೊಂದಿಕೊಂಡಿರುವ ಓಕಳಿಪುರ ಮಾರ್ಗದಲ್ಲಿ ರಸ್ತೆ ಹದಗೆಟ್ಟಿದ್ದು, ಹಲವು ಕಾಮಗಾರಿಗಳು ನಡೆಯುತ್ತಿವೆ. ವಾಹನಗಳ ಸಂಚಾರಕ್ಕೆ ಸಾಕಷ್ಟು ತೊಂದರೆಗಳಿವೆ. ವಾಹನಗಳ ದಟ್ಟಣೆ ಹೆಚ್ಚಿರುವುದರಿಂದ ನಿತ್ಯವೂ ಅಪಘಾತಗಳು ನಡೆಯುತ್ತಿವೆ' ಎಂದೂ ಸ್ಥಳೀಯರು ದೂರಿದರು.

ಸ್ಥಳಕ್ಕೆ ಬಂದ ಪೊಲೀಸ್ ಅಧಿಕಾರಿಗಳು, ಪ್ರತಿಭಟನಕಾರರ ಮನವೊಲಿಸಿದರು.

ಗಡ್ಡ ಕತ್ತರಿಸಿ ಥಳಿತ ಆರೋಪ ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಹರಣ ಪ್ರಕರಣದ ವಿಚಾರಣೆ ನೆಪದಲ್ಲಿ ತೌಸಿಫ್ ಎಂಬುವರನ್ನು ಠಾಣೆಗೆ ಕರೆತಂದು ಥಳಿಸಿ, ಗಡ್ಡ ಕತ್ತರಿಸಿದ್ದರು' ಎಂಬ ಆರೋಪದ ಪ್ರಕರಣದಲ್ಲಿ ಬ್ಯಾಟರಾಯನಪುರ ಠಾಣೆ ಪಿಎಸ್‌ಐ ಹರೀಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಡಿ. 1ರಂದು ತಡರಾತ್ರಿ ಮನೆಗೆ ನುಗ್ಗಿದ್ದ ಬ್ಯಾಟರಾಯನಪುರ ಪೊಲೀಸರು, ತೌಸಿಫ್ ಅವರನ್ನು ಠಾಣೆಗೆ ಎಳೆದೊಯ್ದು ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ಕುಟುಂಬಸ್ಥರು ಹಾಗೂ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸದಸ್ಯರು ಠಾಣೆ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ, ಎಸಿಪಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದರು. ಪ್ರಾಥಮಿಕ ತನಿಖೆ ನಡೆಸಿರುವ ಎಸಿಪಿ, ಡಿಸಿಪಿ ಮೂಲಕ ಕಮಿಷನರ್ ಕಮಲ್ ಪಂತ್ ಅವರಿಗೆ ಸೋಮವಾರ ವರದಿ ಸಲ್ಲಿಸಿದ್ದಾರೆ.

ವರದಿ ಪರಿಶೀಲಿಸಿದ ಕಮಲ್ ಪಂತ್, ಕರ್ತವ್ಯ ಲೋಪ ಎಸಗಿದ್ದ ಆರೋಪದಡಿ ಪಿಎಸ್‌ಐ ಹರೀಶ್ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಇಲಾಖೆ ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೌಸಿಫ್: 'ಠಾಣೆ ವ್ಯಾಪ್ತಿಯಲ್ಲಿ ಪೋಷಕರ ಜೊತೆ ತೌಸಿಫ್ ವಾಸವಿದ್ದರು. ಅವರ ತಂದೆಗೆ ಸೇರಿದ್ದ ಮನೆಯಲ್ಲಿ ಯುವತಿಯೊಬ್ಬರು ಬಾಡಿಗೆಗೆ ಇದ್ದಾರೆ. ಬಿಹಾರದ ಯುವಕನೊಬ್ಬ ಯುವತಿಯನ್ನು ಪೀಡಿಸುತ್ತಿದ್ದ. ನೊಂದ ಯುವತಿ, ತೌಸಿಫ್‌ಗೆ ವಿಷಯ ತಿಳಿಸಿದ್ದರು. ಯುವಕನನ್ನು ಕರೆಸಿದ್ದ ತೌಸಿಫ್, ಯುವತಿ ತಂಟೆಗೆ ಹೋಗದಂತೆ ಎಚ್ಚರಿಕೆ ನೀಡಿದ್ದರು' ಎಂದು ಕುಟುಂಬದವರು ತಿಳಿಸಿದರು.

'ಬಿಹಾರದ ಯುವಕ, ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದ. ಅದೇ ದೂರಿನ ನೆಪ ಹೇಳಿಕೊಂಡು ಮನೆಗೆ ನುಗ್ಗಿದ್ದ ಪೊಲೀಸರು, ತೌಸಿಫ್ ಅವರನ್ನು ಠಾಣೆಗೆ ಎಳೆದೊಯ್ದು ಹಲ್ಲೆ ಮಾಡಿದ್ದರು. ಗಡ್ಡವನ್ನೂ ಕತ್ತರಿಸಿದ್ದರು. ಹಲ್ಲೆಯಿಂದ ಗಾಯಗೊಂಡಿರುವ ತೌಸಿಫ್ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ಅವರು ಹೇಳಿದರು.

ಬೆನ್ಜ್ ಕಾರು ಅಡ್ಡಾದಿಡ್ಡಿ ಚಾಲನೆ: ಗಾಯ

ಬೆಂಗಳೂರು: ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ಮೇಖ್ರಿ ವೃತ್ತಕ್ಕೆ ಹೋಗುವ ಮಾರ್ಗದಲ್ಲಿ ಚಾಲಕನೊಬ್ಬ ತನ್ನ ಕಾರನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿ ಅಪಘಾತವನ್ನುಂಟು ಮಾಡಿದ್ದು, ಇದರಿಂದಾಗಿ ನಾಲ್ವರು ಗಾಯಗೊಂಡಿದ್ದಾರೆ.

'ಸೋಮವಾರ ಬೆಳಿಗ್ಗೆ ಅಪಘಾತ ನಡೆದಿರುವುದು ಗೊತ್ತಾಗಿದೆ. ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಸಂಚಾರ ಪೊಲೀಸ್ ಮೂಲಗಳು ಹೇಳಿವೆ.

'ಚಾಲಕ, ತನ್ನ ಮರ್ಸಿಡಿಸ್ ಬೆನ್ಜ್ ಕಾರನ್ನು (ಪಿವೈ 05 ಜೆ 9729) ಅತೀ ವೇಗವಾಗಿ ಚಲಾಯಿಸಿಕೊಂಡು ಹೊರಟಿದ್ದ. ಮಾರ್ಗಮಧ್ಯೆ ನಿಯಂತ್ರಣ ಕಳೆದುಕೊಂಡಿದ್ದ. ರಸ್ತೆಯ ಪಕ್ಕದಲ್ಲಿ ನಿಂತಿದ್ದ ನಾಲ್ವರಿಗೆ ಗುದ್ದಿಕೊಂಡು ಹೋದ ಕಾರು, ಗೋಡೆಯೊಂದಕ್ಕೆ ಡಿಕ್ಕಿ ಹೊಡೆದು ನಿಂತಿತ್ತು. ಮುಂಭಾಗ ಜಖಂಗೊಂಡಿತು. ಇಬ್ಬರು ಗಾಯಾಳುಗಳು ಹಾರಿ ದೂರಕ್ಕೆ ಬಿದ್ದಿದ್ದರೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಚಾಲಕ ತಲೆಮರೆಸಿಕೊಂಡಿದ್ದಾನೆ' ಎಂದೂ ಮೂಲಗಳು ಮಾಹಿತಿ ನೀಡಿವೆ.

ಆಸ್ಪತ್ರೆಯಲ್ಲಿರುವ ಗಾಯಾಳು, 'ರಸ್ತೆಯಲ್ಲಿ ನಿಂತಿದ್ದೆ. ಕಾರು ವೇಗವಾಗಿ ಬಂದು ಗುದ್ದಿತು. ಹಾರಿ ದೂರಕ್ಕೆ ಬಿದ್ದೆ. ಬೆನ್ನುಮೂಳೆ ಮುರಿದಿದೆ' ಎಂದರು.

ನಗರದಲ್ಲಿ ಕಳವು; ನೇಪಾಳದಲ್ಲಿ ಸಿಕ್ಕಿಬಿದ್ದ ಆರೋಪಿಗಳು

ಬೆಂಗಳೂರು: ಸದಾಶಿವನಗರ ಠಾಣೆ ವ್ಯಾಪ್ತಿಯಲ್ಲಿ ಉದ್ಯಮಿಯೊಬ್ಬರ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳು ನೇಪಾಳದಲ್ಲಿ ಪೊಲೀಸರಿಗೆ ಸೆರೆ ಸಿಕ್ಕಿದ್ದಾರೆ.

'ಉದ್ಯಮಿ ವಾಂಕಿ ಪಂಚಾಲಯ್ಯ ಎಂಬುವರ ಮನೆಯಲ್ಲಿ ಇತ್ತೀಚೆಗೆ ಕಳ್ಳತನ ನಡೆದಿತ್ತು. ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಲಾಲ್ ಚಂದ್ರಸಿಂಗ್ ಶಾಹಿ ಠಾಕೂರ್ ಹಾಗೂ ಕೋಮಲಾ ಎಂಬುವರೇ ಕೃತ್ಯ ಎಸಗಿದ್ದ ಅನುಮಾನವಿತ್ತು. ಇದೀಗ ಅವರಿಬ್ಬರನ್ನು ನೇಪಾಳ ಪೊಲೀಸರು ಬಂಧಿಸಿದ್ದಾರೆ. ಇಬ್ಬರನ್ನೂ ನಗರಕ್ಕೆ ಕರೆತರಲು ಕಾನೂನು ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಂಚಾಲಯ್ಯ ಅವರು ನ. 8ರಂದು ಚೆನ್ನೈನಲ್ಲಿರುವ ತಮ್ಮ ಮಗಳ ಮನೆಗೆ ಹೋಗಿದ್ದರು. ಅದೇ ದಿನವೇ ಆರೋಪಿಗಳು, ₹ 3 ಕೋಟಿ ಮೌಲ್ಯದ ಚಿನ್ನಾಭರಣ, ನಗದು ಹಾಗೂ ಉದ್ಯಮಿ ಕಾರು ಕದ್ದಿದ್ದರು. ಅದೇ ಕಾರಿನಲ್ಲಿ ಆರೋಪಿಗಳು ನೇಪಾಳಕ್ಕೆ ಹೋದ ಬಗ್ಗೆ ಮಾಹಿತಿ ಇದೆ. ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದೂ ಮೂಲಗಳು ತಿಳಿಸಿವೆ.

ಚಿತ್ರಾವಳಿ

ನಗರದ ಕೆಂಪೇಗೌಡ ಬಸ್ ನಿಲ್ದಾಣದ ಬಳಿ ಆರೋಗ್ಯ ಇಲಾಖೆ ಸಿಬ್ಬಂದಿ ಕೋವಿಡ್ ತಪಾಸಣೆ ಮಾಡಿಸಿಕೊಳ್ಳುವಂತೆ ಸೈನಿಕರಿಗೆ ವಿನಂತಿಸಿದರು ಪ್ರಜಾವಾಣಿ ಚಿತ್ರ

ಕೆ.ಆರ್‌.ಮಾರುಕಟ್ಟೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಶಿಬಿರದಲ್ಲಿ ವೈದ್ಯಕೀಯ ಸಿಬ್ಬಂದಿ ಜನರಿಗೆ ಕೋವಿಡ್ ಲಸಿಕೆ ನೀಡಿದರು –ಪ್ರಜಾವಾಣಿ ಚಿತ್ರ

ಬೈಕರ್ಸ್ ಟ್ರೂಪ್ ಬೆಂಗಳೂರು ತಂಡದ ಸದಸ್ಯರು ಹಾಗೂ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಸ್‌ಐಟಿ) ಕಾಲೇಜಿನ ವಿದ್ಯಾರ್ಥಿಗಳು ಶಿವಗಂಗೆ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛತಾ ಕಾರ್ಯಕ್ರಮದಲ್ಲಿ 100 ಕೆ.ಜಿಯಷ್ಟು ಪ್ಲಾಸ್ಟಿಕ್ ಸಂಗ್ರಹಿಸಿದರು ಪ್ರಜಾವಾಣಿ ಚಿತ್ರ

ಬಿಎಂಟಿಸಿ ಪ್ರಯಾಣಿಕರ ಹಕ್ಕೊತ್ತಾಯ • ಬಸ್ ಸಂಚಾರ ನಿಲ್ಲಿಸಿ ನಷ್ಟ ಮಾಡುವ ಬದಲು ಕಾರ್ಯಾಚರಣೆ ನಡೆಸಲು ಹೆಚ್ಚಿದ ಬೇಡಿಕೆ

‘ವೋಲ್ವೊ ರಸ್ತೆಗಿಳಿಸಿ–ಪ್ರಯಾಣ ದರವನ್ನೂ ಇಳಿಸಿ’

• ವಿಜಯಕುಮಾರ್ ಎಸ್.ಕೆ.

ಡಿಪೊನಲ್ಲೇ ಸಾಲುಗಟ್ಟಿ ನಿಂತಿರುವ ವೋಲ್ವೊ ಬಸ್‌ಗಳು –ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

ಬೆಂಗಳೂರು: ಸಿಲಿಕಾನ್ ಸಿಟಿಯಾಗಿ ಮಗ್ಗಲು ಬದಲಿಸಿದ ಬೆಂಗಳೂರಿನಲ್ಲಿ ಜನರಿಗೆ ಹವಾನಿಯಂತ್ರಿತ ಸಾರಿಗೆ ಸೇವೆ ಒದಗಿಸಲು ಖರೀದಿಸಿದ ವೋಲ್ವೊ ಬಸ್‌ಗಳು ಬಿಎಂಟಿಸಿಗೆ ಅಕ್ಷರಶಃ ಬಿಳಿಯಾನೆಗಳಂತಾಗಿವೆ. ನಗರದ ರಸ್ತೆಗಳಲ್ಲಿ ಒಂದೆಡೆ ಬಿಎಂಟಿಸಿಯ ಹಳೇ ಬಸ್‌ಗಳು ಸಂಚರಿಸುತ್ತಿದ್ದರೆ, ಇನ್ನೊಂದೆಡೆ ವೋಲ್ವೊ ಬಸ್‌ಗಳು ಕೋವಿಡ್ ಬಳಿಕ ಉಪಯೋಗಕ್ಕೆ ಬಾರದೆ ಮೂಲೆ ಸೇರಿವೆ.

ಕೋವಿಡ್ ಅಲೆಗಳ ಅಬ್ಬರದಲ್ಲಿ ಪ್ರಯಾಣಿಕರ ಕೊರತೆಯಿಂದ ಮೂಲೆ ಸೇರಿದ್ದ 700ಕ್ಕೂ ಹೆಚ್ಚು ವೋಲ್ವೊ ಬಸ್‌ಗಳು ಮರಳಿ ರಸ್ತೆಗಿಳಿದಿಲ್ಲ. ಈ ಬಸ್‌ಗಳನ್ನು ಬಳಸದೇ ನಿಲ್ಲಿಸಿ, ಅವುಗಳ ನಿರ್ವಹಣೆಗೆ ಕೋಟ್ಯಂತರ ರೂಪಾಯಿಗಳನ್ನು ವ್ಯರ್ಥ ವ್ಯಯಿಸುವ ಬದಲು ಪ್ರಯಾಣ ದರ ಕಡಿಮೆ ಮಾಡಿ ಈ ಬಸ್‌ಗಳನ್ನು ರಸ್ತೆಗೆ ಇಳಿಸಬೇಕು. ಇದರಿಂದ ನಿಗಮಕ್ಕೆ ನಷ್ಟ ತಪ್ಪಲಿದೆ ಹಾಗೂ ಸಾರ್ವಜನಿಕರಿಗೂ ಅನುಕೂಲವಾಗಲಿದೆ ಎಂದು ಪ್ರಯಾಣಿಕರು ಪ್ರತಿಪಾದಿಸಿದ್ದಾರೆ.

ಐ.ಟಿ ಕಂಪನಿಗಳ ತವರಾಗಿ ಬದಲಾದ ಬೆಂಗಳೂರಿಗೆ ಐಷಾರಾಮಿ ಸಾರಿಗೆ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ವೋಲ್ವೊ ಬಸ್‌ಗಳನ್ನು ಬಿಎಂಟಿಸಿ ಪರಿಚಯಿಸಿತು. 2014–15ರಲ್ಲಿ ವೋಲ್ವೊ ಬಸ್‌ಗಳನ್ನು ಬಿಎಂಟಿಸಿ ರಸ್ತೆಗೆ ಇಳಿಸಿತ್ತು. ಸದ್ಯ ಒಟ್ಟು 860 ವೋಲ್ವೊ ಬಸ್‌ಗಳು ನಿಗಮದಲ್ಲಿವೆ. ಇವುಗಳಲ್ಲಿ 300 ಬಸ್‌ಗಳನ್ನು ಒಪ್ಪಂದದ ಸೇವೆಗಾಗಿ ಸಾಫ್ಟ್‌ವೇರ್ ಕಂಪನಿಗಳಿಗೆ ಬಿಎಂಟಿಸಿ ಒದಗಿಸಿತ್ತು. ಉದ್ಯೋಗಿಗಳನ್ನು ಬೆಳಿಗ್ಗೆ ಕರೆದೊಯ್ದು ಅಲ್ಲೇ ನಿಲ್ಲಿಸಿಕೊಂಡು ಸಂಜೆ ಅವರನ್ನು ಮನೆಗಳಿಗೆ ತಲುಪಿಸುವ ಜವಾಬ್ದಾರಿ ಇತ್ತು. ದಿನಕ್ಕೆ ₹10 ಸಾವಿರದಿಂದ ₹15 ಸಾವಿರ ತನಕ ಬಾಡಿಗೆ ಆಧಾರದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದವು. ಬೇರೆ ಬಸ್‌ಗಳಲ್ಲಿ ಪ್ರತಿ ಕಿ.ಮೀಗೆ ₹11ರಷ್ಟನ್ನು ನಿರ್ವಾಹಕರ ಸಲುವಾಗಿ ಬಿಬಿಎಂಪಿ ವೆಚ್ಚ ಮಾಡುತ್ತದೆ. ಆದರೆ, ಒಪ್ಪಂದ ಸಾರಿಗೆಗಳಲ್ಲಿ ನಿರ್ವಾಹಕರ ವೆಚ್ಚವೂ ಸಂಸ್ಥೆಗೆ ಇರಲಿಲ್ಲ.

ಉಳಿದ ಬಸ್‌ಗಳನ್ನು ಸಾಫ್ಟ್‌ವೇರ್ ಕಂಪನಿಗಳಿರುವ ಮಾರ್ಗದಲ್ಲೇ ಹೆಚ್ಚಿನದಾಗಿ ಕಾರ್ಯಾಚರಣೆಗೆ ಇಳಿಸಲಾಗಿತ್ತು. ಆರಂಭದಲ್ಲಿ ಐ.ಟಿ ಉದ್ಯೋಗಿಗಳು ಈ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದರು. ಆ್ಯಪ್ ಆಧರಿತ ಟ್ಯಾಕ್ಸಿ ಸೇವೆ ಒದಗಿಸುವ ಓಲಾ, ಉಬರ್‌ನಂತಹ ಕಂಪನಿಗಳು ಕಡಿಮೆ ದರದಲ್ಲಿ ಟ್ಯಾಕ್ಸಿ ಸೇವೆ ಒದಗಿಸಿದ ಬಳಿಕ ವೋಲ್ವೊ ಬಸ್ ಹತ್ತುವ ಪ್ರಯಾಣಿಕರ ಸಂಖ್ಯೆ ಇಳಿಕೆ ಆಯಿತು.

ಕೋವಿಡ್ ಬಳಿಕ ಐ.ಟಿ ಕಂಪನಿಯ ಬಹುತೇಕ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಈ ಬಸ್‌ಗಳೂ ಈಗ ಡಿಪೊಗಳಲ್ಲೇ ನಿಂತಿವೆ. ಈ ಬಸ್‌ಗಳ ಪ್ರತಿ ಕಿಲೋ ಮೀಟರ್ ಸಂಚಾರಕ್ಕೆ ₹80ರಿಂದ ₹85 ವೆಚ್ಚವಾಗುತ್ತಿತ್ತು. ಆದರೆ, ಕೋವಿಡ್ ಸಂದರ್ಭದಲ್ಲಿ ಪ್ರತಿ ಕಿಲೋ ಮೀಟರ್‌ಗೆ ವರಮಾನದ ಪ್ರಮಾಣ ₹50ಕ್ಕೆ ಇಳಿಕೆಯಾಗಿತ್ತು. ಆದ್ದರಿಂದ ಬಹುತೇಕ ಬಸ್‌ಗಳ ಸಂಚಾರವನ್ನೇ ನಿಲ್ಲಿಸಲಾಗಿದೆ.

ವೋಲ್ವೊ ಬಸ್‌ಗಳ ಪ್ರಯಾಣ ದರ ಗರಿಷ್ಠ ₹90 ಮತ್ತು ದಿನದ ಪಾಸ್ ದರ ₹100 ಇದೆ. ಕೋವಿಡ್ ಕಡಿಮೆಯಾದ ಸಂದರ್ಭದಲ್ಲೂ ಸಾಮಾನ್ಯ ಪ್ರಯಾಣಿಕರು ಈ ಬಸ್‌ಗಳನ್ನು ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಪ್ರಯಾಣ ದರ ಮತ್ತು ಪಾಸ್ ದರ ಕಡಿಮೆ ಮಾಡಿದರೆ ಸಾಮಾನ್ಯ ಜನರೂ ಈ ಬಸ್‌ಗಳನ್ನು ಬಳಸಲು ಒಲವು ತೋರಬಹುದು ಎನ್ನುತ್ತಾರೆ ಪ್ರಯಾಣಿಕರು.

ಅಂಕಿ-ಅಂಶಗಳು

860
ಬಿಎಂಟಿಸಿಯಲ್ಲಿರುವ ಒಟ್ಟು ವೋಲ್ವೊ ಬಸ್‌ಗಳು

150
ಸದ್ಯ ಕಾರ್ಯಾಚರಣೆಯಲ್ಲಿರುವ ಬಸ್‌ಗಳು

2 ಕಿ.ಮೀ
ಪ್ರತಿ ಲೀಟರ್ ಡೀಸೆಲ್‌ಗೆ ವೋಲ್ವೊ ಬಸ್ ಕ್ರಮಿಸುವ ದೂರ

‘ಹಳೆ ಬಸ್ ಬದಲು ವೋಲ್ವೊ ಓಡಿಸಿ’

‘ನಗರದ ಅನೇಕ ಮಾರ್ಗಗಳಲ್ಲಿ ಈಗಲೂ 10 ವರ್ಷಗಳಿಗೂ ಹಳೆಯದಾದ, ದುಃಸ್ಥಿತಿಯಲ್ಲಿರುವ ಬಸ್‌ಗಳೇ ಸಂಚರಿಸುತ್ತಿವೆ. ಇಂತಹ ಬಸ್‌ಗಳು ಅರ್ಧ ದಾರಿಯಲ್ಲೇ ಕೆಟ್ಟು ನಿಲ್ಲುವ ಪ್ರಸಂಗಗಳು ಪದೇ ಪದೇ ಮರುಕಳಿಸುತ್ತಿವೆ. ಕೆಲವು ಬಸ್‌ಗಳ ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂದರೆ, ಅವುಗಳನ್ನು ಹತ್ತುವ ಮುನ್ನ ಹತ್ತು ಬಾರಿ ಬಾರಿ ಯೋಚಿಸಬೇಕು. ಸುಸ್ಥಿತಿಯಲ್ಲಿರುವ ವೋಲ್ವೊ ಬಸ್‌ಗಳನ್ನು ವ್ಯರ್ಥ ನಿಲ್ಲಿಸುವ ಬದಲು, ಹಳೆ ಬಸ್‌ಗಳನ್ನು ಸಂಚರಿಸುತ್ತಿರುವ ಮಾರ್ಗಗಳಲ್ಲಿ ಬಳಸಬಹುದು. ಇದರಿಂದ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಲಿದೆ. ದುಃಸ್ಥಿತಿಯಲ್ಲಿರುವ ಬಸ್‌ಗಳನ್ನೇ ಬಳಸುವ ಅನಿವಾರ್ಯವೂ ತಪ್ಪಲಿದೆ’ ಎಂಬುದು ಪ್ರಯಾಣಿಕರ ಸಲಹೆ.

‘ಲಾಭ–ನಷ್ಟದ ಲೆಕ್ಕಾಚಾರ ಇರಬಾರದು’

‘ಸರ್ಕಾರವೇ ನಡೆಸುವ ಸಾರಿಗೆ ಸಂಸ್ಥೆಯಲ್ಲಿ ಲಾಭ ಮತ್ತು ನಷ್ಟದ ಲೆಕ್ಕಾಚಾರ ಇರಬಾರದು. ಕಡಿಮೆ ದರದಲ್ಲಿ ಸೇವೆ ಒದಗಿಸುವುದಷ್ಟೇ ಸಂಸ್ಥೆಯ ಉದ್ದೇಶ ಆಗಿರಬೇಕು. ಸಾಧ್ಯವಾದಷ್ಟು ಕಡಿಮೆ ದರದಲ್ಲಿ ಉತ್ತಮ ಸೌಕರ್ಯವನ್ನು ಬಿಎಂಟಿಸಿ ಒದಗಿಸಬೇಕು’ ಎಂಬುದು ಪ್ರಯಾಣಿಕರ ಅಭಿಪ್ರಾಯ.

‘ಸದ್ಯ ವೋಲ್ವೊ ಬಸ್‌ಗಳ ಸೇವೆ ವಿಮಾನ ನಿಲ್ದಾಣ ಮಾರ್ಗದಲ್ಲಿ ಮಾತ್ರ ಇದೆ. ಬಸ್ ಬರುವ ಸಮಯಕ್ಕೆ ನಿಗದಿತ ನಿಲ್ದಾಣಕ್ಕೆ ಹೋಗಿ ಕಾದು ಕುಳಿತುಕೊಳ್ಳಬೇಕು. ಅಷ್ಟು ಶ್ರಮ ವಹಿಸಿ ಬಸ್ ಹತ್ತಿದರೂ ದುಬಾರಿ ಪ್ರಯಾಣ ದರ ಇದೆ. ಅದರ ಬದಲು ಮನೆ ಬಾಗಿಲಿಗೆ ಬರುವ ಆ್ಯಪ್ ಆಧಾರಿತ ಟ್ಯಾಕ್ಸಿಯಲ್ಲಿ ಇಬ್ಬರು ಪ್ರಯಾಣಿಸಿದರೆ ಬಸ್ ದರಕ್ಕಿಂತ ಕಡಿಮೆ ಆಗಲಿದೆ’ ಎನ್ನುತ್ತಾರೆ ಬಿಟಿಎಂ ಲೇಔಟ್ ನಿವಾಸಿ ಮಂಜುನಾಥ್.

‘ಪ್ರಯಾಣಿಕರ ಕೊರತೆಯಿಂದ ವೋಲ್ವೊ ಬಸ್ ಸಂಚಾರ ಕಡಿಮೆ ಮಾಡಲಾಗಿದೆ ಎಂಬುದರಲ್ಲಿ ಅರ್ಥವಿಲ್ಲ. ಲಾಭ–ನಷ್ಟದ ಲೆಕ್ಕಾಚಾರ ಮಾಡಿಕೊಂಡು ಕೂರಲು ಇದು ಖಾಸಗಿ ಸಂಸ್ಥೆಯೇ’ ಎಂದು ಅವರು ಪ್ರಶ್ನಿಸಿದರು.

‘ಪ್ರಾಯೋಗಿಕ ಸಂಚಾರ ಆರಂಭಿಸಬಹುದು’

ಕೃಷ್ಣಪ್ರಸಾದ್

ಹವಾನಿಯಂತ್ರಿತ (ಎ.ಸಿ) ವ್ಯವಸ್ಥೆ ಹೊಂದಿರುವ ವೋಲ್ವೊ ಬಸ್ ಹತ್ತಲು ಕೋವಿಡ್ ಸಂದರ್ಭದಲ್ಲಿ ಜನ ಹಿಂದೇಟು ಹಾಕುತ್ತಿದ್ದಾರೆ. ವೋಲ್ವೊ ಕಂಪನಿಯನ್ನು ಸಂಪರ್ಕಿಸಿ ಎ.ಸಿ ವ್ಯವಸ್ಥೆ ತೆಗೆಯಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು ಎಂದು ಹೋರಾಟಗಾರ ಕೃಷ್ಣ ಪ್ರಸಾದ್ ಸಲಹೆ ನೀಡಿದರು.

‘ಪ್ರಯಾಣ ದರ ಕಡಿಮೆ ಮಾಡಿ ಕೆಲವು ಮಾರ್ಗಗಳಲ್ಲಿ ಪ್ರಾಯೋಗಿಕ ಸಂಚಾರ ಆರಂಭಿಸಿ ಯಶಸ್ವಿಯಾದರೆ ಎಲ್ಲ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಬಹುದು’ ಎಂದರು.

‘ಬಸ್‌ಗಳನ್ನು ರಸ್ತೆಗೆ ಇಳಿಸಬೇಕು’

ರಾಜಕುಮಾರ್ ದುಗಾರ್

‘ನಗರದಲ್ಲಿ ಸಾರ್ವಜನಿಕ ಸಂಚಾರ ವ್ಯವಸ್ಥೆಯಲ್ಲಿ ಬಿಎಂಟಿಸಿ ದೊಡ್ಡ ಪಾತ್ರ ವಹಿಸಿದೆ. ಬಸ್‌ಗಳನ್ನು ಡಿಪೊಗಳಲ್ಲೇ ನಿಲ್ಲಿಸುವ ಬದಲು ರಸ್ತೆಗೆ ಇಳಿಸಬೇಕು’ ಎಂದು ಸಿಟಿಜನ್ ಫಾರ್ ಸಿಟಿಜನ್ಸ್‌ನ ಸಂಸ್ಥಾಪಕ ರಾಜಕುಮಾರ್ ದುಗಾರ್ ಸಲಹೆ ನೀಡಿದರು.

‘ಬಸ್‌ಗಳನ್ನು ಯಾವುದೇ ಕಾರಣಕ್ಕೂ ನಿಂತಲ್ಲೇ ನಿಲ್ಲಿಸಬಾರದು. ನಿಲ್ಲಿಸುವುದರಿಂದ ವಾಹನಗಳ ಎಂಜಿನ್ ಹಾಳಾಗುತ್ತದೆ. ಅದರ ಬದಲು ರಸ್ತೆಗೆ ಇಳಿಸಿದರೆ ಪ್ರಯಾಣಿಕರಿಗೆ ಅನುಕೂಲ ಆಗಲಿದೆ’ ಎಂದರು.

ಯಾವ ಮಾರ್ಗದಲ್ಲಿ ಬೇಡಿಕೆ ಇದೆ ಎಂಬುದನ್ನು ಪರಿಶೀಲಿಸಿ ವೋಲ್ವೊ ಬಸ್‌ಗಳನ್ನು ಆ ಮಾರ್ಗಗಳಲ್ಲಿ ಓಡಿಸಬೇಕು ಎಂದು ಒತ್ತಾಯಿಸಿದರು.

ಕೆಲವೇ ಮಾರ್ಗದಲ್ಲಿ ಸಂಚರಿಸುತ್ತಿರುವ ವೋಲ್ವೊ ಬಸ್‌ಗಳು

‘ವಾತ್ಸ್ಯಾಯನ ಕಾಮಸೂತ್ರ’ ಕೃತಿಯ ಲೋಕಾರ್ಪಣೆ

‘ಪುರುಷ ಕೇಂದ್ರಿತ ಗ್ರಂಥಕ್ಕೆ ಆಕ್ಷೇಪ ಸಲ್ಲ’

ಪ್ರಜಾವಾಣಿ ವಾರ್ತೆ



‘ವಾತ್ಸ್ಯಾಯನ ಕಾಮಸೂತ್ರ’ ಕೃತಿಯನ್ನು ರಂಗಕರ್ಮಿ ಎಸ್‌. ಎನ್‌. ಸೇತುರಾಮ್ ಬಿಡುಗಡೆ ಮಾಡಿದರು. ಶತಾವಧಾನಿ ಡಾ. ಆರ್‌. ಗಣೇಶ್, ಕೃತಿಯ ಅನುವಾದಕ ಡಾ. ವಿಶ್ವನಾಥ ಕೃ.ಹಂಪಿಹೊಳಿ, ವೀಣಾ ವೀಣಾ ಬನ್ನಂಜೆ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕಾಲಕ್ಕೆ ತಕ್ಕಂತೆ ರಚನೆಯಾಗಿರುವ ಪುರುಷ ಆಧಾರಿತ ಗ್ರಂಥಗಳನ್ನು ಸುಟ್ಟು ಹಾಕುವ ಬಗ್ಗೆ ಯೋಚಿಸದೆಯೇ ಸ್ತ್ರೀ ಪರ ಚಿಂತನೆಯ ವಿಚಾರಗಳ ಕೃತಿಗಳನ್ನು ಹೆಚ್ಚು ಹೆಚ್ಚು ರಚಿಸಬೇಕಾಗಿದೆ’ ಎಂದು ಶತಾವಧಾನಿ ಡಾ.ಆರ್‌. ಗಣೇಶ್ ಪ್ರತಿಪಾದಿಸಿದರು.

ಅಯೋಧ್ಯಾ ಪ್ರಕಾಶನದ ‘ವಾತ್ಸ್ಯಾಯನ ಕಾಮಸೂತ್ರ’ ಕೃತಿಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ವಾತ್ಸ್ಯಾಯನ, ಪುರುಷ ಕೇಂದ್ರಿತವಾಗಿ ಕಾಮಸೂತ್ರ ರಚಿಸಿದ್ದಾರೆ ಎನ್ನುವ ಆಕ್ಷೇಪ ಇದೆ. ಆದರೆ, ಆಗಿನ ಸಂದರ್ಭವೇ ಹಾಗಿತ್ತು. ಹಲವು ಗ್ರಂಥಗಳು ಪುರುಷ ಕೇಂದ್ರಿತವಾಗಿಯೇ ರಚಿಸಲಾಗಿದೆ. ಇವುಗಳನ್ನು ಸುಟ್ಟು ಹಾಕಬೇಕೇ’ ಎಂದು ಅವರು ಪ್ರಶ್ನಿಸಿದರು.

‘ಸ್ತ್ರೀ ಪರ ಅಥವಾ ಸ್ತ್ರೀ ಚಿಂತನೆಯ ಕೃತಿಗಳ ರಚನೆಗೆ ಯಾವುದೇ ನಿರ್ಬಂಧಗಳು ಇಲ್ಲ. ಯಾರು ಬೇಕಾದರೂ ರಚಿಸಬಹುದು. ವಾತ್ಸ್ಯಾಯನ ಕಾಮಸೂತ್ರ ಕೃತಿ ಸಹ ದೊಡ್ಡ ಪರಂಪರೆಯ ಫಲ. ಆಧುನಿಕ ಯುಗಕ್ಕೂ ಈ ಕೃತಿ ಪ್ರಸ್ತುತ. ಗುಣಮಟ್ಟದ ವಿಷಯದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವನ್ನು ಇಂದಿಗೂ ಮೀರಲು ಸಾಧ್ಯವಾಗಿಲ್ಲ. ಅದೇ ರೀತಿ ವಾತ್ಸ್ಯಾಯನ ಕಾಮಸೂತ್ರವನ್ನು ಯಾವುದೇ ಗ್ರಂಥಗಳು ಮೀರಲು ಸಾಧ್ಯವಾಗಿಲ್ಲ’ ಎಂದು ಹೇಳಿದರು.

‘ಬ್ರಹ್ಮಚರ್ಯಕ್ಕೆ ಸಂಕುಚಿತ ಅರ್ಥ ನೀಡಲಾಗಿದೆ. ತಪಸ್ಸಿನ ಕೆಲಸಕ್ಕೆ ಬ್ರಹ್ಮಚರ್ಯೆ ಬೇಕು. ಕಾಮ ಎನ್ನುವುದು ಬಯಕೆಗೆ ಸಂಬಂಧಿಸಿದ್ದಾಗಿದೆ. ಕಾಮ ಶಬ್ದವು ಮೂಲಾರ್ಥದಲ್ಲಿ ಪ್ರೀತಿ ಮತ್ತು ಕಾಂತಿಗಳನ್ನು ಧ್ವನಿಸುತ್ತದೆ. ಕಾಮಶಾಸ್ತ್ರವನ್ನು ಲೈಂಗಿಕ ವಿದ್ಯೆಯೆಂದು ಸೀಮಿತವಾಗಿ ಕಾಣುವುದು ಅನುಚಿತ’ ಎಂದು ವಿವರಿಸಿದರು.

‘ಕಾಮಶಾಸ್ತ್ರದ ಹಿನ್ನೆಲೆ ಇಲ್ಲದ ನಾಟ್ಯಶಾಸ್ತ್ರದ ವ್ಯಾಸಂಗ ಪರಿಪೂರ್ಣವಾಗುವುದಿಲ್ಲ. ಇದೇ ರೀತಿಯ ಅಭಿಪ್ರಾಯವು ನಾಟ್ಯಶಾಸ್ತ್ರಕ್ಕೂ ಅನ್ವಯವಾಗುತ್ತದೆ. ಹೀಗಾಗಿ, ಇವೆರಡು ಸಮಾನ ತಂತ್ರಗಳು’ ಎಂದು ವಿಶ್ಲೇಷಿಸಿದರು.

ಲೇಖಕಿ ವೀಣಾ ಬನ್ನಂಜೆ ಮಾತನಾಡಿ, ‘ಕಾಮ ಎನ್ನುವುದು ಎಲ್ಲರಲ್ಲೂ ಇರುತ್ತದೆ. ಆದರೆ, ಅದನ್ನು ದಾಟುವುದು ಮುಖ್ಯ. ಕಾಮವನ್ನು ಪ್ರೇಮವನ್ನಾಗಿ ಪರಿವರ್ತಿಸಬೇಕು. ಕಾಮಕ್ಕೆ ದಣಿವಿದೆ. ಆದರೆ, ಪ್ರೇಮಕ್ಕೆ ದಣಿವಿಲ್ಲ. ಕಾಮಕ್ಕೆ ಅಂತ್ಯವಿದೆ. ಆದರೆ, ಪ್ರೇಮ ಅನಂತ ಎನ್ನುವುದನ್ನು ಅರಿತುಕೊಳ್ಳಬೇಕು’ ಎಂದು ವಿಶ್ಲೇಷಿಸಿದರು. ಲೇಖಕ ರೋಹಿತ್ ಚಕ್ರತೀರ್ಥ ಇದ್ದರು.

ಪ್ರತಿಭಾ ಪುರಸ್ಕಾರ ನಗರದಲ್ಲಿ ಭಾನುವಾರ ನಡೆದ ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸಂಸ್ಥಾಪನಾ ದಿನಾಚರಣೆ ಮತ್ತು ಸರ್ವಸದಸ್ಯರ ಸಭೆಯಲ್ಲಿ ಸದಸ್ಯರ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ರಾಘವೇಂದ್ರ ಕೆ.ತೊಗರ್ಸಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಪತ್ರಕರ್ತ ಡಿ. ಮಹಾದೇವಪ್ಪ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕ ಡಿ.ಪಿ. ಮುರಳೀಧರ್, ಉಪಾಧ್ಯಕ್ಷ ಶಿವಣ್ಣ ಇದ್ದರು

ಜನಸಂಖ್ಯೆ ಆಧರಿಸಿ ಮೀಸಲಾತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನಾಗರಾಜ ಬಳ್ಳೇಕೆರೆ, ಮುನಿರಾಜು, ಮಹಾಮಾಯ ನನ್ನರಿಂಗ್ ಬುದ್ಧ ವಿಹಾರದ ಭಿಕ್ಷುಣಿ ಧಮ್ಮನಯನ ಹಾಗೂ ಚಿ.ನಾ.ರಾಮು ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು– ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕು. ಈ ವಿಚಾರದಲ್ಲಿ ಸರ್ಕಾರದ ಕಣ್ಣು ತೆರೆಸಲು ವಿಶೇಷ ಅಭಿಯಾನ ಹಮ್ಮಿಕೊಳ್ಳಬೇಕು’ ಎಂದು ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ರಾಷ್ಟ್ರೀಯ ಘಟಕದ ಅಧ್ಯಕ್ಷ ಚಿ.ನಾ.ರಾಮು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ 65ನೇ ಪರಿನಿರ್ವಾಣ ದಿನದ ಅಂಗವಾಗಿ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ದುಂಡು ಮೇಜಿನ ಸಭೆಯಲ್ಲಿ ಸೋಮವಾರ ಮಾತನಾಡಿದರು.

‘ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಆಗ ಪರಿಶಿಷ್ಟ ಜಾತಿ ಪಟ್ಟಿಗೆ ಆರು ಜಾತಿಗಳನ್ನಷ್ಟೇ ಸೇರ್ಪಡೆ ಮಾಡಿದ್ದರು. ಮತ ಬ್ಯಾಂಕ್ ರಾಜಕಾರಣಕ್ಕಾಗಿ ಜನಪ್ರತಿನಿಧಿಗಳು ಇದಕ್ಕೆ ಇನ್ನೂ 95 ಜಾತಿಗಳನ್ನು ಸೇರಿಸಿದ್ದಾರೆ. 101 ಜಾತಿಗಳಿಗೆ ಶೇ 15ರಷ್ಟು ಮೀಸಲಾತಿ ಸಾಲುವುದಿಲ್ಲ’ ಎಂದರು.

‘ಅಂಬೇಡ್ಕರ್ ಮತ್ತು ಪ್ರಸ್ತುತತೆ’ ಕುರಿತು ಮಾತನಾಡಿದ ಕ್ರಿಯಾ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ನಾಗರಾಜ ಬಳ್ಳೇಕೆರೆ, ‘ಕೊಳೆಗೇರಿ ನಿವಾಸಿಗಳು, ಗ್ರಾಮೀಣ ಭಾಗದ ಬಡವರ ಬದುಕು ಈಗಲೂ ಶೋಚನೀಯವಾಗಿದೆ. ತಳ ಸಮುದಾಯದಲ್ಲೇ ಬಲಿಷ್ಠರಾಗಿರುವ ಕೆಲವರಷ್ಟೇ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳುತ್ತಿದ್ದಾರೆ. ದಲಿತರು ವಾಸಿಸುವ ಮನೆ ಹಾಗೂ ಉಡುಗೆ ತೊಡುಗೆಯಲ್ಲಷ್ಟೇ ಬದಲಾವಣೆಯಾಗಿದೆ. ಅವರ ಆರ್ಥಿಕ ಸ್ಥಿತಿ ಇಂದಿಗೂ ದಯನೀಯವಾಗಿದೆ’ ಎಂದರು.

‘ಸಮುದಾಯದ ಹೆಸರು ಮುಂದಿಟ್ಟುಕೊಂಡು ಮೀಸಲಾತಿಯ ಲಾಭ ಪಡೆದು ಶಾಸಕ ಹಾಗೂ ಸಂಸದರಾಗಿ ಆಯ್ಕೆಯಾದವರು ಸ್ವಯಂ ಏಳಿಗೆಯತ್ತ ಮಾತ್ರ ಚಿತ್ತ ಹರಿಸುತ್ತಿದ್ದಾರೆ. ಸಮುದಾಯದ ಹಿತ ಕಡೆಗಣಿಸುತ್ತಿದ್ದಾರೆ’ ಎಂದು ದೂರಿದರು.

ಸಿಐಡಿ ತನಿಖೆ ಆರಂಭ; ಇಬ್ಬರ ಅಮಾನತು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಪೊಲೀಸ್ ವಶದಲ್ಲಿದ್ದ ವ್ಯಕ್ತಿ ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಸೋಮವಾರ ತನಿಖೆ ಆರಂಭಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಬಳಿಯ ಬಹದ್ದೂರ್ ಘಟ್ಟ ನಿವಾಸಿ ಕುಮಾರ್ (35) ಅವರು ದಾವಣಗೆರೆ ಸಿಇಎನ್ ಪೊಲೀಸರ ವಶದಲ್ಲಿ ಇರುವಾಗ ದಾವಣಗೆರೆಯ ‘ಶ್ರೀ ಲಾಡ್ಜ್’ನಲ್ಲಿ ಮೃತಪಟ್ಟಿದ್ದರು. ‘ಈ ಸಾವಿಗೆ ಕಾರಣರಾಗಿರುವ ಪೊಲೀಸರ ಮೇಲೆ ಪ್ರಕರಣ ದಾಖಲಿಸಿಕೊಳ್ಳಬೇಕು. ₹ 50 ಲಕ್ಷ ಪರಿಹಾರ ನೀಡಬೇಕು’ ಎಂದು ಒತ್ತಾಯಿಸಿ ಸಂಬಂಧಿಕರು ಭಾನುವಾರ ಜಿಲ್ಲಾ ಆಸ್ಪತ್ರೆಯ ಎದುರು ಪ್ರತಿಭಟಿಸಿದ್ದರು.

ಬಸ್ ಹರಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಮಾಗಡಿ: ಸರ್ಕಾರಿ ಬಸ್ ಡಿಕ್ಕಿ ಹೊಡೆದು ಸ್ಥಳದಲ್ಲಿಯೇ ಮಹಿಳೆ ಮೃತಪಟ್ಟಿರುವುದು ಪಟ್ಟಣದ ಬಸ್ ನಿಲ್ದಾಣದಲ್ಲಿ ಸೋಮವಾರ ಮಧ್ಯಾಹ್ನ 12 ಗಂಟೆಯಲ್ಲಿ ನಡೆದಿದೆ.

ಮೃತರನ್ನು ಶಿವಮ್ಮ (58) ಎಂದು ಗುರುತಿಸಲಾಗಿದೆ. ಮೃತರು ಬೆಂಗಳೂರಿನ ಎ.ನಾರಾಯಣಪುರ, ಗುರುವಾರೆಡ್ಡಿ ಲೇಔಟ್ ನಿವಾಸಿ. ಬೈಚಾಪುರದಲ್ಲಿ ಇರುವ ನೆಂಟರ ಮನೆಗೆ ಹೋಗಲು ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ಅವಘಡ ನಡೆದಿದೆ. ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

2024ರಲ್ಲಿ ಶ್ರೀಕೃಷ್ಣ ಜನ್ಮಭೂಮಿಗಾಗಿ ಹೋರಾಟ: ವಿಶ್ವ ಹಿಂದೂ ಪರಿಷತ್

ಪ್ರಜಾವಾಣಿ ವಾರ್ತೆ

ನವದೆಹಲಿ: 2024ರಲ್ಲಿ ಮಥುರಾದ ಶ್ರೀಕೃಷ್ಣ ಜನ್ಮಭೂಮಿ ವಿವಾದವನ್ನು ಕೈಗೆತ್ತಿಕೊಳ್ಳುವುದಾಗಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಭಾನುವಾರ ಹೇಳಿದೆ.

ಶ್ರೀಕೃಷ್ಣ ಜನ್ಮಭೂಮಿ ವಿಚಾರ ತಮ್ಮ ಕಾರ್ಯಸೂಚಿಯಲ್ಲಿ ಇಲ್ಲ ಎಂದು ಈ ಮೊದಲು ವಿಎಚ್‌ಪಿ ಹೇಳಿತ್ತು. ಆದರೆ ಈಗ ತನ್ನ ನಿಲುವನ್ನು ಬದಲಿಸಿದೆ.

ಅಯೋಧ್ಯೆಯಲ್ಲಿ ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ವಿಎಚ್‌ಪಿ ರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್, ‘ನಮ್ಮ ಸಂಪೂರ್ಣ ಗಮನ ಈಗ ರಾಮ ಮಂದಿರ ನಿರ್ಮಾಣದ ಕಡೆ ಇದೆ. ರಾಮ ಮಂದಿರ ಮುಕ್ತಾಯ ಆಗುವವರೆಗೆ ಮಥುರಾದ ಶ್ರೀಕೃಷ್ಣ ಜನ್ಮಭೂಮಿ ವಿಷಯವನ್ನು ಕೈಗೆತ್ತಿಕೊಳ್ಳುವುದಿಲ್ಲ. 2023ರ ವೇಳೆಗೆ ರಾಮ ಮಂದಿರದ ಗರ್ಭಗುಡಿಯಲ್ಲಿ ರಾಮ ಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಆಗಲಿದೆ. 2024ರಲ್ಲಿ ಮಥುರಾ ವಿವಾದವನ್ನು ಕೈಗೆತ್ತಿಕೊಳ್ಳುತ್ತೇವೆ’ ಎಂದು ಹೇಳಿದರು.

ನಿಧನ ವಾರ್ತೆ

ಮಲ್ಲಿಕಾರ್ಜುನ ರುದ್ರಪ್ಪ ಗದ್ದಿ

ಬೆಂಗಳೂರು: ಜೆ.ಪಿ. ನಗರ ನಿವಾಸಿ ಮಲ್ಲಿಕಾರ್ಜುನ ರುದ್ರಪ್ಪ ಗದ್ದಿ (65) ಅವರು ಸೋಮವಾರ ಬೆಳಿಗ್ಗೆ ನಿಧನರಾದರು.

ಗದ್ದಿ ಅವರು ಅಬಕಾರಿ ಇಲಾಖೆಯ ಉಪ ಆಯುಕ್ತರಾಗಿ ಕಾರ್ಯನಿರ್ವಹಿಸಿ 2015ರಲ್ಲಿ ನಿವೃತ್ತಿ ಹೊಂದಿದ್ದರು. ಇವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಬನಶಂಕರಿ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಸಂಸ್ಕಾರ ನಡೆಯಿತು.

ಟಿ.ಜಿ. ದೊಡ್ಡಮನಿ



ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಟಿ.ಜಿ. ದೊಡ್ಡಮನಿ (84) ಅವರು ಅನಾರೋಗ್ಯದಿಂದಾಗಿ ನಗರದ ಆಸ್ಪತ್ರೆಯೊಂದರಲ್ಲಿ ಸೋಮವಾರ ನಿಧನರಾದರು.

ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

‘ಕರ್ನಾಟಕ ಜೈನ್ ಅಸೋಸಿಯೇಷನ್’ ಕಾರ್ಯದರ್ಶಿಯಾಗಿ ಹಾಗೂ ಉಪಾಧ್ಯಕ್ಷರಾಗಿ ಅವರು ಕೆಲಸ ಮಾಡಿದ್ದರು. ಬನಶಂಕರಿ ಚಿತಾಗಾರದಲ್ಲಿ ಮಂಗಳವಾರ (ಡಿ. 7) ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಸುವುದಾಗಿ ಕುಟುಂಬದವರು ತಿಳಿಸಿದ್ದಾರೆ.

ಎಸ್‌.ಸಿ. ಜಯಚಂದ್ರ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಎಂಜಿನಿಯರ್ ಎಸ್‌.ಸಿ. ಜಯಚಂದ್ರ (63) ಸೋಮವಾರ ನಿಧನರಾದರು.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಸೋಮನಹಳ್ಳಿಯ ಜಯಚಂದ್ರ ಲೋಕೋಪಯೋಗಿ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ 2018ರಲ್ಲಿ ನಿವೃತ್ತರಾಗಿದ್ದರು. ಅನಾರೋಗ್ಯಕ್ಕೊಳಗಾಗಿ ಚಿಕಿತ್ಸೆ ಪಡೆಯುತ್ತಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಂದ್ರಾ ಬಡಾವಣೆಯಲ್ಲಿರುವ ಮನೆಗೆ ಸೋಮವಾರ ಸಂಜೆ ಆಸ್ಪತ್ರೆಯಿಂದ ಕರೆತಂದಿದ್ದು, ಕೆಲ ಹೊತ್ತಿನಲ್ಲೇ ಕೊನೆಯುಸಿರೆಳೆದರು.

ಮೃತರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ. ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಶಿವರಾಮ ಕಾರಂತ ಬಡಾವಣೆಗಾಗಿ ರೈತರ ಭೂಮಿ: ಅನಿರ್ದಿಷ್ಟಾವಧಿ ಧರಣಿ

ಮತದಾನ ಬಹಿಷ್ಕಾರಕ್ಕೆ ಗ್ರಾ.ಪಂ. ಸದಸ್ಯರ ನಿರ್ಧಾರ

ಪ್ರಜಾವಾಣಿ ವಾರ್ತೆ

ಗ್ರಾ.ಪಂ.ಸದಸ್ಯರು ಹಾಗೂ ಗ್ರಾಮಸ್ಥರನ್ನು ಉದ್ದೇಶಿಸಿ, ಉಪವಿಭಾಗಾಧಿಕಾರಿ ಕೆ.ರಂಗನಾಥ್ ಮಾತನಾಡಿದರು, ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ಗ್ರಾಮಪಂಚಾಯಿತಿ ಅಧ್ಯಕ್ಷೆ ಲಕ್ಷ್ಮೀ ಚಂದನ್, ಸದಸ್ಯರಾದ ಸತ್ಯನಾರಾಯಣ, ರಾಧಮ್ಮ, ದಲಿತ ಸಂಘರ್ಷ ಸಮಿತಿಯ ಬೆಂಗಳೂರು ನಗರ ಜಿಲ್ಲಾ ಸಂಯೋಜಕ ಎಂ.ರಮೇಶ್ ಇತರರು ಇದ್ದರು

ಯಲಹಂಕ: ಶಿವರಾಮಕಾರಂತ ಬಡಾವಣೆಗಾಗಿ ರೈತರ ಭೂಮಿಯನ್ನು ವಶಪಡಿಸಿಕೊಂಡಿರುವ ಬಿಡಿಎ ಕ್ರಮವನ್ನು ವಿರೋಧಿಸಿ ದಲಿತ ಸಂಘರ್ಷ ಸಮಿತಿ(ಸಂಯೋಜಕ) ನೇತೃತ್ವದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಮುಂದುವರಿದಿದೆ.

ಹೋರಾಟದ ಭಾಗವಾಗಿ ಗಂಟಿಗಾನಹಳ್ಳಿ ಗ್ರಾಮಪಂಚಾಯಿತಿಯ ಅಧ್ಯಕ್ಷರೂ ಸೇರಿದಂತೆ ಎಂಟು ಸದಸ್ಯರು, ಡಿ.10ರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆ ಬಹಿಷ್ಕರಿಸುವ ನಿರ್ಧಾರ ಕೈಗೊಂಡಿದ್ದಾರೆ.

ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿ ಕೆ. ರಂಗನಾಥ್ ಮತ್ತು ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಅವರು, ರಾಮಗೊಂಡನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ, ನಿರ್ಧಾರ ವಾಪಸ್ ಪಡೆಯುವಂತೆ ಸದಸ್ಯರ ಮನವೊಲಿಸಲು ಪ್ರಯತ್ನಿಸಿದರು.

ಈ ವೇಳೆ ಮಾತನಾಡಿದ ಸಮಿತಿಯ ಬೆಂಗಳೂರು ನಗರ ಜಿಲ್ಲಾ ಸಂಯೋಜಕ ಎಂ.ರಮೇಶ್, ‘ಉದ್ದೇಶಿತ ಬಡಾವಣೆಗಾಗಿ 17 ಗ್ರಾಮಗಳ 3500 ಎಕರೆ ಭೂಮಿಯನ್ನು ವಶಪಡಿಸಿಕೊಂಡಿರುವ ಬಿಡಿಎ, ಸಂತ್ರಸ್ತರಿಗೆ ಪರಿಹಾರ ನೀಡದೆ ಸತಾಯಿಸುತ್ತಿದೆ. ಆದ್ದರಿಂದ ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿ, ನಾಲ್ಕು ತಿಂಗಳಿನಿಂದ ಹೋರಾಟ ನಡೆಸಲಾಗುತ್ತಿದೆ. ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ’ ಎಂದು ದೂರಿದರು.

‘ಡಿ. 10ರ ಒಳಗಾಗಿ ರೈತ ಮುಖಂಡರು ಹಾಗೂ ಗ್ರಾಮಸ್ಥರನ್ನು ಮುಖ್ಯಮಂತ್ರಿ ಜತೆ ಮಾತನಾಡಿಸಿ, ನಮ್ಮ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರೆ ಮಾತ್ರ ನಿರ್ಧಾರ ಪುನರ್ ಪರಿಶೀಲಿಸಲಾಗುವುದು’ ಎಂದರು.

‘ಬಡಾವಣೆಗಾಗಿ ಬಿಡಿಎ ಜಮೀನು ವಶಪಡಿಸಿಕೊಂಡಿರುವುದರಿಂದ ಸಂತ್ರಸ್ತರಿಗೆ ಅನ್ಯಾಯವಾಗಿದೆ. ಚುನಾವಣೆ ಬಹಿಷ್ಕರಿಸುವ ಮೂಲಕ ಅವರ ಹೋರಾಟಕ್ಕೆ ಬೆಂಬಲ ನೀಡುತ್ತಿದ್ದೇವೆ’ ಎಂದು ಗ್ರಾಮಪಂಚಾಯಿತಿ ಅಧ್ಯಕ್ಷೆ ಲಕ್ಷ್ಮೀ ಚಂದನ್ ತಿಳಿಸಿದರು.

ಆಸ್ತಿ ತೆರಿಗೆ: ₹2,483 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಗೌರವ್ ಗುಪ್ತ

ಬೆಂಗಳೂರು: ‘ಪ್ರಸಕ್ತ ಸಾಲಿನಲ್ಲಿ ₹4 ಸಾವಿರ ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದ್ದು, ಈವರೆಗೆ ₹2,483.91 ಕೋಟಿ ಸಂಗ್ರಹವಾಗಿದೆ. ಗುರಿ ತಲುಪಲು ಕಂದಾಯ ವಿಭಾಗದ ಅಧಿಕಾರಿಗಳ ಶ್ರಮ ವಹಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದರು.

ಆಸ್ತಿ ತೆರಿಗೆ ಸಂಗ್ರಹ ಸಂಬಂಧ ಸಭೆ ನಡೆಸಿದ ಅವರು, ‘ತೆರಿಗೆ ಬಾಕಿ ಉಳಿಸಿಕೊಂಡವರಿಗೆ ನೋಟಿಸ್ ನೀಡಿ ತೆರಿಗೆ ವಸೂಲಿಗೆ ಕ್ರಮ ವಹಿಸಬೇಕು. ಆಸ್ತಿ ತೆರಿಗೆ ವ್ಯಾಪ್ತಿಗೆ ಬಾರದ ಆಸ್ತಿಗಳನ್ನು ಪತ್ತೆ ಮಾಡಿ ತೆರಿಗೆ ವ್ಯಾಪ್ತಿಗೆ ತರಬೇಕು’ ಎಂದು ತಿಳಿಸಿದರು.

ಆಸ್ತಿ ಮಾಲೀಕರು ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಪಾಲಿಸದಿದ್ದರೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ತೆರಿಗೆ ನಿಗದಿಪಡಿಸಬೇಕು. ಸುಸ್ತಿದಾರರ ಪಟ್ಟಿ ಸಿದ್ಧಪಡಿಸಿ ಕಾನೂನು ಕ್ರಮ ಜರುಗಿಸಬೇಕು ಎಂದೂ ಸೂಚನೆ ನೀಡಿದರು. ವಿಶೇಷ ಆಯುಕ್ತ (ಕಂದಾಯ) ಆರ್‌.ಎಲ್‌. ದೀಪಕ್ ಇದ್ದರು.

‘ವಾರಕ್ಕೊಮ್ಮೆ ಕುಂದು ಕೊರತೆ ಸಭೆ’

ನಿವಾಸಿಗಳ ಅಹವಾಲು ಆಲಿಸಲು ವಲಯ ಮಟ್ಟದಲ್ಲಿ ವಾರಕ್ಕೊಮ್ಮೆ ‘ಸಾರ್ವಜನಿಕ ಕುಂದು ಕೊರತೆ ಸಭೆ’ ನಡೆಸಲು ಗೌರವ್ ಗುಪ್ತ ಸೂಚನೆ ನೀಡಿದರು.

ವಲಯ ಆಯುಕ್ತರು, ಜಂಟಿ ಆಯುಕ್ತ ಪ್ರತಿ ವಾರ ಕಡ್ಡಾಯವಾಗಿ ಸಭೆ ಆಯೋಜಿಸಬೇಕು. ಸ್ಥಳ, ದಿನಾಂಕ, ಸಮಯದ ಮಾಹಿತಿಯನ್ನು ಸಾರ್ವಜನಿಕರಿಗೆ ಮುಂಚಿತವಾಗಿ ತಿಳಿಸಲು ವ್ಯಾಪಕ ಪ್ರಚಾರ ಮಾಡಬೇಕು. ಸಭೆಯಲ್ಲಿ ಬರುವ ಸಲಹೆಗಳನ್ನು ಸ್ವೀಕರಿಸಿ ಸಕರಾತ್ಮಕವಾಗಿ ಸ್ಪಂದಿಸಬೇಕು ಎಂದು ತಿಳಿಸಿದರು.

ಬಡಾವಣೆ ಅಭಿವೃದ್ಧಿಗೊಳ್ಳುವ ಮುನ್ನವೇ ಮೂಲೆ ನಿವೇಶನ ಹರಾಜಿಗಿಟ್ಟ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಮೂಲಸೌಕರ್ಯಕ್ಕೆ ಬಂಡವಾಳ ಕಗ್ಗಂಟು

• ಪ್ರವೀಣ್ ಕುಮಾರ್ ಪಿ.ವಿ.

ನಾಡಪ್ರಭು ಕೆಂಪೇಗೌಡ ಬಡಾವಣೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿವಿಧ ಬಡಾವಣೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಬಂಡವಾಳ ಹೊಂದಿಸಲು ಹೆಣಗಾಡುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇನ್ನೂ ಅಭಿವೃದ್ಧಿಯನ್ನೇ ಕಾಣದ ನಾಡಪ್ರಭು ಕೆಂಪೇಗೌಡ ಬಡಾವಣೆಯ 372 ಮೂಲೆ ನಿವೇಶನಗಳನ್ನು ಹರಾಜಿಗಿಟ್ಟಿದೆ.

ಕೆಂಪೇಗೌಡ ಬಡಾವಣೆಯಲ್ಲಿ ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾದ 2,635 ಎಕರೆ 37 ಗುಂಟೆಯಲ್ಲಿ ನಿವೇಶನ ನಿರ್ಮಿಸಲಾಗುತ್ತಿದೆ. ಇವುಗಳ ಮೂಲಸೌಕರ್ಯ ಕಾಮಗಾರಿಗೆ ₹ 3 ಸಾವಿರ ಕೋಟಿಗೂ ಅಧಿಕ ವೆಚ್ಚ ಮಾಡಲಾಗುತ್ತಿದೆ. ಶಿವರಾಮ ಕಾರಂತ ಬಡಾವಣೆಯ ಮೂಲಸೌಕರ್ಯ ಅಭಿವೃದ್ಧಿಗೆ ₹ 3 ಸಾವಿರ ಕೋಟಿ ಬೇಕು. ಅರ್ಕಾವತಿ ಬಡಾವಣೆಗೆ ಪೂರ್ತಿ ಮೂಲ ಸೌಕರ್ಯ ಕಲ್ಪಿಸಲು ಇನ್ನೂ ₹ 800 ಕೋಟಿಗಳಷ್ಟು ಅನುದಾನ ಅಗತ್ಯವಿದೆ. ಬನಶಂಕರಿ ಆರನೇ ಹಂತ, ವಿಶ್ವೇಶ್ವರಯ್ಯ ಬಡಾವಣೆಯಂತಹ ಹಳೆ ಬಡಾವಣೆ ಮೂಲಸೌಕರ್ಯ ಕಲ್ಪಿಸಲು ₹ 200 ಕೋಟಿಗೂ ಅಧಿಕ ಹಣ ಬೇಕು. ಈ ಕಾಮಗಾರಿಗಳಿಗೆ ಹಣ ಹೊಂದಿಸಲು ಸಾಧ್ಯವಾಗದ ಇಕ್ಕಟ್ಟಿನ ಸ್ಥಿತಿಯನ್ನು ಬಿಡಿಎ ಎದುರಿಸುತ್ತಿದೆ.

ಕೆಂಪೇಗೌಡ ಬಡಾವಣೆಯಲ್ಲಿ ಮನೆ ನಿರ್ಮಿಸಲು ಅಗತ್ಯವಾದ ಕನಿಷ್ಠ ಸೌಕರ್ಯಗಳೂ ಇಲ್ಲ. ಹಾಗಿದ್ದರೂ ಈ ಬಡಾವಣೆಯ ನಿವೇಶನಗಳನ್ನು ಹರಾಜಿಗೆ ಇಟ್ಟಿರುವ ಬಗ್ಗೆ ಈ ಬಡಾವಣೆಯ ನಿವೇಶನದಾರರೇ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಸ್ವಲ್ಪವಾದರೂ ಮೂಲಸೌಕರ್ಯ ಕಲ್ಪಿಸಿದ ಬಳಿಕ ಮೂಲೆ ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಕುದುರುತ್ತದೆ. ಈ ಹಂತದಲ್ಲಿ ನಿವೇಶನ ಹರಾಜು ಹಾಕಿದರೆ ಅದರಿಂದ ಬಿಡಿಎಗೆ ನಷ್ಟವೇ ಜಾಸ್ತಿ ಎಂಬುದು ಅವರ ವಾದ.

ಮೂಲೆ ನಿವೇಶನ ಹರಾಜು ವಿಳಂಬವಾದಷ್ಟೂ ಅಕ್ರಮಗಳೂ ಹೆಚ್ಚುತ್ತವೆ. ಸಾಲ ಪಡೆದು ಕಾಮಗಾರಿ ನಡೆಸಿ, ಅದಕ್ಕೆ ಬಡ್ಡಿ ಕಟ್ಟುವ ಬದಲು ಮೂಲೆ ನಿವೇಶನಗಳನ್ನು ಈಗಲೇ ಹರಾಜು ಹಾಕಿ ಹಣ ಹೊಂದಿಸುವುದು ಲೇಸು ಎಂದು ಸಮರ್ಥಿಸಿಕೊಳ್ಳುತ್ತಾರೆ ಬಿಡಿಎ ಅಧಿಕಾರಿಗಳು.

'ಈ ಬಡಾವಣೆಯ ಮೂಲಸೌಕರ್ಯ ಕಾಮಗಾರಿಗಳಿಗೆ ಇದುವರೆಗೆ ₹ 2,500 ಕೋಟಿ ವೆಚ್ಚ ಮಾಡಿದ್ದೇವೆ. ನಿವೇಶನ ಹಂಚಿಕೆಯಿಂದ ಬಂದಿರುವುದು ₹ 2,060 ಕೋಟಿ ಮಾತ್ರ. ಹಂಚಿಕೆಯಾದ ನಿವೇಶನಗಳಿಂದ ₹ 210 ಕೋಟಿಗಳಷ್ಟು ಶುಲ್ಕ ಇನ್ನಷ್ಟೇ ಪಾವತಿ ಆಗಬೇಕಿದೆ. ಇದುವರೆಗೆ ₹ 400 ಕೋಟಿಗೂ ಅಧಿಕ ಮೊತ್ತವನ್ನು ಬಿಡಿಎ ಹೆಚ್ಚುವರಿಯಾಗಿ ಹೂಡಿಕೆ ಮಾಡಿದೆ. ಬಾಕಿ ಇರುವ ಮೂಲಸೌಕರ್ಯ ಕಾಮಗಾರಿಗಳನ್ನು ಎಷ್ಟು ಬೇಗ ಪೂರ್ಣಗೊಳಿಸಿದರೆ ಮಾತ್ರ ಉಳಿದ ಮೂಲೆ ನಿವೇಶನಗಳಿಗೆ ಬೇಡಿಕೆ ಕುದುರುತ್ತದೆ. ಇದಕ್ಕೆ ಬಿಡಿಎ ಬಳಿ ಬೇರೆ ಸಂಪನ್ಮೂಲ ಇಲ್ಲ. ಹಾಗಾಗಿ ಇಲ್ಲಿನ ಮೂಲಸೌಕರ್ಯ ಕಾಮಗಾರಿಗಳಿಗೆ ಬಂಡವಾಳ ಹೊಂದಿಸಲು ಮೂಲೆ ನಿವೇಶನ ಹರಾಜು ಹಾಕುವುದು ಅನಿವಾರ್ಯ' ಎನ್ನುತ್ತಾರೆ ಬಿಡಿಎ ಆಯುಕ್ತ ಎಂ.ಬಿ.ರಾಜೇಶ ಗೌಡ.

'ಈ ಬಡಾವಣೆಯಲ್ಲಿ ನಾವು ಈಗ ನಿವೇಶನ ಹರಾಜು ಹಾಕಿದರೆ ನಮಗೆ ಪ್ರತಿ ಚದರ ಅಡಿಗೆ ₹ 6 ಸಾವಿರದಷ್ಟು ಮೊತ್ತ ಸಿಗಲಿದೆ ಎಂದು ಭಾವಿಸೋಣ. ಇದೇ ನಿವೇಶನವನ್ನು ಐದು ವರ್ಷ ಬಿಟ್ಟು ಹರಾಜು ಹಾಕಿದರೆ ಪ್ರತಿ ಚದರ ಅಡಿಗೆ ₹ 10 ಸಾವಿರದವರೆಗೆ ಸಿಗಬಹುದು. ಆದರೆ, ಇಲ್ಲಿನ ಮೂಲಸೌಕರ್ಯ ಅಭಿವೃದ್ಧಿಗೆ ಸಾಲ ಮಾಡಿದರೆ ಅದಕ್ಕಿಂತಲೂ ಹೆಚ್ಚು ಮೊತ್ತವನ್ನು ಬಡ್ಡಿ ರೂಪದಲ್ಲಿ ತೆರಬೇಕಾಗುತ್ತದೆ' ಎಂದು ಅವರು ವಿವರಿಸಿದರು.

'ಕೆಂಪೇಗೌಡ ಬಡಾವಣೆಯ ಈಗಿನ ಮಾರ್ಗಸೂಚಿ ದರಕ್ಕೆ ಅನುಗುಣವಾಗಿ ಮೂಲೆ ನಿವೇಶನಗಳನ್ನು ಹರಾಜಿಗೆ ಇಟ್ಟಿದ್ದೇವೆ. ಇಲ್ಲಿ ಪ್ರತಿ ಚದರ ಅಡಿ ₹3,600 ರಿಂದ ₹3,800 ದರ ಇದೆ. ಸಂಪನ್ಮೂಲ ಇಲ್ಲದಿದ್ದರೆ ಕಾಮಗಾರಿ ನಡೆಸಲು ಆಗುವುದಿಲ್ಲ. ಹಾಗಾಗಿ ಸ್ವಲ್ಪ ಮೂಲೆ ನಿವೇಶನಗಳನ್ನು ಈಗ ಹರಾಜು ಮಾಡುತ್ತಿದ್ದೇವೆ' ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ತಿಳಿಸಿದರು.

'ಕೆಂಪೇಗೌಡ ಬಡಾವಣೆಯ ಮೂಲಸೌಕರ್ಯ ಕಾಮಗಾರಿಗೆ ಒಟ್ಟು ₹ 5 ಸಾವಿರ ಕೋಟಿ ವೆಚ್ಚ ಆಗಬಹುದು ಎಂದು ಆರಂಭದಲ್ಲಿ ಅಂದಾಜಿಸಲಾಗಿತ್ತು. ಈ ಬಡಾವಣೆಯಲ್ಲಿ ಇದುವರೆಗೆ 2,630 ಎಕರೆ ಪ್ರದೇಶದಲ್ಲಿ ನಿವೇಶನ ನಿರ್ಮಿಸಲಾಗುತ್ತಿದ್ದು, ಇದಕ್ಕೆ ₹ 3,000 ಕೋಟಿಗೂ ಅಧಿಕ ವೆಚ್ಚವಾಗುತ್ತಿದೆ. ಆರಂಭದಲ್ಲಿ ಗುರುತಿಸದ ಕಾಮಗಾರಿಗಳನ್ನು ಹೆಚ್ಚುವರಿಯಾಗಿ ನಿರ್ವಹಿಸಿದ ವೆಚ್ಚವೂ ಸೇರಿ ಗುತ್ತಿಗೆದಾರರಿಗೆ ₹ 100 ಕೋಟಿಗೂ ಅಧಿಕ ಮೊತ್ತ ಬಾಕಿ ಇದೆ. ಇಷ್ಟೊಂದು ದೊಡ್ಡ ಮೊತ್ತ ಬಾಕಿ ಇದ್ದರೆ ಕಾಮಗಾರಿ ಸಹಜವಾಗಿ ನಿಧಾನವಾಗಲಿದೆ. ಹಾಗಾಗಿ ಸಂಪನ್ಮೂಲ ಕ್ರೋಡೀಕರಿಸಿ, ಆದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ಅವರು ತಿಳಿಸಿದರು.

'ಪ್ರತಿ ಎಕರೆ ಅಭಿವೃದ್ಧಿಗೆ ₹ 1.2 ಕೋಟಿ'

'ಸಾಮಾನ್ಯವಾಗಿ ಪ್ರತಿ ಎಕರೆಗೆ ಮೂಲಸೌಕರ್ಯ ಕಲ್ಪಿಸಲು ತಲಾ ₹ 1 ಕೋಟಿ ವೆಚ್ಚವಾಗುತ್ತದೆ. ಆದರೆ, ಎನ್‌ಪಿಕೆ ಬಡಾವಣೆಯಲ್ಲಿ ಕುಡಿಯುವ ನೀರು ಹಾಗೂ ಕೊಳಚೆ ನೀರು ಶುದ್ಧೀಕರಿಸಿ ಪೂರೈಕೆ ಮಾಡಲು ಉಭಯ ಕೊಳವೆ ವ್ಯವಸ್ಥೆ ಕಲ್ಪಿಸಲಾಗಿದೆ. ನೆಲಮಟ್ಟದ ಜಲಸಂಗ್ರಹಾಗರಗಳನ್ನು ನಿರ್ಮಿಸಿದ್ದೇವೆ. ವಿದ್ಯುತ್ ಕೇಬಲ್‌ಗಳನ್ನು ನೆಲದಡಿ ಅಳವಡಿಸಲಾಗುತ್ತಿದೆ. ಇಲ್ಲಿ ಪ್ರತಿ ಎಕರೆಗೆ ₹ 1.2 ಕೋಟಿವರೆಗೆ ವೆಚ್ಚ ತಗಲುತ್ತದೆ' ಎಂದು ಶಾಂತರಾಜಣ್ಣ ವಿವರಿಸಿದರು.

'₹ 250 ಕೋಟಿ ಸಂಗ್ರಹದ ನಿರೀಕ್ಷೆ'

ಕೆಂಪೇಗೌಡ ಬಡಾವಣೆಯಲ್ಲಿ ಬಿಡಿಎ 3,370 ಮೂಲೆ ನಿವೇಶನಗಳನ್ನು ನಿರ್ಮಿಸಿದೆ. ಅವುಗಳಲ್ಲಿ 372 ನಿವೇಶನಗಳನ್ನು ಮಾತ್ರ ಈಗ ಹರಾಜಿಗಿಟ್ಟಿದೆ. '372 ಮೂಲೆ ನಿವೇಶನಗಳ ಹರಾಜಿನಿಂದ ₹ 250 ಕೋಟಿಗಿಂತಲೂ ಹೆಚ್ಚು ಮೊತ್ತ ಸಂಗ್ರಹವಾಗುವ ನಿರೀಕ್ಷೆ ಇದೆ' ಎಂದು ಬಿಡಿಎ ಆರ್ಥಿಕ ಸದಸ್ಯ ರಾಮಪ್ರಸಾದ್ ತಿಳಿಸಿದರು.

ಸುದ್ದಿ 2 ನಿಮಿಷ

ಮೇಕೆದಾಟು ಹೋರಾಟಗಾರರಿಗೆ ಪ್ರಮಾಣ ಪತ್ರ: ಡಿ.ಕೆ. ಶಿವಕುಮಾರ್

ಮಂಡ್ಯ: 'ಮೇಕೆದಾಟು ಯೋಜನೆ ಜಾರಿಗೆ ಒತ್ತಾಯಿಸಿ ಜ.1ರಿಂದ ಮೇಕೆದಾಟುವಿನಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಆಯೋಜಿಸಲಾಗಿದೆ. ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರಿಗೂ ಪ್ರಮಾಣ ಪತ್ರ ವಿತರಿಸಲು ನಿರ್ಧರಿಸಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೋಮವಾರ ಇಲ್ಲಿ ಹೇಳಿದರು.

'ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದವರನ್ನು ಈಗಲೂ ಗುರುತಿಸಲಾಗುತ್ತದೆ. ಅದೇ ರೀತಿಯಲ್ಲಿ ಮೇಕೆದಾಟು ಹೋರಾಟಗಾರರನ್ನೂ ಗುರುತಿಸಲು ಪ್ರಮಾಣಪತ್ರ ನೀಡಲಾಗುವುದು. ಹೋರಾಟದಲ್ಲಿ ಭಾಗವಹಿಸುವ ಎಲ್ಲರೂ ಭಾವಚಿತ್ರ ನೀಡಿ ಹೆಸರು ನೋಂದಾಯಿಸಿಕೊಳ್ಳಬೇಕು. ಈ ಐತಿಹಾಸಿಕ ಹೋರಾಟಕ್ಕೆ ಬರುವ ಎಲ್ಲರಿಗೂ ಸ್ವಾಗತವಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಯೋಜನೆಗೆ ಅನುಮೋದನೆ ದೊರೆತಿದೆ. ಕೇಂದ್ರ ಸರ್ಕಾರ ಪರಿಸರ ಅನುಮೋದನೆ ನೀಡಿದ ತಕ್ಷಣ ಯೋಜನೆಯ ಕೆಲಸ ಆರಂಭಿಸಬಹುದು. ಆದರೆ, ಈಗಿನ ಡಬಲ್ ಎಂಜಿನ್ ಸರ್ಕಾರಗಳು ಯೋಜನೆಗಳನ್ನು ಜಾರಿಗೊಳಿಸಲು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿವೆ' ಎಂದು ಆರೋಪಿಸಿದರು.

'ಈ ಬಾರಿ ವಿಧಾನ ಪರಿಷತ್ ಚುನಾವಣೆಯಲ್ಲಿ ಯುವಕರಿಗೆ ಟಿಕೆಟ್ ನೀಡಿದ್ದೇವೆ. ಎಸ್.ಆರ್.ಪಾಟೀಲ ಅವರಂಥ ಹಿರಿಯರನ್ನು ಮನವೊಲಿಸಿದ್ದೇವೆ. ಕಾಂಗ್ರೆಸ್‌ನಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದ್ದು, ಹಲವು ಬದಲಾವಣೆಗೆ ಕಾರಣವಾಗಲಿದೆ' ಎಂದರು.

ಮಕ್ಕಳ ಸಮೀಕ್ಷೆ ಶೇ 94ರಷ್ಟು ಪೂರ್ಣ: ಹೈಕೋರ್ಟ್‌ಗೆ ಮಾಹಿತಿ

ಬೆಂಗಳೂರು: 'ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಬಗ್ಗೆ ನಿಖರ ಮಾಹಿತಿ ಕಲೆ ಹಾಕಲು ನಡೆಸಲಾಗುತ್ತಿರುವ ಸಮೀಕ್ಷಾ ಕಾರ್ಯ ಶೇ 94ರಷ್ಟು ಪೂರ್ಣಗೊಂಡಿದೆ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಹೈಕೋರ್ಟ್‌ಗೆ ತಿಳಿಸಿದೆ.

ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ 2013ರಲ್ಲಿ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಮಿಕಸ್ ಕ್ಯೂರಿ (ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಬಿಬಿಎಂಪಿ ವ್ಯಾಪ್ತಿಯಲ್ಲಿನ ಸಮೀಕ್ಷೆ ಕಾರ್ಯ ಸದ್ಯ 94ರಷ್ಟು ಪೂರ್ಣಗೊಂಡಿದೆ. ಬಿಬಿಎಂಪಿ ವರದಿ ನೀಡಿದ ನಂತರ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು' ಎಂದು ತಿಳಿಸಿದರು. ಈ ವಿವರಣೆಯನ್ನು ಅನುಮೋದಿಸಿದ ಬಿಬಿಎಂಪಿ ಪರ ವಕೀಲ ವಿ.ಶ್ರೀನಿಧಿ, 'ನಗರದಲ್ಲಿನ ಮನೆ-ಮನೆ ಸಮೀಕ್ಷೆ ಶೇ 94.8ಷ್ಟು ಮುಕ್ತಾಯವಾಗಿದೆ' ಎಂದರು.

ಹಿರಿಯ ವಕೀಲೆ ಜಯ್ನಾ ಕೊಠಾರಿ, 'ಬಿಬಿಎಂಪಿ ನೀಡಿರುವ ಪ್ರಾಥಮಿಕ ಅಂಕಿಅಂಶಗಳ ಪ್ರಕಾರ 10 ಲಕ್ಷ ಶಾಲಾ ಮಕ್ಕಳನ್ನು ಸಮೀಕ್ಷೆಗೆ ಒಳಪಡಿಸಲಾಗಿದ್ದು ಅವರಲ್ಲಿ 5 ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎನ್ನಲಾಗಿದೆ. ಈ ಸಂಗತಿ ನಿಜವೇ ಆಗಿದ್ದಲ್ಲಿ ಅವರನ್ನು ಶಾಲೆಗೆ ವಾಪಸ್ ಕರೆತರಲು ಗಂಭೀರ ಕ್ರಮ ಕೈಗೊಳ್ಳುವ ಅಗತ್ಯವಿದೆ' ಎಂದರು. ಪಾಲಿಕೆ ಪರ ವಕೀಲರ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ ಸಮೀಕ್ಷೆಯನ್ನು ಪೂರ್ಣಗೊಳಿಸಲು ಬಿಬಿಎಂಪಿಗೆ ಕಾಲಾವಕಾಶ ನೀಡಿ, ವಿಚಾರಣೆಯನ್ನು 2022ರ ಫೆಬ್ರುವರಿಗೆ ಮುಂದೂಡಿತು.

ರಾಜ್ಯದಲ್ಲಿ ಕ್ಲಸ್ಟರ್ ಪ್ರಕರಣಗಳ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಕ್ಲಸ್ಟರ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಕಳೆದ ಮೂರು ದಿನಗಳಲ್ಲಿ ರಾಜ್ಯಾದ್ಯಂತ ಇರುವ ಕ್ಲಸ್ಟರ್‌ಗಳಲ್ಲಿ 119 ಹೆಚ್ಚುವರಿ ಪ್ರಕರಣಗಳು ವರದಿಯಾಗಿವೆ.

ಸೋಮವಾರ ಮಧ್ಯಾಹ್ನದವರೆಗಿನ ಅಧಿಕೃತ ದತ್ತಾಂಶದ ಪ್ರಕಾರ 38 ಕ್ಲಸ್ಟರ್‌ಗಳಲ್ಲಿ ಒಟ್ಟು 784 ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಕಳೆದ 14 ದಿನಗಳಲ್ಲಿ 4,500 ಪ್ರಕರಣಗಳು ಪತ್ತೆಯಾಗಿದ್ದು, ಈ ಪೈಕಿ ಕ್ಲಸ್ಟರ್‌ಗಳ ಪಾಲು ಶೇ 17.4ರಷ್ಟಿದೆ. ಇದೇ 2ರವರೆಗೆ ಒಟ್ಟು 28 ಕ್ಲಸ್ಟರ್‌ಗಳಲ್ಲಿ 665 ಪ್ರಕರಣಗಳು ದಾಖಲಾಗಿದ್ದವು. ಈ ಬೆಳವಣಿಗೆಯು ಕೋವಿಡ್ ಎರಡನೇ ಅಲೆಗೂ ಮುನ್ನವಿದ್ದ ಪರಿಸ್ಥಿತಿ ನೆನಪಿಸುವಂತಿದೆ.

ಧಾರವಾಡದ ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ಈವರೆಗೆ 312 ಪ್ರಕರಣಗಳು ವರದಿಯಾಗಿವೆ. ಕ್ಲಸ್ಟರ್‌ಗಳಲ್ಲಿನ ಒಟ್ಟು ಸಕ್ರಿಯ ಪ್ರಕರಣಗಳಲ್ಲಿ ಈ ಕಾಲೇಜಿನ ಪಾಲು ಶೇ 39.7ರಷ್ಟಿದೆ. ಮೈಸೂರು ನಂತರದ ಸ್ಥಾನದಲ್ಲಿದೆ. ಈ ನಗರದಲ್ಲಿನ 5 ಕ್ಲಸ್ಟರ್‌ಗಳಲ್ಲಿ 116 ಪ್ರಕರಣಗಳು ಪತ್ತೆಯಾಗಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 16 ಕ್ಲಸ್ಟರ್‌ಗಳಲ್ಲಿ 100 ಪ್ರಕರಣಗಳು ದಾಖಲಾಗಿವೆ. ಕ್ಲಸ್ಟರ್ ಹಾಗೂ ಅದರ ಸಮೀಪ ವಾಸವಿರುವ 20,497 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದ್ದು, ಈ ಪೈಕಿ 784 ಮಂದಿಗೆ ಸೋಂಕು ತಗುಲಿದೆ.

'ನಗರ ಪ್ರದೇಶಗಳಲ್ಲಿ ಒಂದೊಂದು ಮನೆಯಲ್ಲಿ ಐದಾರು ಮಂದಿ ನೆಲೆಸಿರುತ್ತಾರೆ. ಈ ಪೈಕಿ ಒಬ್ಬರಿಗೆ ಸೋಂಕು ತಗುಲಿದರೆ ಉಳಿದವರಿಗೂ ಅದು ಹರಡುತ್ತದೆ. ಕುಟುಂಬದಲ್ಲಿ ಮೂವರು ಅಥವಾ ಅದಕ್ಕಿಂತ ಹೆಚ್ಚು ಜನರಿಗೆ ಸೋಂಕು ತಗುಲಿರುವುದು ದೃಢಪಟ್ಟರೆ ಅದನ್ನು ಕ್ಲಸ್ಟರ್ ಎಂದೇ ಪರಿಗಣಿಸಲಾಗುತ್ತದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ತ್ರಿಲೋಕ ಚಂದ್ರ ಹೇಳಿದ್ದಾರೆ.

ಅಕ್ಟೋಬರ್‌ನಲ್ಲೇಕೆ ಏರಲಿಲ್ಲ?: ಅಕ್ಟೋಬರ್‌ನಲ್ಲಿ ವಿವಿಧ ಹಬ್ಬಗಳು ಇದ್ದರೂ, ಆ ತಿಂಗಳಲ್ಲಿ ಕ್ಲಸ್ಟರ್ ಪ್ರಕರಣಗಳು ಏರಿಕೆ ಕಂಡಿಲ್ಲ. ನವೆಂಬರ್ ಕೊನೆಯಿಂದ ಏರಿಕೆ ಕಂಡುಬರುತ್ತಿದೆ.

'ಜನರ ನಿರ್ಲಕ್ಷ್ಯದಿಂದಾಗಿ ಈಗ ಕೋವಿಡ್ ಪ್ರಕರಣಗಳು ಏರುಗತಿ ಪಡೆದುಕೊಂಡಿವೆ' ಎಂದು ನಿಮ್ಹಾನ್ಸ್ ಆಸ್ಪತ್ರೆಯ ಸಾಂಕ್ರಾಮಿಕ ರೋಗಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರದೀಪ್ ಬದನೂರು ತಿಳಿಸಿದ್ದಾರೆ.

'ಕೋವಿಡ್ ನಿಯಮಾವಳಿಗಳನ್ನು ಜನ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಹಿಂದೆಲ್ಲಾ ಈಗಿನಂತೆ ಜನ ಗುಂಪು ಸೇರುತ್ತಿರಲಿಲ್ಲ. ಶಾಲಾ–ಕಾಲೇಜುಗಳು ದೀಪಾವಳಿ ಹಬ್ಬದ ಬಳಿಕ ಕಾರ್ಯಾರಂಭ ಮಾಡಿವೆ. ಹೀಗಾಗಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗಿವೆ' ಎಂದರು.

ಜಿನೋಮ್ ಸೀಕ್ವೆನ್ಸಿಂಗ್: ಇನ್ನೂ ಕೈಸೇರದ ಫಲಿತಾಂಶ

ಬೆಂಗಳೂರು: ಓಮೈಕ್ರಾನ್ ಸೋಂಕಿತರ ನೇರ ಸಂಪರ್ಕದಿಂದ ಕೋವಿಡ್ ದೃಢಪಟ್ಟಿರುವ ನಗರದ 9 ಮಂದಿಯ ವೈರಾಣು ವಂಶವಾಹಿ ಸಂಚರಣೆ ವಿಶ್ಲೇಷಣೆ (ಜಿನೋಮ್ ಸೀಕ್ವೆನ್ಸಿಂಗ್) ವರದಿ ಇನ್ನೂ ಬಿಬಿಎಂಪಿ ಕೈಸೇರಿಲ್ಲ.

'ಫಲಿತಾಂಶ ಸೋಮವಾರ ಕೈಸೇರುವ ನಿರೀಕ್ಷೆ ಇತ್ತು. ಆದರೆ, ವರದಿ ಇನ್ನೂ ತಲುಪಿಲ್ಲ. ಮಂಗಳವಾರ ಕೈಸೇರುವ ನಿರೀಕ್ಷೆ ಇದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಕೆ.ವಿ.ತ್ರಿಲೋಕಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

ನೋಡಲ್ ಅಧಿಕಾರಿಗಳ ನೇಮಕ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ವೇಗವಾಗಿ ಹರಡದಂತೆ ತಡೆಯಲು, ಅದರ ಮೇಲೆ ವಿಶೇಷ ನಿಗಾ ಇಡಲು ರಾಜ್ಯ ಸರ್ಕಾರವು 8 ಮಂದಿ ಉನ್ನತ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿದೆ. ಎಲ್ಲರಿಗೂ ವಿವಿಧ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗಿದೆ.

ನೋಡಲ್ ಅಧಿಕಾರಿಗಳು: ಮುನೀಶ್ ಮೌದ್ಗಿಲ್ (ರಾಜ್ಯ ವಾರ್ ರೂಂ ಹಾಗೂ ವೈದ್ಯಕೀಯ ಆಮ್ಲಜನಕ ಪೂರೈಕೆ ಮೇಲೆ ನಿಗಾ), ಪಂಕಜ್ ಕುಮಾರ್ ಪಾಂಡೆ (ಮನೆ ಆರೈಕೆಯಲ್ಲಿರುವವರ ಮೇಲೆ ನಿಗಾ), ಎಂ.ಶಿಖಾ (ಅಂತರರಾಷ್ಟ್ರೀಯ ಪ್ರಯಾಣಿಕರ ತಪಾಸಣೆಯ ಮೇಲುಸ್ತುವಾರಿ), ಪ್ರತಾಪ್ ರೆಡ್ಡಿ ಹಾಗೂ ಗುಂಜನ್ ಕೃಷ್ಣ (ಆಮ್ಲಜನಕ ಪೂರೈಕೆ), ಶಿಲ್ಪಾ ನಾಗ್ (ರಾಜ್ಯ ಸರ್ವೆಲೆನ್ಸ್ ಘಟಕದ ಅಧಿಕಾರಿ), ಕುಮಾರ್ ಪುಷ್ಕರ್ (ಆಸ್ಪತ್ರೆಗಳಲ್ಲಿನ ಹಾಸಿಗೆ ನಿರ್ವಹಣಾ ವ್ಯವಸ್ಥೆ), ಎಂ.ಟಿ.ರೇಜು (ಔಷಧ).

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,57,660 ಒಟ್ಟು ಸೋಂಕಿತರು (12,57,498 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,179 ▲	12,36,132 ▲	16,348 ▲

ದಿನದ ಏರಿಕೆ

ಹೊಸ ಪ್ರಕರಣ	162 ▼
ಗುಣಮುಖ	116 ▼
ಸಾವು	03 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	26.64 ಕೋಟಿ ▲	3.46 ಕೋಟಿ
ಸಕ್ರಿಯ ಪ್ರಕರಣ	2.14 ಕೋಟಿ ▲	98,416 ▼
ಗುಣಮುಖ	23.99 ಕೋಟಿ ▲	3.40 ಕೋಟಿ
ಸಾವು	52.74 ಲಕ್ಷ ▲	4.73 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.30 ಲಕ್ಷ ▼	8,306 ▼
ಗುಣಮುಖ	3.23 ಲಕ್ಷ ▼	8,834 ▲
ಸಾವು	4,308 ▼	211 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 56,742 ▼ ಅಮೆರಿಕ; 35,983 ▼ ಜರ್ಮನಿ; 43,992 ▲ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 96.37 ▲ ಅಮೆರಿಕ; 10.98 ▲ ಬ್ರಿಟನ್; 10.17 ▼ ರಷ್ಯಾ

ಎಲ್ಲಿ ಹೆಚ್ಚು ಸಾವು: 1.41 ಲಕ್ಷ ಮಹಾರಾಷ್ಟ್ರ; 41,600 ▲ ಕೇರಳ; 36,529 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.38 ಮಹಾರಾಷ್ಟ್ರ ▲; 51.65 ಕೇರಳ ▲; 27.30 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಬೂಸ್ಟರ್ ಡೋಸ್: ಮೂಡದ ಸಹಮತ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಕ್ಕಳಿಗೆ ಲಸಿಕೆ ಮತ್ತು ಕೋವಿಡ್ ರೋಗಿಗಳಿಗೆ ಬೂಸ್ಟರ್ ಡೋಸ್ ನೀಡುವ ಕುರಿತು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಸೋಮವಾರದ ಸಭೆಯಲ್ಲಿ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

ಬೂಸ್ಟರ್ ಡೋಸ್ ಕುರಿತು ಸಮರ್ಥನೆಯಾಗಿ ಯಾವುದೇ ವೈಜ್ಞಾನಿಕ ಅಧ್ಯಯನ ಇಲ್ಲದಿರುವುದು ಈ ನಿರ್ಧಾರಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆ, ಭಾರತೀಯ ವೈದ್ಯಕೀಯ ಸಂಘವು ಆರೋಗ್ಯ ಕಾರ್ಯಕರ್ತರಿಗೆ ಹೆಚ್ಚುವರಿಯಾಗಿ ಒಂದು ಡೋಸ್ ಲಸಿಕೆ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಪಡಿಸಿದೆ.

ಲಸಿಕೆ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ ಮೂಲಗಳ ಪ್ರಕಾರ, ಬೂಸ್ಟರ್ ಡೋಸ್ ಸಮರ್ಥನೆಯಾಗಿ ವೈಜ್ಞಾನಿಕ ಅಧ್ಯಯನ ಇಲ್ಲದಿರುವುದು ಹಾಗೂ ಈ ಸಂಬಂಧ ಸಹಮತ ಮೂಡದ ಕಾರಣ ಶಿಫಾರಸು ಮಾಡಿಲ್ಲ.

ವೈಜ್ಞಾನಿಕ ಶಿಫಾರಸು ಆಧರಿಸಿ ಮಕ್ಕಳಿಗೆ ಬೂಸ್ಟರ್ ಡೋಸ್ ನೀಡುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ ಎಂದು ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಕಳೆದ ವಾರ ಲೋಕಸಭೆಯಲ್ಲಿ ತಿಳಿಸಿದ್ದರು.

ಚಿತ್ರಾವಳಿ

ಪೀಣ್ಯ ದಾಸರಹಳ್ಳಿ ಸಮೀಪದ ಲಕ್ಷ್ಮೀಪುರ ಕ್ರಾಸ್ ಬಳಿಯ ದಿ ಸಂಭ್ರಮ್ ರೂಕ್ ರೆಸಾರ್ಟ್‌ನಲ್ಲಿ ಭಾನುವಾರ ಸಂಜೆ ನಡೆದ ಯಶ್ ಇಂಟರ್‌ನ್ಯಾಷನಲ್ ಫ್ಯಾಷನ್ ವೀಕ್ ಸ್ಪರ್ಧೆಯಲ್ಲಿ ವಿಜೇತರಾದ ಜೇಮ್ಸ್ ಪೌಲ್, ಎಸ್.ರೇಖಾ, ನೇಹಾ, ಜತಿನ್ ತೇಜ್, ಪ್ರಾಧಾನ್ಯ, ಮೋಕ್ಷ್, ಮೋನಿಷಾ, ಕಿರೀಟ ಧಾತ್ರಿ. ಸ್ಪರ್ಧೆಯ ಆಯೋಜಕ ಯಶ್ ಇದ್ದಾರೆ. ಸ್ಪರ್ಧೆಯಲ್ಲಿ ವಿವಿಧ ರಾಜ್ಯಗಳ 75 ಸ್ಪರ್ಧಿಗಳು ಭಾಗವಹಿಸಿದ್ದರು.

ಪೀಣ್ಯ ದಾಸರಹಳ್ಳಿ ಸಮೀಪದ ಬಾಗಲಗುಂಟೆ ವಾರ್ಡ್‌ನಲ್ಲಿ ಅಸಂಘಟಿತ ಕಾರ್ಮಿಕರಿಗೆ ಇಶ್ರಮ್ ಕಾರ್ಡ್ ಅನ್ನು ಬಿಜೆಪಿ ಮುಖಂಡ ಎಸ್.ಮುನಿರಾಜು ವಿತರಿಸಿದರು. ಬಿಜೆಪಿಯ ಬಾಗಲಗುಂಟೆ ವಾರ್ಡ್ ಅಧ್ಯಕ್ಷ ಮಧುಸೂದನ್, ಪ್ರಧಾನ ಕಾರ್ಯದರ್ಶಿ ವಿಶ್ವರಾಜ್, ಬಿಜೆಪಿ ಮುಖಂಡರಾದ ಬಿ.ಎಂ.ನಾರಾಯಣ್, ಗುರುಪ್ರಸಾದ್, ರಾಜಣ್ಣ, ಆನಂದ್ ರೆಡ್ಡಿ ಇದ್ದರು.– ಪ್ರಜಾವಾಣಿ ಚಿತ್ರಗಳು

ನಗರದ ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ಸೋಮವಾರ 'ಪಯಣ' ಮತ್ತು 'ಮರ' ಸಂಸ್ಥೆ ಆಯೋಜಿಸಿದ ಟ್ರುತ್ ಡ್ರೀಮ್‌ಲೈಂಗಿಕ ಅಲ್ಪಸಂಖ್ಯಾತರ ಛಾಯಾಚಿತ್ರ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತೃತೀಯಲಿಂಗಿಗಳು ನೃತ್ಯ ಪ್ರದರ್ಶನ ಮಾಡಿದರು.

'ಸಂವಿಧಾನವೇ ಪ್ರಜಾಪ್ರಭುತ್ವದ ಅಡಿಪಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದ ಸಮಿತಿ ರಚಿಸಿರುವ ಅತ್ಯುತ್ತಮವಾದ ಸಂವಿಧಾನದಿಂದಲೇ ನಮ್ಮ ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗಿ ಉಳಿದಿವೆ. ಸಂವಿಧಾನವೇ ಭಾರತದ ಪ್ರಜಾಪ್ರಭುತ್ವದ ಅಡಿಪಾಯ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದ ಅಂಗವಾಗಿ ವಿಧಾನಸೌಧದ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಮಾತನಾಡಿದ ಅವರು, 'ಅಸ್ಪೃಶ್ಯತೆ ಮತ್ತು ಅಸಮಾನತೆ ನಿವಾರಣೆ, ಎಲ್ಲರಿಗೂ ಶಿಕ್ಷಣ ಹಾಗೂ ಉದ್ಯೋಗ ಒದಗಿಸುವುದು ಅಂಬೇಡ್ಕರ್ ಕನಸಾಗಿತ್ತು. ಅದನ್ನು ನನಸು ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶ್ರಮಿಸುತ್ತಿವೆ' ಎಂದರು.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮತ್ತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಹಾಜರಿದ್ದರು.

ವಿಧಾನಸೌಧದ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಡಾ.ಬಿ.ಆರ್ ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಸಚಿವರಾದ ಬಿ.ಸಿ. ನಾಗೇಶ್ ಮತ್ತು ಕೋಟ ಶ್ರೀನಿವಾಸ ಪೂಜಾರಿ, ಅಂಬೇಡ್ಕರ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು. ಸಮಾಜ ಕಲ್ಯಾಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯ್ಕ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಇದ್ದರು

'ಜ್ಞಾನದಿಂದ ದೈವತ್ವಕ್ಕೇರಿದ ವ್ಯಕ್ತಿ'

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅವರು ಬುದ್ಧನಂತೆ ಜ್ಞಾನದಿಂದಲೇ ದೈವತ್ವಕ್ಕೇರಿದವರು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಪಕ್ಷದ ಪರಿಶಿಷ್ಟ ಜಾತಿ ಮೋರ್ಚಾ ವತಿಯಿಂದ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಣವೇ ದಲಿತರ ಪಾಲಿನ ನಿಜವಾದ ಶಕ್ತಿ ಎಂಬುದು ಅಂಬೇಡ್ಕರ್ ಅವರ ಪ್ರತಿಪಾದನೆಯಾಗಿತ್ತು. ಅದಕ್ಕೆ ಪೂರಕವಾಗಿ ಪ್ರಧಾನಿ ನರೇಂದ್ರ ಮೋದಿ ನಾಯಕತ್ವದ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ. ರಾಜ್ಯ ಸರ್ಕಾರವೂ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ದಲಿತರ ರಕ್ಷಣೆ ಮತ್ತು ಅಭಿವೃದ್ಧಿಯ ವಿಚಾರದಲ್ಲಿ ಬಿಜೆಪಿ ಸರ್ಕಾರ ಕಳಕಳಿ ಹೊಂದಿದೆ. ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ವಿಚಾರದಲ್ಲಿ ಕೇಂದ್ರ ಸರ್ಕಾರ ಗಟ್ಟಿಯಾದ ನಿಲುವು ತಾಳಿರುವುದೇ ಇದಕ್ಕೆ ಸಾಕ್ಷಿ ಎಂದು ಹೇಳಿದರು.

ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಪ್ರಭಾರಿ ಕುಮಾರ್, ಬಿಜೆಪಿ ಮುಖಂಡರಾದ ಶಂಕರ್, ಮಂಜುನಾಥ್, ಮುನಿರಾಜು ಉಪಸ್ಥಿತರಿದ್ದರು.

ತಗ್ಗಿದ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ 359 ಮಂದಿ ಕೋವಿಡ್‌ನಿಂದ ಗುಣಮುಖರಾಗಿದ್ದಾರೆ. ಹೀಗಾಗಿ ಸಕ್ರಿಯ ಪ್ರಕರಣಗಳು ತಗ್ಗಿದ್ದು, ಸದ್ಯ 7,067 ಜನ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ದಿನದಿಂದ ಈವರೆಗೆ 29.53 ಲಕ್ಷ ಜನರಿಗೆ ಕಾಯಿಲೆ ವಾಸಿಯಾಗಿದೆ.

ಕೋವಿಡ್ ಹೊಸ ಪ್ರಕರಣಗಳೂ ಇಳಿದಿವೆ. ಒಂದು ದಿನದಲ್ಲಿ 301 ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಸೋಂಕಿತರ ಒಟ್ಟು ಸಂಖ್ಯೆಯು 29.98 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣ ಶೇ 0.34ಕ್ಕೆ ಇಳಿದಿದೆ. ಕೋವಿಡ್ ಪೀಡಿತರ ಪೈಕಿ 7 ಜನ ಅಸುನೀಗಿದ್ದಾರೆ. ಮೃತರ ಸಂಖ್ಯೆಯು 38,237ಕ್ಕೆ ಹೆಚ್ಚಿದ್ದು, ಮರಣ ಪ್ರಮಾಣ ದರ ಶೇ 2.32ರಷ್ಟಿದೆ.

ಹೇಮಾವತಿ: ಅಧಿಕಾರಿ ಕಚೇರಿ ಮೇಲೆ ದಾಳಿ

ತುಮಕೂರು: ಹೇಮಾವತಿ ನಾಲಾ ವಲಯದ ವಿಶೇಷ ಭೂಸ್ವಾಧೀನ ಅಧಿಕಾರಿ ಕಚೇರಿ ಮೇಲೆ ಸೋಮವಾರ ಸಂಜೆ ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ವಿಶೇಷ ಭೂಸ್ವಾಧೀನ ಅಧಿಕಾರಿ ಕವಿತಾ ಅವರ ಕಚೇರಿ ಮೇಲೆ ದಾಳಿ ನಡೆದಿದ್ದು, ರಾತ್ರಿಯಾಗಿದ್ದರಿಂದ ತಪಾಸಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಂಗಳವಾರ ಬೆಳಗ್ಗೆ ಮತ್ತೆ ತಪಾಸಣೆ ಮುಂದುವರೆಯಲಿದೆ. ಏನೆಲ್ಲ ಅಕ್ರಮಗಳು ನಡೆದಿವೆ ಎಂಬುದು ತನಿಖೆ ಪೂರ್ಣಗೊಂಡ ನಂತರ ತಿಳಿಯಲಿದೆ.

ಭೂಸ್ವಾಧೀನ ಪಡಿಸಿಕೊಂಡ ನಂತರ ರೈತರಿಗೆ ಸಕಾಲಕ್ಕೆ ಪರಿಹಾರ ನೀಡದಿರುವುದು, ಹಿರಿತನವನ್ನು ಪರಿಗಣಿಸದಿರುವುದು, ಹಣ ಕೊಟ್ಟವರಿಗೆ ಪರಿಹಾರ ವಿತರಣೆ, ಭ್ರಷ್ಟಾಚಾರ ಮಿತಿ ಮೀರಿರುವುದು ಮೊದಲಾದ ದೂರುಗಳು ಬಂದಿದ್ದವು. ಪದೇಪದೇ ದೂರುಗಳು ಬಂದಿದ್ದರಿಂದ ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ವಿಶ್ವವಿದ್ಯಾಲಯ: ಕುಲಪತಿಗೆ ಸಿಂಡಿಕೇಟ್ ಸದಸ್ಯರಿಂದ ಮನವಿ

ಕುಲಸಚಿವರ ಅಧಿಕಾರ ಹಸ್ತಾಂತರ: ಇನ್ನೂ ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರ ಅಧಿಕಾರ ಹಸ್ತಾಂತರ ಗೊಂದಲ ಮುಂದುವರಿದಿದೆ. ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲೂ ಕುಲಸಚಿವರ ಹುದ್ದೆಯ ಮುಂದೆ ಯಾರ ಹೆಸರನ್ನೂ ನಮೂದಿಸಿಲ್ಲ.

ಈ ಗೊಂದಲವನ್ನು ಪರಿಹರಿಸುವಂತೆ ಒತ್ತಾಯಿಸಿ ಕೆಲವು ಸಿಂಡಿಕೇಟ್ ಸದಸ್ಯರು ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅವರಿಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ.

ಕುಲಸಚಿವರಾಗಿದ್ದ ಕೆ.ಜ್ಯೋತಿ ಅವರನ್ನು ವರ್ಗಾವಣೆ ಮಾಡಿ ನವೆಂಬರ್ 26ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿತ್ತು. ಇವರ ಸ್ಥಾನಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಎಂ. ಕೊಟ್ರೇಶ್ ಅವರನ್ನು ನೇಮಿಸಲಾಗಿತ್ತು.

'ಪ್ರೊ. ಕೊಟ್ರೇಶ್ ಅವರ ನೇಮಕ ಕಾನೂನುಬಾಹಿರವಾಗಿದೆ. ಕುಲಪತಿಗಳಾದ ನಿಮಗೆ ಈ ವಿಷಯ ಗೊತ್ತಿದ್ದರೂ ಕಾನೂನು ಪ್ರಕಾರವೇ ಕ್ರಮಕೈಗೊಳ್ಳಬೇಕಾಗಿತ್ತು. ಆದರೆ, ಕರ್ತವ್ಯ ಲೋಪವೆಸಗಿ ವಿಶ್ವವಿದ್ಯಾಲಯದ ಘನತೆ-ಗೌರವ ಹಾಳು ಮಾಡುತ್ತಿರುವುದು ದುರದೃಷ್ಟಕರ ಸಂಗತಿ' ಎಂದು ಸಿಂಡಿಕೇಟ್ ಸದಸ್ಯರು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

'ನಿಮ್ಮ ಹಿತಾಸಕ್ತಿಗೆ ಅನುಗುಣವಾಗಿ ಆಡಳಿತ ನಿರ್ವಹಿಸುತ್ತಿರುವುದನ್ನು ಮತ್ತೆ ಮತ್ತೆ ಸಾಬೀತುಪಡಿಸುತ್ತಿರುವುದು ಕರ್ತವ್ಯ ಲೋಪಕ್ಕೆ ಸಾಕ್ಷಿಯಾಗಿದೆ. ಸರ್ಕಾರದ ಆದೇಶವನ್ನು ಪರಿಪಾಲನೆ ಮಾಡುವ ಕನಿಷ್ಠ ಜ್ಞಾನವು ನಿಮಗಿಲ್ಲದಿರುವುದನ್ನು ಎತ್ತಿ ತೋರಿಸಿದ್ದೀರಿ' ಎಂದು ದೂರಿದ್ದಾರೆ.

'ಸರ್ಕಾರದ ಮಟ್ಟದಲ್ಲೇ ಗೊಂದಲ ಇರುವುದರಿಂದ ಹಿಂದಿನ ಕುಲಸಚಿವರಾದ ಕೆ. ಜ್ಯೋತಿ ಅವರನ್ನು ವಿಶ್ವವಿದ್ಯಾಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಲು ಆದೇಶ ನೀಡಬಾರದಿತ್ತು. ಹೀಗಾಗಿ, ಈ ವಿಷಯ ಪೂರ್ಣ ಇತ್ಯರ್ಥವಾಗುವವರೆಗೂ ಪ್ರೊ. ಎಂ. ಕೊಟ್ರೇಶ್ ಅವರಿಗೆ ಅಧಿಕಾರ ಚಲಾಯಿಸುವ ಹಕ್ಕು ನೀಡಬಾರದು' ಎಂದು ಪ್ರೊ. ಟಿ.ವಿ. ರಾಜು, ಡಾ. ಗೋವಿಂದರಾಜು, ಗೋಪಿನಾಥ್, ಪ್ರೇಮ್ ಸೊಹನ್ ಲಾಲ್, ಡ. ಸುಧಾಕರ್, ವಿದೇಯ ಬೆಳಗೋಡೆ ಶ್ರೀಕಂಠ, ಉದಯಕುಮರ್, ಡಾ.ಎಂ.ವಿ. ಆಶಾ ಕೋರಿದ್ದಾರೆ.

ಕಾನೂನು ಪಾಲಿಸಿದ್ದೇವೆ: ಕುಲಪತಿ ಸ್ಪಷ್ಟನೆ

'ಕುಲಸಚಿವರ ವರ್ಗಾವಣೆಯನ್ನು ಸರ್ಕಾರವೇ ಮಾಡಿದೆ. ಸರ್ಕಾರದ ಆದೇಶವನ್ನು ಪಾಲಿಸುವುದು ಕರ್ತವ್ಯ. ಕಾನೂನುಬಾಹಿರವಾಗಿ ಯಾವುದೇ ಕಾರ್ಯಗಳನ್ನು ಮಾಡಿಲ್ಲ' ಎಂದು ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಸ್ಪಷ್ಟಪಡಿಸಿದ್ದಾರೆ.

'ಸರ್ಕಾರದ ಆದೇಶದ ಪ್ರಕಾರವೇ ಪ್ರೊ. ಎಂ. ಕೊಟ್ರೇಶ್ ಅವರು ಅಧಿಕಾರ ಸ್ವೀಕರಿಸಿದ್ದಾರೆ ಮತ್ತು ಕಾನೂನಿನ ಪ್ರಕಾರವೇ ಕೆ. ಜ್ಯೋತಿ ಅವರನ್ನು ಕುಲಸಚಿವರ ಹುದ್ದೆಯಿಂದ ನಾವೇ ಬಿಡುಗಡೆ ಮಾಡಿದ್ದೇವೆ. ಹೀಗಾಗಿ, ಇಲ್ಲಿ ಅಧಿಕಾರ ಹಸ್ತಾಂತರ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ತಿಳಿದರು.

'ಆಡಳಿತದ ವಿಷಯಗಳ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ದೂರು ನೀಡುವ ಅಗತ್ಯವಿರಲಿಲ್ಲ. ಜತೆಗೆ, ಸರ್ಕಾರದ ಪ್ರತಿನಿಧಿಯಾಗಿ ವರ್ಗಾವಣೆಯ ಬಗ್ಗೆ ಸರ್ಕಾರವನ್ನೇ ಪ್ರಶ್ನೆ ಮಾಡಿದಂತಾಗುತ್ತದೆ. ಒಂದು ವೇಳೆ, ಸರ್ಕಾರದ ಆದೇಶ ಪಾಲಿಸದಿದ್ದರೆ ಸಿಂಡಿಕೇಟ್ ಸದಸ್ಯರು ಸಹ ಸರ್ಕಾರದ ಗಮನಕ್ಕೆ ತರಬೇಕಾಗಿತ್ತು. ರಾಜ್ಯದಲ್ಲಿನ ಎಂಟು ವಿಶ್ವವಿದ್ಯಾಲಯಗಳಲ್ಲಿ ಪ್ರೊಫೆಸರ್‌ಗಳು ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ, ಕೊಟ್ರೇಶ್ ಅವರು ಈಗ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಹೇಳಿದರು.

ಪ್ರೊ.ಕೆ.ಆರ್. ವೇಣುಗೋಪಾಲ್

'ವಿಶ್ವವಿದ್ಯಾಲಯ ಕಾಯ್ದೆಯಲ್ಲೂ ಕುಲಸಚಿವರ ಹುದ್ದೆಗೆ ಅಧಿಕಾರಿಗಳನ್ನು ನೇಮಿಸಬಹುದು ಎಂದಿದೆಯೇ ಹೊರತು ಕಡ್ಡಾಯವಾಗಿ ಎನ್ನುವುದು ಇಲ್ಲ' ಎಂದು ವಿವರಿಸಿದ್ದಾರೆ.

ಕೋಲಾರ–ಚಿಕ್ಕಬಳ್ಳಾಪುರ ಕ್ಷೇತ್ರ: ಗೆಲುವಿನ ಬೆನ್ನಟ್ಟಿರುವ ಬಿಜೆಪಿ

‘ಕೈ’–ಜೆಡಿಎಸ್‌ಗೆ ಒಳೇಟಿನ ಭೀತಿ

• ಜೆ.ಆರ್.ಗಿರೀಶ್

ಕೋಲಾರ: ಕಾಂಗ್ರೆಸ್ ಹಾಗೂ ಜೆಡಿಎಸ್ ಪ್ರಾಬಲ್ಯವಿರುವ ಅವಿಭಜಿತ ಕೋಲಾರ ಜಿಲ್ಲಾ ವಿಧಾನ ಪರಿಷತ್ ಕ್ಷೇತ್ರದಲ್ಲಿ ಅರಳಲು ‘ಕಮಲ’ದ ತುಡಿತ ಹೆಚ್ಚಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಹಣಾಹಣಿ ಇದ್ದು, ಬಿಜೆಪಿ ಗೆಲುವಿನ ಮಾಯ ಜಿಂಕೆ ಬೆನ್ನಟ್ಟಿದೆ.

ಕಳೆದ ಚುನಾವಣೆಯಲ್ಲಿ ಸೋತಿದ್ದ ಕಾಂಗ್ರೆಸ್‌ನ ಎಂ.ಎಲ್. ಅನಿಲ್‌ಕುಮಾರ್ ಮತ್ತೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಜೋರಾಗಿದೆ. ಆಂತರಿಕ ಕಚ್ಚಾಟವೇ ಪಕ್ಷಕ್ಕೆ ಮುಳುವಾಗುವ ಸೂಚನೆ ಕಾಣುತ್ತಿದೆ.

ಸೋಲಿನ ಅನುಭವದಿಂದ ‘ಕೈ’ ನಾಯಕರು ಪಾಠ ಕಲಿತಂತಿಲ್ಲ ಎಂಬ ಅಭಿಪ್ರಾಯಗಳಿವೆ. ಮಾಜಿ ಸಂಸದ ಕೆ.ಎಚ್.ಮುನಿಯಪ್ಪ ಮತ್ತು ಶಾಸಕ ಕೆ.ಆರ್.ರಮೇಶ್‌ಕುಮಾರ್ ಬಣಗಳ ಮೇಲಾಟವು ಮಗ್ಗಲುಮುಳ್ಳಾಗಿ ‘ಕೈ’ ಚುಚ್ಚುತ್ತಿದೆ. ಅವಳಿ ಜಿಲ್ಲೆಯಿಂದ ದೂರಉಳಿದಿರುವ ಮುನಿಯಪ್ಪ ಬೆಂಬಲಿಗರ ಮೂಲಕ ಭಿನ್ನಮತದ ದಾಳ ಉರುಳಿಸಿದ್ದಾರೆ.

ಬಣಗಳ ಗುದ್ದಾಟದ ಗಾಯಕ್ಕೆ ಮುಲಾಮು ಹಚ್ಚಲಾಗದೆ ಅಸಹಾಯಕವಾಗಿರುವ ಹೈಕಮಾಂಡ್ ಪಕ್ಷದ ಸ್ಥಳೀಯ ಶಾಸಕರಿಗೆ ಜವಾಬ್ದಾರಿ ನೀಡಿ ಕೈ ತೊಳೆದುಕೊಂಡಿದೆ. ಕಾಂಗ್ರೆಸ್‌ನಿಂದ ದೂರವಾಗಿದ್ದ ಚಿಂತಾಮಣಿ ಕ್ಷೇತ್ರದ ಮಾಜಿ ಶಾಸಕ ಡಾ.ಎಂ.ಸಿ.ಸುಧಾಕರ್ ಮತ್ತು ಮುಳಬಾಗಿಲು ಕ್ಷೇತ್ರದ ಮಾಜಿ ಶಾಸಕ, ಪಕ್ಷೇತರರಾದ ಕೊತ್ತೂರು ಮಂಜುನಾಥ್ ಕಾಂಗ್ರೆಸ್‌ಗೆ ಜೈ ಎಂದಿದ್ದು, ಆ ಪಕ್ಷಕ್ಕೆ ಆನೆ ಬಲ ಬಂದಿದೆ.

ಜೆಡಿಎಸ್‌ಗೆ ಸವಾಲು: ಜೆಡಿಎಸ್‌ಗೆ ಕ್ಷೇತ್ರ ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ. ಪಕ್ಷವು ವಿ.ಇ.ರಾಮಚಂದ್ರ (ವಕ್ಕಲೇರಿ ರಾಮು) ಅವರನ್ನು ಕಣಕ್ಕಿಳಿಸಿದೆ. ಅವಳಿ ಜಿಲ್ಲೆಯಲ್ಲಿ ಜೆಡಿಎಸ್‌ನ ಇಬ್ಬರು ಶಾಸಕರ ಪೈಕಿ ಕೋಲಾರ ಕ್ಷೇತ್ರದ ಶಾಸಕ ಕೆ.ಶ್ರೀನಿವಾಸಗೌಡ ಕಾಂಗ್ರೆಸ್ ಸೇರುವುದಾಗಿ ಘೋಷಿಸಿದ್ದು, ಪಕ್ಷಕ್ಕೆ ಕೊಂಚ ಹಿನ್ನಡೆಯಾಗಿದೆ.

ಪಕ್ಷದೊಳಗಿನ ವ್ಯತ್ಯಾಸಗಳಿಂದ ಹಿಂದಿನ ಚುನಾವಣೆಯಲ್ಲಿ ಸೋತೆ. ಈ ಬಾರಿ ಗೆಲುವು ನಿಶ್ಚಿತ. ಹಿರಿಯ ನಾಯಕ ಮುನಿಯಪ್ಪ ಅವರು ಪಕ್ಷ ದ್ರೋಹ ಮಾಡಲ್ಲ

ಎಂ.ಎಲ್.ಅನಿಲ್‌ಕುಮಾರ್
ಕಾಂಗ್ರೆಸ್ ಅಭ್ಯರ್ಥಿ

ವಿರೋಧ ಪಕ್ಷಗಳಲ್ಲಿ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಗೊಂದಲಗಳಿವೆ. ನಮ್ಮ ಪಕ್ಷದಲ್ಲಿ ಒಮ್ಮತದಿಂದ ನನ್ನನ್ನು ಆಯ್ಕೆ ಮಾಡಲಾಗಿದೆ. ಗೆಲ್ಲುವ ವಿಶ್ವಾಸವಿದೆ

ವಿ.ಇ.ರಾಮಚಂದ್ರ
ಜೆಡಿಎಸ್ ಅಭ್ಯರ್ಥಿ

ಎರಡೂವರೆ ದಶಕದಿಂದ ಗ್ರಾಮೀಣ ಭಾಗದಲ್ಲಿ ಜನ ಸೇವೆ ಮಾಡಿದ್ದೇನೆ. ಮತದಾರರು ಬಿಜೆಪಿ ಪರವಿದ್ದಾರೆ. ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆಯಿದ್ದರೂ ಬಿಜೆಪಿ ಮೇಲುಗೈ ಸಾಧಿಸುತ್ತದೆ

ಡಾ.ಕೆ.ಎನ್.ವೇಣುಗೋಪಾಲ್
ಬಿಜೆಪಿ ಅಭ್ಯರ್ಥಿ

ಎಲ್ಲಿ ಯಾರಿಗೆ ಅಧಿಕಾರ?

ಕೋಲಾರ	
ಕೋಲಾರ ನಗರಸಭೆ	ಜೆಡಿಎಸ್
ಮುಳಬಾಗಿಲು ನಗರಸಭೆ	ಜೆಡಿಎಸ್
ಕೆಜಿಎಫ್ ನಗರಸಭೆ	ಕಾಂಗ್ರೆಸ್
ಮಾಲೂರು ಪುರಸಭೆ	ಕಾಂಗ್ರೆಸ್
ಶ್ರೀನಿವಾಸಪುರ ಪುರಸಭೆ	ಜೆಡಿಎಸ್
ಬಂಗಾರಪೇಟೆ ಪುರಸಭೆ	ಕಾಂಗ್ರೆಸ್

ಚಿಕ್ಕಬಳ್ಳಾಪುರ	
ಶಿಡ್ಲಘಟ್ಟ ನಗರಸಭೆ	ಜೆಡಿಎಸ್
ಚಿಂತಾಮಣಿ ನಗರಸಭೆ	ಡಾ.ಎಂ.ಸಿ.ಸುಧಾಕರ್ ಬಣ
ಗೌರಿಬಿದನೂರು ನಗರಸಭೆ	ಕಾಂಗ್ರೆಸ್
ಚಿಕ್ಕಬಳ್ಳಾಪುರ ನಗರಸಭೆ	ಬಿಜೆಪಿ
ಬಾಗೇಪಲ್ಲಿ ಪುರಸಭೆ	ಕಾಂಗ್ರೆಸ್
ಗುಡಿಬಂಡೆ ಪಟ್ಟಣ ಪಂಚಾಯಿತಿ	ಬಿಜೆಪಿ

2015ರ ಚುನಾವಣೆ ಫಲಿತಾಂಶ	
ಸಿ.ಆರ್.ಮನೋಹರ್ (ಜೆಡಿಎಸ್)	3,220
ಎಂ.ಎಲ್.ಅನಿಲ್‌ಕುಮಾರ್ (ಕಾಂಗ್ರೆಸ್)	2,278
ಜಿ.ರಾಮೇಗೌಡ (ಬಿಜೆಪಿ)	610

ಮತದಾರರ ಅಂಕಿ–ಅಂಶ	
ಒಟ್ಟು ಮತದಾರರು	5,600
ಮಹಿಳೆಯರು	2,925
ಪುರುಷರು	2,675
ಒಟ್ಟು ಮತಗಟ್ಟೆಗಳು	321

ಪಕ್ಷದ ಕೆಲವು ಹಿರಿಯ ಮುಖಂಡರು, ವರಿಷ್ಠರ ವಿರುದ್ಧ ಮುನಿದಿದ್ದು ಒಳ ಏಟಿನ ಭೀತಿ ಕಾಡುತ್ತಿದೆ. ರಮೇಶ್‌ಕುಮಾರ್ ಬಣದ ವಿರುದ್ಧ ಕುದಿಯುತ್ತಿರುವ ಮುನಿಯಪ್ಪ ಜತೆ ಕೈ ಕುಲುಕಲು ಜೆಡಿಎಸ್ ವರಿಷ್ಠರು ತೆರೆಮರೆಯಲ್ಲೇ ತಂತ್ರಗಾರಿಕೆ ರೂಪಿಸಿದ್ದಾರೆ.

ಆಪರೇಷನ್ ಕಮಲ: ಬಿಜೆಪಿ ಕೋಲಾರ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಕೆ.ಎನ್. ವೇಣುಗೋಪಾಲ್ ಕಣಕಿಳಿದಿದ್ದಾರೆ. ಕಾಂಗ್ರೆಸ್ ಒಳ ಜಗಳದ ಲಾಭ ಪಡೆಯಲು ಬಿಜೆಪಿ ಯತ್ನಿಸಿದೆ. ಸಚಿವ ಡಾ.ಕೆ.ಸುಧಾಕರ್ ರಾಜಕೀಯ ಬದ್ಧವೈರಿ ರಮೇಶ್‌ಕುಮಾರ್ ವಿರುದ್ಧ ಸೇಡು ತೀರಿಸಿಕೊಳ್ಳಲು ಚುನಾವಣೆಯನ್ನೇ ಅಸ್ತ್ರವಾಗಿಸಿಕೊಂಡಿದ್ದಾರೆ. ಶತಾಯಗತಾಯ ಗೆಲ್ಲುವ ಹಟಕ್ಕೆ ಬಿದ್ದಿರುವ ಬಿಜೆಪಿ ನಾಯಕರು ‘ಆಪರೇಷನ್ ಕಮಲ’ ನಡೆಸಿದ್ದಾರೆ. ಗುಟ್ಟು ಬಿಡದ ಮತದಾರರು ಕುತೂಹಲ ಹೆಚ್ಚಿಸಿದ್ದಾರೆ.

ಪರಿಷತ್ ಚುನಾವಣೆ
ಕ್ಷೇತ್ರ ಸಮೀಕ್ಷೆ

ಹ್ಯಾಟ್ರಿಕ್ ಗೆಲುವಿಗೆ ಲಗಾಮು?

ಬೆಂಗಳೂರು ಗ್ರಾಮಾಂತರ ಕ್ಷೇತ್ರ: ಅದೃಷ್ಟ ಪರೀಕ್ಷೆಗೆ ಇಳಿದ ಬಿಜೆಪಿ

• ಆರ್. ಜಿತೇಂದ್ರ

ರಾಮನಗರ: ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಎಸ್. ರವಿ ಮೂರನೇ ಜಯದ ವಿಶ್ವಾಸದಲ್ಲಿದ್ದಾರೆ. ಗೆಲುವಿನ ಓಟಕ್ಕೆ ಜೆಡಿಎಸ್ ಇಲ್ಲವೇ ಬಿಜೆಪಿ ತಡೆಯೊಡ್ಡುವುದೇ ಎಂಬುದು ಸದ್ಯದ ಕುತೂಹಲ.

ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಇದರ ವ್ಯಾಪ್ತಿಗೆ ಬರುತ್ತವೆ. ರಾಜ್ಯದ ಏಕೈಕ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಪ್ರತಿನಿಧಿಸುವ ಕ್ಷೇತ್ರವಿದು. ಜೊತೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಾಮಬಲ ಕೈ ಪಾಳಯದ ಬಲ ಹೆಚ್ಚಿಸಿದೆ.

ಕ್ಷೇತ್ರ ವ್ಯಾಪ್ತಿಯ ಇಲ್ಲಿನ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಎಚ್.ಡಿ. ಕುಮಾರಸ್ವಾಮಿ ಸೇರಿ ಐವರು ಜೆಡಿಎಸ್ ಶಾಸಕರು ಇರುವುದು ಆ ಪಕ್ಷದ ವಿಶ್ವಾಸ ಹೆಚ್ಚಿಸಿದೆ. ಬಿಜೆಪಿ ತನ್ನ ಅಭ್ಯರ್ಥಿಯನ್ನು ಅದೃಷ್ಟ ಪರೀಕ್ಷೆಗೆ ಇಳಿಸಿದೆ. ಈ ನಡುವೆ ಕಾಂಗ್ರೆಸ್ ನಾಯಕರು, ಜೆಡಿಎಸ್–ಬಿಜೆಪಿ ನಡುವೆ ಒಳ ಒಪ್ಪಂದದ ಆರೋಪ ತೇಲಿಬಿಟ್ಟಿದ್ದಾರೆ.

ಕಳೆದ ಚುನಾವಣೆ ಫಲಿತಾಂಶವನ್ನು ಪುನರಾವರ್ತಿಸುವ ವಿಶ್ವಾಸದಲ್ಲಿ ಕಾಂಗ್ರೆಸ್ ಇದ್ದು, ನಾಯಕರೆಲ್ಲ ಕ್ಷೇತ್ರದಾದ್ಯಂತ ಭರ್ಜರಿ ಪ್ರಚಾರ ನಡೆಸಿದ್ದಾರೆ. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಹಾಲಿ ಸದಸ್ಯ ಎಸ್.ರವಿ ಕಳೆದ ಒಂದು ವರ್ಷದಿಂದ ಚುನಾವಣೆ ಸಿದ್ಧತೆ ನಡೆಸಿದ್ದು, ಮತದಾರರೊಂದಿಗೆ ಉತ್ತಮ ಒಡನಾಟ ಹೊಂದಿದ್ದಾರೆ.

ಜೆಡಿಎಸ್ ಅಭ್ಯರ್ಥಿಗೆ ಕ್ಷೇತ್ರದ ಪರಿಚಯವೇ ಇಲ್ಲ. ಗ್ರಾ.ಪಂ.ಗಳಲ್ಲಿ ಅತಿ ಹೆಚ್ಚು ಮಂದಿ ಕಾಂಗ್ರೆಸ್ ಬೆಂಬಲಿತರಿದ್ದು, ಹಿಂದಿಗಿಂತ ಹೆಚ್ಚಿನ ಅಂತರದಲ್ಲಿ ಗೆಲ್ಲುತ್ತೇವೆ

ಎಸ್. ರವಿ
ಕಾಂಗ್ರೆಸ್ ಅಭ್ಯರ್ಥಿ

ಇಲ್ಲಿನ 8 ಶಾಸಕರ ಪೈಕಿ ಐವರು ನಮ್ಮವರೇ ಆಗಿರುವುದು ಬಲ ಹೆಚ್ಚಿಸಿದೆ. ಗ್ರಾಮ ಪಂಚಾಯಿತಿಗಳ ಮತದಾರರು ಜೆಡಿಎಸ್ ಬಗ್ಗೆ ಒಲವು ಹೊಂದಿದ್ದು, ಪಕ್ಷವನ್ನು ಬೆಂಬಲಿಸಲಿದ್ದಾರೆ

ಎಚ್.ಎಂ. ರಮೇಶ್ ಗೌಡ
ಜೆಡಿಎಸ್ ಅಭ್ಯರ್ಥಿ

ಕ್ಷೇತ್ರದಲ್ಲಿ ಬಿಜೆಪಿ ಬೆಂಬಲಿತರು ಕಡಿಮೆ ಇರಬಹುದು. ಆದರೆ ಕೇಂದ್ರ, ರಾಜ್ಯದಲ್ಲಿ ಪಕ್ಷದ ಸರ್ಕಾರವಿದೆ. ಅಭಿವೃದ್ಧಿಗಾಗಿ ಪಕ್ಷಾತೀತವಾಗಿ ಮತ ಚಲಾಯಿಸುತ್ತಾರೆ

ಬಿ.ಸಿ. ನಾರಾಯಣಸ್ವಾಮಿ
ಬಿಜೆಪಿ ಅಭ್ಯರ್ಥಿ

ಎಲ್ಲಿ ಯಾರಿಗೆ ಅಧಿಕಾರ?

ರಾಮನಗರ ನಗರಸಭೆ	ಕಾಂಗ್ರೆಸ್
ಕನಕಪುರ ನಗರಸಭೆ	ಕಾಂಗ್ರೆಸ್
ಚನ್ನಪಟ್ಟಣ ನಗರಸಭೆ	ಜೆಡಿಎಸ್
ಮಾಗಡಿ ಪುರಸಭೆ	ಬಿಜೆಪಿ – ಜೆಡಿಎಸ್
ದೊಡ್ಡಬಳ್ಳಾಪುರ ನಗರಸಭೆ	ಬಿಜೆಪಿ – ಜೆಡಿಎಸ್
ದೇವನಹಳ್ಳಿ ಪುರಸಭೆ	ಕಾಂಗ್ರೆಸ್ – ಜೆಡಿಎಸ್
ಹೊಸಕೋಟೆ ನಗರಸಭೆ	ಬಿಜೆಪಿ
ವಿಜಯಪುರ ಪುರಸಭೆ	ಜೆಡಿಎಸ್

ಮತದಾರರ ಅಂಕಿ–ಅಂಶ	
ಒಟ್ಟು ಮತದಾರರು	3928
ಮಹಿಳೆಯರು	2052
ಪುರುಷರು	1876
ಒಟ್ಟು ಮತಗಟ್ಟೆಗಳು	227

2015ರ ಚುನಾವಣೆ ಫಲಿತಾಂಶ	
ಎಸ್. ರವಿ (ಕಾಂಗ್ರೆಸ್)	2267
ಇ. ಕೃಷ್ಣಪ್ಪ (ಜೆಡಿಎಸ್)	1889
ಹನುಮಂತೇಗೌಡ (ಬಿಜೆಪಿ)	170

ಜೆಡಿಎಸ್ ಅಭ್ಯರ್ಥಿ ರಮೇಶ್ ಗೌಡರಿಗೆ ದೇವೇಗೌಡರು ಮತ್ತು ಕುಮಾರಸ್ವಾಮಿ ನಾಮಬಲವೇ ಶ್ರೀರಕ್ಷೆ. ಎರಡೂ ಜಿಲ್ಲೆಗಳಲ್ಲಿ ಪಕ್ಷಕ್ಕೆ ಭದ್ರ ನೆಲೆ ಇದೆ. ಎಚ್‌ಡಿಕೆ ಬಗೆಗಿನ ಅಭಿಮಾನ ಮತಗಳಾಗಿ ಪರಿವರ್ತನೆ ಆಗಲಿದೆ ಎನ್ನುವ ವಿಶ್ವಾಸದಲ್ಲಿರುವ ರಮೇಶ್, ಅವರ ನೆರಳಿನಲ್ಲೇ ಕ್ಷೇತ್ರದಾದ್ಯಂತ ಪ್ರಚಾರ ಮಾಡುತ್ತಿದ್ದಾರೆ. ಆದರೆ ಜೆಡಿಎಸ್ ಅಭ್ಯರ್ಥಿ ಹೊರಗಿನವರು ಎಂಬುದು ಕಾಂಗ್ರೆಸ್ ಆರೋಪ.

ಬಿಜೆಪಿಯಿಂದ ಅಚ್ಚರಿಯ ಅಭ್ಯರ್ಥಿಯಾಗಿ ಕಣದಲ್ಲಿರುವ ಬಿ.ಸಿ. ನಾರಾಯಣಸ್ವಾಮಿ ಅವರೂ ರಾಜಕೀಯದಲ್ಲಿ ಅನುಭವ ಹೊಂದಿದ್ದಾರೆ. ಗ್ರಾಮೀಣ ಭಾಗದಲ್ಲಿ ಬಿಜೆಪಿ ಹಿಂದಿದ್ದಾಗ್ಯೂ ಚನ್ನಪಟ್ಟಣ, ಹೊಸಕೋಟೆ, ದೊಡ್ಡಬಳ್ಳಾಪುರ ಮೊದಲಾದ ಕಡೆಗಳಲ್ಲಿ ಪಕ್ಷ ಬೆಂಬಲಿತರು ಇದ್ದಾರೆ. ಜೊತೆಗೆ ಕೇಂದ್ರ ಹಾಗೂ ರಾಜ್ಯದಲ್ಲೂ ಪಕ್ಷದ ಸರ್ಕಾರವಿದ್ದು, ಅಭಿವೃದ್ಧಿಗಾಗಿ ಮತದಾರರು ಆಶೀರ್ವದಿಸಲಿದ್ದಾರೆ ಎಂಬ ವಿಶ್ವಾಸ ಅವರದ್ದು.

ಮತದಾರರಲ್ಲಿ ಶೇ 90 ಮಂದಿ ಗ್ರಾಮ ಪಂಚಾಯಿತಿಗಳ ಸದಸ್ಯರು. ಕಾಂಗ್ರೆಸ್ ಬೆಂಬಲಿತರು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಆಯ್ಕೆಯಾಗಿರುವುದು ಕೈ ಪಾಳಯದ ವಿಶ್ವಾಸ ಹೆಚ್ಚಿಸಿದೆ. ಜೆಡಿಎಸ್ ಬೆಂಬಲಿತರೂ ಗಣನೀಯ ಸಂಖ್ಯೆಯಲ್ಲಿದ್ದು ಎದಿರೇಟು ನೀಡುವ ಉತ್ಸಾಹದಲ್ಲಿದ್ದಾರೆ. ಸದ್ಯ ಅಸ್ತಿತ್ವದಲ್ಲಿರುವ ಎಂಟು ನಗರ ಸ್ಥಳೀಯ ಸಂಸ್ಥೆಗಳ ಪೈಕಿ ತಲಾ ಎರಡರಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಒಂದು ಕಡೆ ಬಿಜೆಪಿ ಸ್ವಂತಬಲದಿಂದ ಅಧಿಕಾರದಲ್ಲಿದೆ. ಎರಡು ಕಡೆ ಜೆಡಿಎಸ್–ಬಿಜೆಪಿ, ಒಂದು ಕಡೆ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಆಡಳಿತ ನಡೆಸುತ್ತಿವೆ.

ಸೂರಜ್ ರೇವಣ್ಣ ಸ್ಪರ್ಧೆ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ‘ಹಾಸನ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಂದ ವಿಧಾನ ಪರಿಷತ್‌ಗೆ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಆರ್.ಸೂರಜ್ (ಸೂರಜ್ ರೇವಣ್ಣ) ಅವರ ನಾಮಪತ್ರ ಕಾನೂನು ಬಾಹಿರವಾಗಿದೆ’ ಎಂದು ಆಕ್ಷೇಪಿಸಿ ಸಲ್ಲಿಸಲಾಗಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಹಾಸನ ಜಿಲ್ಲೆ ದಂಡಿಗಾನ ಹೋಬಳಿಯ ಕುಂದೂರು ಗ್ರಾಮದ ಕೆ.ಎಲ್.ಹರೀಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಜಾಗೊಳಿಸಿತು.

‘ಚುನಾವಣಾ ವೇಳಾಪಟ್ಟಿ ಘೋಷಣೆಯಾದ ನಂತರ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಅದನ್ನು ಚುನಾವಣಾ ತಕರಾರು ಅರ್ಜಿ ಸಲ್ಲಿಸಿ ಪರಿಹಾರ ಪಡೆಯಿರಿ’ ಎಂದು ನ್ಯಾಯಪೀಠ ಆದೇಶಿಸಿದೆ.

ಆಕ್ಷೇಪಣೆ ಏನಿತ್ತು?: ‘ಆರ್.ಸೂರಜ್ ಅವರು ತಮ್ಮ ನಾಮಪತ್ರದೊಂದಿಗೆ ಸಲ್ಲಿಸಿರುವ ನಮೂನೆ 26ರ ಅಡಿಯಲ್ಲಿನ ಪ್ರಮಾಣ ಪತ್ರದಲ್ಲಿ ಅನೇಕ ಮಾಹಿತಿಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದಾರೆ. ತಮ್ಮ ಹಾಗೂ ಕುಟುಂಬದ ಸದಸ್ಯರ ಆಸ್ತಿ ವಿವರ, ನಗದು, ಸಾಲ ಹಾಗೂ ಆರ್ಥಿಕ ವಿವರಗಳನ್ನು ಸಂಪೂರ್ಣವಾಗಿ ಬಹಿರಂಗ ಪಡಿಸಿಲ್ಲ. ಆದ್ದರಿಂದ, ಇವರ ನಾಮಪತ್ರ ತಿರಸ್ಕರಿಸಬೇಕು ಅಥವಾ ಆಯುಕ್ತರಿಗೆ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದರು.

ರಾಯಚೂರು: ಸಿಂಧನೂರು ಶಾಸಕ ವೆಂಕಟರಾವ್ ನಾಡಗೌಡ ಘೋಷಣೆ

ಕಾಂಗ್ರೆಸ್ ಅಭ್ಯರ್ಥಿಗೆ ಜೆಡಿಎಸ್ ಬೆಂಬಲ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ರಾಯಚೂರು–ಕೊಪ್ಪಳ ವಿಧಾನ ಪರಿಷತ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶರಣೇಗೌಡ ಬಯ್ಯಾಪುರ ಅವರಿಗೆ ಜೆಡಿಎಸ್ ಬೆಂಬಲ ಘೋಷಿಸಿದೆ.

ಸೋಮವಾರ ನಡೆದ ಜೆಡಿಎಸ್ ಬೆಂಬಲಿತ ಗ್ರಾಮ ಪಂಚಾಯಿತಿ ಮತ್ತು ನಗರಸಭೆ ಸದಸ್ಯರ ಸಭೆಯಲ್ಲಿ ಮಾತನಾಡಿದ ಜೆಡಿಎಸ್ ಶಾಸಕ ವೆಂಕಟರಾವ್ ನಾಡಗೌಡ ಈ ಘೋಷಣೆ ಮಾಡಿದರು.

‘ಶರಣೇಗೌಡ ಬಯ್ಯಾಪುರ ಅವರು ಅತ್ಯಂತ ಸರಳ ವ್ಯಕ್ತಿಯಾಗಿದ್ದು, ಗ್ರಾಮ ಪಂಚಾಯಿತಿ ಮತ್ತು ನಗರಸಭೆ ಸದಸ್ಯರ ಸಮಸ್ಯೆಗಳ ಅರಿವು ಇದೆ. ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಬೇಕು’ ಎಂದು ಕೋರಿದರು.

ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಸೋಮವಾರ ನಡೆದ ಜೆಡಿಎಸ್ ಬೆಂಬಲಿತ ಗ್ರಾಮ ಪಂಚಾಯಿತಿ ಮತ್ತು ನಗರಸಭೆ ಸದಸ್ಯರ ಸಭೆಯಲ್ಲಿ ಶಾಸಕ ವೆಂಕಟರಾವ್ ನಾಡಗೌಡ ಮಾತನಾಡಿದರು. ಕಾಂಗ್ರೆಸ್ ಅಭ್ಯರ್ಥಿ ಶರಣೇಗೌಡ ಬಯ್ಯಾಪುರ ಇದ್ದಾರೆ

‘ಶರಣೇಗೌಡ ಬಯ್ಯಾಪುರ ಅವರನ್ನು ಬೆಂಬಲಿಸಲು ಎಚ್.ಡಿ. ಕುಮಾರಸ್ವಾಮಿ ಅವರು ಅನುಮತಿ ನೀಡಿದ್ದಾರೆ. ಹೀಗಾಗಿ ಇವರಿಗೆ ಬೆಂಬಲ ನೀಡಬೇಕು‘ ಎಂದರು.

‘ಚುನಾವಣೆ ಪ್ರಕ್ರಿಯೆ ಆರಂಭಗೊಂಡು ಇಷ್ಟು ದಿನಗಳಾದರೂ ಈವರೆಗೆ ಬಿಜೆಪಿ ಅಭ್ಯರ್ಥಿ ಅಥವಾ ಆ ಪಕ್ಷದ ಮುಖಂಡರು ನಮ್ಮನ್ನು ಸಂಪರ್ಕಿಸಿಲ್ಲ. ನಮ್ಮ ಕಾರ್ಯಕರ್ತರಲ್ಲೇ ಒಡಕುಂಟು ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದನ್ನು ಖಂಡಿಸಿ ಸ್ಥಳೀಯ ಜನಪ್ರತಿನಿಧಿಗಳು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಬೆಂಬಲಿಸಬೇಕು’ ಎಂದು ಹೇಳಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಅಭ್ಯರ್ಥಿ ಶರಣೇಗೌಡ ಬಯ್ಯಾಪುರ, ಶಾಸಕ ವೆಂಕಟರಾವ್ ನಾಡಗೌಡರ ಕಾಲಿಗೆ ಬಿದ್ದು ಆಶೀರ್ವಾದ ಕೇಳಿದರು.

ಮೈತ್ರಿ: ಜೆಡಿಎಸ್ ತನ್ನ ನಿಲುವು ತಿಳಿಸಲಿ – ಬಸವರಾಜ ಬೊಮ್ಮಾಯಿ



ಹುಬ್ಬಳ್ಳಿ: ‘ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಜೊತೆಗೆ ಮೈತ್ರಿ ಕುರಿತಂತೆ ಎಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ನಿಲುವನ್ನು ವ್ಯಕ್ತಪಡಿಸಲಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಪುಟ ವಿಸ್ತರಣೆ ಕುರಿತ ಪ್ರಶ್ನೆಗೆ, ‘ಸದ್ಯ ಪರಿಷತ್ ಚುನಾವಣೆ ಹಾಗೂ ಅಧಿವೇಶನ ನಮ್ಮ ಆದ್ಯತೆಯಾಗಿದೆ’ ಎಂದರು.

‘ಮುಂದೆ ವರಿಷ್ಠರ ಸೂಚನೆ ಮೇರೆಗೆ ಸಂಪುಟ ವಿಸ್ತರಣೆ ಕುರಿತು ತೀರ್ಮಾನಿಸಲಾಗುವುದು’ ಎಂದು ಹೇಳಿದರು.

ಗೋವಾ: ಟಿಎಂಸಿ ಜತೆ ಮಹಾರಾಷ್ಟ್ರವಾದಿ ಗೋಮಾಂತಕ್ ಪಕ್ಷ ಮೈತ್ರಿ

ಪಣಜಿ, ಗೋವಾ (ಪಿಟಿಐ): ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಪಕ್ಷದೊಡನೆ ಮೈತ್ರಿ ಮಾಡಿಕೊಂಡು ಮುಂಬರುವ ಗೋವಾ ವಿಧಾನಸಭೆ ಚುನಾವಣೆ ಎದುರಿಸುವುದಾಗಿ ಮಹಾರಾಷ್ಟ್ರವಾದಿ ಗೋಮಾಂತಕ್ ಪಕ್ಷ (ಎಂಜಿಪಿ) ಸೋಮವಾರ ಪ್ರಕಟಿಸಿದೆ.

ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಗೆ ಟಿಎಂಸಿ ಜೊತೆ ಮೈತ್ರಿ ಮಾಡಿಕೊಳ್ಳಲು ತಮ್ಮ ಪಕ್ಷದ ಕೇಂದ್ರ ಸಮಿತಿ ನಿರ್ಧರಿಸಿದೆ ಎಂದು ಎಂಜಿಪಿ ಅಧ್ಯಕ್ಷ ದೀಪಕ್ ಧವಾಲಿಕರ್ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂದು ನಂತರದಲ್ಲಿ ನಿರ್ಧರಿಸಲಾಗುವುದು ಎಂದೂ ಹೇಳಿದರು.

ಬಿಜೆಪಿಗೆ ಸೇರಲಿಲ್ಲ ಎಂದು ಜೈಲಿಗೆ ಹಾಕಿಸಿದರು: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಬಿಜೆಪಿಯವರಿಗೆ ಬೆಂಬಲಿಸಲಿಲ್ಲ, ಅವರೊಂದಿಗೆ ಹೋಗಲಿಲ್ಲ ಎಂದು ನನ್ನನ್ನು ಜೈಲಿಗೆ ಹಾಕಿಸಿದರು. ಇದು ಎಲ್ಲರಿಗೂ ಗೊತ್ತಿದೆ. ದಾಖಲೆಗಳೂ ಇವೆಯಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಉಸಿರು ನಿಲ್ಲಿಸುತ್ತೇವೆ’ ಎಂಬ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಎಂಬ ಹೇಳಿಕೆಗೆ, ‘ಪಾಪ, ಅವರು ಬಿಜೆಪಿಯವರ ಮೇಲೆ ಹೇಳಕ್ಕಾಗಲ್ಲವಲ್ಲ? ದುಃಖ, ದುಮ್ಮಾನ, ದಾಳಿ, ಮಾನಸಿಕ ಹಿಂಸೆ, ರಾಜೀನಾಮೆ ಇವೆಲ್ಲಾ ಹೇಳಕ್ಕಾಗಲ್ಲವಲ್ಲ?‘ ಎಂದರು.

'ನಮ್ಮನ್ನು ಶಾಶ್ವತವಾಗಿ ವಿರೋಧಪಕ್ಷದಲ್ಲಿ ಕೂರಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಬಿಜೆಪಿಯಲ್ಲಿ ಏನಾಗ್ತಿದೆ ಎಂದು ಅವರ ಸಚಿವರು, ಶಾಸಕರೆಲ್ಲರಿಗೂ ಗೊತ್ತಿದೆ.ನಾನ್ಯಾಕೆ ಮಾತನಾಡಲಿ? ರಾಜ್ಯ ಸರ್ಕಾರವನ್ನು ಅವರ ಪಕ್ಷದವರೇ ಅಸ್ಥಿರಗೊಳಿಸುತ್ತಿದ್ದಾರೆ. ಆ ಪಕ್ಷದ ಕೇಂದ್ರ ಮುಖಂಡರಿಗೆ ರಾಜ್ಯದವರನ್ನು ನಿಯಂತ್ರಿಸಲಾಗುತ್ತಿಲ್ಲ‘ ಎಂದರು.

‘ಎಲ್ಲ ಪಕ್ಷದವರೂ ಕುಟುಂಬ ಸದಸ್ಯರಿಗೆ ಟಿಕೆಟ್ ಕೊಟ್ಟಿದ್ದಾರೆ. ಯುವಕರಿಗೆ ಅವಕಾಶ ಕೊಡಬೇಕು ಎಂಬ ಜಿಲ್ಲೆಯ ನಾಯಕರ ಒಮ್ಮತದಂತೆ ಚನ್ನರಾಜ ಹಟ್ಟಿಹೊಳಿ ಅವರಿಗೆ ಟಿಕೆಟ್ ಕೊಡಲಾಗಿದೆ’ ಎಂದು ಸಮರ್ಥಿಸಿಕೊಂಡರು.

'ಡಿ.14ರಂದು ಡಿಕೆಶಿ ವಿರುದ್ಧ ಓಪನ್ ವಾರ್ ಆಗಲಿ’ ಎಂಬ ರಮೇಶ ಜಾರಕಿಹೊಳಿ ಹೇಳಿಕೆಗೆ, ‘ಇಂಥದ್ದೆಲ್ಲಾ ಎಷ್ಟೋ ನೋಡಿ ದ್ದೀವಿ ಬಿಡ್ರಪ್ಪ...’ ಎಂದಷ್ಟೆ ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯ ಇತ್ತೀಚೆಗೆ ಬಹಳ ಸುಳ್ಳು ಹೇಳ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇಂದಿಗೂ ನನ್ನ ನಾಯಕ ಹಾಗೂ ಗುರು. ಇತ್ತೀಚೆಗೆ ಅವರು ಬಹಳಷ್ಟು ಸುಳ್ಳು ಹೇಳುತ್ತಿದ್ದಾರೆ’ ಎಂದು ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಟೀಕಿಸಿದರು.

ಜಿಲ್ಲೆಯ ರಾಯಬಾಗದ ಮಹಾವೀರ ಭವನದಲ್ಲಿ ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ ಪರ ಸೋಮವಾರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

‘ವಿವೇಕರಾವ್ ಪಾಟೀಲ ಅವರಿಗೂ ಕಾಂಗ್ರೆಸ್ ಪಕ್ಷಕ್ಕೂ ಸಂಬಂಧವಿಲ್ಲ’ ಎಂದು ಈಗ ಸುಳ್ಳು ಹೇಳಿದ್ದಾರೆ. ಕೊಲ್ಹಾಪುರ ಮಹಾಲಕ್ಷ್ಮಿ ದೇವಿ ಮೇಲೆ ಆಣೆ ಮಾಡಿ ಹೇಳುತ್ತೇನೆ. ವಿವೇಕರಾವ್ ಕಾಂಗ್ರೆಸ್ ಸದಸ್ಯರಾಗಿದ್ದರು. ಕಳೆದ ಚುನಾವಣೆ ವೇಳೆ ಅವರಿಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ಕೂಡುವಂತೆ ಕೇಳಿಕೊಂಡಿದ್ದೆ. ಆದರೆ ವೀರಕುಮಾರ ಪಾಟೀಲರಿಗೆ ಟಿಕೆಟ್ ನೀಡಿದ್ದ. ವಿವೇಕರಾವ್ ಅವರನ್ನು ಪಕ್ಷೇತರರಾಗಿ ನಿಲ್ಲಿಸಿ ಗೆಲ್ಲಿಸಿಕೊಂಡೆವು’ ಎಂದರು.

‘ವಿವೇಕರಾವ್ ಕಾಂಗ್ರೆಸ್ ಪರವಾಗಿ ಕೆಲಸ ಮಾಡುವಂತೆ ನೋಡಿಕೋ’ ಎಂದು ಸಿದ್ದರಾಮಯ್ಯ ನನ್ನ ಬಳಿ ಹೇಳಿದ್ದರು. ಈಗ ಅದ್ಯಾವ ಒತ್ತಡಕ್ಕೆ ಸಿಲುಕಿ ಸುಳ್ಳುಹೇಳುತ್ತಿದ್ದಾರೆಯೋ ಗೊತ್ತಿಲ್ಲ’ ಎಂದು ತಿರುಗೇಟು ನೀಡಿದರು.

ಸಿ.ಎಂ ಮೇಲೆ ವಿಶ್ವಾಸ ಇಲ್ಲದಿದ್ದರೆ ರಾಜೀನಾಮೆ ನೀಡಲಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಮುರುಗೇಶ ನಿರಾಣಿ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳಿಕೆ ನೀಡಿದ್ದ ಈಶ್ವರಪ್ಪ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ವಿಶ್ವಾಸವಿಲ್ಲದಿದ್ದರೆ ರಾಜೀನಾಮೆ ನೀಡಲಿ‘ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

ಬಾದಾಮಿಯಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ನಿರಾಣಿ ಸಿ.ಎಂ ಆಗುತ್ತಾರೆ ಎಂದು ಹೇಳಿಬಿಟ್ಟರು. ಎಲ್ಲಾ ಬೈಯ್ಯಲು ಶುರುಮಾಡಿದ ಮೇಲೆ ನಾನು ಹಂಗೆ ಹೇಳಲಿಲ್ಲ, ಮುಂದೆ ಆಗ ಬಹುದು ಅಂದರು. ಈಶ್ವರಪ್ಪನಿಗೆ ಸ್ವಾಭಿಮಾನ ಇದೆಯಾ?’ ಎಂದು ಪ್ರಶ್ನಿಸಿದರು.

‘ಎಸ್.ಆರ್.ಪಾಟೀಲಗೆ ಟಿಕೆಟ್ ನಿರಾಕರಿಸಿಲ್ಲ‘: ವಿಧಾನಪರಿಷತ್ ವಿರೋಧಪಕ್ಷದ ನಾಯಕ ಎಸ್.ಆರ್. ಪಾಟೀಲ ಅವರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿಲ್ಲ. ದ್ವಿಸದಸ್ಯ ಕ್ಷೇತ್ರದಿಂದ ಪಕ್ಷದಿಂದ ಇಬ್ಬರಿಗೆ ಟಿಕೆಟ್ ನೀಡಲು ಹೈಕಮಾಂಡ್ ನಿರ್ಧರಿಸಿತ್ತು. ಒಬ್ಬರಿಗೆ ಟಿಕೆಟ್ ನೀಡಿದರೆ ಮಾತ್ರ ಸ್ಪರ್ಧಿಸುವೆ ಎಂದು ಎಸ್.ಆರ್.ಪಾಟೀಲ ಹೇಳಿದ್ದರು. ಇಬ್ಬರಿಗೆ ಟಿಕೆಟ್ ನೀಡುವುದು ಪಕ್ಷದ ಹೈಕಮಾಂಡ್ ನಿರ್ಧಾರ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯ ಮೋಸಗಾರ’



ಹೊನ್ನಾಳಿ (ದಾವಣಗೆರೆ): ‘ಮಾಜಿ ಶಾಸಕ ಚಿಮ್ಮನಕಟ್ಟಿ ಅವರಿಗೆ ಎಂಎಲ್‌ಸಿ ಮಾಡುತ್ತೇನೆ ಎಂದು ಹೇಳಿ ಬಾದಾಮಿ ಕ್ಷೇತ್ರ ಕಸಿದುಕೊಂಡರು. ಈಗ ಅವರಿಗೆ ಎಂಎಲ್‌ಸಿ ಮಾಡದೆ ಮೋಸ ಮಾಡಿದ್ದಾರೆ’ ಎಂದು ಸಚಿವ ಕೆ.ಎಸ್.ಈಶ್ವರಪ್ಪ ಸೋಮವಾರ ಆರೋಪಿಸಿದರು.

‘ಕಾಂಗ್ರೆಸ್‌ಗೆ ಕರೆದುಕೊಂಡ ಬಂದಿದ್ದ ಎಚ್.ಎಂ.ರೇವಣ್ಣ, ಎಚ್.ವಿಶ್ವನಾಥ್ ಗತಿ ಏನಾಗಿದೆ ಎಂಬುದು ರಾಜ್ಯದ ಜನತೆಗೆ ಗೊತ್ತಾಗಿದೆ. ಹೀಗಾಗಿ ಸಿದ್ದರಾಮಯ್ಯ ಅವರನ್ನು ಯಾರೂ ನಂಬುವುದಿಲ್ಲ’ ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರ ವಿರುದ್ಧ ವಾಗ್ದಾಳಿ ಮುಂದುವರಿಸಿದ ಈಶ್ವರಪ್ಪ, ‘ಅವರ ಕಣಕಣದಲ್ಲೂ ಮೋಸ ಇದೆ. ದೇವೇಗೌಡರಿಗೆ ಮೋಸ ಮಾಡಿ ಬಂದರು. ಕಾಂಗ್ರೆಸ್ ಕಟ್ಟಿ ಬೆಳೆಸಲು ಅವರು ಬಂದಿಲ್ಲ. ಅಹಿಂದ ಬಳಸಿಕೊಂಡು ಮೋಸ ಮಾಡಲು ಬಂದಿದ್ದಾರೆ’ ಎಂದು ಟೀಕಿಸಿದರು.

ಕಾಂಗ್ರೆಸ್‌ಗೆ ಸೂಕ್ತ ಜಾಗ ತೋರಿಸಿ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಗದಗ: ‘ಜನರಿಗೆ ಕೈ ಕೊಡುವ ಕೆಲಸದಲ್ಲಿ ಕಾಂಗ್ರೆಸ್‌ನವರು ಸಿದ್ಧಹಸ್ತರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.

‘ಪ್ರಾರಂಭದಲ್ಲಿ ಬಡವರಿಗೆ 7 ಕೆ.ಜಿ. ಅಕ್ಕಿ ಕೊಡುವುದಾಗಿ ಘೋಷಿಸಿದ್ದರು. ಐದು ವರ್ಷದಲ್ಲಿ ಮೂರು ವರ್ಷ 4 ಕೆ.ಜಿ., ಅಕ್ಕಿ ಕೊಟ್ಟರು. ಚುನಾವಣೆಗೆ ಸ್ವಲ್ಪ ದಿನ ಇರುವಾಗ 7 ಕೆ.ಜಿ.ಗೆ ಹೆಚ್ಚಿಸಿದರು’ ಎಂದು ದೂರಿದರು.

‘ಕಾಂಗ್ರೆಸ್‌ನವರು ಮೊದಲು ಕೊಡ್ತಿವಿ ಅಂತಾರೆ, ನಂತರ ಕೊಡಿಸ್ತೀವಿ ಅಂತಾರೆ. ಇಂತಹ ಕಾಂಗ್ರೆಸ್‌ನವರಿಗೆ ಜನರು ಈ ಬಾರಿ ಸರಿಯಾದ ಜಾಗ ತೋರಿಸಬೇಕು’ ಎಂದು ಖಾರವಾಗಿ ಹೇಳಿದರು.

ಜಾತೀಯತೆಯ ಮನಸುಗಳಿಂದ ಅಂಬೇಡ್ಕರ್‌ಗೆ ಹುಸಿ ಗೌರವ: ವಾಗ್ದಾಳಿ

ಉತ್ತರ ಪ್ರದೇಶದಲ್ಲಿ ಸ್ಪಷ್ಟ ಬಹುಮತ: ಮಾಯಾವತಿ

ಮಾಯಾವತಿ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ 2022ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ತಮ್ಮ ಪಕ್ಷವು ಸ್ಪಷ್ಟ ಬಹುಮತ ಪಡೆಯಲಿದ್ದು, ದೃಢ ಸರ್ಕಾರವನ್ನು ರಚಿಸಲಿದೆ ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಅಧ್ಯಕ್ಷೆ ಮಾಯಾವತಿ ಸೋಮವಾರ ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಉತ್ತರಾಖಂಡದಲ್ಲಿ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ತಮ್ಮ ಪಕ್ಷ ಸ್ಪರ್ಧಿಸಲಿದ್ದು, ಪಂಜಾಬ್‌ನಲ್ಲಿ ಶಿರೋಮಣಿ ಅಕಾಲಿ ದಳದ ಮೈತ್ರಿಯೊಂದಿಗೆ ಸ್ಪರ್ಧಿಸುವುದಾಗಿ ಹೇಳಿದರು. ಉತ್ತರಾಖಂಡದಲ್ಲಿ ತಮ್ಮ ಪಕ್ಷವು ಉತ್ತಮ ಸಾಧನೆ ಮಾಡಲಿದ್ದು, ಪಂಜಾಬ್‌ನಲ್ಲಿ ಮೈತ್ರಿ ಸರ್ಕಾರ ರಚಿಸುವುದಾಗಿ ಹೇಳಿದರು.

ಅಂಬೇಡ್ಕರ್ ಅವರ 65ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಾನವತಾವಾದದ ನಡೆಯನ್ನು ವಿರೋಧಿಸುತ್ತಲೇ ಬಂದ ಸಂಕುಚಿತ ಮತ್ತು ಜಾತೀಯತೆಯ ಮನಸ್ಸುಗಳು ಈಗ ಅವರೆಡೆಗೆ ಹುಸಿ ಗೌರವ ತೋರುತ್ತಿವೆ’ ಎಂದೂ ವಾಗ್ದಾಳಿ ನಡೆಸಿದರು.

ಸಂವಿಧಾನಬದ್ಧವಾಗಿ ಕೆಲಸ ಮಾಡದ ಸರ್ಕಾರಗಳನ್ನು ಅಧಿಕಾರದಿಂದ ಕಿತ್ತೊಗೆಯಬೇಕು. ಅಂದಾಗ ಮಾತ್ರ ಸಂವಿಧಾನಬದ್ಧ ಕೆಲಸಗಳು ಶುರುವಾಗುತ್ತವೆ ಎಂದರು.

‘ಅಂಬೇಡ್ಕರ್ ಅವರ ಚಿಂತನೆಗಳನ್ನು ವಿರೋಧಿಸುವವರೇ ಅಧಿಕಾರದಲ್ಲಿದ್ದಾಗ ನಾವು ರಸ್ತೆಗಿಳಿದು ಏನು ಪ್ರಯೋಜನ’ ಎಂದು ಕೇಳಿದ ಮಾಯಾವತಿ, ‘ರಸ್ತೆಗಿಳಿದರೆ ಮಾತ್ರ ಕೆಲಸ ಆಗುವುದಿಲ್ಲ. ಅಧಿಕಾರದಲ್ಲಿರುವವರನ್ನೂ ಬದಲಿಸಬೇಕು. ಅಧಿಕಾರದ ಬದಲಾವಣೆ ಆದಲ್ಲಿ ಸಂವಿಧಾನದ ರಕ್ಷಣೆಯಾಗುತ್ತದೆ’ ಎಂದರು.

ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷವನ್ನೂ ತರಾಟೆಗೆ ತೆಗೆದುಕೊಂಡ ಮಾಯಾವತಿ, ‘ಅವರ ಅಧಿಕಾರಾವಧಿಯಲ್ಲಿ ಗೂಂಡಾಗಿರಿ ಹಾಗೂ ಮಾಫಿಯಾ ಎಲ್ಲೆ ಮೀರಿತ್ತು ಎಂಬುದನ್ನು ಜನರು ಬಲ್ಲರು’ ಎಂದು ಹೇಳಿದರು.

‘ಬಿಜೆಪಿ ಆಡಳಿತದಲ್ಲಿ ಯಂತೂ ನಿತ್ಯವೂ ದುರ್ಬಲ ವರ್ಗದವರ ಮೇಲಿನ ದೌರ್ಜನ್ಯ ನಡೆಯುತ್ತಿವೆ. ಈ ವರ್ಗದವರಿಗೆ ಅಂಬೇಡ್ಕರ್ ಅವರು ಕಾನೂನಾತ್ಮಕ ಹಕ್ಕುಗಳನ್ನು ನೀಡಿದ್ದಾರೆ. ಆದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಾತೀಯತೆಯ ಮನಸ್ಥಿತಿಯು ಅವರಿಗೆ ಆ ಹಕ್ಕುಗಳ ಪ್ರಯೋಜನ ಪಡೆಯಲು ಬಿಡುತ್ತಿಲ್ಲ’ ಎಂದು ಆರೋಪಿಸಿದರು.

‘ಅಂಬೇಡ್ಕರ್ ಅವರ ಸಮತಾವಾದ ಸಮಾಜದ ಚಿಂತನೆಯನ್ನು ಮುಂದಕ್ಕೆ ಕೊಂಡೊಯ್ಯುವುದು ಹಾಗೂ ಆತ್ಮಗೌರವಕ್ಕಾಗಿನ ಅಭಿಯಾನವು ತಮ್ಮ ಪಕ್ಷದ ಗುರಿಯಾಗಿದೆ. ಇದನ್ನು ಯಾರೂ ಲಘುವಾಗಿ ಪರಿಗಣಿಸುವಂತಿಲ್ಲ. ಈ ಯಾತ್ರೆಯು ನಿಲ್ಲುವುದೂ ಇಲ್ಲ; ಬಾಗುವುದೂ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ಪಂಜಾಬ್: ಕಾಂಗ್ರೆಸ್ ಚುನಾವಣಾ ಸಮಿತಿ ರಚನೆ

ನವದೆಹಲಿ: ಪಂಜಾಬ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷವು ಚುನಾವಣಾ ಸಮಿತಿಗಳನ್ನು ರಚಿಸಿದೆ.

ಅಂಬಿಕಾ ಸೋನಿ (ಚುನಾವಣಾ ಸಮನ್ವಯ), ಸುನಿಲ್ ಜಾಖಡ್ (ಚುನಾವಣಾ ಪ್ರಚಾರ), ಪ್ರತಾಪ್ ಬಜ್ವಾ (ಪ್ರಣಾಳಿಕೆ) ಹಾಗೂ ಅಜಯ್ ಮಾಕನ್ (ಚುನಾವಣಾ ಪರಿಶೀಲನಾ ಸಮಿತಿ) ಅವರು ಈ ಸಮಿತಿಗಳ ನೇತೃತ್ವ ವಹಿಸಲಿದ್ದಾರೆ. ಚುನಾವಣಾ ಪರಿಶೀಲನಾ ಸಮಿತಿಯಲ್ಲಿ ಚಂದನ್ ಯಾದವ್ ಮತ್ತು ಕೃಷ್ಣ ಅಲ್ಲಾವರು ಸದಸ್ಯರಾಗಿದ್ದಾರೆ. ಪಕ್ಷದ ಉಸ್ತುವಾರಿ ಹರೀಶ್ ಚೌಧರಿ, ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು, ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ, ಜಾಖಡ್ ಮತ್ತು ರಾಜ್ಯದಲ್ಲಿನ ಎಐಸಿಸಿ ಕಾರ್ಯದರ್ಶಿಗಳು ಪದನಿಮಿತ್ತ ಸದಸ್ಯರಾಗಿ ಇರಲಿದ್ದಾರೆ.

ಸೀಮಾ ನಿರ್ಣಯ ಆಯೋಗ ಪ್ರಶ್ನಿಸಿ ಪಿಐಎಲ್: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದ ವ್ಯಾಪ್ತಿಯಿಂದ ವಾಪಸ್ ಪಡೆದು, ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ ರಚಿಸಿರುವ ನಿರ್ಧಾರ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಸಂಸದೀಯ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಹಾಗೂ ರಾಜ್ಯ ಪಂಚಾಯತ್‌ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ. ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ ರಚಿಸಿರುವ ನಿರ್ಧಾರಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಪಂಚಾಯತ್‌ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಂದಿರುವ ತಿದ್ದುಪಡಿಯನ್ನೂ ಆಯೋಗವು ಪ್ರಶ್ನಿಸಿದೆ.

‘ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಕಾಯ್ದೆ-2021’ ಅನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು. ಚುನಾವಣಾ ಆಯೋಗವು ಈಗಾಗಲೇ ಪ್ರಕಟಿಸಿರುವ ಕರಡು ಮೀಸಲು ಮತ್ತು ಕ್ಷೇತ್ರ ಮರುವಿಂಗಡಣೆ ಅಧಿಸೂಚನೆ ಆಧರಿಸಿ ಚುನಾವಣಾ ಪ್ರಕ್ರಿಯೆ ಮುಂದುವರಿಸಬೇಕು. ಮೀಸಲು ಮತ್ತು ಕ್ಷೇತ್ರ ಪುನರ್ ವಿಂಗಡಣೆ ಪಟ್ಟಿ ಪ್ರಕಟಿಸಿ, ಶೀಘ್ರ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

‘ಸ್ವಕ್ಷೇತ್ರದಲ್ಲಿ ಗೆಲ್ಲುವ ಯೋಗ್ಯತೆ ಇಲ್ಲಂದ್ರ ಇಲ್ಲಿ ಯಾಕ ನಿಲ್ಲಬೇಕು?’

ಒಂದನೇ ಪುಟದಿಂದ...

‘ಮುಂದಿನ ಸಲ ಸಿದ್ದರಾಮಯ್ಯ ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆ. ಕಳೆದ ಬಾರಿ ಪುತ್ರನ ಬದಲು ಅವರಿಗೇ ಟಿಕೆಟ್ ಕೊಟ್ಟದ್ದರೆ ಗೆಲ್ಲುತ್ತಿದ್ದರು. ಪುತ್ರನಿಗಾಗಿ ವರುಣಾ ಕ್ಷೇತ್ರ ಬಿಟ್ಟರು. ಅವರು ಅಲ್ಲಿಯೇ ಸ್ಪರ್ಧಿಸಬೇಕಪ್ಪ ಅಥವಾ ಸ್ವಕ್ಷೇತ್ರ ಚಾಮುಂಡೇಶ್ವರಿ-ಯಲ್ಲಿ ಸ್ಪರ್ಧಿಸಬೇಕು. ಇಲ್ಲಿಗೆ ಬಂದರೆ ನಾನೇನು ಮಾಡಬೇಕು?’ ಎಂದು ಪ್ರಶ್ನಿಸಿದರು.

ವೇದಿಕೆಯಲ್ಲಿದ್ದ ಸಿದ್ದರಾಮಯ್ಯ ಅವರಿಗೆ ಮುಜುಗರವಾಯಿತು. ಪಕ್ಷದ ಮುಖಂಡ ಎಂ.ಜಿ.ಕಿತ್ತಲಿ ಅವರು ಚಿಮ್ಮನಕಟ್ಟಿ ಅವರನ್ನು ಸಮಾಧಾನಪ-ಡಿಸಲು ಮುಂದಾದರು. ಆಗ ಅವರು ಮತ್ತಷ್ಟು ಕೋಪಗೊಂಡರು. ಇದರಿಂದ ಸಭೆಯಲ್ಲಿ ಕೆಲ ಹೊತ್ತು ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು.

ನನ್ನ ರಕ್ಷಣೆಗೆ ಇರ್ತೀರಲ್ವ? ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬಾದಾಮಿ: ಮಾಜಿ ಶಾಸಕ ಬಿ.ಬಿ. ಚಿಮ್ಮನಕಟ್ಟಿ ಅವರು ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಕ್ಕೆ ಬಳಿಕ ಸಿದ್ದರಾಮಯ್ಯ ತಮ್ಮ ಭಾಷಣದಲ್ಲಿ ಆ ಬಗ್ಗೆ ಪರೋಕ್ಷವಾಗಿ ಕಾರ್ಯಕರ್ತರಿಗೆ ‘ನನ್ನ ರಕ್ಷಣೆಗೆ ಇರ್ತೀರಲ್ವಾ?’ ಎಂದು ಎರಡೆರಡು ಬಾರಿ ಕೇಳಿಕೊಂಡರು.

‘ಒಂದು ಕಡೆಗೆ ನನ್ನ ವಿರುದ್ಧ ಜೆಡಿಎಸ್ ಹೊಡೆತ, ಇನ್ನೊಂದು ಕಡೆ ಬಿಜೆಪಿ, ಆರ್.ಎಸ್.ಎಸ್. ಹೊಡೆತ. ಈ ಹೊಡೆತದ ರಕ್ಷಣೆಗೆ ನೀವೇ ಬರಬೇಕು. ನನ್ನ ರಕ್ಷಣೆಗೆ ಇರ್ತೀರಲ್ವ? ನನ್ನ ರಕ್ಷಣೆಗೆ ಇರ್ತೀರಲ್ವ?’ ಎಂದರು. ಅವರೆಲ್ಲ ‘ಇರ್ತೀವಿ’ ಎಂದು ಧ್ವನಿಮತದಿಂದ ಉತ್ತರಿಸಿದರು.

ಹಿಂದುಳಿದ ವರ್ಗಗಳ 2–ಎ ಪಟ್ಟಿಗೆ ಸೇರಿಸುವಂತೆ ಪಂಚಮಸಾಲಿ ಸಮುದಾಯ ಆಗ್ರಹ

24 ದಾಖಲೆ ಸಲ್ಲಿಸಿದ ನಿಯೋಗ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಚಿನ್ನಪ್ಪರೆಡ್ಡಿ, ಹಾವನೂರು ಆಯೋಗಗಳಿಂದ ಸರಿಯಾದ ಸಮೀಕ್ಷೆ ಆಗಿಲ್ಲ
- ಹಿಂದಿನ ಲೋಪ ಸರಿಪಡಿಸಲು ಒತ್ತಾಯ
- ಕೃಷಿಯೇ ಪಂಚಮಸಾಲಿ ಲಿಂಗಾಯತರ ಮೂಲ ಕಸುಬು

ಬೆಂಗಳೂರು: ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಪಟ್ಟಿಗೆ ಸೇರಿಸುವ ಬೇಡಿಕೆ ಕುರಿತು ಅಧ್ಯಯನ ನಡೆಸುತ್ತಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ ನೇತೃತ್ವದ ಸಮಿತಿ ಎದುರು ಸೋಮವಾರ ಹಾಜರಾದ ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದ ನಿಯೋಗ, ತಮ್ಮ ಬೇಡಿಕೆಗೆ ಪೂರಕವಾಗಿ 24 ದಾಖಲೆಗಳನ್ನು ಸಲ್ಲಿಸಿತು.

ಪಂಚಮಸಾಲಿ ಮಠಾಧೀಶರು ಮತ್ತು ಮುಖಂಡರ ನಿಯೋಗದ ಪರವಾಗಿ ವಾದ ಮಂಡಿಸಿದ ವಕೀಲ ಬಿ.ಎಸ್.ಪಾಟೀಲ, ‘1871 ರಲ್ಲೇ ಪಂಚಮಸಾಲಿ ಲಿಂಗಾಯತರನ್ನು ಶೂದ್ರರು ಎಂದು ಗುರುತಿಸಲಾಗಿ-ತ್ತು. 1919ರ ಮಿಲ್ಲರ್ಸ್ ಆಯೋಗದ ವರದಿಯಲ್ಲೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹೆಸರಿಸಲಾಗಿತ್ತು. ಈ ಎಲ್ಲವನ್ನೂ ಪರಿಗಣಿಸಿ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2–ಎ ಪಟ್ಟಿಗೆ ಸೇರಿಸಿ, ಮೀಸಲಾತಿ ನೀಡಬೇಕು’ ಎಂದು ಮನವಿ ಮಾಡಿದರು.

ಚಿನ್ನಪ್ಪರೆಡ್ಡಿ ಮತ್ತು ಎಲ್. ಜಿ.ಹಾವನೂರು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗಗಳು ಪಂಚಮಸಾಲಿ ಲಿಂಗಾಯತರ ಕುರಿತು ಸರಿಯಾದ ಸಮೀಕ್ಷೆ ನಡೆಸಿಲ್ಲ. ಈ ಕಾರಣದಿಂದ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಮೀಸಲಾತಿ ದೊರಕಿಲ್ಲ. ಈ ಎಲ್ಲ ಲೋಪಗಳನ್ನು ಸರಿಪಡಿಸಿ ಪಂಚ-ಮಸಾಲಿಗಳಿಗೆ 2–ಎ ಪ್ರವರ್ಗದಡಿ ಮೀಸಲಾತಿ ಕಲ್ಪಿಸಬೇಕು ಎಂದರು.

ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವ ಸಂಬಂಧ 1879 ರಿಂದಲೂ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಪ್ರಕಟವಾದ ವಿವಿಧ ತೀರ್ಪುಗಳು, ಇತ್ತೀಚಿನ ವರ್ಷಗಳಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳು ಸೇರಿದಂತೆ 24 ದಾಖಲೆಗಳನ್ನು ಸಮಿತಿಗೆ ಸಲ್ಲಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಚನಾನಂದ ಸ್ವಾಮೀಜಿ, ‘ಕೃಷಿಯೇ ಪಂಚಮಸಾಲಿ ಲಿಂಗಾಯಿತ ಸಮುದಾಯದ ಮೂಲ ಕಸುಬಾಗಿತ್ತು. ಆದರೆ ಈವರೆಗೆ ಸರಿಯಾದ ಮೀಸಲಾತಿ ದೊರಕಿಲ್ಲ. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಈ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಅಡಿಯಲ್ಲಿ ಮೀಸಲಾತಿ ನೀಡಬೇಕು ಎಂಬುದು ನಮ್ಮ ಬೇಡಿಕೆ. ಅದಕ್ಕೆ ಪೂರಕವಾದ ಮಹತ್ವದ ದಾಖಲೆಗಳನ್ನು ಸಮಿತಿಗೆ ಸಲ್ಲಿಸಿದ್ದೇವೆ’ ಎಂದರು.

ಪ್ರವರ್ಗ 2–ಎ ಅಡಿಯಲ್ಲಿ ಮೀಸಲಾತಿ ಪಡೆಯಲು ಪಂಚಮಸಾಲಿ ಲಿಂಗಾಯತ ಸಮುದಾಯ ಎಲ್ಲ ರೀತಿಯಿಂದಲೂ ಅರ್ಹವಾಗಿದೆ. ತಮ್ಮ ಬೇಡಿಕೆಯನ್ನು ಸಮಿತಿ ಪುರಸ್ಕರಿಸುವ ವಿಶ್ವಾಸವಿದೆ ಎಂದು ಹೇಳಿದರು.

ಬಬಲೇಶ್ವರದ ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಮನಗೂಳಿ ಹಿರೇಮಠದ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ, ಪಂಚಮಸಾಲಿ ಮುಖಂಡರಾದ ಬಸವರಾಜ ದಿಂಡೂರ, ಸೋಮನಗೌಡ ಪಾಟೀಲ, ಚಂದ್ರಶೇಖರ ಪೂಜಾರ, ವಸಂತಾ ಹುಲ್ಲತ್ತಿ ನಿಯೋಗದಲ್ಲಿದ್ದರು.

‘ಹಿಂದೆಯೂ ಬಂದಿರಲಿಲ್ಲ’

‘ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರು ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸುವಾಗಲೂ ಬಂದಿರಲಿಲ್ಲ. ಈಗ ಏಕೆ ಬಂದಿಲ್ಲ ಎಂಬುದು ಗೊತ್ತಿಲ್ಲ. ಇದು ಸಮುದಾಯದ ಪರವಾದ ಕೆಲಸ. ಅದಕ್ಕಾಗಿ ನಾನು ಸಮಿತಿ ಎದುರು ಹಾಜರಾಗಿದ್ದೇನೆ’ ಎಂದು ವಚನಾನಂದ ಸ್ವಾಮೀಜಿ ಪ್ರಶ್ನೆ-ಯೊಂದಕ್ಕೆ ಉತ್ತರಿಸಿದರು.

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಮೀಸಲಾತಿ ಬೇಡಿಕೆ ಕುರಿತು ಪರಾಮರ್ಶಿಸುತ್ತಿರುವ ಸಮಿತಿಯ ಅಧ್ಯಕ್ಷ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಆಡಿ ಅವರಿಗೆ ದಾಖಲೆಗಳನ್ನು ಸಲ್ಲಿಸಿದರು. ಪಂಚಮಸಾಲಿ ಸಮುದಾಯದ ಮುಖಂಡ ಚಂದ್ರಶೇಖರ ಪೂಜಾರ, ಮನಗೂಳಿ ಹಿರೇಮಠದ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ, ವಕೀಲ ಬಿ.ಎಸ್ ಪಾಟೀಲ ಮತ್ತು ಬಬಲೇಶ್ವರದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ಇದ್ದರು – ಪ್ರಜಾವಾಣಿ ಚಿತ್ರ

ಬಸವಜಯ ಮೃತ್ಯುಂಜಯ ಸ್ವಾಮೀಜಿ ಅಸಮಾಧಾನ

ವಿಜಯಪುರ: ‘ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2 ‘ಎ’ ಮೀಸಲಾತಿ ನೀಡಲು ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯಲ್ಲ’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೀಸಲಾತಿ ನೀಡುವ ಸಂಬಂಧ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆದು ಬೆಳಗಾವಿ ಅಧಿವೇಶನದ ಒಳಗಾಗಿ ವರದಿ ಪಡೆದುಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ಕುರಿತಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಶೀಘ್ರದಲ್ಲೇ ಬಾಗಲಕೋಟೆ, ಬೆಳಗಾವಿ, ವಿಜಯಪುರದಲ್ಲಿ ಹೋರಾಟ ಸಮಿತಿ ಸಭೆ ನಡೆಸಲಾಗುವುದು’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಎಂಜಿನಿಯರಿಂಗ್ ಕಾಲೇಜು: ಹೆಚ್ಚುವರಿ ಶುಲ್ಕ ಹಿಂತಿರುಗಿಸಲು ಆದೇಶ

ಬೆಂಗಳೂರು: ‘ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಇಬ್ಬರು ಮೆರಿಟ್ ವಿದ್ಯಾರ್ಥಿಗಳಿಂದ ಪಡೆದ ಹೆಚ್ಚುವರಿ ಶುಲ್ಕ ಹಿಂದಿರುಗಿಸುವ ಕುರಿತು ಮನವಿಯನ್ನು ಪರಿಗಣಿಸಿ ಅದನ್ನು ಶೀಘ್ರ ಕ್ರಮ ಕೈಗೊಳ್ಳಿ’ ಎಂದು ಶುಲ್ಕ ನಿಯಂತ್ರಣ ಸಮಿತಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಮಹಮದ್ ನೌಫಾಲ್ ಹಾಗೂ ಮೊಹಮದ್ ರಫೀಕ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಲೇವಾರಿ ಮಾಡಿದೆ.

ಅರ್ಜಿದಾರರ ಪರ ವಕೀಲ ಕೆ.ಅಭಿಷೇಕ್, ‘ಅರ್ಜಿದಾರರು ಮೆರಿಟ್ ಆಧಾರದಲ್ಲಿ ಎಂಜಿನಿಯರಿಂಗ್ ಸೀಟು ಪಡೆದು ಸೀಟು ಮೂಲಕ ಪ್ರವೇಶ ಪಡೆದಿದ್ದಾರೆ. ಆದರೆ, ಕಾಲೇಜು ಆಡಳಿತ ಮಂಡಳಿಯು ಅವರಿಂದ ಹೆಚ್ಚುವರಿ ಶುಲ್ಕ ಸಂಗ್ರಹಿಸಿದೆ. ಇದು ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳು (ಪ್ರವೇಶ ಮತ್ತು ಶುಲ್ಕನಿಗದಿ ನಿಯಂತ್ರಣ) ಕಾಯ್ದೆ–2006ರ ಕಲಂ 4 ಹಾಗೂ ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ ಮತ್ತು ಸರ್ಕಾರದ ನಡುವಿನ ಸಮ್ಮತದ ಒಪ್ಪಂದಕ್ಕೆ ವಿರುದ್ಧವಾಗಿದೆ. ಈ ಕುರಿತಂತೆ ಶುಲ್ಕ ನಿಯಂತ್ರಣ ಸಮಿತಿ ಕೂಡಲೇ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು’ ಎಂದು ಕೋರಿದರು.

ಲಿಂಗ ದೀಕ್ಷೆ ಸ್ವೀಕರಿಸಿದ ಅಮೆರಿಕ ಪ್ರಜೆ

ಬೆಂಗಳೂರು:‘ದಕ್ಷಿಣ ಅಮೆರಿಕದ ಬಸವ ಕೇಂದ್ರದಲ್ಲಿ ಬಸವಣ್ಣ ತತ್ವ ಮತ್ತು ಅವರು ಪಾಲಿಸಿದ ಧರ್ಮದ ಬಗ್ಗೆ ತಿಳಿದುಕೊಂಡೆ. ಅದರಿಂದ ಪ್ರೇರಣೆಗೊಂಡು ಬಸವ ಧರ್ಮ ಸ್ವೀಕರಿಸಿದ್ದೇನೆ’ ಎಂದು ಸ್ಕೈಸೆಂಡ್ ಕಂಪನಿಯ ಅಧ್ಯಕ್ಷ ಸ್ಟೀವ್ ರೋಚ್ ತಿಳಿಸಿದರು.

ಬಸವಧರ್ಮ ಪೀಠಾಧ್ಯಕ್ಷೆ ಗಂಗಾದೇವಿ ಮಾತೆ ಅವರು ರಾಜಾಜಿನಗರದ ಬಸವ ಮಂಟಪದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಅಮೆರಿಕದ ಪ್ರಜೆ ಸ್ಟೀವ್‌ಗೆ ಲಿಂಗ ದೀಕ್ಷೆ ನೀಡಿ, ಬಸವ ಧರ್ಮ ಬೋಧಿಸಿದರು. ಸ್ಕೈಸೆಂಡ್ ಕಂಪನಿಯ ಸಂಸ್ಥಾಪಕ ಛಾಯಾಪತಿ ಅವರೂ ದೀಕ್ಷೆ ಪಡೆದರು.

ಗಂಗಾದೇವಿ ಮಾತೆ ಅವರು ಲಿಂಗ ಪೂಜೆಯಲ್ಲಿ ಬಳಸುವ ನೀರು, ವಿಭೂತಿ, ರುದ್ರಾಕ್ಷಿ, ಗಂಧ, ಅಕ್ಷತೆ, ಬಿಲ್ವಪತ್ರೆ, ಹೂ, ದೂಪ, ನೈವೇದ್ಯ, ಅರ್ಘ್ಯ, ಘಂಟಾನಾದ ಮತ್ತು ನಮಸ್ಕಾರಗಳ ಮಹತ್ವ ಹಾಗೂ ಲಿಂಗ ಆರಾಧನೆಯ ಕ್ರಮದ ಬಗ್ಗೆ ಸ್ಟೀವ್‌ಗೆ ತಿಳಿಸಿದರು.

ಗಂಗಾದೇವಿ ಮಾತೆ ಮಾತನಾಡಿ, ‘ಬಸವಣ್ಣ 12ನೇ ಶತಮಾನದಲ್ಲೇ ಸ್ತ್ರೀಯರಿಗೆ ಸ್ವಾತಂತ್ರ್ಯ ನೀಡಿದವರು. ಸಮಾಜದಲ್ಲಿದ್ದ ಧಾರ್ಮಿಕ ಸಂಘರ್ಷ-ಗಳನ್ನು ಕಂಡು ಹೊಸ ಧರ್ಮಾಚರಣೆಯನ್ನು ಜಗತ್ತಿಗೆ ಬೋಧಿಸಿದವರು’ ಎಂದು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	5,111	4,367
ಹಾರಂಗಿ	2,859	2,855.93	96	1,050
ಕಬಿನಿ	2284.00	2,283.69	1,550	700
ಹೇಮಾವತಿ	2,922	2,913.93	2,501	2,450
ಲಿಂಗನಮಕ್ಕಿ	1,819	1,811.80	2,387	6,893.06
ಸೂಪಾ (ಮೀ)	564	554.53	634	4,494
ಮಾಣಿ	594.36	586.38	488	00
ತುಂಗಭದ್ರಾ	1,633	1,632.99	9,590	9,410
ಮಲಪ್ರಭಾ	2079.5	2,077.30	2,120	569
ಘಟಪ್ರಭಾ	2175	2,166.16	497	347
ಭದ್ರಾ	186	185.11	1,207	1,207
ಆಲಮಟ್ಟಿ (ಮೀ)	519.6	519.11	11,876	580
ನಾರಾಯಣಪುರ (ಮೀ)	492.25	492.24	1,460	1,888

* ನೆಲಮಟ್ಟದಿಂದ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ಗಿರಿಜನರ ಮೀನುಗಾರರ ಸಹಕಾರ ಸಂಘ (ನಿ)
ಅಂತರಸಂತೆ / ಕಬಿನಿ, ಹೆಚ್. ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ
ರಿ.ನಂ.ಎ.ಆರ್.ಹೆಚ್/9960/85–86

ಮೀನು ಮಾರಾಟ ಟೆಂಡರ್ ಪ್ರಕಟಣೆ

ಈ ಮೇಲ್ಕಂಡ ಸಂಘದಿಂದ ಅಭಿವೃದ್ಧಿ ಪಡಿಸಲಾಗಿರುವ ಕಬಿನಿ ಜಲಾಶಯದಲ್ಲಿ ದಿನಾಂಕ 01–01–2022 ರಿಂದ 30–06–2024ರ ವರೆಗೆ ಹಿಡುವಳಿ ಆಗುವ ವಿವಿಧ ವರ್ಗದ ಮೀನು ಮಾರಾಟಕ್ಕೆ ಬಹಿರಂಗ ಟೆಂಡರ್ ಕರೆಯಲಾಗಿದ್ದು, ಆಸಕ್ತರು ಮೀನು ಖರೀದಿಯ ದರಗಳನ್ನು ನಮೂದಿಸಿ ಸಹಿ ಮಾಡಿದ ಲಕೋಟೆಯಲ್ಲಿ 27–12–2021 ರ ಮಧ್ಯಾಹ್ನ 2.00 ಗಂಟೆಯ ಒಳಗೆ ಟೆಂಡರ್ ಸಲ್ಲಿಸಬಹುದಾಗಿದೆ. ನಿಗದಿತ ಟೆಂಡರ್ ಫಾರಂ ಹಾಗೂ ಮೀನುಗಳ ವರ್ಗ, ಪಾವತಿಸಬೇಕಾದ ಭದ್ರತಾ ಠೇವಣಿಯ ಮೊತ್ತ ಮೊದಲಾದ ಎಲ್ಲಾ ವಿವರಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಸಹಿ/–
ಮುಖ್ಯ ಕಾರ್ಯನಿರ್ವಾಹಕರು

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು–560 001. ದೂರವಾಣಿ ಸಂಖ್ಯೆ: +91–80–29619801
ಮಿಂಚ್ ಅಂಚೆ: latha.mdksmscl@gmail.com
No: HFW/KSMSCL/TND/Anti-Hemophilia/56/2021-22 Dated: 06.12.2021

ಟೆಂಡರ್ ಪ್ರಕಟಣೆ

ಉಲ್ಲೇಖ: 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/Anti-Hemophilia 56/2021-22 Dated: 06.12.2021 (IND-884).

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ. ನಿಯಮಾನುಸಾರ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. 2021–22ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಜ್ಯ ರಕ್ತಕೋಶ ಕಾರ್ಯಕ್ರಮದಡಿಯಲ್ಲಿ Anti-Himophilia Factors ಔಷಧಿಗಳನ್ನು ಖರೀದಿಸಿ ಪೂರೈಸಲು ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ.

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://eproc.karnataka.gov.inನಲ್ಲಿ ದಿನಾಂಕ: 06.12.2021 ರಿಂದ ಔಷಧಿ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡ–ಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯ ಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.
DIPR/DDU/AAPL/RO2271/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ಇ–ಮೇಲ್: dir-mines@karnataka.gov.in
ಸಂ: ಡಿಎಂಜಿ–17012/4/2021/2021–22 ದಿನಾಂಕ: 06.12.2021
ಸಿ.ನಂ: 558698

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
“ಸುಣ್ಣದ ಕಲ್ಲಿನ ಗಣಿಗಾರಿಕೆಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ”

Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ)ಯ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 and Mineral (Auction) Amendment Rules, 2015 ಮತ್ತು ಆದರಡಿ ಆದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಬ್ಲಾಕ್‌ಗಳನ್ನು 2ನೇ ಪ್ರಯತ್ನದ ಮೂಲಕ ಸುಣ್ಣದ ಕಲ್ಲಿನ ಗಣಿ ಗುತ್ತಿಗೆಯನ್ನು ನೀಡಲು ಎಲೆಕ್ಟ್ರಾನಿಕ್ ಹರಾಜಿಗೆ ಒಳಪಡಿಸಿದೆ.

ಕ್ರ.ಸಂ.	ಬ್ಲಾಕ್ ಹೆಸರು	ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜಿಸಲಾದ ಖನಿಜ ಸಂಪನ್ಮೂಲ (ಎಂಎಂಟಿ)
1	ಬೊಮ್ಮನಹಳ್ಳಿ ಸುಣ್ಣದ ಕಲ್ಲಿನ ಬ್ಲಾಕ್	500	463.925
2	ಚಿತ್ತಾಪುರ ದಕ್ಷಿಣ ಸುಣ್ಣದ ಕಲ್ಲಿನ ಬ್ಲಾಕ್	360	317.20

The Mineral (Auction) Rules, 2015ರ ನಿಯಮ 9(11) (ಬಿ) ರಡಿಯಲ್ಲಿ 2ನೇ ಪ್ರಯತ್ನದ ಮೂಲಕ ಹರಾಜಿಗೆ ಒಳಪಡಿಸಲು ಅವಕಾಶವಿರುತ್ತದೆ. ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ. ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತ (https://www.mstcecommerce.com/auctionhome/mlcl/index.jsp) ದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು. ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/ auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ ರೂ.5,00,000/– (ಐದು ಲಕ್ಷ ರೂಪಾಯಿಗಳು ಮಾತ್ರ) + ಜಿಎಸ್‌ಟಿ ಪಾವತಿಸುವ ಮೂಲಕ ಗಣಿ ಸೂಚಿತ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು. ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 07.12.2021 ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್ ನಲ್ಲಿ ಲಭ್ಯವಿದ್ದು ದಿನಾಂಕ: 28.12.2021 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್ ಸೈಟ್‌ನಲ್ಲಿ ದಿನಾಂಕ: 03.01.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: 03.01.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು
DIPR/DDU/Zen/R.O:2272/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು

ಲಿಂಗಾಯತರ ಮತಾಂತರ ವಿಷಾದನೀಯ

ಪ್ರಜಾವಾಣಿ ವಾರ್ತೆ

ಜಾತಿ ವ್ಯವಸ್ಥೆಯಿಂದ ಮತಾಂತರ ಹೆಚ್ಚಾಗಿದೆ. ಮುರುಘಾ ಶರಣರು ಮಠಾಧೀಶರನ್ನು ಒಗ್ಗೂಡಿಸಿ ಮತಾಂತರ ತಡೆಗೆ ಮುಂದಾಗಿದ್ದಾರೆ. ಇದರ ಅಗತ್ಯವಿದೆ
ಮಹಂತ ಸ್ವಾಮೀಜಿ, ದೆಹಲಿ

ಮತಾಂತರ ಎಂಬುದು ದೇಶದ ದೊಡ್ಡ ಪಿಡುಗು. ಸಮಾಜದಲ್ಲಿ ಇದು ಗೋಪ್ಯವಾಗಿ ನಡೆಯುತ್ತಿದೆ. ಫಾದರ್ ಮತ್ತು ಫಾಸ್ಟರ್‌ಗಳು ಈ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ.
ರುದ್ರಮುನಿ ಸ್ವಾಮೀಜಿ, ತಿಪಟೂರು

ಶೋಷಣೆ, ಬಡತನದಿಂದ ಮತಾಂತರ ನಡೆಯುತ್ತಿದೆ. ಮತಾಂತರ ಆಗಿರುವವರನ್ನು ಮತ್ತೆ ಸ್ವಜಾತಿಗೆ ಕರೆತರಲು ಪ್ರಯತ್ನಿಸೋಣ
ಪುರುಷೋತ್ತಮಾನಂದಪುರಿ ಸ್ವಾಮೀಜಿ
ಭಗೀರಥ ಗುರುಪೀಠ

ಚಿತ್ರದುರ್ಗ: ರಾಜ್ಯದ ಹಲವೆಡೆ ಲಿಂಗಾಯತರು ಕೂಡ ಮತಾಂತರ ಹೊಂದುತ್ತಿದ್ದಾರೆ. ಇದು ವಿಷಾದನೀಯ ಸಂಗತಿ ಎಂದು ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಬೇಸರ ವ್ಯಕ್ತಪಡಿಸಿದರು.

ಇಲ್ಲಿನ ಮುರುಘಾ ಮಠದಲ್ಲಿ ಸೋಮವಾರ ನಡೆದ ಪರಿವರ್ತನಪರ ಧರ್ಮಸಂಸತ್ ಸಭೆಯಲ್ಲಿ ‘ಅಸ್ಪೃಶ್ಯತಾ ನಿವಾರಣೆ ಹಾಗೂ ಮತಾಂತರ ತಡೆ’ ವಿಷಯ ಕುರಿತು ಅವರು ಮಾತನಾಡಿದರು.

‘ಎಲ್ಲ ಜಾತಿಗಳಲ್ಲಿ ಧಾರ್ಮಿಕ ಜಾಗೃತಿ ಮೂಡಿದೆ. ರಾಜಕೀಯ, ಧಾರ್ಮಿಕ ಶಕ್ತಿ ಬಂದಿದೆ. ಮತಾಂತರ ತಡೆ ಹಾಗೂ ಅಸ್ಪೃಶ್ಯತೆ ನಿವಾರಣೆಗೆ ಮಠಾಧೀಶರು ಕೆಲಸ ಮಾಡಬೇಕಿದೆ. ಮುರುಘಾ ಮಠದಿಂದ ದೀಕ್ಷೆ ಪಡೆದ ಸ್ವಾಮೀಜಿಗಳು ಜವಾಬ್ದಾರಿ ಅರಿತು ಕೆಲಸ ಮಾಡುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಸಾಮರಸ್ಯ ಮೂಡಿದೆ’ ಎಂದರು.

ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ‘ಜಾಗತಿಕ ಮಟ್ಟದಲ್ಲಿ ಇಸ್ಲಾಂ ಹಾಗೂ ಕ್ರಿಶ್ಚಿಯನ್ ಧರ್ಮಗಳು ದೊಡ್ಡದಾಗಿ ಬೆಳೆಯಲು ಮತಾಂತರಕ್ಕೆ ಮುಂದಾಗುತ್ತಿವೆ. ಹೊಸದುರ್ಗ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಅವರ ತಾಯಿ ಮತಾಂತರ ಆದ ಕಾರಣವನ್ನು ಪತ್ತೆ ಮಾಡಬೇಕಿದೆ. ಎಲ್ಲ ಜಾತಿ ಜನರಿಗೂ ಆಮಿಷ ತೋರಿಸಿ ಮತಾಂತರ ಮಾಡುವ ಪ್ರಕ್ರಿಯೆಯು ನಡೆಯುತ್ತಿದೆ’ ಎಂದು ಹೇಳಿದರು.

‘ಭಾರತದ ಧರ್ಮ ಉಳಿಸುವ ಅಗತ್ಯವಿದೆ. ನಾವೆಲ್ಲರು ಸೇರಿ ಒಗ್ಗಟ್ಟಾಗಿ ಸಾಗಿದರೆ ಮತಾಂತರ ತಡೆಗಟ್ಟಬ-ಹುದು. ಮತಾಂತರ ತಡೆ ಬಗ್ಗೆ ರಾಷ್ಟ್ರ ಮಟ್ಟಕ್ಕೆ ಸಂದೇಶ ನೀಡಬೇಕಿದೆ’ ಎಂದು ಹೇಳಿದರು.

ಬೆಂಗಳೂರಿನ ಕೊಳದಮಠದ ಶಾಂತವೀರ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿ, ಹೊಸದುರ್ಗದ ಕುಂಚಿಟಿಗ ಮಹಾಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ, ವೇಮನಾನಂದ ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ, ಬಸವ ಭೃಂಗೇಶ್ವರ ಸ್ವಾಮೀಜಿ, ಬಸವ ಹರಳಯ್ಯ ಸ್ವಾಮೀಜಿ ಇದ್ದರು.

ಬಿಜೆಪಿ ವಕ್ತಾರ ಅನ್ವರ್ ಮಾಣಿಪ್ಪಾಡಿ ಆರೋಪ– ಪ್ರಧಾನಿ ನಿರ್ಲಕ್ಷ್ಯಕ್ಕೆ ಆಕ್ಷೇಪ

ರಾಜ್ಯ ಸರ್ಕಾರದಿಂದ ಮುಸ್ಲಿಮರಿಗೆ ಅನ್ಯಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ ರಾಜ್ಯ ಸರ್ಕಾರ ಮುಸ್ಲಿಮರಿಗೆ ಅನ್ಯಾಯ ಮಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ‘ಸಬ್ ಕಾ ಸಾತ್ ಸಬ್ ಕಾ ವಿಕಾಸ್’ ಎಂಬ ಮಾತಿಗೆ ವಿರುದ್ಧವಾಗಿ ಮುಸ್ಲಿಮರಿಗೆ ಅವಕಾಶ ನಿರಾಕರಿಸುತ್ತಿ-ದೆ’ ಎಂದು ಬಿಜೆಪಿ ವಕ್ತಾರ, ಫಜ್ರ್ ಕ್ಲಬ್ ಆಫ್ ಇಂಡಿಯಾ ಸಂಚಾಲಕ ಅನ್ವರ್ ಮಾಣಿಪ್ಪಾಡಿ ಆರೋಪಿಸಿದರು.

ಅನ್ವರ್ ಮಾಣಿಪ್ಪಾಡಿ

ಸೋಮವಾರ ಪತ್ರಿಕಾಗೋಷ್ಠಿಯ-ಲ್ಲಿ ಮಾತನಾಡಿದ ಅವರು, ‘ರಾಜಕೀಯ ಪ್ರಾತಿನಿಧ್ಯ, ಸವಲತ್ತುಗಳನ್ನು ನೀಡುವುದು, ಸ್ಮಶಾನಕ್ಕೆ ಜಮೀನು ಒದಗಿಸುವುದು ಸೇರಿದಂತೆ ಹಲವು ವಿಷಯಗಳಲ್ಲಿ ಸರ್ಕಾರವೇ ನಮ್ಮ ಸಮುದಾಯವನ್ನು ವಂಚಿಸುತ್ತಿದೆ. ಈ ಕುರಿತು ಪ್ರಧಾನಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಸಂಘ ಪರಿವಾರದ ಮುಖಂಡರಿಗೆ ದೂರು ನೀಡಿದ್ದೇನೆ. ಯಾವುದೇ ಕ್ರಮವೂ ಆಗಿಲ್ಲ’ ಎಂದರು.

ರಾಜ್ಯದಲ್ಲಿ ₹ 2 ಲಕ್ಷ ಕೋಟಿ ಮೌಲ್ಯದ ವಕ್ಫ್ ಆಸ್ತಿಗಳ ಕಬಳಿಕೆ ಕುರಿತು ತಾವು ಸಲ್ಲಿಸಿದ್ದ ವರದಿ ಆಧಾರದಲ್ಲಿ ಯಾವುದೇ ಕ್ರಮ ಜರುಗಿಸಿಲ್ಲ. ಅಲ್ಪ-ಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತ ದೂರಿನ ಬಗ್ಗೆಯೂ ತನಿಖೆ ನಡೆಸಿಲ್ಲ. ಈ ಕುರಿತ ದೂರು, ಪತ್ರಗಳಿಗೆ ರಾಜ್ಯ ಸರ್ಕಾರ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ದೂರಿದರು.

‘ಆರೋಪವಿದ್ದರೂ ಮಣೆ’

‘ರಾಜ್ಯ ವಕ್ಫ್ ಮಂಡಳಿಯ ನೂತನ ಅಧ್ಯಕ್ಷ ಶಾಫಿ ಸಅದಿ ವಿರುದ್ಧ ವಂಚನೆಯ ಆರೋಪವಿದೆ. ಹೈಕೋರ್ಟ್ ಮತ್ತು ಲೋಕಾಯುಕ್ತದಲ್ಲಿ ದೂರುಗಳಿವೆ. ಆದರೆ, ಕೆಲವು ಸಚಿವರು ಮತ್ತು ಬಿಜೆಪಿ ಮುಖಂಡರು ಶಾಫಿ ರಕ್ಷಣೆಗೆ ನಿಂತಿದ್ದಾರೆ’ ಎಂದು ಅನ್ವರ್ ಮಾಣಿಪ್ಪಾಡಿ ದೂರಿದರು.

‘ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ, ಅಡ್ವೊಕೇಟ್ ಜನರಲ್ ಎಲ್ಲರೂ ಈ ನೇಮಕ ಬೆಂಬಲಿಸಿದ್ದಾರೆ. ಆದರೆ, ಶಾಫಿ ಸಅದಿ ತನಗೂ ಬಿಜೆಪಿಗೂ ಸಂಬಂಧವಿಲ್ಲ ಎನ್ನುತ್ತಿದ್ದಾರೆ’ ಎಂದರು.

ಸ್ಮಶಾನಕ್ಕೂ ಅಡ್ಡಿ: ಮುಸ್ಲಿಮರಿಗೆ ಪ್ರತ್ಯೇಕ ಸ್ಮಶಾನ ಜಮೀನು ಪಡೆಯಲು ಅಡ್ಡಿಪಡಿಸಲಾಗುತ್ತಿದೆ. ನ್ಯಾಯಾಲಯದ ಆದೇಶದಂತೆ ಬೆಂಗಳೂರಿನ ದೊಡ್ಡ ನಾಗಮಂಗಲದಲ್ಲಿ 2005 ರಲ್ಲಿ 2 ಎಕರೆ ಜಮೀನನ್ನು ಸ್ಮಶಾನಕ್ಕಾಗಿ ಮಂಜೂರು ಮಾಡಲಾಗಿತ್ತು. ಆದರೆ, ಈವರೆಗೂ ಅದನ್ನು ಸ್ವಾಧೀನಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಕೋವಿಡ್‌ನಿಂದ ಮೃತಪಟ್ಟ ಮುಸ್ಲಿಮರ ಶವ ಸಂಸ್ಕಾರಕ್ಕೆ ₹ 50,000 ವ್ಯಯಿಸಬೇಕಾದ ದುಃಸ್ಥಿತಿ ಇದೆ ಎಂದು ಮಾಣಿಪ್ಪಾಡಿ ಹೇಳಿದರು.

ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಗೂನಡ್ಕದಲ್ಲಿ ಮಸೀದಿಯ ಬಳಿ ಸ್ಮಶಾನಕ್ಕಾಗಿ ಮಂಜೂರಾದ 20 ಸೆಂಟ್ಸ್ ಜಮೀನನ್ನು ಅರಣ್ಯದ ಹೆಸರಿನಲ್ಲಿ ಕಿತ್ತುಕೊಳ್ಳುವ ಯತ್ನ ನಡೆಯುತ್ತಿದೆ. ಬೆಂಗಳೂರಿನ ಸಂಜೀವಿನಿ ನಗರದಲ್ಲಿ ಬಿಬಿಎಂಪಿಯಿಂದ ಮಂಜೂರಾತಿ ಪಡೆದು ನಿರ್ಮಿಸಿದ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಲು ಅಡ್ಡಿಪಡಿಸಲಾ-ಯಿತು. ಪೊಲೀಸರೇ ಮಸೀದಿ ಮೇಲೆ ದಾಳಿ ಮಾಡಿದರು. ಯಾವ ಪ್ರಕರಣದ-ಲ್ಲೂ ಸಮುದಾಯಕ್ಕೆ ನ್ಯಾಯ ದೊರಕಿಲ್ಲ ಎಂದು ದೂರಿದರು.

‘ನಾನು ಈಗಲೂ ಬಿಜೆಪಿ ವಕ್ತಾರ. ಪಕ್ಷದ ಒಳಗಿದ್ದುಕೊಂಡೇ ಅನ್ಯಾಯದ ವಿರುದ್ಧ ಹೋರಾಟ ಮಾಡುತ್ತೇನೆ. ನಮ್ಮ ಹಕ್ಕುಗಳಿಗಾಗಿ ಬೀದಿಗಿಳಿದು ಹೋರಾಟ ನಡೆಸುತ್ತೇವೆ’ ಎಂದರು.

ಮೊಟ್ಟೆ ವಿತರಣೆ ಆದೇಶ ವಾಪಸ್‌ಗೆ ಮನವಿ

ಭಾಲ್ಕಿ (ಬೀದರ್ ಜಿಲ್ಲೆ): ಶಾಲಾ ಮಕ್ಕಳಿಗೆ ಮೊಟ್ಟೆ ನೀಡುವ ಆದೇಶ ಹಿಂಪಡೆಯಲು ಕೋರಿ ಕಲ್ಯಾಣ ಕರ್ನಾಟಕದ 50ಕ್ಕೂ ಹೆಚ್ಚು ಮಠಾಧೀಶರ ಸಹಿಯುಳ್ಳ ಮನವಿಪತ್ರವನ್ನು ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್‌ನ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು ಇಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಿದರು.

‘ಮಕ್ಕಳಲ್ಲಿ ಪೌಷ್ಟಿಕಾಂಶ ಹೆಚ್ಚಿಸುವ ಸರ್ಕಾರದ ಚಿಂತನೆ ಒಳ್ಳೆಯ ಬೆಳವಣಿಗೆ. ಆದರೆ, ಬಿಸಿಯೂಟ ಆಹಾರದ ಜತೆಗೆ ಮೊಟ್ಟೆ ಕೊಡುತ್ತಿರುವುದು ಸರಿಯಲ್ಲ. ಶಾಲೆ ಎಲ್ಲ ವರ್ಗದ ಮಕ್ಕಳಿಗೂ ವಿದ್ಯೆ ಕೊಡುವ ಸ್ಥಳ. ಹೀಗಾಗಿ ಎಲ್ಲ ಮಕ್ಕಳಿಗೆ ಸರಿ ಹೊಂದುವ ಸತ್ವಯುಕ್ತ ಸಸ್ಯಾಹಾರ ಕೊಡಬೇಕು’ ಎಂದೂ ಒತ್ತಾಯಿಸಿದರು.

‘ಸಂಪ್ರದಾಯಸ್ಥ ಕುಟುಂಬದ ಮಕ್ಕಳು ಸಹಜವಾಗಿಯೇ ಧಾರ್ಮಿಕ ನಂಬಿಕೆಗೆ ವಿರುದ್ಧವಾಗಿ ಮೊಟ್ಟೆ ತಿನ್ನಬಹುದು. ಇದರಿಂದ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಉಂಟಾಗುತ್ತದೆ. ಸರ್ಕಾರ ರಾಜಧರ್ಮ ಪಾಲಿಸಬೇಕು’ ಎಂದರು.

‘ಆದೇಶ ಪತ್ರ’ಕ್ಕೆ ಬೇಕಿದೆ ಸಚಿವರ ಒಪ್ಪಿಗೆ!

ಒಂದನೇ ಪುಟದಿಂದ...

ಇಲಾಖೆಯ ಪ್ರಧಾನ ಕಾರ್ಯದರ್ಶಿ, ನಿರ್ದೇಶಕರ ಬಳಿಯೂ ಅಂಗಲಾಚುತ್ತಿ-ದ್ದಾರೆ. ಈ ಮಧ್ಯೆ, ಆಯ್ಕೆಯಾದ ಅಭ್ಯ-ರ್ಥಿಯೊಬ್ಬರು (ಸುನೀಲ ಕಾಮಗೌಡ) ಆದೇಶ ಪತ್ರದ ನಿರೀಕ್ಷೆಯಲ್ಲಿರುವಾಗಲೇ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

‘ಆಯ್ಕೆಯಾದವರಲ್ಲಿ ಬಹುತೇಕರು ರೈತ ಸಮುದಾಯ, ಮಧ್ಯಮ ವರ್ಗಕ್ಕೆ ಸೇರಿದವರು. ಶೈಕ್ಷಣಿಕ ಸಾಲ ಪಡೆದವರು. ಆದೇಶ ಪತ್ರದ ನಿರೀಕ್ಷೆಯಲ್ಲಿ ಬೇರೊಂದು ಕೆಲಸಕ್ಕೆ ಹೋಗಿಲ್ಲ. ಅಲ್ಲದೆ, ಮೂಲ ಪದವಿ ಪ್ರಮಾಣಪತ್ರಗಳನ್ನು ಪರಿಶೀಲನೆಗಾಗಿ 2021ರ ಆಗಸ್ಟ್ 9 ರಂದೇ ಇಲಾಖೆ ಪಡೆದುಕೊಂಡಿದ್ದು, ವಾಪಸು ಕೊಟ್ಟಿಲ್ಲ. ಹೀಗಾಗಿ, ಸ್ನಾತಕೋತ್ತರ ಪದವಿ, ಪಿಎಚ್.ಡಿ ವ್ಯಾಸಂಗಕ್ಕೆ ಸೇರಿಕೊಳ್ಳಲು ಸಾಧ್ಯವಾಗದೆ ಅತಂತ್ರ ಸ್ಥಿತಿಯಲ್ಲಿದ್ದೇ-ವೆ’ ಎಂದು ಅಭ್ಯರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

ಸಹಾಯಕ ತೋಟಗಾರಿಕೆ ಅಧಿಕಾರಿ (ಗ್ರೂಪ್ ‘ಬಿ’) ಹುದ್ದೆಗಳಿಗೆ ಕೆಪಿಎಸ್‌ಸಿ 2018ರ ಡಿ. 6ರಂದು ಅಧಿಸೂಚನೆ ಹೊರಡಿಸಿತ್ತು. ಒಂದು ವರ್ಷದ ಬಳಿಕ (2019 ಡಿ. 16, 17) ಪರೀಕ್ಷೆ ನಡೆಸಿ, ಒಂದು ವರ್ಷದ ಬಳಿಕ (2020ರ ಡಿಸೆಂಬರ್) ತಾತ್ಕಾಲಿಕ ಪಟ್ಟಿ, 2021ರ ಜ. 19ರಂದು ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿತ್ತು. ಈ ಹುದ್ದೆಗಳ ಜೊತೆಗೆ ಅಧಿಸೂಚನೆ ಹೊರಡಿಸಿರುವ ಸಹಾಯಕ ತೋಟಗಾರಿಕೆ ನಿರ್ದೇಶಕರು, ವೈದ್ಯಕೀಯ ಸೇವಾ ಇಲಾಖೆಯಲ್ಲಿನ ವಿಮಾ ವೈದ್ಯಾಧಿಕಾ-ರಿಗಳು, ಎಫ್‌ಡಿಎ, ಎಸ್‌ಡಿಎ, ಕೃಷಿ ಮಾರುಕಟ್ಟೆ ಅಧಿಕಾರಿಗಳು, ಶಿಕ್ಷಣ ಇಲಾಖೆ, ಕೃಷಿ ಇಲಾಖೆ, ಅರಣ್ಯ ಇಲಾಖೆ, ಪಶು ವೈದ್ಯಕೀಯ ಇಲಾಖೆಯ ಹಲವು ಹುದ್ದೆಗಳಿಗೆ ಆಯ್ಕೆಯಾದವ-ರಿಗೆ ಈಗಾಗಲೇ ನೇಮಕಾತಿ ಆದೇಶ ನೀಡಲಾಗಿದೆ.

ನಿಯಮ ಉಲ್ಲಂಘನೆ

ಆಯ್ಕೆಗೊಂಡ ಅಭ್ಯರ್ಥಿಗಳ ಪೊಲೀಸ್ ವರದಿ, ವೈದ್ಯಕೀಯ ಪರೀಕ್ಷಾ ವರದಿ, ಮೀಸಲಾತಿ ಸಿಂಧುತ್ವದ ವರದಿಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ಒಂದು ತಿಂಗಳ ಒಳಗೆ ನೇಮಕಾತಿ ಪ್ರಾಧಿಕಾರಗಳು ಪಡೆದುಕೊಳ್ಳಬೇಕು. ಸಿಂಧುತ್ವ ಪ್ರಮಾಣಪತ್ರ ಪಡೆಯಲು ವಿಳಂಬವಾದರೆ, ಸಿಂಧುತ್ವ ಪ್ರಮಾಣಪತ್ರ ಅನ್ವಯಿಸದ ಅಭ್ಯರ್ಥಿಗಳಿಗೆ ಮತ್ತು ಸಿಂಧುತ್ವದ ಪ್ರಮಾಣಪತ್ರ ಸ್ವೀಕೃತವಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕು. ಕರ್ನಾಟಕ ಸಿವಿಲ್ ಸೇವಾ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ (ಸಾಮಾನ್ಯ) ನಿಯಮಗಳ 2006 ರ ಅನ್ವಯ ಆಯ್ಕೆ ಪಟ್ಟಿ ಒಂದು ವರ್ಷ ಮಾತ್ರ ಜಾರಿಯ-ಲ್ಲಿರುತ್ತದೆ. ಆದ್ದರಿಂದ, ಆಯ್ಕೆ ಪಟ್ಟಿ ಪ್ರಕಟಗೊಂಡ ಒಂದು ವರ್ಷದ ಒಳಗೆ ನೇಮಕಾತಿ ಆದೇಶ ನೀಡಬೇಕು ಎಂದು 2018 ಫೆ. 15 ರಂದೇ ಸರ್ಕಾರ ಸುತ್ತೋಲೆ ಹೊರಡಿಸಿದೆ.

ನಿಧನ ವಾರ್ತೆ

ಮಾಜಿ ಶಾಸಕ ಕೆ.ರಾಮ ಭಟ್

ಪುತ್ತೂರು: ಅವಿಭಜಿತ ಜಿಲ್ಲೆಯ ‘ಬಿಜೆಪಿಯ ಭೀಷ್ಮ’ ಎಂದೇ ಕರೆಯಲಾಗುತ್ತಿದ್ದ, ಪುತ್ತೂರಿನ ಮಾಜಿ ಶಾಸಕ ಉರಿಮಜಲು ಕೆ.ರಾಮ ಭಟ್ (92) ವಯೋಸಹಜ ಅನಾರೋಗ್ಯದಿಂದಾಗಿ ಸೋಮವಾರ ಸಂಜೆ ಇಲ್ಲಿನ ಕೊಂಬೆಟ್ಟಿನ ತಮ್ಮ ಮನೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಮಂಗಳವಾರ ಬೆಳಿಗ್ಗೆ ಪುತ್ತೂರಿನ ಹಿಂದೂ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಪುತ್ತೂರು ವಿಧಾನಸಭಾ ಕ್ಷೇತ್ರದಿಂದ 7 ಬಾರಿ ಸ್ಪರ್ಧಿಸಿದ್ದ ಅವರು, 1977, 1983ರಲ್ಲಿ ಗೆಲುವು ಸಾಧಿಸಿದ್ದರು. 1957ರಲ್ಲಿ ಮೊದಲ ಬಾರಿಗೆ ಜನಸಂಘದ ಅಭ್ಯರ್ಥಿಯಾಗಿ, 1985ರಲ್ಲಿ ಕೊನೆಯ ಬಾರಿಗೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಜನಸಂಘ, ಬಳಿಕ ಬಿಜೆಪಿಯ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.



ಪ್ರೌಢ ಶಿಕ್ಷಣ ಹಂತದಲ್ಲಿಯೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇ-ವಕರಾಗಿದ್ದವರು. ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅಡ್ವಾಣಿ ಸೇರಿ ರಾಷ್ಟ್ರಮಟ್ಟದ ನಾಯಕರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿಯವರೇ ರಾಮಭಟ್ ಅವರಿಗೆ ಕರೆ ಮಾಡಿ ಆರೋಗ್ಯ ವಿಚಾರಿಸಿದ್ದರು.

1,300 ಎಕರೆ ಟೀ ತೋಟ ವಶಕ್ಕೆ ಆದೇಶ

ಒಂದನೇ ಪುಟದಿಂದ...

ಟಾಟಾ ಕಂಪನಿಗೆ ನೋಟಿಸ್ ಸಹ ನೀಡಲಾಗಿತ್ತು. ಆದರೆ, ಟಾಟಾ ಹಾಗೂ ಗ್ಲೆನ್ ಲೋನಾರ್ ಪ್ಲಾಂಟೇಷನ್ ಸಂಸ್ಥೆಯು ಈ ಪ್ರಕ್ರಿಯೆ ವಿರುದ್ಧ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಹೈಕೋರ್ಟ್ ಪ್ರಕರಣ-ವನ್ನು ವಿರಾಜಪೇಟೆಯ ನ್ಯಾಯಾಲಯಕ್ಕೆ ವರ್ಗಾಯಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಎಂ.ಜಿ.ಲೋಕೇಶ್, ಸಂಸ್ಥೆಯ ಅರ್ಜಿಯನ್ನು ವಜಾಗೊಳಿ-ಸಿದ್ದಾರೆ. ಸರ್ಕಾರದ ವಶಕ್ಕೆ ಜಮೀನು ಪಡೆಯುವಂತೆ ಆದೇಶಿಸಿದ್ದು, ಪ್ರಕ್ರಿಯೆ ಆರಂಭಿಸಲು ಜಿಲ್ಲಾಧಿಕಾರಿ, ತಹಶೀಲ್ದಾರ್‌ಗೆ ಸೂಚಿಸಿದ್ದಾರೆ. ಸರ್ಕಾರದ ಪರ ಕಂಜಿತಂಡ ಅನಿತಾ ದೇವಯ್ಯ ವಾದ ಮಂಡಿಸಿದ್ದರು.

‘ನ್ಯಾಯಾಲಯದ ಆದೇಶದ ಪ್ರತಿ ದೊರೆತ ಕೂಡಲೇ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ತಹಶೀಲ್ದಾರ್ ಯೋಗಾನಂದ ಪ್ರತಿಕ್ರಿ-ಯಿಸಿದ್ದಾರೆ.

ಮನಸ್ಸಿಗೂ ಆರೋಗ್ಯ ಬೇಕು

ಡಾ. ವಿನಯ ಶ್ರೀನಿವಾಸ್

ವಿಶ್ವ ಆರೋಗ್ಯ ಸಂಸ್ಥೆಯು ಆರೋಗ್ಯವನ್ನು 'ಅದು ವ್ಯಕ್ತಿಯು ದೈಹಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಇರುವ ಸುಸ್ಥಿತಿ, ಕೇವಲ ಕಾಯಿಲೆ ಅಥವಾ ಊನವಿಲ್ಲದ ಸ್ಥಿತಿ ಅಲ್ಲ' ಎಂದು ವ್ಯಾಖ್ಯಾನಿಸಿದೆ.

ಆರೋಗ್ಯವಂತರಾಗಿರಲು ನಾವು ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕಾಗಿದೆ. ಸತ್ವಯುತ ಆಹಾರ ಮತ್ತು ನಿಯಮಿತ ವ್ಯಾಯಾಮದಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಇಂದಿನ ಒತ್ತಡದ ದಿನಗಳಲ್ಲಿ ಮನಸ್ಸಿನ ಆರೋಗ್ಯಕ್ಕಾಗೆಂದೇ ಒಂದಿಷ್ಟು ಪ್ರತ್ಯೇಕ ಕಾಳಜಿಯನ್ನೂ ಮಾಡಬೇಕಿದೆ. ಏಕೆಂದರೆ ಮನಸ್ಸಿಗೂ ಮತ್ತು ದೇಹಕ್ಕೂ ಅವಿನಾಭಾವ ಸಂಬಂಧ. ಮನಸ್ಸಿನ ಕಾಯಿಲೆಗಳು ದೈಹಿಕ ಆರೋಗ್ಯದ ಮೇಲೆಯೂ, ದೇಹದ ಕಾಯಿಲೆಗಳು ಮನಸ್ಸಿನ ಆರೋಗ್ಯದ ಮೇಲೆಯೂ ಪ್ರಭಾವ ಬೀರುತ್ತವೆ.

ದೈನಂದಿನ ಬದುಕಿನಲ್ಲಿ ಮನಸ್ಸು ಭಾವನೆಗಳ ವೈಪರೀತ್ಯಕ್ಕೆ ಒಳಗಾಗುವುದು ಸಹಜ. ನಿತ್ಯಜೀವನದಲ್ಲಿ ಮನಸ್ಸಿಗೆ ದುಗುಡ, ಬೇಸರ, ಆತಂಕ, ಒತ್ತಡ, ಕಿರಿಕಿರಿ, ಗೊಂದಲ ಮೊದಲಾದ ಭಾವನೆಗಳು ಸಾಮಾನ್ಯ. ಇಂತಹ ಏರಿಳಿತಗಳನ್ನು ನಿಭಾಯಿಸಿ ಮನಸ್ಸನ್ನು ಪ್ರಶಾಂತವಾಗಿರಿಸಿಕೊಳ್ಳುವುದು ಒಂದು ಕೌಶಲ. ಸದಾ ಚಟುವಟಿಕೆಯಿಂದಿರುವುದು ಮತ್ತು ಒಂದಿಷ್ಟು ಸೃಜನಾತ್ಮಕ ಕ್ರಿಯೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವುದು ಮನಸ್ಸನ್ನು ಸ್ಥಿರವಾಗಿಡಲು ಸಹಕಾರಿಯಾಗಬಲ್ಲದು ಎನ್ನುತ್ತವೆ ಅಧ್ಯಯನಗಳು.

> ಸದಾ ಚಟುವಟಿಕೆಯಿಂದಿರುವುದು ಮತ್ತು ಒಂದಿಷ್ಟು ಸೃಜನಾತ್ಮಕ ಕ್ರಿಯೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವುದು ಮನಸ್ಸನ್ನು ಆರೋಗ್ಯವಾಗಿಡಲು ಸಹಕಾರಿಯಾಗಬಲ್ಲದು.

ವೃತ್ತಿಜೀವನದ ಜೊತೆಯಲ್ಲಿ ನಮ್ಮ ಆಸಕ್ತಿಯ ಹವ್ಯಾಸಗಳನ್ನು ಪೋಷಿಸಿಕೊಂಡು ಮುಂದೆ ಸಾಗುವುದು ಈ ನಿಟ್ಟಿನಲ್ಲಿ ಬಹಳವೇ ಮುಖ್ಯ. ಸಂಗೀತ, ಓದು-ಬರಹ, ಚಿತ್ರಕಲೆ, ನೃತ್ಯ, ವಾದ್ಯಗಳನ್ನು ನುಡಿಸುವಿಕೆ, ಹೂದೋಟದ ಆರೈಕೆ ಮೊದಲಾದ ಚಟುವಟಿಕೆಗಳು ಮೆದುಳಿನ ಕ್ಷಮತೆಯನ್ನು ಹೆಚ್ಚಿಸಬಲ್ಲವು. ಸಂಗೀತ, ನೃತ್ಯ ಮೊದಲಾದ ಲಲಿತಕಲೆಗಳಲ್ಲಿ ನಮ್ಮನ್ನು ತೊಡಗಿಸಿಕೊಂಡಾಗ ಮೆದುಳಿನ ರಕ್ತಪೂರೈಕೆ ಕೂಡ ಉತ್ತಮಗೊಳ್ಳುತ್ತದೆ. ಮುಖ್ಯವಾಗಿ ಮೆದುಳಿನ ಅಲೆಗಳನ್ನು ನಿಧಾನಗೊಳಿಸುವ ಈ ಕ್ರಿಯೆಗಳು ವ್ಯಕ್ತಿಯ ಏಕಾಗ್ರತೆಯನ್ನು ಹೆಚ್ಚಿಸುವುದರ ಮೂಲಕ ಆತನ ಕಾರ್ಯಕ್ಷಮತೆಯನ್ನು ಸುಧಾರಿಸಬಲ್ಲವು. ಈ ಸೃಜನಾತ್ಮಕ ಚಟುವಟಿಕೆಗಳು ಒತ್ತಡ ನಿರ್ವಹಣೆಗೂ ನೆರವಾಗಬಲ್ಲವು. ವ್ಯಕ್ತಿಯಲ್ಲಿ ಸಕಾರಾತ್ಮಕ ಭಾವನೆಗಳನ್ನು ತುಂಬಿ ಆತನ ಆತ್ಮವಿಶ್ವಾಸವನ್ನು ಹೆಚ್ಚಿಸುವಂತಹ ಶಕ್ತಿ ಕೂಡ ಕಲೆಗೆ ಇದೆ. ಅಷ್ಟೇ ಅಲ್ಲದೆ ಈ ರೀತಿಯ ಸೃಜನಶೀಲ ಕ್ರಿಯೆಗಳಲ್ಲಿ ತೊಡಗಿಕೊಂಡಾಗ ಮೆದುಳು ಕೆಲವು ಮುಖ್ಯ ನರವಾಹಕಗಳನ್ನು ಉತ್ಪತ್ತಿ ಮಾಡುತ್ತದೆ. ಡೋಪಮಿನ್, ಸೆರೊಟೋನಿನ್, ಆಕ್ಸಿಟೋಸಿನ್ ಮತ್ತು ಎಂಡೋರ್ಫಿನ್ ಎಂಬುವು ಮುಖ್ಯವಾದುವು. ಈ ರಾಸಾಯನಿಕಗಳನ್ನು ಮನಸ್ಸಿಗೆ ಖುಷಿ ಮತ್ತು ಸಂತೃಪ್ತಿಯನ್ನು ಕೊಡುವ ರಾಸಾಯನಿಕಗಳು. ಈ ನರವಾಹಕಗಳು ಮೆದುಳಿನಲ್ಲಿ ಸ್ರವಿಸಿದಾಗ ಮನಸ್ಸು ಪ್ರಫುಲ್ಲವಾಗುತ್ತದೆ. ದುಗುಡ, ಬೇಸರ, ಒತ್ತಡವು ಕಳೆದು ಆಹ್ಲಾದಕರ ಅನುಭವವನ್ನು ಪಡೆಯುತ್ತದೆ.

ದೈನಂದಿನ ಜೀವನದ ನಮ್ಮ ಅನೇಕ ಚಟುವಟಿಕೆಗಳು ಮೆದುಳಿನಲ್ಲಿ ಇಂತಹ ರಾಸಾಯನಿಕಗಳು ಉತ್ಪತ್ತಿಯಾಗಲು ಕಾರಣವಾಗಬಹುದು.

ನಮ್ಮ ಒಡನಾಟದಲ್ಲಿರುವವರ ಕೆಲಸಗಳನ್ನು ಮತ್ತು ಸಣ್ಣ ಪುಟ್ಟ ಸಾಧನೆಗಳನ್ನೂ ಮನಸಾರೆ ಪ್ರಶಂಸಿಸಿದಾಗ, ನಮ್ಮ ಪ್ರೀತಿಪಾತ್ರರ ಕೈಗಳನ್ನು ಸ್ಪರ್ಶಿಸಿದಾಗ ಅಥವಾ ಆತ್ಮೀಯರನ್ನು ಆಲಿಂಗಿಸಿಕೊಂಡಾಗ, ಮಗುವಿನ ಲಾಲನೆಯಲ್ಲಿ ಸಮಯವನ್ನು ಕಳೆದಾಗ ಹಾಗೂ ಮುದ್ದು ಪ್ರಾಣಿಗಳ ಆರೈಕೆ ಮಾಡುವುದರಲ್ಲಿ ತನ್ಮಯರಾದಾಗ ಮೆದುಳಿನಲ್ಲಿ ಆಕ್ಸಿಟೋಸಿನ್ ಎಂಬ ರಸದೂತದ ಸ್ರವಿಕೆ ಶುರುವಾಗುತ್ತದೆ. ಪ್ರೀತಿಯ ಅಂತಃಸ್ರವ ಎಂದೇ ಕರೆಯಲ್ಪಡುವ ಈ ರಾಸಾಯನಿಕವು ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ನಾವು ಮಾಡಬೇಕೆಂದುಕೊಂಡ ಕೆಲಸಗಳನ್ನು ಸರಿಯಾದ ಕಾಲಾವಧಿಯಲ್ಲಿಯೇ ಪೂರೈಸುವುದು ಕೂಡ ಡೋಪಮಿನ್ ಎಂಬ ನರವಾಹಕದ ಸ್ರವಿಕೆಗೆ ಕಾರಣವಾಗಬಲ್ಲದು. ಅಷ್ಟೇ ಅಲ್ಲ, ನಮ್ಮಿಷ್ಟದ ಕೆಲಸಗಳಿಗಾಗಿ ಒಂದಿಷ್ಟು ಸಮಯವನ್ನು ತೆಗೆದಿಡುವುದು, ನಮ್ಮ ವೈಯಕ್ತಿಕ ಆರೈಕೆಯತ್ತಲೂ ಗಮನವಹಿಸುವುದು, ಬದುಕಿನ ಸಣ್ಣ ಪುಟ್ಟ ಖುಷಿಗಳನ್ನೂ ಪ್ರೀತಿಪಾತ್ರರೊಡನೆ ಹಂಚಿಕೊಂಡು ಸಂಭ್ರಮಿಸುವುದೂ ಈ ರಾಸಾಯನಿಕದ ಸ್ರವಿಕೆಗೆ ಕಾರಣವಾಗುತ್ತದೆ.

ನಾವು ಸಂಕಲ್ಪ ಮಾಡಿದ ವಿಚಾರಗಳನ್ನು ಕಾರ್ಯಗತಗೊಳಿಸಲು ವಿಫಲವಾದಾಗ ಮನಸ್ಸು ಕುಗ್ಗುವುದೂ ಈ ರಾಸಾಯನಿಕವು ಇಳಿಮುಖವಾಗುವುದರಿಂದಲೇ. ಮನಸ್ಸನ್ನು ಸಮಸ್ಥಿತಿಯಲ್ಲಿಡುವ ಮತ್ತೊಂದು ನರವಾಹಕ ಸೆರಟೊನಿನ್. ಮನಸ್ಸಿನ ಭಾವನೆಗಳ ಸಮತೋಲನ ಸಾಧಿಸುವಲ್ಲಿ ಇದು ಪ್ರಮುಖ ಪಾತ್ರವಹಿಸುತ್ತದೆ. ದೈಹಿಕ ಚಟುವಟಿಕೆಗಳಾದ ಓಟ, ನಡಿಗೆ, ಯೋಗ, ಈಜು, ಸೈಕಲ್ ಸವಾರಿ ಮೊದಲಾದುವು ಸೆರಟೊನಿನ್ ಉತ್ಪಾದನೆಗೆ ಪ್ರಚೋದಿಸುತ್ತವೆ. ಧ್ಯಾನವೂ ಈ ದಿಸೆಯಲ್ಲಿಯೇ ನೆರವಾಗುವುದು. ಪ್ರಕೃತಿಯ ಮಡಿಲಲ್ಲಿದ್ದಾಗ ಹಾಗೂ ಗಿಡಮರಗಳ ಆರೈಕೆಯಲ್ಲಿ ತಲ್ಲೀನರಾದಾಗ ಮನಸ್ಸು ಆಹ್ಲಾದಗೊಳ್ಳುವುದೂ ಈ ಕಾರಣದಿಂದಾಗಿಯೇ. ನಾವು ಮನಸ್ಸು ಬಿಚ್ಚಿ ನಕ್ಕಾಗ, ತಮಾಷೆಯ ಸಂಗತಿಗಳನ್ನು ವೀಕ್ಷಿಸಿದಾಗ ನಮ್ಮ ಮನಸ್ಸು ಚೇತೋಹಾರಿಯಾಗಿರುತ್ತದೆ. ನಮ್ಮ ಬಾಲ್ಯದ ಸ್ನೇಹಿತರನ್ನು ಅಥವಾ ಆತ್ಮೀಯರಾದ ಬಂಧು-ಬಾಂಧವರನ್ನು ಭೇಟಿಯಾದಾಗ ಮನಸ್ಸು ಪುಟಿದೆದ್ದು ಕುಣಿಯುತ್ತದೆ. ಒಂದಿಷ್ಟು ಸಮಯ ನಿತ್ಯದ ಒತ್ತಡ, ಜಂಜಾಟ ಎಲ್ಲವೂ ಮರೆತೇ ಹೋದಂತಾಗುತ್ತದೆ. ಇವೆಲ್ಲವೂ ಎಂಡಾರ್ಫಿನ್ ಎಂಬ ರಾಸಾಯನಿಕದ ಪರಿಣಾಮ. ನಮ್ಮ ದೈಹಿಕ ಹಾಗೂ ಮಾನಸಿಕ ನೋವುಗಳನ್ನು ಕಡಿಮೆ ಮಾಡುವ ಇದನ್ನು ನೋವು ನಿವಾರಕ ಎಂದೇ ಕರೆಯಲಾಗುತ್ತದೆ. ಇಂತಹ ಸೂಕ್ಷ್ಮ ಸಂಗತಿಗಳನ್ನು ನಮ್ಮ ನಿತ್ಯದ ದಿನಚರಿಯಲ್ಲಿ ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಂಡಾಗ ಮನಸ್ಸು ಕೂಡ ಆರೋಗ್ಯವಾಗಿರಬಲ್ಲದು. ❖

ಹವಾಮಾನಕ್ಕೆ ಮಂಕಾಗದಿರಿ

ಡಾ. ಶಿವಾನಂದ ಬಿ. ಹಿರೇಮಠ

ಬೇಸಿಗೆ ಕಳೆದು ಮಳೆಗಾಲ ಶುರುವಾದರೆ ಏನೋ ಕೊಂಚ ನಿರಾಳ. ಬಿರುಬಿಸಿಲಿನಲ್ಲಿ ನಲುಗಿ, ಸೆಕೆಯಿಂದ ಬಳಲಿರುವ ದೇಹ-ಮನಸ್ಸುಗಳು ಮಳೆಗಾಲದ ತಂಪಾದ ವಾತಾವರಣಕ್ಕೆ ಖುಷಿಪಡುತ್ತವೆ. ಇನ್ನು ಚಳಿಗಾಲ ಶುರುವಾದರೆ ಸಾಕು, ಮುಂಜಾವಿನ ಮಂಜು ಮುಸುಕಿದ ವಾತಾವರಣ, ಚುಮು ಚುಮು ಚಳಿ, ಬೆಚ್ಚಗೆ ಹೊದ್ದು ಮಲಗಬೇಕೆಂಬ ಬಯಕೆ, ಒಂದು ಲೋಟ ಕಾಫಿ... ಆಹಾ! ಚಳಿಗಾಲದ ವರ್ಣನೆಯೇ ಬೇರೆ. ಬಹುಶಃ ಇದೇ ಕಾರಣಕ್ಕೋ ಏನೋ ಕವಿಗಳು ಮಳೆಗಾಲ ಹಾಗೂ ಚಳಿಗಾಲಕ್ಕೆ ತಮ್ಮ ಸಾಹಿತ್ಯದಲ್ಲಿ ನೀಡಿದಷ್ಟು ಪ್ರಾಧಾನ್ಯವನ್ನು ಬೇಸಿಗೆಗೆ ನೀಡಿಲ್ಲ!

ಮಳೆಗಾಲದ ಆರಂಭದಲ್ಲಿ ಮಳೆ, ಮೋಡ, ತಂಪು ನೀಡುತ್ತಿದ್ದ ಮುದ, ಅದೇ ಮಳೆಯು ಸತತವಾಗಿ ಧಾರಾಕಾರವಾಗಿ ಸುರಿಯತೊಡಗಿದರೆ ಏಕತಾನತೆಯು ಮನಸ್ಸನ್ನು ಆವರಿಸಿಕೊಳ್ಳತೊಡಗುತ್ತದೆ. ಉತ್ಸಾಹ, ಉಲ್ಲಾಸಗಳು ಕಡಿಮೆಯಾಗಿ, ನಿರಾಸಕ್ತಿ ಹೆಚ್ಚತೊಡಗುತ್ತದೆ. ಮಳೆಯ ಕಾರಣ ಸಾಮಾಜಿಕ ಕಾರ್ಯಕ್ರಮಗಳೂ ಕಡಿಮೆ, ಹೊರ ಓಡಾಟವೂ ಕಡಿಮೆ. ಒಟ್ಟಿನಲ್ಲಿ ಮಂಕು ಕವಿದಿರುತ್ತದೆ. ಯಾವಾಗ ಸೂರ್ಯನ ದರ್ಶನವಾದೀತೋ ಎಂದು ಹಪಾಹಪಿಸುತ್ತೇವೆ.

ಇದು ನಮ್ಮೆಲ್ಲರ ಸಾಮಾನ್ಯ ಅನುಭವ. ಹಾಗಾದರೆ ನಮ್ಮ ಮನಃಸ್ಥಿತಿಗೂ ಹೊರ ವಾತಾವರಣಕ್ಕೂ ಸಂಬಂಧವಿದೆಯೇ? ಇದ್ದರೆ ಅದಕ್ಕೆ ಕಾರಣಗಳೇನು? ಮಂಕಾದ ವಾತಾವರಣವು ನಮ್ಮ ಮೇಲೆ ಪ್ರಭಾವ ಬೀರದಂತೆ ಮಾಡಲು ಏನು ಮಾಡಬಹುದು?

ಅನಾದಿ ಕಾಲದಿಂದಲೂ ಮನುಷ್ಯ ತನ್ನಲ್ಲಾಗುವ ಬದಲಾವಣೆಗಳಿಗೂ ಹಾಗೂ ನಿಸರ್ಗಕ್ಕೂ ಸಂಬಂಧ ಹುಡುಕುತ್ತ ಬಂದಿದ್ದಾನೆ. ಉದಾಹರಣೆಗೆ, ನಮ್ಮ ಮನಸ್ಸು ಪ್ರಫುಲ್ಲವಾಗಿದ್ದರೆ, ಉತ್ಸಾಹದಿಂದ ಕೂಡಿದ್ದರೆ ನಮ್ಮ ಮನಸ್ಸಿಗೆ ಬರುವುದು ಪ್ರಖರವಾದ ಬಣ್ಣಗಳು, ಬೆಳಕು, ಸೂರ್ಯ, ಹಗಲು, ಆಕಾಶ ಇತ್ಯಾದಿ. ಅದೇ ನಮ್ಮ ಮನಃಸ್ಥಿತಿ ಕೆಟ್ಟಿದ್ದು, ಬೇಜಾರಲ್ಲಿದ್ದರೆ ನೆನಪಿಗೆ ಬರುವುದು, ಮಂಕಾದ ವಾತಾವರಣ, ಮೋಡ, ಕತ್ತಲು, ಮಳೆ ಇತ್ಯಾದಿ (ಕೆಲವೊಂದು ಅಪವಾದಗಳೂ ಇರಬಹುದು). ಇದು ನಮ್ಮ ಐತಿಹಾಸಿಕ, ಸಾಹಿತ್ಯಿಕ ನಂಬಿಕೆ ಇರಬಹುದು. ಇಲ್ಲವೇ ಹವಾಮಾನ ಪಕ್ಷಪಾತವೂ (weather bias) ಇರಬಹುದು.

> ಚಳಿ, ಮೋಡ, ಕತ್ತಲೆ ಕವಿದ ವಾತಾವರಣವಿದ್ದು, ದೀರ್ಘಕಾಲದವರೆಗೆ ಸೂರ್ಯನ ದರ್ಶನವೇ ಇಲ್ಲದಿದ್ದಾಗ ನಮ್ಮ ಮನಃಸ್ಥಿತಿಯಲ್ಲಿ ಏರುಪೇರಾಗುತ್ತಿರುತ್ತದೆ.

ಇತ್ತೀಚಿನ ದಿನಗಳಲ್ಲಿ, ಹವಾಮಾನ ವೈಪರೀತ್ಯದಿಂದಾಗಿ ಪದೇ ಪದೇ ವಾರಗಟ್ಟಲೇ ಮೋಡ ಕವಿದ ವಾತಾವರಣ ಹಾಗೂ ಮಳೆ ಸುರಿಯುತ್ತಿದೆ. ಇದರಿಂದ, ವಾರಗಟ್ಟಲೇ ಚಳಿ, ಮೋಡ, ಕತ್ತಲೆ ಕವಿದ ವಾತಾವರಣವಿದ್ದು ದೀರ್ಘಕಾಲದವರೆಗೆ ಸೂರ್ಯನ ದರ್ಶನವೇ ಇರುವುದಿಲ್ಲ. ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ ನಮ್ಮ ಮನಃಸ್ಥಿತಿಯಲ್ಲಿ ಏರುಪೇರಾಗುತ್ತಿರುತ್ತದೆ. ಸಮಾಜದ ಚೈತನ್ಯವಾಹಿನಿಯಾದ ಯುವಜನತೆ ಇಂತಹ ವಾತಾವರಣದಿಂದ ಪ್ರಭಾವಕ್ಕೊಳಗಾಗುತ್ತಾರೆ. ಅವರಲ್ಲಿ ಈ ಕೆಲವೊಂದು ಚಿಹ್ನೆಗಳು ಕಾಣಿಸಬಹುದು: ಬೇಜಾರು, ನಿರಾಸಕ್ತಿ, ನಿರುತ್ಸಾಹ, ಕಿರಿಕಿರಿ, ಹತಾಶೆ, ಸುಸ್ತು, ನಿದ್ರಾಹೀನತೆ; ಇಲ್ಲವೇ ಅತಿಯಾದ ನಿದ್ದೆ, ಹಸಿವಾಗದೇ ಇರುವುದು, ಕುಂದಿದ ಆತ್ಮವಿಶ್ವಾಸ, ಉತ್ಪಾದಕತೆ ಕಡಿಮೆಯಾಗುವುದು.

ಈ ಚಿಹ್ನೆಗಳು ದೀರ್ಘಕಾಲದವರೆಗೆ ಉಳಿದುಕೊಂಡರೆ, ಖಿನ್ನತೆಯೂ ಉಂಟಾಗಬಹುದು.

ಅತಿ ಚಳಿಯ ಪ್ರದೇಶಗಳಲ್ಲಿ (ಸೈಬಿರಿಯಾ, ಆರ್ಕಟಿಕ್ ಸರ್ಕಲ್, ಅಲಾಸ್ಕ, ಅಂಟಾರ್ಟಿಕ) ವಾಸಿಸುವ ಜನರಲ್ಲಿ 'ಚಳಿಗಾಲದ ಖಿನ್ನತೆ' (seasonal affective disorder) ಎಂಬ ಮನೋರೋಗ ಕಾಣಿಸುತ್ತದೆ. ಚಳಿಗಾಲದಲ್ಲಿ ಇಂತಹ ಪ್ರದೇಶಗಳಲ್ಲಿ ಸೂರ್ಯನ ಬೆಳಕೇ ಇರುವುದಿಲ್ಲ. ಕತ್ತಲೆಯಲ್ಲಿಯೇ ದೈನಂದಿನ ಬದುಕು ಸಾಗುತ್ತದೆ. ಈ ಚಳಿಗಾಲದ ಖಿನ್ನತೆಯು ಮಹಿಳೆ ಹಾಗೂ ಯುವಜನರಲ್ಲಿ ಹೆಚ್ಚಾಗಿ ಕಾಣಿಸುತ್ತದೆ. ನಮ್ಮ ದೇಶದಲ್ಲಿ ತಾಪಮಾನದಲ್ಲಿ ವೈಪರೀತ್ಯ ದೀರ್ಘಕಾಲ ಕಂಡುಬರುವುದಿಲ್ಲವಾದ್ದರಿಂದ ಈ ಕಾಯಿಲೆ ಸಾಮಾನ್ಯವಾಗಿ ಕಂಡುಬರುವುದಿಲ್ಲ.

ಹವಾಮಾನದಿಂದಾಗಿ ಮನಃಸ್ಥಿತಿಯಲ್ಲಾಗುವ ಬದಲಾವಣೆಗೆ ಕಾರಣಗಳೇನು?

ಸೂರ್ಯನ ಬೆಳಕು ಕಡಿಮೆ ಪ್ರಮಾಣದಲ್ಲಿ ಲಭ್ಯವಿರುವುದರಿಂದ, ನಮ್ಮ ದೇಹದ ಜೈವಿಕ ಗಡಿಯಾರದಲ್ಲಿ ಏರುಪೇರಾಗುತ್ತದೆ. ಇದರಿಂದ ನಮ್ಮ ನಿದ್ದೆಯ ಗುಣಮಟ್ಟ ಹಾಗೂ ಅವಧಿಯಲ್ಲಿ ವ್ಯತ್ಯಯವಾಗಿ, ಮನಸ್ಸಿನ ಮೇಲೆ ಪರಿಣಾಮ ಉಂಟಾಗುತ್ತದೆ.

ಮನುಷ್ಯ ದೇಹದ ಸಹಜ ಕ್ರಿಯೆಗಳು ಸರಿಯಾಗಿ ನಡೆಯಲು ಜೀವಸತ್ವ–ಡಿ ಸಹಾಯ ಮಾಡುತ್ತದೆ. ಇದರ ಕೊರತೆಯುಂಟಾದರೆ ಎಲುಬು, ಮೆದುಳು, ನರಮಂಡಲಗಳ ಮನಸ್ಸಿನ ಮೇಲೆ ದುಷ್ಪರಿಣಾಮವುಂಟು ಮಾಡುತ್ತದೆ. ಸೂರ್ಯನ ಬೆಳಕು ಜೀವಸತ್ವ–ಡಿಯ ನೈಸರ್ಗಿಕ ಮೂಲ. ಸೂರ್ಯನ ಬೆಳಕಿನ ಕೊರತೆಯಾದರೆ ಜೀವಸತ್ವ–ಡಿಯ ಕೊರತೆಯುಂಟಾಗುತ್ತದೆ. ಮೆದುಳಿನಲ್ಲಿ ನರವಾಹಕ ಸೆರೊಟೊನಿನ್‌ನ ಕೊರತೆಯುಂಟಾಗುತ್ತದೆ. ಸಾಮಾನ್ಯವಾಗಿ ಸೆರೊಟೊನಿನ್ ಖುಷಿಯ ಭಾವನೆಗಳಿಗೆ ಕಾರಣವಾಗಿದೆ. ಸೂರ್ಯನ ಬೆಳಕಿನ ಕೊರತೆ ಹಾಗೂ ವಿಟಮಿನ್–ಡಿ ಕೊರತೆಯಿಂದಾಗಿ ಸೆರೊಟೊನಿನ್ ಕೊರತೆ ಉಂಟಾಗುತ್ತದೆ.

ಮೆಲಾಟೊನಿನ್ ಎಂಬ ಹಾರ್ಮೋನು ದೇಹದಲ್ಲಿ ಸ್ವಾಭಾವಿಕವಾಗಿ ಕತ್ತಲಿನಲ್ಲಿ ಶ್ರವಿಸುತ್ತದೆ ಹಾಗೂ ನಮ್ಮ ರಾತ್ರಿ ನಿದ್ದೆಯನ್ನು ನಿಯಂತ್ರಿಸುತ್ತದೆ. ಸೂರ್ಯನ ಬೆಳಕಿನ ಅಭಾವವಿದ್ದಲ್ಲಿ, ಮೆಲಾಟೊನಿನ್ ಹೆಚ್ಚಿಗೆ ಶ್ರವಿಸಿ ನಿದ್ದೆ ಮಂಪರು ಹೆಚ್ಚುತ್ತದೆ.

ಹವಾಮಾನ ವೈಪರೀತ್ಯ ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರದಿರಲು ಏನು ಮಾಡಬಹುದು?

- ದೈನಂದಿನ ದಿನಚರಿ ಕಟ್ಟುನಿಟ್ಟಾಗಿರಲಿ.
- ಪ್ರತಿನಿತ್ಯ ಏಳುವ ಹಾಗೂ ಮಲಗುವ ಸಮಯ ನಿಗದಿತವಾಗಿರಲಿ. ಹಗಲು ಮಲಗುವುದು ನಿಲ್ಲಿಸಿ.
- ನಿಯಮಿತ ದೈಹಿಕ ವ್ಯಾಯಾಮ, ಪರಿಶ್ರಮ, ವಾಕಿಂಗ್ ಮಾಡಬೇಕು
- ಅವಕಾಶವಿದ್ದಾಗಲೆಲ್ಲ, ಸೂರ್ಯನ ಬೆಳಕಿಗೆ ಮೈಯೊಡ್ಡಿ. ಹೊರಾಂಗಣ ಕ್ರೀಡೆ ಸಹಕಾರಿ.
- ವಾತಾವರಣ ಕಡಿಮೆ ಬೆಳಕಿನಿಂದ ಕೂಡಿದ್ದರೆ, ಕೃತಕ ಬೆಳಕಿನಿಂದ ಕೋಣೆಯ ಬೆಳಕನ್ನು ಹೆಚ್ಚಿಸಿಕೊಳ್ಳಿ.
- ಸ್ಕ್ರೀನ್ ಟೈಮ್ ಅನ್ನು ಆದಷ್ಟು ಕಡಿಮೆ ಮಾಡಿಕೊಳ್ಳಿ. ಬದಲಿಗೆ ಒಳ್ಳೆಯ ಪುಸ್ತಕಗಳನ್ನು ಓದಿ.
- ಅತಿಯಾಗಿ ಉತ್ತೇಜಕಗಳಾದ ಕೆಫೀನ್ ಭರಿತ ಪೇಯಗಳನ್ನು ಸೇವಿಸಬೇಡಿ.
- ಕುಟುಂಬದೊಂದಿಗೆ ಕಾಲ ಕಳೆಯಿರಿ, ಹಳೆಯ ಗೆಳೆಯರನ್ನು ಸಂಪರ್ಕಿಸಿ. ಒಳ್ಳೆಯ ಹವ್ಯಾಸಗಳನ್ನು ಮರು ಆರಂಭಿಸಿ. ❖

ಆಹಾರ ವಿಹಾರದಲ್ಲಿರಲಿ ಶಿಸ್ತು

ಡಾ. ವಿಜಯಲಕ್ಷ್ಮಿ ಪಿ.

'ಶಾಲೆಗೆ ಮಗನನ್ನು ಬಿಟ್ಟು ಬರಿತೀನಿ' ಅಂತ ಹೊರಟಳು ಶಾಲಿನಿ. ಆಗ ಎದುರುಮನೆ ಪದ್ದಮ್ಮ 'ಕೊರೊನಾ ಮತ್ತೆ ಬರ್ತಾ ಇದೆಯಂತೆ, ಮತ್ತೆ ನಿನ್ನ ಮಗೂನ ಶಾಲೆಗೆ ಕಳಿಸ್ತೀಯಾ' ಅಂತ ಕೇಳಿದರು. ಇದನ್ನೇ ಯೋಚನೆ ಮಾಡ್ತಾ ಹೋಗ್ತಾ ಇದ್ದಾಗ ನಾನು ತಾತನ ಕೊಠಡಿಯಲ್ಲಿ ಓದಿದ್ದ 'ಜನಪದೋಧ್ವಂಸ ರೋಗಗಳ' ಬಗ್ಗೆ ನೆನಪಾಯ್ತು. ತಾತ ಹೇಳ್ತಾ ಇದ್ದ ಕಾರಣಗಳೂ ನೆನಪಾದವು: 'ನೋಡು ಮರಿ, ಮನುಷ್ಯ ಪ್ರಕೃತಿಗೆ ಏನೇನು ಕೆಡಕು ಮಾಡ್ತಾನೋ ಅದರ ಪರಿಣಾಮ ಗಾಳಿ, ನೀರು, ಭೂಮಿ, ಇತರೆ ಪ್ರಾಣಿಪಕ್ಷಿಗಳ ಸಂಕುಲ, ಪರಿಸರ ಎಲ್ಲವೂ ಒಂದಲ್ಲಾ ಒಂದು ದಿನ ತಿರುಗಿ ಬೀಳತ್ತೆ. ಆಗ ಅವನು ತನ್ನ ಇರುವಿಕೆಗೂ ಒದ್ದಾಡಬೇಕಾಗತ್ತೆ. ಆಗ ಇಡೀ ಜನಪದಕ್ಕೆ ಮಾರಕ ಆಗುವ ರೋಗಗಳು ಬರತ್ತೇಂತ. ಈಗ ಅಂತಹದ್ದೇ ಪರಿಸ್ಥಿತಿ ಬಂದಿರೋದು. ಮನುಷ್ಯ ತನ್ನ ಆಹಾರ, ನಿದ್ರೆ ಹಾಗೂ ಜೀವನಶೈಲೀನ ಸರಿಯಾಗಿ ಇಟ್ಟುಕೊಂಡರೆ, ತನಗೆ ವಿಹಿತವಾದ ಆಹಾರವನ್ನ ಹಿತವಾಗಿ ಮಿತವಾಗಿ, ಪರಿಸರಕ್ಕೆ ಅನುಗುಣವಾದ ಆಹಾರ ಸೇವಿಸಿದ್ರೆ ಈ ರೋಗಗಳಿಂದ ಪಾರಾಗಿ ಸ್ವಸ್ಥಜೀವನ ನಡೆಸಬಹುದು'.

ಆಹಾರಸೇವನೆ ಮಾಡಬೇಕಾದರೆ ಒಂದು ಪೂಜೆ ಅನ್ನುವ ಮನೋಭಾವದಲ್ಲಿ ಶುದ್ಧವಾದ ಪರಿಸರದಲ್ಲಿ ಸೇವಿಸಬೇಕು. ಆಗ ದುರಾಹಾರ, ದುರಾಚಾರದ ಕಡೆ ಮನಸ್ಸು ಹೋಗುವುದಿಲ್ಲ. ಬೇಜಾರಾದಾಗ, ಆತಂಕ ಆದಾಗೆಲ್ಲಾ ಏನಾದರೂ ತಿನ್ನುವುದು, ಕುಡಿಯುವುದು ಅಥವಾ ಧೂಮಪಾನ ಮಾಡುವುದು, ತಿಂದ ಆಹಾರ ಜೀರ್ಣ ಆಗುವ ಮೊದಲು ಸ್ನಾನ ಮಾಡುವುದು ಎಂದರೆ ತಿಂಡಿ ತಿಂದು ಅಥವಾ ಊಟ ಮಾಡಿ ಸ್ನಾನ ಮಾಡುವುದರಿಂದ ಜೀರ್ಣಕ್ರಿಯೆ ಸಂಬಂಧಪಟ್ಟ ರೋಗಗಳು, ರಕ್ತಸಂಬಂಧಿ, ಹೃದಯ ಸಂಬಂಧಿ, ರಕ್ತನಾಳ ಸಂಬಂಧಿ, ಚರ್ಮಸಂಬಂಧಿ ರೋಗಗಳ ಉತ್ಪತ್ತಿಗೆ ಕಾರಣ ಆಗತ್ತದೆ. ಆದ್ದರಿಂದಲೇ ನಮ್ಮ ಹಿರಿಯರು ಸ್ನಾನ ಮಾಡಿ ಬೆಳಗಿನ ಆಹಾರಸೇವನೆ ಮಾಡಬೇಕೆಂದು ಹೇಳಿರುವುದು; ಮತ್ತು ಪ್ರತಿಬಾರಿ ಆಹಾರಸೇವನೆಗೆ ಮೊದಲು ಕೈಕಾಲು ತೊಳೆದು ಸೇವಿಸಬೇಕು ಎಂದು.

ಒಂದು ಸಲ ಸೇವಿಸಿದ ಆಹಾರದ ಪ್ರಮಾಣ ಎಷ್ಟು ಇರಬೇಕು ಅಂದರೆ ಇನ್ನೊಂದು ಸಲದ ಆಹಾರದ ಕಾಲಕ್ಕೆ ಜೀರ್ಣ ಆಗಿರಬೇಕು. ಅತಿಯಾಗಿ ತಿನ್ನುವುದು, ಹಾಗೆಯೇ ಅತಿಯಾದ ಉಪವಾಸವೂ ಒಳ್ಳೆಯದ್ದಲ್ಲ. ಡಯಟ್ ಅನ್ನುವ ಹೆಸರಿನಲ್ಲಿ ದೇಹಕ್ಕೆ ಬೇಕಾದ ಪೋಷಕಾಂಶಗಳನ್ನ ಸೇವಿಸದೆ ಕೊರತೆ ಮಾಡುವುದೂ ಸಲ್ಲದು. ನಮ್ಮ ಜೀರ್ಣಶಕ್ತಿಯನ್ನು ಅನುಸರಿಸಿ, ವಾಸಿಸುವ ಪ್ರದೇಶದಲ್ಲಿ ಆಯಾಯ ಕಾಲದಲ್ಲಿ ಬೆಳೆದಿರುವ ತರಕಾರಿ ಹಣ್ಣುಗಳನ್ನು, ಸೇವಿಸುವುದು ಆರೋಗ್ಯವನ್ನೂ ರೋಗನಿರೋಧ ಶಕ್ತಿಯನ್ನೂ ಹೆಚ್ಚಿಸುತ್ತದೆ.

ಆಯಾಯ ದಿನ ತಯಾರಿಸಿದ ಆಹಾರವನ್ನು ಆಯಾಯ ದಿನವೇ ಸೇವಿಸಬೇಕು. ತಂಪು ಪೆಟ್ಟಿಗೆಯಲ್ಲಿಟ್ಟು ಎರಡು, ಮೂರು ದಿನ ಸೇವಿಸುವುದು ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುತ್ತದೆ.

ಕೆಲವು ಆಹಾರ ಪದಾರ್ಥಗಳು ಆರೋಗ್ಯಕರವಾದರೂ ಸಹ ಒಂದಕ್ಕೊಂದು ಬೆರೆತರೆ ದುಷ್ಪರಿಣಾಮವನ್ನು ಬೀರುತ್ತವೆ. ಉದಾ: ಹಾಲು ಮತ್ತು ಮಜ್ಜಿಗೆ ಅಥವಾ ಮೊಸರನ್ನು ಬೆರಸಿ ಸೇವಿಸುವುದು; ಹಣ್ಣುಗಳೊಡನೆ ಹಾಲನ್ನು; ನುಗ್ಗೆಕಾಯಿ, ನುಗ್ಗೆಸೊಪ್ಪು, ಮೂಲಂಗಿಯೊಂದಿಗೆ ಹಾಲನ್ನು; ಹಾಲನ್ನದೊಡನೆ ಉಪ್ಪು, ಉಪ್ಪಿನಕಾಯಿ, ಸಾರು, ಸಾಂಬಾರನ್ನು ಸೇರಿಸಿ ಸೇವಿಸುವುದು; ಮೀನು ಅಥವಾ ಮಾಂಸಾಹಾರದೊಡನೆ ಹಾಲನ್ನು, ಪನ್ನೀರು, ಚೀಸ್‌ಗಳನ್ನು ಸೇವಿಸುವುದು; ಹಗಲು ಹೆಪ್ಪು ಹಾಕಿದ ಅರೆ ಮೊಸರಿನ ಸೇವನೆ – ಹೀಗೆ ಕೆಲವು ಆಹಾರ ಪದಾರ್ಥಗಳು ಸ್ವತಃ ಆರೋಗ್ಯಕಾರಕಗಳಾದರೂ ಹಾಲಿನೊಡನೆ ಬೆರೆತಾಗ ರೋಗವನ್ನು ಉತ್ಪತ್ತಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಮೊಳಕೆ ಕಾಳಿನ ಜೊತೆಗೆ ಅಥವಾ ಉದ್ದು ಹಾಕಿ ತಯಾರಿಸಿದ ಪದಾರ್ಥಗಳ ಜೊತೆಗೆ ಮಾಂಸಾಹಾರ ಸೇವನೆ ನಿಷಿದ್ಧ. ಮೀನಿನೊಡನೆ ಸಕ್ಕರೆ, ಬೆಲ್ಲ, ಕಬ್ಬಿನ ಹಾಲು ಮತ್ತು ಇವುಗಳಿಂದ ತಯಾರಿಸಿದ ಪದಾರ್ಥಗಳು ರೋಗಕಾರಕವೇ ಸರಿ.

ಹೀಗೆಯೇ ಬಿಸಿನೀರೂ ಆರೋಗ್ಯಕರವೇ; ಕುದಿಸಿದ, ಕುದಿಸಿ ತಣಿಸಿದ ಬಿಸಿನೀರಿನ ಸೇವನೆ ಸದಾ ಆರೋಗ್ಯಕರ, ಕುದಿಸಿದ ನೀರಾದರೂ ಪದೇ ಪದೇ ಬಿಸಿ ಮಾಡಿ ಸೇವಿಸುವುದು ಒಳ್ಳೆಯದಲ್ಲ. ಆದರೆ ಬಿಸಿ ಮಾಡಿದ ಬಿಸಿನೀರು ಅರೆಬೆಂದ ಅನ್ನದಂತೆ ರೋಗಕಾರಕ. ಬಿಸಿ ನೀರಿನೊಡನೆ, ಬಿಸಿ ಪದಾರ್ಥದೊಡನೆ ಜೇನು ಸೇವಿಸಿದರೆ ಮಾಂಸಖಂಡಗಳು, ರಕ್ತನಾಳಗಳು ತೆಳ್ಳಗಾಗಿ ಅಂತರ್ ರಕ್ತಸ್ರಾವವಾಗುತ್ತದೆ.

ವ್ಯಾಯಾಮ ಮಾಡುವುದು ಆರೋಗ್ಯವನ್ನು ಕಾಪಾಡುತ್ತದೆ.

ವ್ಯಾಯಾಮವನ್ನು ನಮ್ಮ ದೇಹವು ಬೆವರುವವರೆಗೆ ಅಥವಾ ಮೇಲುಸಿರು ಬರುವವರೆಗೆ ಮಾಡಬಹುದೇ ಹೊರತು ಹೆಚ್ಚು ಮಾಡುವುದರಿಂದ ಹೃದಯದ ಮಾಂಸಖಂಡಗಳನ್ನು ದುರ್ಬಲಗೊಳಿಸುತ್ತದೆ. ಸೇವಿಸಿದ ಆಹಾರ ಜೀರ್ಣವಾಗುವ ಮೊದಲೇ ವ್ಯಾಯಾಮ ಮಾಡಿದರೆ ಸಂಧಿಗಳು, ಮಾಂಸಖಂಡಗಳು, ಕರುಳು, ಹೃದಯಗಳು ದುರ್ಬಲಗೊಂಡು ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುತ್ತದೆ; ಸಂಧಿವಾತ, ಹೃದ್ರೋಗವೇ ಮೊದಲಾದ ರೋಗಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಹಗಲು 8 ಅಥವಾ 10 ಗಂಟೆಯವರೆಗೂ ನಿದ್ರಿಸುವುದು, ರಾತ್ರಿ ನಿದ್ರೆ ಕೆಟ್ಟು ಹಗಲು ನಿದ್ರೆ ಮಾಡುವುದು, ಕೆಲವು ದಿನ ಹಗಲು ನಿದ್ರೆ ಕೆಲವೊಮ್ಮೆ ರಾತ್ರಿ ನಿದ್ರಿಸುವುದು ಇವೆಲ್ಲವೂ ಮೆದಳು, ನರಗಳ ಸಮೂಹ, ಹಾರ್ಮೋನ್ ಸ್ರವಿಸುವಿಕೆ ಇವುಗಳ ಮೇಲೆ ನೇರವಾಗಿ ಪರಿಣಾಮ ಬೀರಿ ರೋಗಗಳ ಉತ್ಪತ್ತಿಗೆ ಕಾರಣವಾಗುತ್ತದೆ.

ಸಮಯೋಚಿತವಾದ ಆಹಾರ, ವ್ಯಾಯಾಮ, ನಿದ್ರೆಯ ಪಾಲನೆಯೇ ಸ್ವಾಸ್ಥ್ಯವರ್ಧನೆಯ ಮೂಲಮಂತ್ರ. ❖

ಸುಭಾಷಿತ

ಯಾವುದೇ ಉತ್ತಮ ಸಮಾಜ ಅಸ್ತಿತ್ವ ಉಳಿಸಿಕೊಳ್ಳಲು ಪರಸ್ಪರ ಸೌಹಾರ್ದ ಮನೋಭಾವ ಮುಖ್ಯವಾದುದು.

-ಅರವಿಂದ ಅಡಿಗ

ನಾಗಾಲ್ಯಾಂಡ್‌ನಲ್ಲಿ ನಾಗರಿಕರ ಹತ್ಯೆ ‘ಆಫ್ಸ್ಪ’ ಹಿಂದಕ್ಕೆ ಪಡೆಯಲು ಸಕಾಲ

ನಾಗಾಲ್ಯಾಂಡ್‌ನ ಮೋನ್ ಜಿಲ್ಲೆಯ ಒಟಿಂಗ್ ಮತ್ತು ಟಿರು ಗ್ರಾಮಗಳ 14 ನಾಗರಿಕರನ್ನು ಅಸ್ಸಾಂ ರೈಫಲ್ಸ್‌ನ 21 ಪ್ಯಾರಾ ಸ್ಪೆಷಲ್ ಫೋರ್ಸ್‌ನ ಸೈನಿಕರು ಗುಂಡು ಹಾರಿಸಿ ಕೊಂದಿರುವುದು ಹೃದಯ ವಿದ್ರಾವಕ. ಮ್ಯಾನ್ಮಾರ್‌ನಿಂದ ಭಾರತದ ಗಡಿಯೊಳಕ್ಕೆ ನುಸುಳಿದ ನ್ಯಾಷನಲ್ ಸೋಷಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್-ಕೆ (ಎನ್‌ಎಸ್‌ಸಿಎನ್-ಕೆ) ಬಣದ ಬಂಡುಕೋರರು ಎಂಬ ತಪ್ಪುಗ್ರಹಿಕೆಯಲ್ಲಿ ನಾಗರಿಕರ ಮೇಲೆ ಗುಂಡು ಹಾರಿಸಲಾಗಿದೆ ಎಂಬ ಸಮಜಾಯಿಷಿಯನ್ನು ಅಸ್ಸಾಂ ರೈಫಲ್ಸ್ ನೀಡಿದೆ. ಗಣಿ ಕಾರ್ಮಿಕರು ಪಿಕ್‌ಅಪ್ ವಾಹನದಲ್ಲಿ ತಮ್ಮ ಹಳ್ಳಿಗಳಿಗೆ ತೆರಳುತ್ತಿದ್ದಾಗ ಸೈನಿಕರು ‘ತಪ್ಪುಗ್ರಹಿಕೆ’ಯಲ್ಲಿ ಗುಂಡು ಹಾರಿಸಿದ್ದಾರೆ. ಹೀಗೆ ಗುಂಡು ಹಾರಿಸಿದಾಗ ಆರು ಮಂದಿ ಕಾರ್ಮಿಕರು ಸತ್ತಿದ್ದಾರೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ. ಮನೆ ಸೇರದ ಕಾರ್ಮಿಕರನ್ನು ಹುಡುಕಿಕೊಂಡು ಹಳ್ಳಿಯ ಜನರು ಬಂದಾಗ, ಸೈನಿಕರ ಜತೆಗೆ ಸಂಘರ್ಷವಾಗಿದೆ. ಈ ಸಂಘರ್ಷದಲ್ಲಿ ಮತ್ತೆ ಏಳು ನಾಗರಿಕರು ಗುಂಡಿಗೆ ಬಲಿಯಾಗಿದ್ದಾರೆ. ಅಸ್ಸಾಂ ರೈಫಲ್ಸ್‌ನ ಕಚೇರಿಗೆ ಜನರು ಭಾನುವಾರ ಮುತ್ತಿಗೆ ಹಾಕಿದಾಗ ಸೈನಿಕರು ಹಾರಿಸಿದ ಗುಂಡಿಗೆ ಮತ್ತೆ ಒಬ್ಬ ನಾಗರಿಕ ಬಲಿಯಾಗಿದ್ದಾನೆ. ಸ್ಥಳೀಯರ ಆಕ್ರೋಶಕ್ಕೆ ಒಬ್ಬ ಸೈನಿಕನೂ ಬಲಿಯಾಗಿದ್ದಾನೆ. ಇದನ್ನೆಲ್ಲ ಗಮನಿಸಿದರೆ ‘ತಪ್ಪುಗ್ರಹಿಕೆ’ಯ ವಾದವು ಮೊದಲ ಪ್ರಕರಣಕ್ಕೆ ಮಾತ್ರ ಅನ್ವಯವಾಗುತ್ತದೆ ಎಂಬುದು ವೇದ್ಯವಾಗುತ್ತದೆ. ಉಳಿದ ಎರಡು ಪ್ರಕರಣಗಳಲ್ಲಿ ಸೈನಿಕರು ಸಂಯಮ ಕಳೆದುಕೊಳ್ಳದೇ ಇದ್ದಿದ್ದರೆ ಎಂಟು ಅಮೂಲ್ಯ ಜೀವಗಳನ್ನು ಉಳಿಸಬಹುದಿತ್ತು.

ಸೂಕ್ಷ್ಮವಾದ ಗಡಿ ರಾಜ್ಯಗಳಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೇ ವಿನಾ ಅವರೊಂದಿಗೆ ಸಂಘರ್ಷಕ್ಕೆ ಇಳಿಯುವುದು ಸರಿಯಾದ ನಡೆ ಅಲ್ಲ

ಹತ್ಯಾ ಪ್ರಕರಣದ ಬಗ್ಗೆ ನಾಗಾಲ್ಯಾಂಡ್ ಪೊಲೀಸರು ದಾಖಲಿಸಿಕೊಂಡ ಎಫ್‌ಐಆರ್‌ನಲ್ಲಿ ಇರುವ ವಿವರಗಳು ಕಳವಳ ಮೂಡಿಸುವಂತಿವೆ. ‘ಸೈನಿಕರು ವಿವೇಚನೆ ಇಲ್ಲದೆ ಗುಂಡು ಹಾರಿಸಿದ್ದಾರೆ’, ‘ಸೈನಿಕರ ಉದ್ದೇಶವು ನಾಗರಿಕರನ್ನು ಹತ್ಯೆ ಮಾಡುವುದು ಮತ್ತು ಗಾಯಗೊಳಿಸುವುದೇ ಆಗಿತ್ತು’ ಎಂಬ ಮಾಹಿತಿ ಎಫ್‌ಐಆರ್‌ನಲ್ಲಿ ಇದೆ. ‘ಪ್ರಕರಣ ನಡೆದಾಗ ಸೈನಿಕರ ಜತೆಗೆ ಪೊಲೀಸ್ ಮಾರ್ಗದರ್ಶಕರು ಇರಲಿಲ್ಲ. ಉದ್ದೇಶಿತ ಕಾರ್ಯಾಚರಣೆಗೆ ಪೊಲೀಸ್ ಮಾರ್ಗದರ್ಶಕರು ಬೇಕು ಎಂಬ ವಿನಂತಿಯೂ ಸೇನೆಯಿಂದ ಬಂದಿರಲಿಲ್ಲ. ಇದನ್ನೆಲ್ಲ ಗಮನಿಸಿದರೆ ನಾಗರಿಕರ ಹತ್ಯೆಯೇ ಭದ್ರತಾ ಪಡೆಯ ಉದ್ದೇಶವಾಗಿತ್ತು ಅನ್ನಿಸುತ್ತದೆ’ ಎಂದೂ ಎಫ್‌ಐಆರ್‌ನಲ್ಲಿ ಹೇಳಲಾಗಿದೆ. ಎನ್‌ಎಸ್‌ಸಿಎನ್-ಕೆ ಬಂಡುಕೋರರು ಈ ಪ್ರದೇಶಕ್ಕೆ ನುಸುಳಿದ್ದಾರೆ ಎಂಬ ‘ಗುಪ್ತಚರ ಮಾಹಿತಿ’ಯ ಆಧಾರದಲ್ಲಿ ಕಾರ್ಯಾಚರಣೆ ಯೋಜಿಸಲಾಗಿತ್ತು ಎಂದು ಸೇನೆಯು ಹೇಳಿದೆ. ಅತ್ಯಂತ ಸೂಕ್ಷ್ಮವಾದ ಗಡಿ ರಾಜ್ಯದಲ್ಲಿ ಗುಪ್ತಚರ ಮಾಹಿತಿ ಕಲೆ ಹಾಕುವಿಕೆಯು ಎಷ್ಟೊಂದು ಅಧ್ವಾನವಾಗಿದೆ ಎಂಬುದರತ್ತ ಟಿರು ಮತ್ತು ಒಟಿಂಗ್ ಗ್ರಾಮಗಳಲ್ಲಿ ನಡೆದ ಕಾರ್ಯಾಚರಣೆಯು ಬೊಟ್ಟು ಮಾಡುತ್ತದೆ. ಬಂಡುಕೋರರು ನುಸುಳಿರುವ ಗುಪ್ತಚರ ಮಾಹಿತಿ ಸಿಕ್ಕ ಬಳಿಕವೇ ಕಾರ್ಯಾಚರಣೆ ಯೋಜಿಸಲಾಗಿದೆ. ಹೀಗಿರುವಾಗ ಸ್ಥಳೀಯ ಪೊಲೀಸ್ ಠಾಣೆಯಿಂದ ಪೊಲೀಸ್ ಮಾರ್ಗದರ್ಶಕರನ್ನು ಪಡೆದುಕೊಂಡಿಲ್ಲ ಏಕೆ ಎಂಬ ಪ್ರಶ್ನೆಗೆ ಸೇನೆಯು ಉತ್ತರ ಹೇಳಬೇಕಾಗುತ್ತದೆ. ಅಸ್ಸಾಂ ರೈಫಲ್ಸ್‌ನ ಕರ್ನಲ್ ವಿಪ್ಲವ್ ತ್ರಿಪಾಠಿ, ಅವರ ಹೆಂಡತಿ, ಮಗ ಮತ್ತು ನಾಲ್ವರು ಯೋಧರನ್ನು ಮಣಿಪುರದಲ್ಲಿ ಕೆಲವು ವಾರಗಳ ಹಿಂದೆ ಬಂಡುಕೋರರು ಹತ್ಯೆ ಮಾಡಿದ್ದರು. ನಿಷೇಧಿತ ಸಂಘಟನೆಗಳಾದ ಪೀಪಲ್ಸ್ ಲಿಬರೇಷನ್ ಆರ್ಮಿ ಮತ್ತು ನಾಗಾ ಪೀಪಲ್ಸ್ ಫ್ರಂಟ್ ಜಂಟಿ ಹೇಳಿಕೆ ನೀಡಿ ಹತ್ಯೆಯ ಹೊಣೆ ಹೊತ್ತುಕೊಂಡಿದ್ದವು. ಈ ಹತ್ಯೆಗೆ ತಕ್ಕ ತಿರುಗೇಟು ನೀಡಲೇಬೇಕು ಎಂಬ ಕಾರಣಕ್ಕೆ ಅಸ್ಸಾಂ ರೈಫಲ್ಸ್‌ನ ಸೈನಿಕರು ಕಾರ್ಯಾಚರಣೆ ತೀವ್ರಗೊಳಿಸಿದ್ದರು ಎಂದು ಹೇಳಲಾಗುತ್ತಿದೆ. ಸೇಡಿನ ತವಕವೇ ಕಾರ್ಯಾಚರಣೆ ಸಂದರ್ಭದಲ್ಲಿ ವಿವೇಚನಾಶೂನ್ಯ ನಡವಳಿಕೆಗೆ ಕಾರಣವಾಗಿದ್ದರೆ ಅದು ಅಕ್ಷಮ್ಯ.

ನಾಗಾಲ್ಯಾಂಡ್ ಹತ್ಯೆ ಪ್ರಕರಣದ ಬಳಿಕ, ಸಶಸ್ತ್ರ ಪಡೆಗಳ (ವಿಶೇಷಾಧಿಕಾರ) ಕಾಯ್ದೆಯ (ಆಫ್ಸ್ಪ) ವ್ಯಾಪ್ತಿಯಿಂದ ತಮ್ಮ ರಾಜ್ಯಗಳನ್ನು ಕೈಬಿಡಿ ಎಂದು ನಾಗಾಲ್ಯಾಂಡ್ ಮತ್ತು ಮಣಿಪುರದ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಶಾನ್ಯ ರಾಜ್ಯಗಳಲ್ಲಿ ಬಂಡುಕೋರ ಚಟುವಟಿಕೆ ತೀವ್ರವಾಗಿದೆ ಎಂಬ ಕಾರಣಕ್ಕೆ 1958ರಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ವಾರಂಟ್ ಇಲ್ಲದೆ ಜನರನ್ನು ಬಂಧಿಸುವ, ಸ್ಥಳಗಳಲ್ಲಿ ಶೋಧ ನಡೆಸುವ ಮತ್ತು ಅನುಮಾನ ಬಂದಾಗ ನಾಗರಿಕರತ್ತಲೂ ಗುಂಡು ಹಾರಿಸುವ ಅಧಿಕಾರವನ್ನು ಈ ಕಾಯ್ದೆಯು ಸೇನೆಗೆ ನೀಡುತ್ತದೆ. ಹೀಗೆ ಗುಂಡು ಹಾರಿಸಿ ನಾಗರಿಕರು ಸತ್ತರೂ ಗುಂಡು ಹಾರಿಸಿದವರಿಗೆ ಕಾಯ್ದೆಯು ರಕ್ಷಣೆ ಒದಗಿಸುತ್ತದೆ. ‘ಈ ಕಾಯ್ದೆಯು ಭಾರತದ ವರ್ಚಸ್ಸಿಗೆ ಜಾಗತಿಕ ಮಟ್ಟದಲ್ಲಿ ಮಸಿ ಬಳಿದಿದೆ’ ಎಂದು ನಾಗಾಲ್ಯಾಂಡ್ ಮುಖ್ಯಮಂತ್ರಿ ನೈಫಿಯು ರಿಯೊ ಹೇಳಿದ್ದಾರೆ. ಈ ಕಾಯ್ದೆಯನ್ನು ಹಿಂದಕ್ಕೆ ಪಡೆಯಬೇಕು ಎಂಬ ಬೇಡಿಕೆ ಬಹಳ ಕಾಲದಿಂದಲೂ ಇದೆ. ಈ ಬಗ್ಗೆ ಸರ್ಕಾರ ಸಂವೇದನಾಶೀಲವಾದ ನಿರ್ಧಾರವನ್ನು ಬಹಳ ಹಿಂದೆಯೇ ಕೈಗೊಳ್ಳಬೇಕಿತ್ತು. ಈಗಲಾದರೂ ಆ ಕೆಲಸವನ್ನು ಸರ್ಕಾರ ಮಾಡಬೇಕು. ಸೂಕ್ಷ್ಮವಾದ ಗಡಿ ರಾಜ್ಯಗಳಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೇ ವಿನಾ ಅವರೊಂದಿಗೆ ಸಂಘರ್ಷಕ್ಕೆ ಇಳಿಯುವುದು ಸರಿಯಾದ ನಡೆ ಅಲ್ಲ.

ದಿನದ ಟ್ವೀಟ್

ವಸೂಲಿ ತರವೇ?

ಅಡುಗೆ ಅನಿಲ ಪೂರೈಕೆ ಕಂಪನಿಗಳ ಪ್ರತಿನಿಧಿಗಳು ತಪಾಸಣೆಯ ನೆಪದಲ್ಲಿ ಗ್ರಾಹಕರ ಮನೆಗಳಿಗೆ ಭೇಟಿ ನೀಡಿ, ನೂರಾರು ರೂಪಾಯಿಯನ್ನು ವಸೂಲು ಮಾಡುವುದೇಕೆ? ಭವಿಷ್ಯದಲ್ಲಿ ರೀಫಿಲ್ ಬುಕಿಂಗ್ ಅನ್ನು ನಿಲ್ಲಿಸುವುದಾಗಿ ಸಹ ಅವರು ಬೆದರಿಕೆ ಹಾಕುತ್ತಾರೆ.

ಅರುಣ್ ಜೈನ್, ನಾಗರಿಕ

ಕಿಡಿನುಡಿ

ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆ ಕುರಿತು ಪರಾಮರ್ಶಿಸಿ ವರದಿ ನೀಡಲು ಸರ್ಕಾರವು ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ತ್ರಿಸದಸ್ಯ ಸಮಿತಿ ನೇಮಿಸಿರುವುದು ಕಾನೂನುಬದ್ಧವಲ್ಲ. ಈ ವಿಷಯದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ನೀಡುವ ವರದಿಯೇ ಅಂತಿಮ.

ಬಸವಜಯ ಮೃತ್ಯುಂಜಯ ಸ್ವಾಮೀಜಿ
ಕೂಡಲಸಂಗಮ ಪಂಚಮಸಾಲಿ ಪೀಠ

25 ವರ್ಷಗಳ ಹಿಂದೆ

ಶನಿವಾರ, 7-12-1996

• **ಬಾಬ್ರಿ ಮಸೀದಿ ನಾಶ ಪ್ರತಿಧ್ವನಿ ಸಂಸತ್ತಿನಲ್ಲಿ ಕೋಲಾಹಲ**

ನವದೆಹಲಿ, ಡಿ. 6– ನಾಲ್ಕು ವರ್ಷಗಳ ಹಿಂದೆ ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿದ ಘಟನೆ ಇಂದು ಸಂಸತ್ತಿನ ಉಭಯ ಸದನಗಳಲ್ಲೂ ಪ್ರತಿಧ್ವನಿಸಿತು. ತೀವ್ರ ಗದ್ದಲ, ಕೂಗಾಟದ ನಡುವೆ ಲೋಕಸಭೆಯನ್ನು ಎರಡು ಬಾರಿ ಮುಂದೂಡಿದರೆ, ರಾಜ್ಯಸಭೆಯಲ್ಲಿ ಬಿಜೆಪಿ ಮತ್ತು ಇತರ ಪಕ್ಷಗಳ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು.

ಬಾಬ್ರಿ ಮಸೀದಿ ನೆಲಸಮವಾದದ್ದರ ಸ್ಮರಣೆಗೆ ಲೋಕಸಭೆಯಲ್ಲಿ ಬೆಳಿಗ್ಗೆ ಒಂದು ನಿಮಿಷ ಮೌನ ಆಚರಿಸಬೇಕೆಂಬ ಸಿಪಿಎಂ ಸದಸ್ಯ ಬಸುದೇವ ಆಚಾರ್ಯ ಅವರ ಬೇಡಿಕೆಯೊಂದಿಗೆ ಗದ್ದಲ ಆರಂಭವಾಯಿತು. ಗದ್ದಲ ಅತಿಯಾದಾಗ ಸದನವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು. ಮಧ್ಯಾಹ್ನ ಮತ್ತೆ ಲೋಕಸಭೆ ಸೇರಿದಾಗ ಗದ್ದಲ ಮುಂದುವರಿದ ಹಿನ್ನೆಲೆಯಲ್ಲಿ ಸೋಮವಾರಕ್ಕೆ ಸದನವನ್ನು ಮುಂದೂಡಲಾಯಿತು.

• **‘ಪಟೇಲ್ ಬದಲಾವಣೆ ಆಗ್ರಹ ಸದ್ಯಕ್ಕಿಲ್ಲ’**

ಬೆಂಗಳೂರು, ಡಿ. 6– ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ನಾಯಕತ್ವ ಬದಲಾವಣೆಗೆ ಒತ್ತಾಯಿಸುವ ವಿಚಾರವನ್ನು ಸದ್ಯಕ್ಕೆ ಕೈಬಿಡಲು ಭಿನ್ನಮತೀಯ ಶಾಸಕರು ನಿರ್ಧರಿಸಿದ್ದಾರೆ.

ಮುಖ್ಯಮಂತ್ರಿ ಅವರು ಸಂಪುಟದ ಗಾತ್ರವನ್ನು ಕುಗ್ಗಿಸಿ ಸಂಪುಟ ಪುನರ್ ರಚನೆಯೂ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಗುರುವಾರ ರಾತ್ರಿ ನೀಡಿರುವ ಆಶ್ವಾಸನೆಯನ್ನು ಮುಂದಿನ ವಿಧಾನಮಂಡಲ ಅಧಿವೇಶನದ ಒಳಗಾಗಿ ಈಡೇರಿಸಲು ಭಿನ್ನಮತೀಯರು ಗಡುವು ನೀಡಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 7-12-1971

• **ಗಣ ಪ್ರಜಾತಂತ್ರಿ ಬಾಂಗ್ಲಾದೇಶಕ್ಕೆ ಭಾರತದ ಮನ್ನಣೆ**

ನವದೆಹಲಿ, ಡಿ. 6– ಬಾಂಗ್ಲಾದೇಶ ಹಾಗೂ ಅಲ್ಲಿನ ಜನತಾ ಸರ್ಕಾರಕ್ಕೆ ಇಂದು ಭಾರತ ಸರ್ಕಾರ ರಾಜತಾಂತ್ರಿಕ ಮಾನ್ಯತೆ ನೀಡಿತು.

ಈ ‘ಐತಿಹಾಸಿಕ ಘೋಷಣೆ’ಯನ್ನು ಅಪೂರ್ವ ಉದ್ವಿಗ್ನತೆಯಿಂದ ಸ್ವಾಗತಿಸಿದ ಸಂಸತ್ ಸದಸ್ಯರು ಕೇಕೆ ಹಾಕುತ್ತ ಮೇಜುಗಳನ್ನು ಕುಟ್ಟಿ ‘ಜೈ ಬಾಂಗ್ಲಾದೇಶ್’ ಎಂದು ಒಕ್ಕೊರಲಿನಿಂದ ಘೋಷಣೆ ಮಾಡಿ, ಪ್ರಧಾನಿ ಪ್ರಕಟಿಸಿದ ನಿರ್ಧಾರಕ್ಕೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.

• **ಭಾರತದ ಜತೆ ಪಾಕಿಸ್ತಾನದ ರಾಜತಾಂತ್ರಿಕ ಬಾಂಧವ್ಯ ರದ್ದು**

ನವದೆಹಲಿ, ಡಿ. 6– ಭಾರತದ ಜತೆ ರಾಜತಾಂತ್ರಿಕ ಬಾಂಧವ್ಯವನ್ನು ಪಾಕಿಸ್ತಾನ ಕಡಿದುಕೊಂಡಿದೆ.

ಪಾಕಿಸ್ತಾನ ರೇಡಿಯೊ ಇಸ್ಲಾಮಾಬಾದಿನ ಘೋಷಣೆಯನ್ನು ಉದ್ಧರಿಸಿ ತನ್ನ ಬಂಗಾಳಿ ಸುದ್ದಿ ಪ್ರಸಾರದಲ್ಲಿ ಈ ವಿಷಯವನ್ನು ಇಂದು ಪ್ರಕಟಿಸಿತು.

ಬಾಂಗ್ಲಾದೇಶಕ್ಕೆ ಭಾರತ ಮಾನ್ಯತೆ ನೀಡಿರುವುದನ್ನು ಅನುಸರಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರೇಡಿಯೊ ಸಾರಿತು.

ದೇಶ ಸಾಗಿರುವ ಈ ಆತ್ಮಹತ್ಯಾತ್ಮಕ ‘ಅಭಿವೃದ್ಧಿ’ಯ ದಾರಿಯಿಂದ ಪಾರಾಗಲು ಮಾರ್ಗವಿಲ್ಲವೇ?

ಕಸ್ತೂರಿರಂಗನ್ ವರದಿ ಮತ್ತು ಜನತಂತ್ರ ವ್ಯವಸ್ಥೆ

ವಿಶ್ಲೇಷಣೆ

ಡಿ.ಎಸ್.ನಾಗಭೂಷಣ

ಪಶ್ಚಿಮಘಟ್ಟ ಪ್ರದೇಶದ ಪರಿಸರ ಸಂರಕ್ಷಣೆ ಕುರಿತ ಕಸ್ತೂರಿರಂಗನ್ ವರದಿಯನ್ನು ತಿರಸ್ಕರಿಸುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವ ಸುದ್ದಿ ಇತ್ತೀಚಿನ ಅಕಾಲಿಕ ಮತ್ತು ಅತಿವೃಷ್ಟಿಯಿಂದಾಗಿರುವ ಪ್ರಾಕೃತಿಕ ಅನಾಹುತಗಳ ಹಿನ್ನೆಲೆಯಲ್ಲಿ ವಿಪರ್ಯಾಸವೆನಿಸಿದರೂ, ಈಗ ನಡೆದಿರುವ ವಿಧಾನ ಪರಿಷತ್ ಚುನಾವಣೆಗಳ ಎಲ್ಲ ಪಕ್ಷಗಳ ಅಭ್ಯರ್ಥಿಗಳ ಆಸ್ತಿಪಾಸ್ತಿಗಳ ಅಧಿಕೃತ ಗಾತ್ರದ ಹಿನ್ನೆಲೆಯಲ್ಲಿ ಆಶ್ಚರ್ಯಕರ ಎಂದೇನೂ ಅನಿಸುವುದಿಲ್ಲ. ಏಕೆಂದರೆ ಕಸ್ತೂರಿರಂಗನ್ ವರದಿಯನ್ನು ತಿರಸ್ಕರಿಸಬೇಕೆಂಬ ರಾಜ್ಯ ಸರ್ಕಾರದ ಶಿಫಾರಸಿನ ಹಿಂದೆ ಜನಪ್ರತಿನಿಧಿಗಳ ಒತ್ತಾಯವಿದೆ ಮತ್ತು ಈ ಒತ್ತಾಯದ ಹಿಂದೆ ಜನರ ಒತ್ತಾಯವಿದೆ ಎಂದೂ ವರದಿಯಾಗಿದ್ದು, ಇದಕ್ಕೆ ಕಾರಣ ಈ ವರದಿಯಿಂದ ತಮ್ಮ ‘ಅಭಿವೃದ್ಧಿ’ಯ ಅವಕಾಶಗಳಿಗೆ ಧಕ್ಕೆಯಾಗುತ್ತದೆ ಎಂಬುದು ಅವರ ಅಳಲು ಎಂದು ಹೇಳಲಾಗುತ್ತಿದೆ. ಆದರೆ ಇದೇ ವೇಳೆಯಲ್ಲಿ ವಿಧಾನ ಪರಿಷತ್ ಚುನಾವಣಾ ಹುರಿಯಾಳುಗಳ ‘ಅಧಿಕೃತ’ ಆಸ್ತಿಪಾಸ್ತಿಗಳ ಬೆಚ್ಚಿಬೀಳಿಸುವಂತಹ ಗಾತ್ರದ ಬಗೆಗೆ ಇದೇ ಜನಸಾಮಾನ್ಯರ ಮಧ್ಯದಿಂದ ಯಾವುದೇ ಗಾಬರಿ-ಆತಂಕಗಳು ಯಾವುದೇ ರೂಪದಲ್ಲಾಗಲೀ ವ್ಯಕ್ತವಾಗಿಲ್ಲ.

ಇದರರ್ಥ ಇಷ್ಟೆ: ಇಂದಿನ ಸಮಾಜವನ್ನು ಹಣ ಮತ್ತು ಅದನ್ನು ಶೇ 40ರ (ಕಮಿಷನ್‌ನ) ಖಚಿತ ಲಾಭದೊಂದಿಗೆ ಬಿತ್ತಿ ಬೆಳೆಯಬಹುದಾದ ‘ಅಭಿವೃದ್ಧಿ’ಯ ಫಲಾನುಭವದ ಹಪಹಪಿ ಮಾತ್ರ ಆಳುತ್ತಿದೆ. ಏಕೆಂದರೆ ಕಸ್ತೂರಿರಂಗನ್ ವರದಿಯೇನೂ ಜನರ ಜೀವನವನ್ನು ಹಾಳುಗೆಡಹುವ ಉದ್ದೇಶಕ್ಕಾಗಿ ರಚಿತವಾದದ್ದಲ್ಲ. ಬದಲಿಗೆ, ಜನಸಾಮಾನ್ಯರ ಸುಸ್ಥಿರ ಅಭಿವೃದ್ಧಿ ಅದರ ಗುರಿಯಾಗಿತ್ತು. ಆದರೆ ಇದು ಅವರ ಅರಿವಿಗೇ ತಾಗಿದಂತಿಲ್ಲ. ಹಾಗಾಗಿ ಇಂದು ನಾವು ಯಾವ ಮೌಲ್ಯಗಳ ಆದ್ಯತೆಯೊಂದಿಗೆ, ಎಂತಹ ಸಮಾಜವನ್ನು ಕಟ್ಟ ಹೊರಟಿದ್ದೇವೆ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವ ತುರ್ತು ಅಗತ್ಯವಿದೆ ಎನಿಸುತ್ತದೆ. ಹಾಗೇ ಈ ಸಮಾಜವನ್ನು ಕಟ್ಟುವ ಹೊಣೆಯನ್ನು ಪೂರ್ತಿ ಯಾರಿಗೆ ಬಿಟ್ಟುಕೊಟ್ಟಿದ್ದೇವೆ ಮತ್ತು ಏಕೆ ಹಾಗೂ ಹೇಗೆ ಎಂಬ ಪ್ರಶ್ನೆಯನ್ನೂ.

ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಹೇಳಲಾಗುತ್ತದೆ. ಅಂದರೆ ಪ್ರಜೆಗಳ ಇಚ್ಛೆಯಂತೆ ಪ್ರಭುತ್ವ ನಡೆಯಬೇಕು, ಸಮಾಜವನ್ನು ಕಟ್ಟಬೇಕು ಎಂಬುದು ಇದರ ಅರ್ಥ. ಆದರೆ ಪ್ರಜೆಗಳ ಇಚ್ಛೆ ಸಂಘಟಿತವಾಗಿ ರೂಪುಗೊಳ್ಳುವ ಬಗೆ ಹೇಗೆ ಮತ್ತು ಅದು ಪ್ರಭುತ್ವದ ಮೂಲಕ ಅನುಷ್ಠಾನಗೊಳ್ಳುವ ಪ್ರಕ್ರಿಯೆಯಲ್ಲಿ ಅದು ಪಡೆಯುವ ರೂಪಗಳ ಮೇಲೆ ನಿಗಾ ಇಡುವವರಾರು ಎಂಬ ಪ್ರಶ್ನೆಗಳನ್ನು ಕೇಳುವ ಸಂದರ್ಭ ಇಂದು ಬಂದಿದೆ ಎನಿಸುತ್ತದೆ. ಏಕೆಂದರೆ ನಮ್ಮದು ಪರೋಕ್ಷ ಪ್ರಜಾಪ್ರಭುತ್ವ. ನಮ್ಮನ್ನು ನಾವು ನಮ್ಮ ಪ್ರತಿನಿಧಿಗಳ ಮೂಲಕ ಆಳಿಕೊಳ್ಳುವ ವ್ಯವಸ್ಥೆ. ಆದರೆ ನಮ್ಮ ಪ್ರತಿನಿಧಿಗಳು ಎನಿಸಿಕೊಳ್ಳುವವರು ನಿಜವಾಗಿಯೂ ನಮ್ಮ ಪ್ರತಿನಿಧಿಗಳು ಎನಿಸಿಕೊಳ್ಳುವಷ್ಟು ನಮ್ಮವರೇ ಆಗಿರುವ ಮಟ್ಟಿಗೆ ನಮ್ಮ ಮತ್ತು ಅವರ ಸಂಬಂಧ ಸಮೀಕರಣಗಳಿಗೆ ಈ ವ್ಯವಸ್ಥೆಯಲ್ಲಿ ಅವಕಾಶವಿದೆಯೇ? ಅಂದರೆ ಪ್ರಜಾಸಮೂಹ ಮತ್ತು ಅದರ ಪ್ರತಿನಿಧಿಗಳ ನಡುವೆ ನಿರಂತರ ಮತ್ತು ಅರ್ಥಪೂರ್ಣ ಸಂವಾದ ಸಾಧ್ಯವಿದೆಯೇ?

ಮಧ್ಯಸ್ಥಿಕೆ ವಹಿಸಿ ಇದನ್ನು ಸಾಧ್ಯಮಾಡಬೇಕಾದ ಸಮಾಜದ ಅಭಿಪ್ರಾಯ ಮುಖಂಡರು, ಬುದ್ಧಿಜೀವಿಗಳು, ಚಿಂತಕರು, ಲೇಖಕರು- ಕಲಾವಿದರು ಇಂದು ಎಲ್ಲಿ ಹೋಗಿದ್ದಾರೆ? ಏನಾಗಿದ್ದಾರೆ ಎಂಬ ಪ್ರಶ್ನೆಗಳು ಇಲ್ಲಿ ಹುಟ್ಟುತ್ತವೆ. ಜೊತೆಯಲ್ಲೇ ಈ ಪ್ರಶ್ನೆಗಳಿಗೆ ಉತ್ತರವಾಗಿ, ಇದಕ್ಕೆಲ್ಲ ಈ ನಮ್ಮ ಪ್ರತಿನಿಧಿ ವ್ಯವಸ್ಥೆ ಈಗ ಆಗಿರುವಂತೆ ಏಕಮುಖಿಯಾಗಿರಬಲ್ಲ ಸಾಧ್ಯತೆಗಳಿಗೆ ಅವಕಾಶವಿರುವಂತೆ ಪರೋಕ್ಷವಾಗಿರುವುದೇ ಕಾರಣವಲ್ಲವೇ ಎಂಬ ಪ್ರಶ್ನೆಯನ್ನೂ ಹುಟ್ಟುಹಾಕುತ್ತದೆ. ಒಮ್ಮೆ ಚುನಾಯಿತನಾದನೆಂದರೆ ಅವನ ಅವಧಿ ಮುಗಿಯುವವರೆಗೂ ಆತನಿಗೆ ಪ್ರಜೆಗಳೂ ಸೇರಿ ಎಲ್ಲರೂ ‘ಅನ್ಯ’ರೇ ಆಗಬಲ್ಲಷ್ಟು ಈ ವ್ಯವಸ್ಥೆ ಏಕಪಕ್ಷೀಯವಾಗಿದೆ.

ಹೀಗೆ ಪ್ರಜೆ ಮತ್ತು ಅವನ ಪ್ರತಿನಿಧಿ (ಶಾಸಕ ಮತ್ತು ಸಂಸತ್ ಸದಸ್ಯ) ನಡುವಣ ಸಂಬಂಧ ಏಕಪಕ್ಷೀಯವಾಗಿರುವ ಕಾರಣದಿಂದಲೇ ಇಂದು ಕಸ್ತೂರಿರಂಗನ್ ವರದಿಗೆ ಈ ಗತಿ ಬಂದಿದೆ ಎನ್ನಬಹುದು. ಈ ವರದಿಯ ತಿರಸ್ಕಾರದ ಶಿಫಾರಸಿಗೆ ನೀಡಿರುವ, ಇದನ್ನು ನೇರ ಕ್ಷೇತ್ರ ಸಮೀಕ್ಷೆಗೆ ಬದಲಾಗಿ ಉಪಗ್ರಹ ಚಿತ್ರ ಸಮೀಕ್ಷೆಯ ಮೂಲಕ ಸಿದ್ಧಪಡಿಸಲಾಗಿದೆ ಎಂಬ ಕಾರಣವು ಒಟ್ಟಾರೆ ತಿರಸ್ಕಾರಕ್ಕೆ ಕಂಡುಕೊಂಡಿರುವ ಒಂದು ತಾಂತ್ರಿಕ ನೆಪ ಎನ್ನಬಹುದು. ಅದೇನೇ ಇರಲಿ, ಮೊದಲಾಗಿ ಈ ವರದಿಯ ಮತ್ತು ಇದರ ಮುಂಚೆಯ (ಮೊದಲ ನೋಟಕ್ಕೇ ತಿರಸ್ಕರಿಸಲ್ಪಟ್ಟ) ಗಾಡ್ಗೀಳ್ ವರದಿಯ ಅವಶ್ಯಕತೆಯಾದರೂ ಏಕೆ ಉಂಟಾಯಿತು ಎಂಬುದರ ಕಡೆ ಯಾರ ಗಮನವೂ ಇದ್ದಂತಿಲ್ಲ.

ಜಗತ್ತಿನ (ಅಂದರೆ ಈ ಜೀವಜಗತ್ತಿನ) ತಾಳಿಕೆ-ಬಾಳಿಕೆಗಳನ್ನು ನಿರ್ಧರಿಸುವ ಕೆಲವೇ ಕೆಲವು ನಿರ್ಣಾಯಕ ಭೂಭಾಗಗಳಲ್ಲಿ ನಮ್ಮ ಪಶ್ಚಿಮಘಟ್ಟಗಳ ಪ್ರದೇಶವೂ ಒಂದಾಗಿದ್ದು, ಅದು ಅಪಾಯದ ಅಂಚಿನಲ್ಲಿದೆ ಎಂಬ ಎಚ್ಚರಿಕೆಯ ಗಂಟೆ ವಿಶ್ವಸಂಸ್ಥೆಯ ಬಹುಶಿಸ್ತೀಯ ಅಧ್ಯಯನಗಳ ವೇದಿಕೆಯ ಮೂಲಕ ಕೇಳಿಬಂದದ್ದರಿಂದ ಈ ವರದಿಗಳು, ಸಮರ್ಥರೆಂದು ಸರ್ಕಾರ ಭಾವಿಸಿದವರಿಂದ ಸಮರ್ಥ ವಿಧಾನಗಳ ಮೂಲಕ ಸಿದ್ಧಗೊಂಡಿವೆ. ದೇಶದ ಅತ್ಯಂತ ಸಮರ್ಥ ಪರಿಸರ ವಿಜ್ಞಾನಿ ಎಂದು ಪರಿಗಣಿತರಾದ ಗಾಡ್ಗೀಳ್ ಅವರ ವರದಿಯನ್ನು ತಿರಸ್ಕರಿಸಲು ಕಾರಣವಾದ ‘ಅಭಿವೃದ್ಧಿ ವಿರೋಧಿ’ ಎಂಬುದೇ ಈಗ ಕಸ್ತೂರಿರಂಗನ್ ವರದಿಯನ್ನೂ ತಿರಸ್ಕರಿಸಬೇಕೆಂಬ ಕೂಗಿಗೂ ಕಾರಣವಾಗಿದೆ ಎಂದರೆ ಏನರ್ಥ? ಅಂದರೆ ಈ ‘ಅಭಿವೃದ್ಧಿ’ ಎಂದರೆ ಏನೆಂದು ಜನರ ಮನಸ್ಸಿಗೆ ತುಂಬಲಾಗಿದೆ ಮತ್ತು ಹೇಗೆ ಇದು ಸಾಧ್ಯವಾಗಿದೆ ಎಂದು ಯೋಚಿಸಬೇಕಿದೆ. ಅದೂ ಯಾರ ಸುಖ ಸವಲತ್ತುಗಳಿಗಾಗಿ ಈ ‘ಅಭಿವೃದ್ಧಿ’ ಬೇಕಾಗಿದೆ ಎನಿಸುತ್ತಿದೆಯೋ ಅದು ಅವರು ಬದುಕಿ ಬಾಳಬೇಕಾದ ಭೂಮಿಯೇ ವಾಸಯೋಗ್ಯವಾಗಿ ಉಳಿಯಲಾಗದ ಅಪಾಯದಲ್ಲಿದೆ ಎಂಬ ಸಂಗತಿಯ ಹಿನ್ನೆಲೆಯಲ್ಲಿಯೂ!



ಈ ಬಗ್ಗೆ ಯೋಚಿಸಿದಾಗ ನಮ್ಮ ಈ ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯ ದೌರ್ಬಲ್ಯಗಳು ಎದ್ದು ಕಾಣತೊಡಗುತ್ತವೆ. ಇಂದು ಮುಖ್ಯವಾಗಿ, ಕೋವಿಡ್-19ರ ಎರಡನೆಯ ದಾಳಿಯ ರುದ್ರ ಭೀಕರತೆ ಯಾರ ಮೇಲೂ ಏನೂ ಪರಿಣಾಮವನ್ನುಂಟು ಮಾಡಿಲ್ಲದಿರುವುದರಿಂದ ಆರಂಭವಾದಂತೆ. ಈ ಸಂದರ್ಭದಲ್ಲೂ ಹಲವು ಹಿತಾಸಕ್ತಿಗಳು ಒಗ್ಗೂಡಿ ಹೇಗೆ ರಾಶಿ ರಾಶಿ ಹಣ ಸಂಪಾದಿಸಿದವು ಮತ್ತು ಇದರಲ್ಲಿ ನಮ್ಮ ಈ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯೂ ಹೇಗೆ ಸಕ್ರಿಯವಾಗಿ ಭಾಗಿಯಾಗಿತ್ತು ಎಂಬುದು ಈಗ ಗುಟ್ಟಿನ ವಿಷಯವಾಗೇನೂ ಉಳಿದಿಲ್ಲ.

ಇದು ಪಾಪದ ಹಣವೆಂದು ಇವರಿಗೆ ಅನ್ನಿಸಿಯೇ ಇಲ್ಲ. ಏಕೆಂದರೆ ಕೋವಿಡ್-19 ಇಂದು ತಾವೂ ಸೇರಿದಂತೆ ಜಗತ್ತು ಮಾದರಿಯಾಗಿ ಅನುಸರಿಸುತ್ತಿರುವ ಜೀವನಶೈಲಿಯಿಂದ ಉಂಟಾದ ರೋಗವಿರಬಹುದೆಂಬ ಜಗತ್ತಿನ ಅನೇಕ ಚಿಂತಕರು ವ್ಯಕ್ತಪಡಿಸಿದ ಆತಂಕ-ಅಭಿಪ್ರಾಯ ಇವರ ಗಮನಕ್ಕೇ ಬಂದಂತಿಲ್ಲ. ಇದಕ್ಕೆ ಮುಖ್ಯ ಕಾರಣ, ನಮ್ಮ ಪ್ರತಿನಿಧಿಗಳ ಲೋಕ ಸಮಾಜದ ಸಂವೇದನಾಶೀಲ-ಚಿಂತನಶೀಲ ಭಾಗದೊಡನೆ ಸಂಪರ್ಕ ಕಳೆದುಕೊಂಡು ಏಕಪಕ್ಷೀಯವಾಗಿ, ಬರಡಾಗಿರುವುದು.

ಹಾಗಾಗಿಯೇ ಸದ್ಯದ ವಿಧಾನ ಪರಿಷತ್ ಚುನಾವಣೆಗಳಲ್ಲಿ ಕಾಣುತ್ತಿರುವ ಕುಟುಂಬ ರಾಜಕಾರಣವಾಗಲೀ ಕುಬೇರ ರಾಜಕಾರಣವಾಗಲೀ ಅವನಲ್ಲಿ ಅಸಹ್ಯ, ಜುಗುಪ್ಸೆ ಅಥವಾ ಸಿಟ್ಟು ಹುಟ್ಟಿಸಿಲ್ಲ. ಏಕೆಂದರೆ ಇದಾವುದೂ ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ಮಾದರಿಗೆ ಆಧಾರವಾಗಿರುವ ಸಂವಿಧಾನಕ್ಕೆ ವಿರುದ್ಧವಾಗಿಲ್ಲ. ಇದೆಲ್ಲ ಸಂವಿಧಾನಬದ್ಧವೇ ಆದ ‘ಅಭಿವೃದ್ಧಿ’ಯ ಹಲವು ‘ಸೃಜನಶೀಲ’ ಮಾದರಿಗಳ ಫಲಾನುಭವಗಳ ಪರಿಣಾಮಗಳಷ್ಟೆ! ಅಂದರೆ, ಭಾರತದ ಪ್ರಜೆಯಾಗಿ ಬದುಕುವ ಅತ್ಯುತ್ತಮ ಮಾದರಿ ಇದು ಎಂಬುದನ್ನು ಈ ವ್ಯವಸ್ಥೆಯೇ ಅವನಿಗೆ ಹೇಳುತ್ತಿದೆ. ಇದಕ್ಕೆ ಅಡ್ಡಿಬರುವ ಯಾವ ವರದಿಯೂ ಪಾಠವೂ ಅವನಿಗೆ ಅಪ್ರಸ್ತುತ ಮತ್ತು ತಿರಸ್ಕಾರಾರ್ಹವೆನಿಸುತ್ತದೆ.

ದೇಶ ಸಾಗಿರುವ ಈ ಆತ್ಮಹತ್ಯಾತ್ಮಕ ‘ಅಭಿವೃದ್ಧಿ’ಯ ದಾರಿಯಿಂದ ಪಾರಾಗಲು ಈ ವ್ಯವಸ್ಥೆಯಲ್ಲಿ ಸದ್ಯಕ್ಕೆ ಕಾಣುತ್ತಿರುವ ಒಂದೇ ಮಾರ್ಗವೆಂದರೆ, ಈ ವ್ಯವಸ್ಥೆಯಲ್ಲೇ ಈ ಹಿಂದೆ ಈ ಯಾವ ಆತ್ಮಹತ್ಯಾತ್ಮಕ ದುರ್ಲಕ್ಷಣಗಳೂ ದುರ್ಗಣಗಳೂ ಇಲ್ಲದೆ ನಾವು ಬದುಕಿದ್ದೆವು ಎಂಬ ಅರಿವಿಗೆ ತೆರೆದುಕೊಂಡು, ಈ ವ್ಯವಸ್ಥೆಯನ್ನು ಮತ್ತು ಅದರೊಳಗಿನ ಮನುಷ್ಯನನ್ನು ಏಕಮುಖಗೊಳಿಸದಂತೆ ತಡೆದಿದ್ದ ಅಂದಿನ ಬಹುಸ್ತರದ ಸಾಮಾಜಿಕ ಸಂವಾದಗಳಿಗೆ, ಬಹು ಅಭಿಪ್ರಾಯಗಳ ಮುಖಾಮುಖಿಗೆ ಸೂಕ್ತವಾದ ವಾತಾವರಣವನ್ನು ನಿರ್ಮಿಸುವುದೇ ಆಗಿದೆ.

ಚುರುಮುರಿ



ನಾಯಿಪಾಡು

• ಲಿಂಗರಾಜು ಡಿ.ಎಸ್.

‘ಶಾಸಕರ ಸ್ಥಿತಿ ನಾಯಿಪಾಡಾಗ್ಯದೆ ಅಂತ ದತ್ತಣ್ಣ ಬೇಜಾರು ಮಾಡಿಕ್ಯಂಡದೆ? ದೇವಜ್ಜ ಬ್ಯಾರೆ ‘ಎಲೆಕ್ಷನ್ನಿಗೆ ಉಮ್ಮೇದುವಾರರನ್ನ ನಿಲ್ಲಿಸಕೂ ನಮ್ಮತಾವು ಕಾಸಿಲ್ಲ’ ಅಂತ ನೊಂದ್ಕಂಡದೆ ಪಾಪ!’ ಯಂಟಪ್ಪಣ್ಣ ಕನಿಕರ ತೋರಿಸ್ತು.

‘ನೋಡಿರ್ಲಾ, ಶಾಸಕರು ನಾಯಿ ಥರ ಸದಾ ಎಚ್ಚರಾಗಿರದಿದ್ರೆ ಹಿಂಬಾಲಕರೇ ಉಂಡ್ಕ್ಯಂಡು ನಾಯಕರಿಗೆ ಏನೂ ಸಿಕ್ಕಕುಲ್ಲ! ಸರ್ಕಾರ ಕ್ಷೇತ್ರಕ್ಕೆ ಅನುದಾನ ಎಷ್ಟು ಕೊಡ್ತಾದೆ, ಯಾರ್ಯಾರು ರೋಡಿಗೆ ಟೆಂಡರು ತಕ್ಕಂದವ್ರೆ, ಅದರಲ್ಲಿ ಎಷ್ಟು ಗೀಟಬೌದು. ಎಲ್ಲೆಲ್ಲಿ ಲಿಟಿಗೇಶನ್ ಸೈಟದೆ. ಯಾವ್ಯಾವ ಆಪೀಸರಿಗೆ ಹೆಂಗೆಂಗೆ ಮಕ್ಕುಗಿಬೇಕು. ಯಾವ ನಿಗಮ-ಮಂಡಲಿ ಚೆನ್ನಾಗವೆ. ಒಳ್ಳೆ ಮಂತ್ರಿ ಪೋಸ್ಟಿಗೆ ಏನೇನು ಡೀಲ್ ಮಾಡಬೇಕಾಯ್ತದೆ. ಉಪಚುನಾವಣೇಲಿ ಮಗನಿಗೋ ಹೆಂಡ್ತಿಗೋ ಟಿಕೆಟ್ ಕೊಡಿಸದೆಂಗೆ, ಪಕ್ಷಾಂತರ ಮಾಡಿದ್ರೆ ಏನು ಅನುಕೂಲಾದದು. ಯಾರನ್ನ ಫಿನಿಶ್ ಮಾಡಬೇಕು. ಇವೆಲ್ಲಾ ಹಿಂಬಾಲಕರುದೇ ಯವಾರ. ಪಾಪದ ಶಾಸಕರು ಜನಸೇವೆ ಅಂತ ಮೂಗಿಗೆ ಕವಣೆ ಕಟ್ಟಿಕ್ಯಂಡು ದುಡಿತಿರತರೆ’ ಅಂದ್ರು ತುರೇಮಣೆ. ಅದಕ್ಕೆ ನಾನೊಂದು ಕತೆ ಹೇಳಿದೆ.

‘ನಮ್ಮೂರಿನಗೆ 50 ವರ್ಸದ ಹಿಂದೆ ಒಬ್ಬರು ಪಾಪದ ಸಾಸಕರಿದ್ರು. ಜನದ ಕೈಲಿ ಒಳ್ಳೆಯವನು ಅನ್ನಿಸಿಕ್ಯಳಕೆ ಕಷ್ಟಬೀಳೋರು. ಅಸೆಂಬ್ಲೀಗೋಗಕ್ಕೂ ಬಸ್‌ಚಾರ್ಜು ಇರತಿರ್ನಿಲ್ಲ! ನಮ್ಮ ಸಾಸಕರಿಗೆ ಸ್ವಲ್ಪ ತ್ವಾಟದೂರ. ಜೋರಾಗಿ ಮಾತಾಡದಿದ್ದರೆ ಕಿವಿ ಕೇಳ್ತಿರ್ನಿಲ್ಲ. ಯಾರಾದ್ರೂ ಇವರನ್ನ ತೋರಿಸಿ ಏನೇ ಮಾತಾಡಿಕ್ಯಂಡ್ರೂ ‘ನಾನೇ ಮಾಡ್ಸಿದ್ದು’ ಅಂತ ಸ್ಕೋಪು ತಗತಿದ್ರು. ಒಂದ್ಸಾರಿ ಇವರ ಭಾವನೆಂಟ ಮೊಮ್ಮಗೀನ ನಾಮಕರಣಕ್ಕೆ ಸಾಸಕರನ್ನ ಕರಿಯಕ್ಕೆ ಬಂದೋನು ಪಕ್ಕದಲ್ಲಿದ್ದೋರಿಗೆ ‘ಅಣ್ಣಾರ್ನ ನಾಮಕರಣಕ್ಕೆ ಕರಿಯಾಕ್ ಬಂದೆ’ ಅಂತ ಹೇಳ್ತಿದ್ದ. ಇದುನ್ನ ನೋಡ್ತಿದ್ದ ಸಾಸಕರು ಬಾಯಿಬುಟ್ಟು ಅಧ್ವಾನ ಆಗೋ ಮೊದ್ಲೇ ಭಾವನೆಂಟ ‘ಅಣ್ಣಾರ್ನ ನಾಮಕರಣಕ್ಕೆ ಕರಿಯಾಕ್ ಬಂದೆ’ ಅಂದು ಅವರಿಗೆ ಕೇಳುವಂತೆ ಜೋರಾಗಿ ಹೇಳಿ ಮರ್ಯಾದೆ ಉಳಿಸಿದ್ದ. ಇದು ಆಗಿನ ಸಾಸಕರಿಗೂ ಈಗಿನ ಸಾಸಕರಿಗೂ ಇರೋ ಯತ್ವಾಸ’ ಅಂತಂದೆ. ಎಲ್ಲರೂ ಹೌದು ಅಂದ್ರು.

ಸಂಗತ

ಬಿತ್ತಿದಂತಲ್ಲದೆ ಬೆಳೆ ಇನ್ನೇನಾಗಬೇಕು?

ಹಣವೇ ಪ್ರಧಾನ ಎಂದು ಭಾವಿಸಿದವರಿಗೆ ಬದುಕಲು ಹಣಕ್ಕಿಂತ ಪ್ರೀತಿ ವಾತ್ಸಲ್ಯದ ಅಗತ್ಯವಿದೆ ಎಂದು ತಿಳಿಸಿ ಹೇಳುವುದಾದರೂ ಹೇಗೆ?

• ರಾಜಕುಮಾರ ಕುಲಕರ್ಣಿ

‘ನಮ್ಮಪ್ಪಗ ನಾವು ಆರು ಮಕ್ಕಳು. ಸಣ್ಣವರಿದ್ದಾಗ ಒಂದು ದಿವಸರೆ ನಮ್ಮಪ್ಪ ನಮ್ಮನ್ನು ಎತ್ತಿಕೊಂಡು ಆಡಿಸಿದ್ದು ನೆನಪಿಲ್ಲ. ತಪ್ಪು ಮಾಡಿದರ ದನಕ್ಕ ಬಡಿದಂಗ ಬಡಿತಿದ್ದ. ನಾವು ಏನು ಓದ್ಲಿಕತ್ತಿವಿ ಅಂತ ವಿಚಾರಿಸಿದವನೇ ಅಲ್ಲ. ಕೂಡು ಕುಟುಂಬ ಆದ್ರಿಂದ ಎಲ್ಲಾ ಜವಾಬ್ದಾರಿ ನಮ್ಮ ದೊಡ್ಡಪ್ಪಂದೆ ಆಗಿತ್ತು. ನಮಗೂ ನಮ್ಮಪ್ಪ ನಮ್ಮನ್ನ ವಿಚಾರಿಸ್ತಿಲ್ಲ ಅನ್ನೊದು ಮನಸ್ಸಿಗಿ ಅಂಥ ಹಳಹಳಕಿ ಸಂಗತಿ ಆಗಿರಲಿಲ್ಲ. ಆದರ ಮುಪ್ಪಿನ ಕಾಲಕ್ಕ ಅಪ್ಪಗ ಬ್ಯಾನಿ ಬ್ಯಾಸರಕಿ ಬಂದರ ಕರಳ ಕಿವುಚಿದಂಗ ಆಗ್ತಿತ್ತು. ಹಿರಿಜೀವ ಆರಾಮಾಗಿರಲಿ ಅಂತ ಮನಸ ಬಯಸ್ತಿತ್ತು’.

‘ಅದೇ ನನ್ನ ಮಗನ ವಿಷಯಕ್ಕ ಬಂದರ, ಇದ್ದೊಬ್ಬ ಮಗ ಅಂತ ಅಂಗೈದಾಗ ಇಟಗೊಂಡು ಬೆಳೆಸೀನಿ. ಒಂದು ದಿವಸ ಕೂಡ ಸಿಟ್ಟಿನಿಂದ ಗದರಿಸಿಲ್ಲ. ನಡೆದರ ಕಾಲು ನೋವಾಗ್ತಾವಂತ ಸ್ಕೂಲ್‌ತನಕ ಎತಕೊಂಡು ಹೋಗೀನಿ. ರೆಕ್ಕಿ ಬಲಿತ ಮ್ಯಾಗ ಈಗ ಅಮೆರಿಕಾಕ ಹೋಗಿ ಕೂತಾನ. ವಿಡಿಯೊ ಕಾಲ್ ಮಾಡದಾಗಷ್ಟೇ ನೋಡಿ ಖುಷಿ ಪಡಬೇಕು. ಆ ಚೋಟುದ್ದ ಮೊಮ್ಮಗ ಈ ಆಯಿ ಮುತ್ಯಾಗ ‘ಹಾಯ್ ಗಾಯ್ಸ್’ ಅಂತ ಕರೀತದ. ಕಾಲನ ಪ್ರವಾಹದಾಗ ಕುಟುಂಬಪ್ರೀತಿ, ವಾತ್ಸಲ್ಯ ಅನ್ನೋವು ಕೊಚ್ಚಿ ಹೋಗ್ಯಾವ’ ನಿವೃತ್ತಿಯ ಅಂಚಿನಲ್ಲಿರುವ ಹಿರಿಯ ಮಿತ್ರರೊಬ್ಬರು ತಮ್ಮ ಅಳಲು ತೋಡಿಕೊಂಡರು.

ನ್ಯೂಕ್ಲಿಯರ್ ಕುಟುಂಬಗಳ ಸಂಖ್ಯೆ ವೃದ್ಧಿಸುತ್ತಿರುವ ಈ ಕಾಲದಲ್ಲಿ ಕುಟುಂಬಪ್ರೇಮ ಎನ್ನುವುದು ಕಥೆ, ಕಾದಂಬರಿಗಳಲ್ಲಿನ ಶಬ್ದವಾಗಿಯೂ ಸಿನಿಮಾ ಪರದೆಯ ಮೇಲಿನ ದೃಶ್ಯವಾಗಿಯೂ ಗೋಚರಿಸುತ್ತಿದೆ. ಹಿಂದೆಲ್ಲ ಅವಿಭಕ್ತ ಕುಟುಂಬಗಳಲ್ಲಿ ಮನೆಯ ಒಂದೇ ಸೂರಿನಡಿ ಹಲವು ಸಂಬಂಧಗಳು ಅನ್ಯೋನ್ಯವಾಗಿ ಬಾಳುತ್ತಿದ್ದವು. ಅಜ್ಜ, ಅಜ್ಜಿ, ಅಪ್ಪ, ಅಮ್ಮ, ದೊಡ್ಡಪ್ಪ, ಚಿಕ್ಕಪ್ಪ, ಅತ್ತೆ, ಅಣ್ಣ, ತಂಗಿ ಹೀಗೆ ಹತ್ತು ಹಲವು ಸಂಬಂಧಗಳ ಪರಿಚಯ ಮಗುವಿಗಾಗುತ್ತಿತ್ತು. ಯಾರದೋ ಮಗು ಇನ್ನಾರದೋ ಕಂಕುಳಲ್ಲಿ ಕುಳಿತು ಊಟ ಮಾಡುತ್ತಿತ್ತು, ಬೇರೆ ಯಾರದೋ ತೊಡೆಯ ಮೇಲೆ ನಿದ್ರಿಸುತ್ತಿತ್ತು, ಅಜ್ಜಿಯ ಮಗ್ಗುಲಲ್ಲಿ ಮಲಗಿ ಕಥೆ ಕೇಳುತ್ತಿತ್ತು, ಸೋದರ ಸಂಬಂಧಿಗಳ ಜೊತೆ ಆಡಿ ನಲಿಯುತ್ತಿತ್ತು. ಇಂತಲ್ಲಿ ಮಕ್ಕಳಿಗೆ ಪ್ರೀತಿ, ವಾತ್ಸಲ್ಯದ ಜೊತೆಗೆ ಸುರಕ್ಷತೆಯ ಭರವಸೆ ಅಗಣಿತವಾಗಿ ಸಿಗುತ್ತಿತ್ತು.

ಕಾಲಕ್ರಮೇಣ ಕುಟುಂಬ ಘಟಕ ಒಡೆದು ನ್ಯೂಕ್ಲಿಯರ್ ಕುಟುಂಬಗಳು ಅಸ್ತಿತ್ವಕ್ಕೆ ಬಂದು ಈಗ ಮಕ್ಕಳಿಗೆ ಅಪ್ಪ ಅಮ್ಮನನ್ನು ಹೊರತುಪಡಿಸಿ ಕುಟುಂಬದ ಉಳಿದ ಸದಸ್ಯರ ಪ್ರೀತಿ, ವಾತ್ಸಲ್ಯ ಎನ್ನುವುದು ಮರೀಚಿಕೆಯಾಗಿದೆ. ಅದೆಷ್ಟೋ ಕುಟುಂಬಗಳಲ್ಲಿ ಗಂಡ ಹೆಂಡತಿ ಇಬ್ಬರೂ ಉದ್ಯೋಗಸ್ಥರಾಗಿರುವುದರಿಂದ ಇನ್ನೂ ಅಂಬೆಗಾಲಿಕ್ಕುವ ವಯಸ್ಸಿನಲ್ಲೇ ಮಕ್ಕಳ ಹೊಣೆ ಆಯಾಗಳಿಗೋ ಇಲ್ಲವೇ ಮಕ್ಕಳ ಪಾಲನಾ ಕೇಂದ್ರಗಳಿಗೋ ವರ್ಗಾವಣೆಗೊಳ್ಳುತ್ತದೆ. ತಮ್ಮ ಬಾಲ್ಯ ಜೀವನದ ಅತಿ ಮಹತ್ವದ ಸಮಯವನ್ನು ಬೇರೆಯವರ ಆಶ್ರಯದಲ್ಲಿ ಕಳೆಯುವ ಮಕ್ಕಳಲ್ಲಿ ಅನಾಥಪ್ರಜ್ಞೆ ಬೆಳೆಯುತ್ತಿದೆ.

ಕುಟುಂಬ ವ್ಯವಸ್ಥೆಯಲ್ಲಿನ ವಿವಿಧ ಸಂಬಂಧಗಳ ಅರಿವೇ ಇರದ ಇವತ್ತಿನ ಮಕ್ಕಳಿಗೆ ಎಲ್ಲ ಸಂಬಂಧಗಳೂ ಅಂಕಲ್, ಆಂಟಿಗಳೆ.

ಹಿಂದೆಲ್ಲ ಅಮ್ಮಂದಿರು ಹೊಳೆಯುವ ಚಂದ್ರ, ಮಿನುಗುತ್ತಿರುವ ನಕ್ಷತ್ರಗಳು, ಗಿಡ, ಮರ, ಬಳ್ಳಿ, ಹೂವುಗಳನ್ನು ತೋರಿಸಿ ಮಕ್ಕಳಿಗೆ ಉಣಿಸುತ್ತಿದ್ದರು. ಆದರೆ ಈಗಿನ ಮಕ್ಕಳಿಗೆ ಆ ಸೌಭಾಗ್ಯವಿಲ್ಲ. ಮಮ್ಮಿಗಳು ಲ್ಯಾಪ್‌ಟಾಪ್ ಎದುರಿಟ್ಟು ಕಾರ್ಟೂನ್ ತೋರಿಸಿ ಮುಳ್ಳುಚಮಚದಿಂದ ಜಂಕ್‌ಫುಡ್ ತಿನ್ನಿಸುವ ಕಾಲವಿದು.

ಭವಿಷ್ಯವನ್ನು ರೂಪಿಸುವ ಹುನ್ನಾರದಲ್ಲಿ ಪಾಲಕರು ಮಕ್ಕಳ ಸಹಜ ಬಾಲ್ಯ ಜೀವನವನ್ನೇ ಹೊಸಕಿ ಹಾಕುತ್ತಿದ್ದಾರೆ. ಮೆಟ್ರೊಪಾಲಿಟನ್ ನಗರಗಳಲ್ಲಿ ಮಗು ತಾಯಿಯ ಗರ್ಭದಲ್ಲಿರುವಾಗಲೇ ಶಾಲೆಗೆ ಪ್ರವೇಶ ದೊರಕಿಸುವ ವ್ಯವಸ್ಥೆ ಇದೆ. ಪಾಲಕರ ವಾಂಛೆಯ ಪರಿಣಾಮ ಮಗು ಸ್ಪರ್ಧಾತ್ಮಕ ಜಗತ್ತಿಗೆ ತನ್ನನ್ನು ಒಡ್ಡಿಕೊಳ್ಳಲೇಬೇಕು. ಈ ವ್ಯವಸ್ಥೆಯಲ್ಲಿ ಮಕ್ಕಳು ಕುಟುಂಬ ವಾತಾವರಣದಿಂದ ದೂರವಿರಬೇಕಾದ ಅನಿವಾರ್ಯ. ಪರಿಣಾಮವಾಗಿ ಮಕ್ಕಳಲ್ಲಿ ಪ್ರೀತಿ, ವಾತ್ಸಲ್ಯದ ಭಾವನೆಗಳು ಬರಡಾಗುತ್ತಿವೆ.

ನನ್ನ ಹಿರಿಯ ಮಿತ್ರರ ಮಗ ಭಾರತಕ್ಕೆ ಬಂದಿದ್ದಾಗ ಭೇಟಿಯಾಗುವ ಪ್ರಸಂಗ ಎದುರಾಯಿತು. ಅವನು ಮಾತಿನ ನಡುವೆ ಹೇಳಿದ್ದು ‘ಹಳ್ಳಿಯಲ್ಲಿ ಎಲ್ಲ ಸೌಕರ್ಯವಿರುವ ಮನೆ ಕಟ್ಟಿಸಿದ್ದೀನಿ. ಕೆಲಸಕ್ಕೆ ಆಳುಗಳಿದ್ದಾರೆ. ಹಣ ಕಳಿಸ್ತೀನಿ. ಓಡಾಡೊಕೆ ಕಾರಿದೆ. ಅಮೆರಿಕಾದಿಂದಲೇ ಕಾಲ್ ಮಾಡಿ ಡಾಕ್ಟರ್‍ನ ಮನೆಗೆ ಕರೆಯಿಸಿ ಚಿಕಿತ್ಸೆ ಕೊಡಿಸ್ತೀನಿ. ಇನ್ನೇನು ಬೇಕು ಇವರಿಗೆ ಬದುಕೋಕೆ?’ ಇದು ಇವತ್ತಿನ ಮಕ್ಕಳ ಮನಃಸ್ಥಿತಿ. ಹಣವೇ ಪ್ರಧಾನ ಎಂದು ಭಾವಿಸಿದವರಿಗೆ ಬದುಕಲು ಹಣಕ್ಕಿಂತ ಪ್ರೀತಿ, ವಾತ್ಸಲ್ಯದ ಅಗತ್ಯವಿದೆ ಎಂದು ತಿಳಿಸಿ ಹೇಳುವುದಾದರೂ ಹೇಗೆ? ಹಾಗೆ ಹೇಳುವ ನೈತಿಕ ಸ್ಥೈರ್ಯವನ್ನೇ ಪಾಲಕರು ಕಳೆದುಕೊಂಡಿರುವಾಗ ಯಾರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುವುದು?

ಸ್ಪರ್ಧಾತ್ಮಕ ಯುಗದಲ್ಲಿ ನಾವು ಮಕ್ಕಳನ್ನು ಬಿತ್ತುತ್ತಿದ್ದೇವೆ. ಸ್ಪರ್ಧಾತ್ಮಕ ಬೆಳವಣಿಗೆಗೆ ಅಗತ್ಯವಾದ ಎಲ್ಲ ರಸಗೊಬ್ಬರಗಳನ್ನು ಬೆಳೆಗೆ ಉಣಿಸುತ್ತಿದ್ದೇವೆ. ಬಿತ್ತಿದಂತೆ ಬೆಳೆ ಎನ್ನುವುದು ನಿಸರ್ಗದ ಸಹಜ ಧರ್ಮವೇ ಆಗಿರುವಾಗ ಇನ್ನು ಮಕ್ಕಳು ಯಂತ್ರಗಳಂತಾಗದೆ ಇನ್ನೇನಾಗಬೇಕು?

ವಾಚಕರ ವಾಣಿ

ವಿಮೆ ಹಣ ಬಿಡುಗಡೆಗೆ ನೆಪ ಬೇಡ

ರಾಜ್ಯದಾದ್ಯಂತ ಮಳೆ ಬಂದು ಕೆರೆ ಕುಂಟೆ ನದಿಗಳು ಮತ್ತು ಅಂತರ್ಜಲ ಹೆಚ್ಚಿಸುವ ಕೃಷಿ ಹೊಂಡಗಳು ತುಂಬಿ ಹರಿಯುತ್ತಿರುವುದು ಸಂತೋಷದ ವಿಷಯ. ಆದರೆ ದುಃಖದ ಸಂಗತಿಯೆಂದರೆ, ಬೆಳೆಗಾಗಿ ವರ್ಷಪೂರ್ತಿ ಕಾಯುವ ರೈತನಿಗೆ ಮಾತ್ರ ಒಂದೋ ಅನಾವೃಷ್ಟಿ ಇಲ್ಲವಾದರೆ ಅತಿವೃಷ್ಟಿಯಿಂದ ಅನಾಹುತವಾಗುವುದು. ಈ ವರ್ಷ ಬೆಳೆ ಕೈಗೆಟುಕುವ ಸಂದರ್ಭದಲ್ಲೇ ಅತಿವೃಷ್ಟಿ ಆಗಿರುವುದು ರೈತನನ್ನಷ್ಟೇ ಅಲ್ಲ ಸಾಮಾನ್ಯಜನರನ್ನೂ ಸಂಕಷ್ಟಕ್ಕೆ ನೂಕಲಿದೆ. ಇದರ ಪರಿಣಾಮವನ್ನು ನಾವು ಬೆಲೆಯೇರಿಕೆಯ ಮುಖಾಂತರ ಮುಂದಿನ ದಿನಗಳಲ್ಲಿ ಅನುಭವಿಸಬೇಕಿದೆ.

ಇಂತಹ ಸಂಕಷ್ಟಗಳನ್ನು ಎದುರಿಸುವ ಸಲುವಾಗಿಯೇ ಬೆಳೆ ವಿಮೆಯನ್ನು ಸಹ ರೈತರು ಮಾಡಿಸಿರುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಏನೂ ನೆಪ ಹೇಳದೆ ವಿಮೆ ಹಣವನ್ನು ನೀಡಲಿ. ಮುಂದಿನ ಮುಂಗಾರಿಗೆ ನಮ್ಮ ದೇಶದ ರೈತ ಸಜ್ಜಾಗಲಿ.

ಎಂ.ಎನ್.ರಾಘವೇಂದ್ರ, ಪಾವಗಡ

ಕಸಾಪ ತಾಲ್ಲೂಕು ಘಟಕಕ್ಕೂ ಚುನಾವಣೆಯಾಗಲಿ

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವುದು ಒಳ್ಳೆಯದು. ಪ್ರಸ್ತುತ ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಹಿರಿಯ ಸಾಹಿತಿಗಳ ಶಿಫಾರಸುಗಳ ಮೂಲಕ ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ನೇಮಿಸಲಾಗುತ್ತಿದೆ. ಕೆಲವೆಡೆ ಹಿಂಬಾಲಕರು, ಸಾಹಿತ್ಯ ಕ್ಷೇತ್ರದ ಅನುಭವ ಇಲ್ಲದವರು ಹಾಗೂ ರಾಜಕೀಯಪ್ರೇರಿತರಿಗೂ ಈ ಸ್ಥಾನ ದೊರೆಯುತ್ತಿದೆ. ಇನ್ನು ಕೆಲವರಂತೂ ಈ ಹುದ್ದೆ ಗಿಟ್ಟಿಸಿಕೊಳ್ಳಲು ದೊಡ್ಡ ಲಾಬಿಯನ್ನೇ ಮಾಡುತ್ತಾರೆ. ಒಂದು ವೇಳೆ ಸದ್ಯಕ್ಕೆ ಚುನಾವಣೆ ನಡೆಸುವುದು ಕಷ್ಟವಾದರೂ ತಾಲ್ಲೂಕು ಘಟಕಗಳ ಅಧ್ಯಕ್ಷರನ್ನು ಕನಿಷ್ಠಪಕ್ಷ ಮಾನದಂಡಗಳನ್ನು ಅನುಸರಿಸಿಯಾದರೂ ಆಯ್ಕೆ ಮಾಡುವುದು ಒಳಿತು. ಜೊತೆಗೆ, ಭವಿಷ್ಯದಲ್ಲಿ ಈ ಚುನಾವಣೆ ನಡೆಸುವ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿದೆ.

ಶರಣು ಚಟ್ಟಿ, ಗೋಲಗೇರಿ, ಸಿಂದಗಿ

ಕಟ್ಟಡ ಕಾಮಗಾರಿಗೆ ಬೇಕೊಂದು ಕಾನೂನು

ಮನೆ ಕಟ್ಟುವುದು ಮಾನವ ಜನಾಂಗದ ಸಹಜ ಕ್ರಿಯೆ. ಆದರೆ ತಮ್ಮ ನೆಮ್ಮದಿಗಾಗಿ ಕಟ್ಟಿಕೊಳ್ಳುವ ಮನೆಯ ಕೆಲಸ ಇತರರ ನೆಮ್ಮದಿಗೆ ಭಂಗ ಉಂಟಾಗದಂತೆ ನೋಡಿಕೊಳ್ಳುವುದು ಅವಶ್ಯಕ. ವೈಭವೋಪೇತ ಜೀವನಕ್ಕಾಗಿ ಕಟ್ಟುವ ಮನೆಗೆ ನಲವತ್ತೆಂಟು ಸಿಂಗಾರ ಮಾಡುವ ಭರದಲ್ಲಿ ಅತ್ಯಧಿಕ ಶಬ್ದಮಾಲಿನ್ಯ ಉಂಟು ಮಾಡಲಾಗುತ್ತಿದೆ. ಕಬ್ಬಿಣ, ಟೈಲ್ಸ್, ಮಾರ್ಬಲ್ಸ್, ಗ್ರಾನೈಟ್ಸ್ ಕತ್ತರಿಸುವ ಸಮಯಗಳಲ್ಲಂತೂ ಮಾಡುವ ಶಬ್ದವು ಸಹಿಸಲು ಅಸಾಧ್ಯವಾಗುತ್ತದೆ. ನೆರೆಯಲ್ಲಿ ವಯಸ್ಸಾದವರು, ರೋಗಿಗಳು, ಮಕ್ಕಳು ಇದ್ದರೆ ಕಾಮಗಾರಿ ಮುಗಿಯುವವರೆಗೆ ಅವರ ಜೀವನ ಯಾತನಾದಾಯಕವಾಗುತ್ತದೆ. ಇತ್ತೀಚೆಗೆ ಹೊರ ರಾಜ್ಯದ ಕಾರ್ಮಿಕರು ತುಂಡು ಗುತ್ತಿಗೆ ಕೆಲಸ ನಿರ್ವಹಿಸುವ ಕಾರಣ, ಮುಂಜಾನೆಯಿಂದ ತಡರಾತ್ರಿಯವರೆಗೂ ಕೆಲಸ ಮಾಡುತ್ತಾರೆ. ಇದನ್ನು ಪ್ರಶ್ನಿಸಿದರೆ ಜಗಳಗಳೂ ಉಂಟಾಗುತ್ತವೆ.

ಹಾಗಾಗಿ ಇದನ್ನು ತಪ್ಪಿಸಲು ಸೂಕ್ತ ನಿಯಮ ಮಾಡುವ ತುರ್ತು ಅವಶ್ಯಕತೆ ಇದೆ. ಕಬ್ಬಿಣದ ಕೆಲಸಗಳನ್ನು ಕೈಗಾರಿಕಾ ವಲಯಗಳಲ್ಲಿ ಮಾಡಿಕೊಂಡು ಬಂದಲ್ಲಿ ಶಬ್ದಮಾಲಿನ್ಯ ಬಹುತೇಕ ತಗ್ಗುತ್ತದೆ. ಹಾಗೆಯೇ ಗುತ್ತಿಗೆದಾರರು ಗೃಹೋಪಯೋಗಿ ವಿದ್ಯುತ್ ದರದಲ್ಲಿ ವಾಣಿಜ್ಯ ದರದ ವಿದ್ಯುತ್ ಬಳಕೆ ಮಾಡಿಕೊಳ್ಳುವುದನ್ನೂ ತಪ್ಪಿಸಬಹುದು. ಅಮೃತಶಿಲೆಗಳನ್ನು ಸಹ ಅಳತೆಗೆ ತಕ್ಕಂತೆ ಕೈಗಾರಿಕಾ ಪ್ರದೇಶದಲ್ಲೇ ಸಿದ್ಧ ಮಾಡಿಕೊಂಡು ಬಂದು ಅಳವಡಿಸುವಂತೆ ಆಗಬೇಕು. ಈ ಕುರಿತು ಸಾರ್ವಜನಿಕರು ಮತ್ತು ಪರಿಣತರ ಅಭಿಪ್ರಾಯ ಪಡೆದು ಒಂದು ಮಾರ್ಗಸೂಚಿ ಹೊರಡಿಸಿ, ನಂತರ ಅದಕ್ಕೆ ಕಾನೂನಿನ ರೂಪ ನೀಡಿದರೆ ಒಳಿತು. ಇಲ್ಲವಾದಲ್ಲಿ ವಾಸಕ್ಕೆ ಬರುವ ಮುನ್ನವೇ ನೆರೆಯವರು ಹೊರೆಯೆಂದೆನಿಸುವರು.

ಎಸ್.ರವಿ, ಮೈಸೂರು

ಅತಿರೇಕದ ಸನ್ನಿವೇಶ: ತಕ್ಕ ಶಾಸ್ತಿಯಾಗಲಿ

ನಾಗಾಲ್ಯಾಂಡಿನಲ್ಲಿ ಸೈನಿಕರು ತೀವ್ರವಾಗಿ ವಿಚಾರಣೆ ಮಾಡದೆ ಅಮಾಯಕ ನಾಗರಿಕರ ಮೇಲೆ ಗುಂಡಿನ ದಾಳಿ ನಡೆಸಿದ್ದು ಅಕ್ಷಮ್ಯ ಅಪರಾಧ. ಹೋದ ಜೀವಕ್ಕೆ ಬೆಲೆ ತೆರುವವರು ಯಾರು? ಅವರನ್ನು ನಂಬಿದ್ದ ಕುಟುಂಬಗಳಿಗೆ ಎಷ್ಟೇ ಪರಿಹಾರಧನವನ್ನು ನೀಡಿದರೂ ಕಳೆದುಕೊಂಡ ಅಪ್ಪನನ್ನು ಮಕ್ಕಳಿಗೆ, ಗಂಡನನ್ನು ಹೆಂಡತಿಗೆ ಮತ್ತೆ ಕೊಡಿಸಲು ಗುಂಡಿನ ದಾಳಿಗೆ ಆದೇಶಿಸಿದ ಅಧಿಕಾರಿಗೆ ಸಾಧ್ಯವೇ? ಕೂಲಂಕಷವಾಗಿ ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಿದರೆ, ಮುಂದೆಯಾದರೂ ಇಂತಹ ಅತಿರೇಕದ ಸನ್ನಿವೇಶಗಳನ್ನು ತಡೆಯಬಹುದು.

ವಿ.ವಿಜಯೇಂದ್ರ ರಾವ್, ಬೆಂಗಳೂರು

ಲಂಚಗುಳಿತನದ ನಾನಾ ರೂಪ

ಲಂಚಗುಳಿತನ ಮತ್ತು ಪೊಲೀಸ್ ವ್ಯವಸ್ಥೆಯ ವಿರುದ್ಧ ಗೃಹಸಚಿವರು ಸಿಡಿದೆದ್ದ ವಿಡಿಯೊ ವೈರಲ್ ಆಗಿದೆ. ಗೃಹಸಚಿವರ ಇಂತಹ ನಡೆ ಸಮಂಜಸವೇ. ಆದರೂ ತಾವು ಖುದ್ದು ಗೃಹ ಸಚಿವರಾಗಿ, ಅಸಹಾಯಕತೆಯ ತೋರ್ಪಡಿಕೆಯಂತಹ ಮಾತನ್ನಾಡುವುದು ಎಷ್ಟು ಸರಿ ಎಂಬುದು ಸದ್ಯಕ್ಕೆ ಅವರ ಮುಂದಿರುವ ಪ್ರಶ್ನೆ. ಲಂಚಗುಳಿತನ ಗ್ರಾಮ ಪಂಚಾಯಿತಿ ಸದಸ್ಯನಿಂದ ಹಿಡಿದು ಶಾಸಕ, ಸಂಸದನವರೆಗೂ, ಅಷ್ಟೇ ಯಾಕೆ ಸರ್ಕಾರದ ಕುರ್ಚಿಯಲ್ಲಿ ಅಂಟಿಕೊಂಡವರಲ್ಲೂ ಬೇರೆ ಬೇರೆ ರೂಪಗಳಲ್ಲಿ, ಅವತಾರಗಳಲ್ಲಿ ಜನಸಾಮಾನ್ಯರ ಕುತ್ತಿಗೆಯನ್ನು ಬಿಗಿದಿದೆ.

ಈಗಿನ ಪ್ರಧಾನಿಯವರು ಅಧಿಕಾರಕ್ಕೆ ಬರುವಾಗ ‘ಹಿಂದಿನ ಸರ್ಕಾರಗಳು ಲಂಚದಲ್ಲೇ ಬದುಕಿವೆ. ನಾವು ಆ ರೀತಿ ಇಲ್ಲ. ನಮ್ಮದು ಸಿದ್ಧಾಂತ, ತತ್ವ, ಪಕ್ಷನಿಷ್ಠೆ, ಅಭಿವೃದ್ಧಿಗಾಗಿ ತುಡಿತ. ಮುಂದೆ ಹೊಸ ಕ್ರಾಂತಿ ಶುರುವಾಗುತ್ತದೆ. ದೇಶ ಹಿಂದೆಂದೂ ಕಾಣದ ರೀತಿಯಲ್ಲಿ ಅಭಿವೃದ್ಧಿಯಾಗುತ್ತದೆ. ಜನಸಾಮಾನ್ಯರು ನಿರಾಳವಾಗಿ ಬದುಕಬಹುದು’ ಎಂಬಂತಹ ಉದ್ಘೋಷಗಳನ್ನು ಮಾಡಿದ್ದರು. ಆದರೆ ಕರ್ನಾಟಕವೂ ಒಳಗೊಂಡಂತೆ ಇಡೀ ದೇಶದಲ್ಲಿ ಲಂಚಗುಳಿತನ, ಭ್ರಷ್ಟತೆ, ಅಧಿಕಾರದ ವ್ಯಾಮೋಹಗಳಿಂದ ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರುವ ನಡೆ ಮುಂದುವರಿದಿದೆ. ಹೀಗಿರುವಾಗ ಲಂಚ ಮತ್ತು ಭ್ರಷ್ಟಾಚಾರವನ್ನು ಬುಡಸಮೇತ ನಿರ್ನಾಮಗೊಳಿಸುವ ಪ್ರತಿಜ್ಞೆ ಮಾಡಿದ್ದ ಪ್ರಧಾನಿಯವರು ಈ ಬಗ್ಗೆ ಸಾರ್ವಜನಿಕವಾಗಿ ಮಾತನಾಡಲಿ ಅಥವಾ ಮುಖ್ಯಮಂತ್ರಿಯವರಾದರೂ ಮಾತನಾಡಲಿ.

ಅಶ್ವತ್ಥ ಕಲ್ಲೇದೇವರಹಳ್ಳಿ, ಕುಂಕಾನಾಡು, ಕಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸೇನೆಗೆ ವಿಶೇಷಾಧಿಕಾರ ನೀಡುವ ಕಾಯ್ದೆ ರದ್ದತಿಗೆ ಆಗ್ರಹ

‘ಕೊಲ್ಲುವ ಪರವಾನಗಿ’ ವಿರುದ್ಧ ಮತ್ತೆ ಕೂಗು

ಆಫ್‌ಸ್ಪ ರದ್ದುಪಡಿಸಿ ಎಂದು 2006ರ ನವೆಂಬರ್ 3ರಂದು ಮಣಿಪುರದ ನಾಗರಿಕರು ಬೆಂಗಳೂರಿನ ಎಂಜಿ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದ್ದರು –ಪ್ರಜಾವಾಣಿ ಸಂಗ್ರಹ ಚಿತ್ರ

• ಜಯಸಿಂಹ ಆರ್.
ಅಮೃತಕಿರಣ್ ಬಿ.ಎಂ.

ಸೇನೆಗೆ ನೀಡಿರುವ ವಿಶೇಷಾಧಿಕಾರವನ್ನು ವಾಪಸ್ ಪಡೆಯಬೇಕು ಎಂಬ ಕೂಗು, ನಾಗಾಲ್ಯಾಂಡ್‌ನಲ್ಲಿ ಸೈನಿಕರ ಗುಂಡಿಗೆ 14 ನಾಗರಿಕರು ಬಲಿಯಾದ ನಂತರ ಮತ್ತೆ ಮುನ್ನೆಲೆಗೆ ಬಂದಿದೆ. ಸೇನೆಗೆ ವಿಶೇಷಾಧಿಕಾರವನ್ನು ನೀಡುವ ‘ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ–1958’ ಅನ್ನು (ಆಫ್‌ಸ್ಪ) ರದ್ದುಪಡಿಸಬೇಕು ಎಂದು ನಾಗಾಲ್ಯಾಂಡ್, ಮಣಿಪುರದ ಮುಖ್ಯಮಂತ್ರಿಗಳು ಆಗ್ರಹಿಸಿದ್ದಾರೆ. ಆಫ್‌ಸ್ಪ ರದ್ದುಗೊಳಿಸಿ ಎಂದು ಈಶಾನ್ಯ ಭಾರತದ ರಾಜ್ಯಗಳ ಜನರು ಮತ್ತೆ ಬೀದಿಗಿಳಿದು ಹೋರಾಟ ಆರಂಭಿಸಿದ್ದಾರೆ.

1958ರ ಮೇನಲ್ಲಿ ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಸೇನೆಗೆ ವಿಶೇಷಾಧಿಕಾರ ನೀಡಲಾಗಿತ್ತು. ನಂತರದ ಕೆಲವೇ ತಿಂಗಳಲ್ಲಿ ಸಂಸತ್ತಿನಲ್ಲಿ ಸಂಬಂಧಿತ ಮಸೂದೆಯನ್ನು ಮಂಡಿಸಿ, ಅನುಮೋದನೆ ಪಡೆಯಲಾಯಿತು. ಕಾಯ್ದೆ ತರುತ್ತಿರುವುದರ ಕಾರಣ ಮತ್ತು ಅಗತ್ಯವನ್ನು ಕಾಯ್ದೆಯ ಪೀಠಿಕೆಯಲ್ಲಿ ವಿವರಿಸಲಾಗಿದೆ.

‘ಈಶಾನ್ಯ ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಗಲಭೆ ಮತ್ತು ಹಿಂಸಾಚಾರವು ಸಾಮಾನ್ಯ ಎಂಬಂತಾಗಿದೆ. ಅಲ್ಲಿನ ರಾಜ್ಯಗಳ ಆಡಳಿತ ಯಂತ್ರಗಳು ಈ ಆಂತರಿಕ ಪ್ರಕ್ಷುಬ್ಧ ಸ್ಥಿತಿಯನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಹೀಗಾಗಿ ಪ್ರಕ್ಷುಬ್ಧ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಸೇನೆಯ ಅಧಿಕಾರಿಗಳಿಗೆ ಈ ಕಾಯ್ದೆಯ 4ನೇ ಸೆಕ್ಷನ್ ಅಡಿ ವಿಶೇಷ ಅಧಿಕಾರವನ್ನು ನೀಡಲಾಗುತ್ತದೆ. ಸೇನೆಯ ಅಧಿಕಾರಿಗಳಿಗೆ ವಿಶೇಷ ಅಧಿಕಾರದ ಜತೆಗೆ ನೀಡಲಾಗಿರುವ ನಿಬಂಧನೆಗಳನ್ನು ಕಾಯ್ದೆಯ 5ನೇ ಸೆಕ್ಷನ್ ಅಡಿ ವಿವರಿಸಲಾಗಿದೆ’ ಎಂದು ಆಫ್‌ಸ್ಪ ಕಾಯ್ದೆಯ ಪೀಠಿಕೆಯಲ್ಲಿ ವಿವರಿಸಲಾಗಿದೆ.

ಈ ಕಾಯ್ದೆಯನ್ನು ಜಾರಿಗೆ ತಂದಾಗ ಅಸ್ಸಾಂ ಮತ್ತು ಮಣಿಪುರವನ್ನು ಮಾತ್ರ ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾಗಿತ್ತು. ನಂತರದ ವರ್ಷಗಳಲ್ಲಿ ಈಶಾನ್ಯ ಭಾರತದ ಎಲ್ಲಾ ರಾಜ್ಯಗಳನ್ನು ಹಂತಹಂತವಾಗಿ, ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾಗಿತ್ತು. ಈಚಿನ ವರ್ಷಗಳಲ್ಲಿ ಕೆಲವು ರಾಜ್ಯಗಳನ್ನು ಈ ಪಟ್ಟಿಯಿಂದ ಹೊರಗಿಡಲಾಗಿದೆ.

ವಿಶೇಷಾಧಿಕಾರ

ಸಶಸ್ತ್ರ ಪಡೆಯ ತುಕಡಿಗಳ ಮುಖ್ಯಸ್ಥ ಅಥವಾ ವಾರಂಟ್ ಅಧಿಕಾರಿ ಅಥವಾ ತುಕಡಿ ಮುಖ್ಯಸ್ಥನ ಅಧೀನ ಅಧಿಕಾರಿ ಅಥವಾ ಅದೇ ರ‍್ಯಾಂಕ್‌ನ ಬೇರೆ ಅಧಿಕಾರಿಗಳಿಗೆ, ಈ ಅಧಿಕಾರಗಳು ಅನ್ವಯವಾಗುತ್ತದೆ.

1 ಈ ಕಾಯ್ದೆ ಅಡಿ ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾದ ಪ್ರದೇಶದಲ್ಲಿ ಸಾರ್ವಜನಿಕ ಸುವ್ಯವಸ್ಥೆ ಕಾಪಾಡಲು ಅಗತ್ಯ ಎನಿಸಿದರೆ ಸೇನಾಧಿಕಾರಿ ಅಥವಾ ಸೈನಿಕರು ಎಚ್ಚರಿಕೆ ನೀಡಿ, ನಂತರ ಗುಂಡು ಹಾರಿಸಬಹುದು. ಗುಂಡು ಹಾರಿಸಿದ್ದರ ಪರಿಣಾಮ ಸಾವು ಸಂಭವಿಸುವ ಸಾಧ್ಯತೆ ಇದ್ದರೂ, ಗುಂಡು ಹಾರಿಸಬಹುದು. ಘೋಷಿತ ಪ್ರದೇಶದಲ್ಲಿನ ಯಾವುದೇ ವ್ಯಕ್ತಿಯು ಕಾನೂನನ್ನು ಉಲ್ಲಂಘಿಸಿದಾಗ ಅಥವಾ ಆ ಕ್ಷಣದಲ್ಲಿ ಜಾರಿಯಲ್ಲಿರುವ ಆದೇಶವನ್ನು ಉಲ್ಲಂಘಿಸಿದಾಗ ಇದು ಅನ್ವಯವಾಗುತ್ತದೆ. ಶಸ್ತ್ರಗಳನ್ನು ಸಾಗಿಸುವಾಗ ಅಥವಾ ಶಸ್ತ್ರಾಸ್ತ್ರವಾಗಿ ಬಳಸಬಹುದಾದ ವಸ್ತುಗಳನ್ನು ಸಾಗಿಸುವಾಗ ಅಥವಾ ಸ್ಫೋಟಕ ವಸ್ತುಗಳನ್ನು ಸಾಗಿಸುವಾಗಲೂ ಈ ಅಧಿಕಾರ ಅನ್ವಯವಾಗುತ್ತದೆ

2 ಮೇಲ್ನೋಟಕ್ಕೆ ಅಪರಾಧ ಎಂದು ಕಾಣಿಸುವ ಕೃತ್ಯ ಎಸಗಿರುವ ಅಥವಾ ಅಂತಹ ಕೃತ್ಯ ಎಸಗಿದ್ದಾನೆ ಎಂಬ ಶಂಕಿತ ವ್ಯಕ್ತಿಯನ್ನು ವಾರಂಟ್ ಇಲ್ಲದೆ ಬಂಧಿಸಬಹುದು. ಒಬ್ಬ ವ್ಯಕ್ತಿಯು ಇಂತಹ ಕೃತ್ಯ ಎಸಗಲಿದ್ದಾನೆ ಎಂಬ ಸೂಚನೆ ಸಿಕ್ಕಾಗಲೂ ಆ ವ್ಯಕ್ತಿಯನ್ನು ವಾರಂಟ್ ಇಲ್ಲದೆ ಬಂಧಿಸಬಹುದು. ಬಂಧನದ ವೇಳೆ ಅಗತ್ಯವಿದ್ದರೆ ಬಲವನ್ನು ಪ್ರಯೋಗಿಸಬಹುದು

3 ತಲೆಮರೆಸಿಕೊಂಡ ವ್ಯಕ್ತಿಯನ್ನು ಹುಡುಕಲು ಅಥವಾ ಕಳ್ಳತನ ಮಾಡಲಾದ ಸ್ವತ್ತನ್ನು ವಶಪಡಿಸಿಕೊಳ್ಳಲು ಅಥವಾ ಕಾನೂನುಬಾಹಿರವಾಗಿ ಇರಿಸಿಕೊಳ್ಳಲಾದ ಶಸ್ತ್ರ, ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳಲು ಸೇನಾಧಿಕಾರಿಗಳು ಯಾವುದೇ ಸ್ಥಿರಾಸ್ತಿಯನ್ನು ವಾರಂಟ್ ಇಲ್ಲದೆ ಪ್ರವೇಶಿಸಬಹುದು ಮತ್ತು ಅಲ್ಲಿ ಶೋಧಕಾರ್ಯ ನಡೆಸಬಹುದು. ಇಂತಹ ಕಾರ್ಯಾಚರಣೆ ವೇಳೆ ಅಗತ್ಯಬಿದ್ದರೆ ಬಲವನ್ನು ಪ್ರಯೋಗಿಸಬಹುದು

ಏನು ಮಾಡಿದರೂ ಕ್ರಮ ತೆಗೆದುಕೊಳ್ಳುವಂತಿಲ್ಲ

ಈ ಕಾಯ್ದೆಯ ಅಡಿ ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾದ ಪ್ರದೇಶದಲ್ಲಿ ಕಾರ್ಯನಿರ್ವಹಿಸುವಾಗ ಸೇನೆಯ ಯಾವುದೇ ರ‍್ಯಾಂಕ್‌ನ ಅಧಿಕಾರಿಗಳು ನಡೆಸುವ, ಯಾವುದೇ ಕೃತ್ಯದ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದನ್ನು ಈ ಕಾಯ್ದೆಯು ನಿರ್ಬಂಧಿಸುತ್ತದೆ. ‘ಈ ಕಾಯ್ದೆ ಅಡಿ ನೀಡಲಾದ ಅಧಿಕಾರವನ್ನು ಚಲಾಯಿಸುವಾಗ ಸೇನೆಯ ಯಾವುದೇ ವ್ಯಕ್ತಿಯು ಎಸಗುವ ಯಾವುದೇ ಕೃತ್ಯದ ವಿರುದ್ಧ ವಿಚಾರಣೆ, ಪ್ರಕರಣ, ಕಾನೂನು ಪ್ರಕ್ರಿಯೆ ಆರಂಭಿಸಬಾರದು’ ಎಂದು ಕಾಯ್ದೆಯ 6ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

‘ಈ ಕಾಯ್ದೆ ಅಡಿ ಸೇನಾಧಿಕಾರಿಗಳು ತಾವು ಬಂಧಿಸಿದ ವ್ಯಕ್ತಿಯನ್ನು ಹತ್ತಿರದ ಪೊಲೀಸ್ ಠಾಣೆಗೆ ತಕ್ಷಣವೇ ಹಸ್ತಾಂತರಿಸಬೇಕು’ ಎಂದು ಈ ಕಾಯ್ದೆಯ 5ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ತಕರಾರು ಮತ್ತು ಸೇನೆಯ ಸಮರ್ಥನೆ

ಈ ಕಾಯ್ದೆಯ ಅಡಿ ನೀಡಲಾಗಿರುವ ವಿಶೇಷಾಧಿಕಾರವನ್ನು ‘ಕೊಲ್ಲುವ ಪರವಾನಗಿ’ ಎಂದು ಈಶಾನ್ಯ ಭಾರತದ ಜನರು ಕರೆಯುತ್ತಾರೆ. ‘ಈ ಕಾಯ್ದೆ ಅಡಿ ಕಾರ್ಯನಿರ್ವಹಿಸುವ ಸೈನಿಕರು, ಸೇನಾಧಿಕಾರಿಗಳು ಎಸಗುವ ಯಾವುದೇ ಕೃತ್ಯಕ್ಕೂ ಅವರನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸೈನಿಕರು ಇಲ್ಲಿ ಮನಬಂದಂತೆ ವರ್ತಿಸುತ್ತಾರೆ. ಅಮಾಯಕರನ್ನು ಕೊಲ್ಲುತ್ತಾರೆ. ಅತ್ಯಾಚಾರ ಎಸಗುತ್ತಾರೆ. ಹೀಗೆ ಈ ಕಾಯ್ದೆ ದುರ್ಬಳಕೆಯಾಗುತ್ತಿದೆ. ಹೀಗಾಗಿ ಕಾಯ್ದೆಯನ್ನು ವಾಪಸ್ ಪಡೆಯಬೇಕು’ ಎಂಬುದು ಈಶಾನ್ಯ ಭಾರತದ ರಾಜ್ಯಗಳ ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಜನರ ಆಗ್ರಹ. ಈ ಕಾಯ್ದೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಮಣಿಪುರದ ಇರೋಮ್ ಶರ್ಮಿಳಾ ಚಾನು ಅವರು 16 ವರ್ಷ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಈ ಕಾಯ್ದೆಯ ವಿರುದ್ಧ ಆಗಾಗ ಹೋರಾಟಗಳು ನಡೆಯುತ್ತಲೇ ಇವೆ.

ಸೇನೆಗೆ ಈ ವಿಶೇಷ ಅಧಿಕಾರದ ಅಗತ್ಯವಿದೆ ಎಂದು ಸೇನೆಯು ಹಲವು ಬಾರಿ ಸಮರ್ಥಿಸಿಕೊಂಡಿದೆ. ಭಾನುವಾರವೂ ಸಹ, ‘ಈ ರಾಜ್ಯಗಳಲ್ಲಿ, ಗಡಿಯಾಚೆಯಿಂದ ಬೆಂಬಲ ಹೊಂದಿರುವ ಉಗ್ರರು ಸೃಷ್ಟಿಸುವ ಸನ್ನಿವೇಶಗಳನ್ನು ಎದುರಿಸಲು ವಿಶೇಷ ಅಧಿಕಾರ ಸೇನೆಗೆ ಬೇಕೇಬೇಕು’ ಎಂದು ಸೇನೆಯು ಹೇಳಿತ್ತು.

ಈಶಾನ್ಯ ರಾಜ್ಯಗಳಲ್ಲಿ ಆಫ್‌ಸ್ಪ ಹೆಜ್ಜೆಗುರುತು

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ–1958 ಈಶಾನ್ಯ ಭಾಗದಲ್ಲಿ ಅಸ್ತಿತ್ವದಲ್ಲಿದೆ. ನಾಗಾಲ್ಯಾಂಡ್, ಮಣಿಪುರ ಮತ್ತು ಅಸ್ಸಾಂ ರಾಜ್ಯಗಳು ಇದರ ವ್ಯಾಪ್ತಿಯಲ್ಲಿವೆ. ಅರುಣಾಚಲ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಕೇಂದ್ರೀಯ ಪಡೆಗಳು ಕಣ್ಗಾವಲು ಇಟ್ಟಿವೆ. ತ್ರಿಪುರಾ, ಮಿಜೋರಾಂ ಮತ್ತು ಮೇಘಾಲಯದಲ್ಲಿ ಇದನ್ನು ವಾಪಸ್ ಪಡೆಯಲಾಗಿದೆ



ಅರುಣಾಚಲ ಪ್ರದೇಶ
- ಚಾಂಗ್‌ಲಾಂಗ್, ಲಾಂಗ್‌ಡಿಂಗ್ ಮತ್ತು ತಿರಪ್ ಜಿಲ್ಲೆಗಳಲ್ಲಿ ಕಾಯ್ದೆಯನ್ನು ಆರು ತಿಂಗಳವರೆಗೆ ವಿಸ್ತರಿಸಿ 2021ರ ಅಕ್ಟೋಬರ್ 1ರಂದು ಆದೇಶ ಹೊರಡಿಸಲಾಗಿತ್ತು. 2022ರ ಮಾರ್ಚ್ 31ರವರೆಗೆ ಇದು ಜಾರಿಯಲ್ಲಿರಲಿದೆ
- 1991ರಲ್ಲಿ ಕಾಯ್ದೆಯನ್ನು ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡಿದ್ದ ಕೇಂದ್ರದ ನಿರ್ಧಾರ ಖಂಡಿಸಿ ಪ್ರತಿಭಟನೆಗಳು ನಡೆದಿದ್ದರಿಂದ, ಕಾಯ್ದೆಯ ವ್ಯಾಪ್ತಿಯನ್ನು ಮೂರು ಜಿಲ್ಲೆಗಳಿಗೆ ಸೀಮಿತ ಮಾಡಲಾಗಿತ್ತು
- ಈ ಭಾಗಗಳಲ್ಲಿ ಬಂಡುಕೋರರ ಚಟುವಟಿಕೆಗಳು ನಡೆಯುತ್ತಿವೆ ಎಂಬ ಕಾರಣವನ್ನು ಕೇಂದ್ರ ಸರ್ಕಾರ ನೀಡಿದೆ. ನ್ಯಾಷನಲ್ ಡೆಮಾಕ್ರಾಟಿಕ್ ಫ್ರಂಟ್ ಆಫ್ ಬೊಡೊಲ್ಯಾಂಡ್, ಉಲ್ಫಾ, ನ್ಯಾಷನಲ್ ಸೋಷಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್ ಸಂಘಟನೆಗಳು ಈ ಭಾಗದಲ್ಲಿ ಸಕ್ರಿಯವಾಗಿವೆ

ಅಸ್ಸಾಂ
- 1958ರಲ್ಲಿ ಆಫ್‌ಸ್ಪ ಕಾಯ್ದೆಯನ್ನು ಅಸ್ಸಾಂನಲ್ಲಿ ಮೊದಲ ಬಾರಿಗೆ ಜಾರಿ ಮಾಡಲಾಗಿತ್ತು. ಉಲ್ಫಾ, ಎನ್‌ಡಿಎಫ್‌ಬಿ ಮೊದಲಾದ ಸಂಘಟನೆಗಳು ಬಂಡುಕೋರ ಚಟುವಟಿಕೆ ನಡೆಸುತ್ತಿವೆ ಎಂಬ ಕಾರಣಕ್ಕೆ ಜಾರಿ ಮಾಡಲಾಗಿತ್ತು
- 1990ರಲ್ಲಿ ಅಸ್ಸಾಂನಲ್ಲಿ ಆಫ್‌ಸ್ಪ ಮರು ಜಾರಿಯಾಯಿತು. ರಾಜ್ಯದ ಪರಿಸ್ಥಿತಿಯನ್ನು ಪರಿಶೀಲಿಸಿದ ಬಳಿಕ, ಪ್ರತೀ ಆರು ತಿಂಗಳಿಗೊಮ್ಮೆ ಇದನ್ನು ವಿಸ್ತರಿಸಲಾಗುತ್ತದೆ

ನಾಗಾಲ್ಯಾಂಡ್
- ನಾಗಾಲ್ಯಾಂಡ್‌ನಲ್ಲಿ 2021ರ ಡಿಸೆಂಬರ್ 31ರವರೆಗೂ ಆಫ್‌ಸ್ಪ ಅಸ್ತಿತ್ವದಲ್ಲಿದೆ. ಆರು ತಿಂಗಳ ಅವಧಿಗೆ ಇದನ್ನು ವಿಸ್ತರಿಸಲಾಗಿತ್ತು
- 1963ರಲ್ಲಿ ನಾಗಾಲ್ಯಾಂಡ್ ರಾಜ್ಯ ಅಸ್ತಿತ್ವಕ್ಕೆ ಬರುವ ಮುನ್ನ, ಅಸ್ಸಾಂಗೆ ಒಳಪಟ್ಟಿದ್ದ ನಾಗಾ ಹಿಲ್ಸ್ ವ್ಯಾಪ್ತಿಯಲ್ಲಿ ಈ ಕಾಯ್ದೆ ಜಾರಿಯಲ್ಲಿತ್ತು
- 2015ರಲ್ಲಿ ಕೇಂದ್ರ ಸರ್ಕಾರದ ಜೊತೆ ನ್ಯಾಷನಲ್ ಸೋಷಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್ ನಡುವೆ (ಎನ್‌ಎಸ್‌ಸಿಎನ್) ಒಪ್ಪಂದವಾಗಿತ್ತು. ಆದರೆ ಎನ್‌ಎಸ್‌ಸಿಎನ್–ಐಎಂ ಸಂಘಟನೆಯ ಮುಖ್ಯಸ್ಥ ಟಿ.ಮುಯಿವಾಹ್ ಅವರು ನಾಗಾಲ್ಯಾಂಡ್‌ಗೆ ಪ್ರತ್ಯೇಕ ಸಂವಿಧಾನ ಮತ್ತು ಧ್ವಜ ಬೇಕು ಎಂಬ ಬೇಡಿಕೆಯಿಟ್ಟದ್ದರಿಂದ ಸಂಘರ್ಷ ಮುಂದುವರಿದಿದೆ

ಮೇಘಾಲಯ
- ಮೇಘಾಲಯವನ್ನು ಸಂಪೂರ್ಣವಾಗಿ ಆಫ್‌ಸ್ಪ ವ್ಯಾಪ್ತಿಯಿಂದ ಕೈಬಿಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ 2018ರ ಏಪ್ರಿಲ್‌ನಲ್ಲಿ ಘೋಷಿಸಿತ್ತು
- ಉಲ್ಫಾ ಮೊದಲಾದ ಅಸ್ಸಾಂ ಮೂಲದ ಬಂಡುಕೋರ ಸಂಘಟನೆಗಳ ಉಪಟಳ ಹೆಚ್ಚಿದ್ದರಿಂದ 1991ರಲ್ಲಿ ರಾಜ್ಯದಲ್ಲಿ ಆಫ್‌ಸ್ಪ ತರಲಾಗಿತ್ತು

ತ್ರಿಪುರಾ
- ನ್ಯಾಷನಲ್ ಲಿಬರೇಷನ್ ಫ್ರಂಟ್‌ನಿಂದ ಅಪಹರಣ ಹಾಗೂ ಹತ್ಯೆಗಳು ನಿರಂತರವಾಗಿ ನಡೆದಿದ್ದರಿಂದ 1997ರ ಫೆಬ್ರುವರಿಯಲ್ಲಿ ತ್ರಿಪುರಾ ರಾಜ್ಯದ ಮೇಲೆ ಆಫ್‌ಸ್ಪ ಹೇರಲಾಗಿತ್ತು
- 18 ವರ್ಷಗಳ ಬಳಿಕ, 2015ರಲ್ಲಿ ಕಾಯ್ದೆ ವಾಪಸ್ ಪಡೆಯಲಾಯಿತು

ಮಿಜೋರಾಂ
- ರಾಜ್ಯದಲ್ಲಿ 1967ರ ಜನವರಿಯಲ್ಲಿ ಕಾಯ್ದೆ ಜಾರಿಯಾಯಿತು. 20 ವರ್ಷಗಳ ಬಳಿಕ ಇದನ್ನು ಕೈಬಿಡಲಾಯಿತು

ಮಣಿಪುರ
- ಇಂಫಾಲ ಪುರಸಭೆ ಪ್ರದೇಶವನ್ನು ಹೊರತುಪಡಿಸಿ ಇಡೀ ಮೇಘಾಲಯ ರಾಜ್ಯವನ್ನು ಪ್ರಕ್ಷುಬ್ಧ ಪ್ರದೇಶ ಎಂದು ಘೋಷಿಸಿ ಆಫ್‌ಸ್ಪ ಹೇರಲಾಗಿದೆ
- 2020ರ ಡಿಸೆಂಬರ್ 1ರಂದು ಒಂದು ವರ್ಷದ ಅವಧಿಗೆ ಕಾಯ್ದೆಯ ಅವಧಿಯನ್ನು ವಿಸ್ತರಿಸಲಾಗಿತ್ತು
- ರಾಜ್ಯದಲ್ಲಿ ವಿವಿಧ ಬಂಡುಕೋರ ಸಂಘಟನೆಗಳು ಸಕ್ರಿಯವಾಗಿವೆ ಎಂದು ರಾಜ್ಯ ಸರ್ಕಾರ ಪ್ರತಿಪಾದಿಸುತ್ತಿದೆ

ಪ್ರಜಾವಾಣಿ ಗ್ರಾಫಿಕ್ಸ್,

ಆಧಾರ: ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ–1958, ಕೇಂದ್ರ ಗೃಹ ಸಚಿವಾಲಯ, ಕೇಂದ್ರ ಕಾನೂನು ಸಚಿವಾಲಯ, ಪಿಟಿಐ

ಅಮೆರಿಕದ ಎಚ್ಚರಿಕೆ ಕಡೆಗಣನೆ

ರಷ್ಯಾ ಜತೆಗೆ ರಕ್ಷಣಾ ಸಹಕಾರ ವಿಸ್ತರಣೆ

ಪ್ರಜಾವಾಣಿ ವಾರ್ತೆ

> ನಮ್ಮ ನಿರೀಕ್ಷೆ ಮತ್ತು ಅಗತ್ಯಗಳಿಗೆ ಸರಿಯಾಗಿ ಸ್ಪಂದಿಸುವ ಸಂವೇದನಾಶೀಲ ದೇಶಗಳೊಂದಿಗಿನ ಸಹಕಾರವನ್ನು ಭಾರತವು ಸದಾ ಸ್ವಾಗತಿಸುತ್ತದೆ
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

ನವದೆಹಲಿ: ಅಮೆರಿಕದ ಜತೆಗಿನ ಸಂಬಂಧಕ್ಕೆ ಧಕ್ಕೆಯಾಗುವ ಆತಂಕದ ನಡುವೆಯೂ ರಷ್ಯಾ ಜತೆಗಿನ ತನ್ನ ಸೇನಾ ತಾಂತ್ರಿಕ ಸಹಕಾರ ವಿಸ್ತರಣೆ ಒಪ್ಪಂದ ಮತ್ತು ರಕ್ಷಣಾ ಸಹಕಾರ ಒಪ್ಪಂದಕ್ಕೆ ಕೇಂದ್ರ ಸರ್ಕಾರವು ಸೋಮವಾರ ಸಹಿಮಾಡಿದೆ. ಚೀನಾದ ಅಪ್ರಚೋದಿತ ಅತಿಕ್ರಮಣವನ್ನು ತಡೆಯಲು ರಷ್ಯಾದ ಜತೆಗೆ ರಕ್ಷಣಾ ಒಪ್ಪಂದ ಮಾಡಿಕೊಳ್ಳುವುದು ಅತ್ಯಗತ್ಯ ಎಂದು ರಕ್ಷಣಾ ಸಚಿವಾಲಯವು ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವಣ ಶೃಂಗಸಭೆಗೆ ಪೂರ್ವಭಾವಿಯಾಗಿ ದೆಹಲಿಯಲ್ಲಿ ನಡೆದ ಎರಡೂ ದೇಶಗಳ ರಕ್ಷಣಾ ಸಚಿವರು ಮತ್ತು ವಿದೇಶಾಂಗ ಸಚಿವರ ಸಭೆಯಲ್ಲಿ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ರಷ್ಯಾದಿಂದ ಎಸ್–400 ಟ್ರಯಂಪ್ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ₹39,000 ಕೋಟಿ ವೆಚ್ಚದಲ್ಲಿ ಖರೀದಿಸಲು ಕೇಂದ್ರ ಸರ್ಕಾರವು 2018ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಈ ಖರೀದಿ ವಿರುದ್ಧ ಭಾರತದ ಮೇಲೆ ವಾಣಿಜ್ಯ ನಿರ್ಬಂಧ ಹೇರುವ ಎಚ್ಚರಿಕೆಯನ್ನು ಅಮೆರಿಕ ನೀಡಿತ್ತು. ನಿರ್ಬಂಧದಿಂದ ವಿನಾಯಿತಿ ದೊರೆಯುವುದು ಖಚಿತವಾಗದಿದ್ದರೂ ಒಪ್ಪಂದವನ್ನು ಮುಂದುವರಿಸಲು ಕೇಂದ್ರ ಸರ್ಕಾರವು ನಿರ್ಧರಿಸಿದೆ.

ಜತೆಗೆ ಉತ್ತರ ಪ್ರದೇಶದ ಅಮೇಠಿಯಲ್ಲಿ ರಷ್ಯಾದ ಸಹಭಾಗಿತ್ವದಲ್ಲಿ 6.01 ಲಕ್ಷ ಎ.ಕೆ–203 ರೈಫಲ್‌ಗಳನ್ನು ತಯಾರಿಸಲು ₹5,000 ಕೋಟಿ ವೆಚ್ಚದ ಒಪ್ಪಂದವನ್ನು ಸೋಮವಾರ ಅಂತಿಮಗೊಳಿಸಲಾಗಿದೆ.

ದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ ನಡೆದ ಶೃಂಗಸಭೆಯಲ್ಲಿ ಭಾಗಿಯಾಗಲು ಬಂದ ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ –ಪಿಟಿಐ ಚಿತ್ರ

ಭಾರತ ಪ್ರಬಲ ದೇಶ: ಪುಟಿನ್

ಭಾರತವು ಅತ್ಯಂತ ಪ್ರಬಲ ಮತ್ತು ಸ್ನೇಹಮಯಿ ದೇಶ, ಕಾಲದ ಪರೀಕ್ಷೆಯಲ್ಲಿ ಗೆದ್ದ ಗೆಳೆಯ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಬಣ್ಣಿಸಿದ್ದಾರೆ. ಭಯೋತ್ಪಾದನೆ, ಮಾದಕ ಪದಾರ್ಥ ಕಳ್ಳ ಸಾಗಣೆ, ಸಂಘಟಿತ ಅಪರಾಧಗಳಂತಹ ವಿಚಾರದಲ್ಲಿ ಭಾರತ ಮತ್ತು ರಷ್ಯಾ ಸಮಾನ ಕಳವಳ ಹೊಂದಿವೆ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರ ಜತೆಗೆ ನಡೆಸಿದ ಶೃಂಗ ಸಭೆಯ ಬಳಿಕ ಅವರು ಮಾತನಾಡಿದರು.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿಯೂ ಪುಟಿನ್ ಭೇಟಿ ನೀಡಿರುವುದು ಭಾರತ–ರಷ್ಯಾ ಸಂಬಂಧದ ಬಗ್ಗೆ ಅವರು ಹೊಂದಿರುವ ವೈಯಕ್ತಿಕ ಬದ್ಧತೆಯನ್ನು ತೋರುತ್ತದೆ ಎಂದು ಮೋದಿ ಅವರು ಹೇಳಿದರು.

ಕಳೆದ ದಶಕಗಳಲ್ಲಿ ಜಗತ್ತು ಮೂಲಭೂತವಾದ ಬದಲಾವಣೆಗಳನ್ನು ಕಂಡಿದೆ. ರಾಜಕೀಯ ಸಮೀಕರಣಗಳು ಮತ್ತು ಲೆಕ್ಕಾಚಾರಗಳು ಬದಲಾಗಿವೆ. ಆದರೆ, ಭಾರತ ಮತ್ತು ರಷ್ಯಾದ ಸಂಬಂಧವು ಸ್ಥಿರವಾಗಿಯೇ ಉಳಿದಿದೆ ಎಂದು ಮೋದಿ ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಬರಿ ಮಸೀದಿ ಕೆಡವಿ 29 ವರ್ಷಗಳಾದ ಸಂದರ್ಭದಲ್ಲಿ, ಬಾಬರಿ ಮಸೀದಿಯದ್ದು ಎನ್ನಲಾದ ಹಲವಾರು ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ. ಮಸೀದಿಯ ಕೆಲವು ಚಿತ್ರಗಳನ್ನು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿ, ‘ಬಾಬರಿ ಮಸೀದಿಯ ಕೆಲವು ಚಿತ್ರಗಳನ್ನು ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ’ ಎಂದು ಹೇಳಲಾಗಿದೆ. ಬೇರೆ ಚಿತ್ರಗಳನ್ನು ಇದೇ ರೀತಿಯ ಅಡಿಬರಹದ ಜೊತೆ ಫೇಸ್‌ಬುಕ್‌ನಲ್ಲಿ ಕೂಡಾ ಪೋಸ್ಟ್ ಮಾಡಲಾಗಿದೆ.

ಈ ಚಿತ್ರಗಳು ಬಾಬರಿ ಮಸೀದಿಯದ್ದಲ್ಲ ಎಂದು ‘ದಿ ಕ್ವಿಂಟ್’ ವರದಿ ಮಾಡಿದೆ. ಟ್ವಿಟರ್‌ನಲ್ಲಿ ಪೋಸ್ಟ್ ಮಾಡಲಾಗಿರುವ ಆರು ಚಿತ್ರಗಳಲ್ಲಿ ಐದು ಚಿತ್ರಗಳು ಬಾಬರಿ ಮಸೀದಿಯದ್ದಲ್ಲ ಎನ್ನಲಾಗಿದೆ. ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನ ಮೋತಿಜೀಲ್ ಮಸೀದಿ, ಕರ್ನಾಟಕದ ಕಲಬುರಗಿಯ ಜಾಮಿಯ ಮಸೀದಿ, ವಿಜಯಪುರದ ಇಬ್ರಾಹಿಂ ರೋಜಾ, ಟರ್ಕಿ ಮತ್ತು ಅಫ್ಗಾನಿಸ್ತಾನದ ಎರಡು ಮಸೀದಿಗಳ ಚಿತ್ರಗಳು ಇದರಲ್ಲಿವೆ ಎಂದು ದಿ ಕ್ವಿಂಟ್ ಹೇಳಿದೆ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಡಿಸೆಂಬರ್ 7, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ತೃತೀಯ ಗಂ. 0-14 (ಬೆ. 6-40) ಉಪರಿ ಚತುರ್ಥಿ ಗಂ. 55-2 (ರಾ. 4-41) ಮಂಗಳವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 0-37 (ಬೆ. 6-49) ಉಪರಿ ಉತ್ತರಾಷಾಢ ಗಂ. 56-44 (ಬೆ.ಝಾ. 5-31) ವೃದ್ಧಿ ನಾಮ ಯೋಗ ಗಂ. 37-58 ಗರಜ ಕರಣ ಗಂ. 0-14 ಉಪರಿ ವಣಿಜ ಕರಣ ಗಂ. 27-31 ವಿಷ ಗಂ. 19-32 ಅಮೃತ ಗಂ 42-13 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-33 ಸೂರ್ಯಾಸ್ತ: 5-49 ಅದೃಷ್ಟ ಸಂಖ್ಯೆ 3, 5

ಮೇಷ: ಮಿತ್ರರಿಂದ ಧನಲಾಭ. ಕೃಷಿಕರಿಗೆ ಆತಂಕದ ದಿನ. ಮಹಿಳೆಯರ ಅಪೇಕ್ಷೆಯ ಈಡೇರಿಕೆ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಗಳು ಕೂಡಿಬರುವವು. ಶುಭಕಾರ್ಯಗಳು ನಿಶ್ಚಯವಾಗಲಿವೆ. ಸಂತೃಪ್ತ ಜೀವನ.

ವೃಷಭ: ಕೌಟುಂಬಿಕ ಸೌಹಾರ್ದತೆಯಿಂದ ಸಂತೃಪ್ತಿ. ಸಮಸ್ಯೆಗಳಿಂದ ಮುಕ್ತರಾಗುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಯಶಸ್ಸು. ದೀರ್ಘಕಾಲೀನ ಅರೋಗ್ಯ ಸಮಸ್ಯೆಯಿಂದ ಸುಧಾರಣೆ. ಅಧ್ಯಯನದಿಂದ ಸಂತೃಪ್ತಿ.

ಮಿಥುನ: ಹೊಸ ವ್ಯಕ್ತಿಗಳಿಂದ ಸಹಕಾರ ದೊರಕಲಿದೆ. ವಿದ್ವಾಂಸರಿಗೆ, ಕಲಾವಿದರುಗಳಿಗೆ ಸಾಮಾಜಿಕ ಗೌರವಗಳು ಪ್ರಾಪ್ತವಾಗಲಿವೆ. ಅನಿರೀಕ್ಷಿತ ಮೂಲಗಳಿಂದ ಧನಾಗಮನ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ.

ಕರ್ಕಾಟಕ: ಬಂಧುಗಳ ಗೌರವಕ್ಕೆ ಪಾತ್ರರಾಗುವಿರಿ. ಮನರಂಜನೆಗಾಗಿ ಖರ್ಚು. ಸ್ವಂತ ಉದ್ಯೋಗಿಗಳಿಗೆ ಯಶಸ್ಸು. ಕೃಷಿ ಉತ್ಪನ್ನ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಭೂಮಿಯಿಂದ ಧನಲಾಭ. ಅಧಿಕಾರಿಗಳಿಂದ ಸಹಕಾರ.

ಸಿಂಹ: ಮಹಿಳೆಯರಿಗೆ ಕುಟುಂಬದಲ್ಲಿ ಗೌರವಕ್ಕೆ ಪಾತ್ರರಾಗುವ ಅವಕಾಶ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ. ಬಂಧುಗಳೊಂದಿಗಿನ ಆತ್ಮೀಯ ಸಂಬಂಧ ವೃದ್ಧಿಸುವುದು. ನ್ಯಾಯಾಲಯ ವಿಚಾರದಲ್ಲಿ ಪ್ರಗತಿ.

ಕನ್ಯಾ: ಬಂಧುಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ದೂರಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಭೂ ಪ್ರಕರಣದಿಂದ ಧನಲಾಭ. ಆಧ್ಯಾತ್ಮಿಕ ಚಿಂತನೆಯಿಂದ ಸಮಸ್ಯೆಗಳು ಪರಿಹಾರವಾಗುವವು.

ತುಲಾ: ವಿದ್ಯಾರ್ಥಿಗಳಿಗೆ ಸಮಸ್ಯೆಗಳಿಂದ ಮುಕ್ತಿ ದೊರೆತು ಉತ್ತಮ ಪ್ರಗತಿ ಸಾಧ್ಯತೆ. ಮಹಿಳಾ ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆತು ಯಶಸ್ಸು. ಕುಟುಂಬ ವರ್ಗದಲ್ಲಿ ಶುಭಸಮಾರಂಭಗಳು ನಡೆಯಲಿವೆ. ಕೃಷಿ ಕ್ಷೇತ್ರದಿಂದ ಲಾಭ.

ವೃಶ್ಚಿಕ: ಸಾಮಾಜಿಕ ಸೇವೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿರಿ. ಸಂತೃಪ್ತ ಜೀವನ ನಿಮ್ಮದಾಗುವುದು. ಮಿತ್ರರಿಂದ ಸಹಕಾರ ದೊರಕಿ ಕೆಲಸ-ಕಾರ್ಯಗಳು ನಿರ್ವಿಘ್ನವಾಗುವವು. ಆಸ್ತಿ ವಿವಾದಗಳಲ್ಲಿ ಅನುಕೂಲ.

ಧನು: ವಿಶಾಲ ಚಿಂತನೆಯಿಂದ ನೆಮ್ಮದಿ. ಬಂಧುಗಳೊಂದಿಗಿನ ಸಂಬಂಧ ವೃದ್ಧಿ. ಹೊಸ ವಸ್ತುಗಳ ಖರೀದಿ ಸಾಧ್ಯತೆ. ಪ್ರಯಾಣ ಯೋಗ. ಪುಣ್ಯ ಕ್ಷೇತ್ರ ದರ್ಶನ ಭಾಗ್ಯ. ದೇವತಾರಾಧನೆಯಿಂದ ಇಷ್ಟಾರ್ಥ ಸಿದ್ಧಿ.

ಮಕರ: ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಮಿತ್ರರಿಂದ ಸಹಕಾರ. ಮಹಿಳೆಯರಿಗೆ ಎಲ್ಲ ಕಡೆಯಿಂದಲೂ ಸಹಕಾರ ದೊರೆತು ಯಶಸ್ಸು. ಸಾಮಾಜಿಕ ಕ್ಷೇತ್ರದಲ್ಲಿ ಭಾಗಿಯಾಗಿ ಗೌರವಾದರ ಪ್ರಾಪ್ತಿ.

ಕುಂಭ: ಸ್ನೇಹಿತರಿಂದ ಸಹಕಾರ. ನಿರುದ್ಯೋಗಿಗಳಿಗೆ ಉದ್ಯೋಗದ ಬಾಗಿಲು ತೆರೆಯಲಿದೆ. ಕೃಷಿಕರಿಗೆ ಸರ್ಕಾರದಿಂದ ಸಹಾಯ ಸಹಕಾರ ದೊರಕುವುದು. ಕಳೆದುಹೋದ ವಸ್ತುಗಳು ಲಭ್ಯವಾಗುವ ಸಾಧ್ಯತೆ.

ಮೀನ: ಯಶಸ್ಸು ಮತ್ತು ಕೀರ್ತಿ ನಿಮ್ಮನ್ನು ಹಿಂಬಾಲಿಸಿ ಬರಲಿವೆ. ವಿಚಾರ ಲಹರಿಯಿಂದಾಗಿ ಗೌರವಕ್ಕೆ ಪಾತ್ರರಾಗುವಿರಿ. ಆತುರದ ನಿರ್ಧಾರದಿಂದಾಗಿ ಕೆಲಸ ಕಾರ್ಯಗಳಲ್ಲಿ ವಿಘ್ನ. ಕುಲದೇವತಾ ದರ್ಶನ ಮಾಡಿ.

ನಿಮ್ಮ ಜನ್ಮದಿನ 7-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಹೊಸ ಉದ್ಯಮಗಳಿಗೆ ನಾಂದಿ ಹಾಡಲಿದ್ದೀರಿ. ನಿಮ್ಮ ಕಠಿಣ ಸ್ವಭಾವದಿಂದಾಗಿ ಅನೇಕರ ಕೆಂಗಣ್ಣಿಗೆ ಪಾತ್ರರಾಗುವ ಸಾಧ್ಯತೆ. ಕಠಿಣ ಪರಿಶ್ರಮದಿಂದಾಗಿ ಕೆಲಸ ಕಾರ್ಯಗಳಲ್ಲಿ ಯಶಸ್ಸು. ವಿವಾದಗಳು ಬಗೆಹರಿದು ವಿವಾಹಗಳು ನೆರವೇರುವ ಸಾಧ್ಯತೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ದೈವದ ರಹಸ್ಯ

ಆವುದರಿನಾವಾಗ ದೈವ ತಾನೊಲಿದೀತೊ? |
ಪೂರ್ವಿಕದ ನಿಯತಿಯನದೆಂದು ಸಡಲಿಪುದೊ? ||
ಭಾವಿಸುಕೃತವದೆಂದು ಪೂರ್ವದುರಿತಕೆ ಮಿಗಿಲೊ?
ದೈವಿಕ ರಹಸ್ಯವದು – ಮಂಕುತಿಮ್ಮ || 513 ||

ಪದ-ಅರ್ಥ: ಆವುದರಿನಾವಾಗ = ಆವುದರಿಂ(ಯಾವುದರಿಂದ) + ಆವಾಗ(ಯಾವಾಗ), ಪೂರ್ವಿಕದ = ಹಿಂದಣದ, ನಿಯತಿಯನದೆಂದು = ನಿಯತಿಯನು(ನಿಯಮವನು) + ಅದು + ಎಂದು, ಭಾವಿಸುಕೃತದೆಂದು = ಭಾವಿ(ಮುಂದಿನ) + ಸುಕೃತವು(ಒಳ್ಳೆಯ ಕಾರ್ಯ) + ಅದು + ಎಂದು, ಪೂರ್ವದುರಿತಕೆ = ಪೂರ್ವ(ಹಿಂದಿನ) + ದುರಿತಕೆ(ಪಾಪಕ್ಕೆ)

ವಾಚ್ಯಾರ್ಥ: ಯಾವುದರಿಂದ ಮತ್ತು ಯಾವಾಗ ದೈವ ಒಲಿದೀತೋ? ಅದು ನಮ್ಮ ಪೂರ್ವಕರ್ಮದ ಫಲದ ಬಿಗಿ ನಿಯಮವನ್ನು ಎಂದು ಸಡಲಿಸುವುದೊ? ಮುಂದೆ ನಾನು ಮಾಡುವ ಪುಣ್ಯಕಾರ್ಯ ಹಿಂದೆ ಮಾಡಿದ ಪಾಪಗಳಿಂದ ಎಂದು ಹೆಚ್ಚಾದೀತೊ? ಇದು ದೈವದ ರಹಸ್ಯ.

ವಿವರಣೆ: ಕಷ್ಟ ಬಂದಾಗ ಮನುಷ್ಯ ಯೋಚಿಸುತ್ತಾನೆ. ತಾನು ಇದರಿಂದ ಪಾರಾಗುವುದು ಹೇಗೆ? ಏನು ಮಾಡಿದರೆ ದೈವಕೃಪೆ ಆದೀತು? ಪೂಜೆ, ಭಜನೆ, ದಾನ, ಉರುಳುಸೇವೆ ಯಾವುದನ್ನು ಮಾಡಿದರೆ ದೈವ ಒಲಿದೀತು? ಯಾವಾಗ ದೈವ ನನ್ನ ಮೇಲೆ ಕರುಣೆ ತೋರೀತು ಎಂದು ಚಿಂತಿಸುತ್ತಾನೆ. ಅದಲ್ಲದೆ ಅವನಿಗೆ ತಾನು ಹಿಂದೆ ಮಾಡಿದ ಪಾಪಕರ್ಮಗಳ ನೆನಪಿದೆ. ಪ್ರಪಂಚದ ಮುಂದೆ ಸಜ್ಜನರ ಮುಖವಾಡ ಧರಿಸಿ ನಟಿಸಬಹುದು. ಆದರೆ ವ್ಯಕ್ತಿಯ ಅಂತರಂಗದಲ್ಲಿ ತಾನು ಮಾಡಿದ ತಪ್ಪು ಸದಾ ಕೊರೆಯುತ್ತಿರುತ್ತದೆ. ಅದು ಮೈಯ್ಯೊಳಗೆ ಚುಚ್ಚಿ ಮುರಿದ ಮುಳ್ಳಿನಂತೆ ಸದಾ ಯಾವಾಗಲೂ ಅಲುಗುತ್ತ, ನೋವು ಕೊಡುತ್ತಲೇ ಇರುತ್ತದೆ. ಏನು ಮಾಡಿದರೆ, ಯಾವ ಪುಣ್ಯ ಕಾರ್ಯ ಮಾಡಿದರೆ ಹಳೆಯ ಪಾಪವನ್ನು ಕರಗಿಸಲಾದೀತು ಎಂದು ಯೋಚಿಸುತ್ತಾನೆ. ಆತನ ಪುಣ್ಯಕಾರ್ಯಗಳೆಲ್ಲ ಹಿಂದಿನ ಪಾಪವನ್ನು ಕರಗಿಸಲೆಂದು ಮಾಡಿದ ಪರಿಶ್ರಮವೇ.

ಕರ್ಮವೆಂಬುದು ನಮ್ಮನ್ನು ಎಂದಿಗೂ ಬಿಡದು. ಗೀತೆಯಲ್ಲಿ, ‘ನಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್’ ಎಂದು ಬರುತ್ತದೆ. ಹಾಗೆಂದರೆ ಯಾವನೂ ಒಂದು ಕ್ಷಣ ಕೂಡ ಕರ್ಮ ಮಾಡದೆ ಇರಲಾರ. ಪ್ರತಿಯೊಂದು ಕರ್ಮಕ್ಕೂ ಒಂದು ಪ್ರತಿಫಲ. ಅದನ್ನು ತಪ್ಪಿಸುವುದು ಸಾಧ್ಯವಿಲ್ಲ. ಆದರೆ ಹಿಂದೆ ಮಾಡಿದ ಪಾಪಕರ್ಮ ಹೇಗೆ ಕೊನೆಯವರೆಗೆ ಕಾಡುತ್ತದೆಂಬುದಕ್ಕೆ ದಶರಥ ಒಂದು ಉತ್ತಮ ಉದಾಹರಣೆ. ಹಿಂದೆ ತನಗರಿವಿಲ್ಲದೆ ಶ್ರವಣಕುಮಾರನನ್ನು ಕೊಂದು, ಅವನ ತಂದೆ-ತಾಯಿಯರ ಶಾಪಕ್ಕೆ ಗುರಿಯಾದದ್ದನ್ನು ಯಾರಿಗೂ ಹೇಳದೆ ಮುಚ್ಚಿಟ್ಟವನು, ಕೊನೆಗೆ ಮರಣ ಕಾಲದಲ್ಲಿ, ರಾಮ ವನವಾಸಕ್ಕೆ ಹೊರಟ ಮೇಲೆ, ಕೌಸಲ್ಯೆಗೆ, ತನ್ನನ್ನು ಕೊರೆಯುತ್ತಿರುವ ಪಾಪಪ್ರಜ್ಞೆಯನ್ನು ಅರುಹುತ್ತಾನೆ. ಕೊನೆಗೊಂದು ಸಾರ್ವಕಾಲಿಕ ಸತ್ಯವನ್ನು ಹೇಳುತ್ತಾನೆ.

‘ಯದಾಚರತಿ ಕಲ್ಯಾಣಿ, ಶುಭಂ ವಾ ಯದಿವಾಶುಭಮ್ |
ತದೇವ ಲಭತೇ ಭದ್ರೇ ಕರ್ತಾಕರ್ಮಜಮಾತ್ಮನಃ ||

‘ಕೌಸಲ್ಯೆ, ಮನುಷ್ಯರು ಶುಭವನ್ನಾಗಲಿ ಅಶುಭವನ್ನಾಗಲಿ, ಯಾವುದನ್ನು ಮಾಡುತ್ತಾನೆಯೋ, ಅದನ್ನೇ ಹಿಂದಕ್ಕೆ ಪಡೆಯುತ್ತಾನೆ’. ಇದನ್ನು ತಿಳಿದೂ ಮನುಷ್ಯ ದೈವದ ಕರುಣೆಯನ್ನು ಪಡೆಯಲು ಏನೇನೋ ಪ್ರಯತ್ನ ಮಾಡುತ್ತಾನೆ. ಅದು ದೈವದ ರಹಸ್ಯಕಾರ್ಯವೆಂದು ಅರಿತೂ ಹೆಣಗುತ್ತಾನೆ.

ಪದಬಂಧ 4800 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರ್ಯಾದೆಯುಳ್ಳ ಹುಟ್ಟುಗುಣ (4)
3.ಕೊನೆಗೆ ಭಾರವಿರುವ ತಳಪಾಯ (4)
5.ಕಸ್ತೂರಿ ಕಂಪಿನ ಭಾಷೆ (3)
6.ಹರಿಯುವಂಥ ವಸ್ತು (2)
8.ಭ್ರಾಂತಿಯನ್ನುಂಟು ಮಾಡುವ ಮೋಹ (3)
10.ಈ ರೀತಿ ಸಂತೈಸು (3)
13.ರಸನದಲ್ಲಿರುವ ದ್ರವ (2)
15.ದೃಷ್ಟಿಗೆ ದೂರವಾಗಿರುವುದು (3)
16.ಯಾಗದ ಸಮಾಪ್ತಿ (4)
17.ನಿಸ್ಸಾರವಾದುದು ಇದು (4)

ಮೇಲಿಂದ ಕೆಳಕ್ಕೆ
1.ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2.ಮೂಲದ ಪ್ರತಿಕೃತಿ (3)
3.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
7.ಬೇರೆ ಬೇರೆ ಬಣ್ಣಗಳ ಬೆರಕೆ (5)
9.ಮೋಸಗಾರನನ್ನು ಹೀಗೂ ಕರೆವರು (5)
11.ಒಳ್ಳೆಯ ದಾರಿಯಿದು (3)
12.ನಾಶವಿಲ್ಲದ ವರ್ಣ (3)
14.ದನವಿರುವ ಮನೆ (3)



4799ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಋತ್ವಿಕ್ಕು 4.ಸಂಭವ 6.ಕುಟಿಲೋಪಾಯ 7.ನಭ 9.ನವ 10.ಪುಷ್ಪ 11.ಸುತ 13.ಮನೆವಾಳ್ತನ 16.ಮಿಸುನಿ 17.ನೆನವು

ಮೇಲಿಂದ ಕೆಳಕ್ಕೆ: 1.ಋತುಮಾನ 2.ಕ್ಕುಮ್ಮಕ್ಕು 3.ನಚಲೋ 4.ಸಂಶಯ 5.ವಜ್ರೋತ್ಸವ 8.ಭವಿಷ್ಯ 9.ನನಸು 10.ಪುರೋಗಾಮಿ 12.ತಲೆಗಾಪು 13.ಮಯನಿ 14.ವಾಚಾಳಿ 15.ನಮೂನೆ

ಸುಡೊಕು 5186

	2			6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5185 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ಶ್ರೀ. ಆರ್. ಹನುಮಂತಪ್ಪ
(ಪೊಲೀಸ್ ಇಲಾಖೆ)
ಜನನ: 12.06.1957 ಮರಣ: 07.12.2017
ಸದಾ ನಿಮ್ಮ ನೆನಪಲ್ಲಿರುವ ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗು ಕುಟುಂಬದವರು.

ನಿಧನ

ಕೆ ವಿ ರಾಮು
59 ವರ್ಷ, ತಿರುಪತಿ
ನಿಧನ : 06.12.2021
ಇವರ ಅಂತ್ಯಕ್ರಿಯೆಯನ್ನು ದಿನಾಂಕ 07.12.2021 ಬೆಳಗ್ಗೆ 10:30 ಗಂಟೆಗೆ ವೆಂಕಟರಮಣಪ್ಪ ಗಾರ್ಡನ್, ಪಿ ಆರ್ ಪಬ್ಲಿಕ್ ಸ್ಕೂಲ್ ಪಕ್ಕದಲ್ಲಿ, ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ ಬೆಂಗಳೂರು ಇಲ್ಲಿ ನೆರವೇರಿಸಲಾಗುವುದು
ಇಂತಿ ದುಃಖತಪ್ತರು
ಕುಟುಂಬ ವರ್ಗದವರು ಮತ್ತು ಬಂಧು –ಮಿತ್ರರು.

NAME CHANGE ANNOUNCEMENT
Log on to : dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು 949



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,196
ಇಂದಿನ ಅಂತ್ಯ	16,912
▼	284
ದಿನದ ಗರಿಷ್ಠ	17,216

ವಿನಿಮಯ ದರ

$ ಡಾಲರ್	75.45
£ ಪೌಂಡ್	99.57
€ ಯುರೊ	84.94
¥ ಯೆನ್ (100ಕ್ಕೆ)	66.56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1227(1220)
ಸೂರ್ಯಕಾಂತಿ (ರಿಫೈನ್ಡ್)	₹1270 (1265)
ಪಾಮೋಲಿನ್	₹1185 (1180)

ಹೂಡಿಕೆದಾರರ ಸಂಪತ್ತು ₹ 4.29 ಲಕ್ಷ ಕೋಟಿಯಷ್ಟು ಇಳಿಕೆ

ಓಮೈಕ್ರಾನ್ ಭೀತಿಗೆ 949 ಅಂಶ ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಕೊರೊನಾ ವೈರಾಣುವಿನ ರೂಪಾಂತರಿ ತಳಿ ಓಮೈಕ್ರಾನ್ ದೇಶದಲ್ಲಿ ಹರಡುತ್ತಿರುವುದು ಹೂಡಿಕೆದಾರರನ್ನು ಭೀತಿಗೊಳಿಸಿದೆ. ಇದರ ಪರಿಣಾಮವಾಗಿ ದೇಶದ ಷೇರು ಮಾರುಕಟ್ಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಭಾರಿ ಇಳಿಕೆ ದಾಖಲಿಸಿದವು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ ಕಂಡಿದ್ದು ಹಾಗೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶದ ಷೇರು ಮಾರುಕಟ್ಟೆಗಳಿಂದ ಹಣ ಹಿಂದಕ್ಕೆ ಪಡೆಯುತ್ತಿರುವುದು ಕೂಡ ಸೂಚ್ಯಂಕಗಳ ಪತನಕ್ಕೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ 949 ಅಂಶ ಇಳಿಕೆ ದಾಖಲಿಸಿತು. ಮೂರು ತಿಂಗಳಿಗೂ ಹೆಚ್ಚಿನ ಅವಧಿಯ ಕನಿಷ್ಠ ಮಟ್ಟವಾದ 56,747 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 284 ಅಂಶ ಇಳಿಕೆ ಕಂಡಿತು. ನಿಫ್ಟಿಯು 16,912 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಸೋಮವಾರದ ವಹಿವಾಟಿನಲ್ಲಿ ಷೇರು ಹೂಡಿಕೆದಾರರ ಸಂಪತ್ತಿನ ಒಟ್ಟು ಮೌಲ್ಯವು ₹ 4.29 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. ಬಿಎಸ್‌ಇಯಲ್ಲಿ ವಹಿವಾಟು ನಡೆಸುವ ಎಲ್ಲ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ₹ 256 ಲಕ್ಷ ಕೋಟಿಗೆ ಇಳಿಕೆ ಆಗಿದೆ.

'ಓಮೈಕ್ರಾನ್ ತಳಿಯ ವಿಚಾರವಾಗಿ ಉದ್ಭವಿಸಿರುವ ಅನಿಶ್ಚಿತತೆಗಳು ದೇಶಿ ಹೂಡಿಕೆದಾರರ ವಿಶ್ವಾಸಕ್ಕೆ ಪೆಟ್ಟು ನೀಡಿವೆ. ಸದ್ಯದ ಸ್ಥಿತಿಯಲ್ಲಿ ದೇಶಿ ಷೇರು ಮಾರುಕಟ್ಟೆಗಳಲ್ಲಿ ಅಸ್ಥಿರತೆ ಇರುವ ಸಾಧ್ಯತೆ ಇದೆ. ಓಮೈಕ್ರಾನ್ ಪ್ರಭಾವ, ಆರ್‌ಬಿಐ ಹಣಕಾಸು ನೀತಿ ಸಮಿತಿ ಕೈಗೊಳ್ಳುವ ತೀರ್ಮಾನ ಹಾಗೂ ಅಮೆರಿಕದ ಫೆಡರಲ್ ಬ್ಯಾಂಕ್ ಹಣಕಾಸು ನೀತಿಗೆ ಸಂಬಂಧಿಸಿದಂತೆ ಕೈಗೊಳ್ಳುವ ತೀರ್ಮಾನವನ್ನು ಆಧರಿಸಿ ಷೇರುಪೇಟೆಯ ಚಲನೆ ಇರಲಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಈಗಿನ ಸಂದರ್ಭದಲ್ಲಿ ಇರುವ ಅನಿಶ್ಚಿತತೆಗಳನ್ನು ಪರಿಗಣಿಸಿ, ಆರ್‌ಬಿಐ ಹೊಂದಾಣಿಕೆಯ ನಿಲುವನ್ನು ಮುಂದುವರಿಸಬೇಕು ಎಂಬ ಬಯಕೆಯು ಬಂಡವಾಳ ಮಾರುಕಟ್ಟೆಯಲ್ಲಿ ಇದೆ. ಆದರೆ, 2022ರ ಮೊದಲಾರ್ಧದಲ್ಲಿ ಒಂದಿಷ್ಟು ಬದಲಾವಣೆಗಳನ್ನು ನಿರೀಕ್ಷಿಸಬಹುದು' ಎಂದು ನಾಯರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 2.23ರಷ್ಟು ಹೆಚ್ಚಳ ಆಗಿ ಪ್ರತಿ ಬ್ಯಾರೆಲ್‌ಗೆ 71.44 ಡಾಲರ್‌ಗೆ ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರ 33 ಪೈಸೆ ಕುಸಿದು 75.45ಕ್ಕೆ ತಲುಪಿದೆ.

'ಎನ್‌ಪಿಎಸ್‌ನಿಂದ ಅಧಿಕ ಲಾಭಾಂಶ'

ನವದೆಹಲಿ (ಪಿಟಿಐ): ಹನ್ನೆರಡು ವರ್ಷಗಳ ಅವಧಿಯಲ್ಲಿ ಎನ್‌ಪಿಎಸ್‌ನ (ರಾಷ್ಟ್ರೀಯ ಪಿಂಚಣಿ ಯೋಜನೆ) ಈಕ್ವಿಟಿ ಯೋಜನೆಗಳಲ್ಲಿ ಮಾಡಿರುವ ಹೂಡಿಕೆಗಳು ವಾರ್ಷಿಕ ಶೇಕಡ 12ರಷ್ಟಕ್ಕಿಂತ ಹೆಚ್ಚು ಲಾಭಾಂಶ ತಂದುಕೊಟ್ಟಿವೆ ಎಂದು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಅಧ್ಯಕ್ಷ ಸುಪ್ರತಿಮ್ ವಂದ್ಯೋಪಾಧ್ಯಾಯ ಹೇಳಿದ್ದಾರೆ.

ಸರ್ಕಾರಿ ಸಾಲಪತ್ರಗಳಲ್ಲಿನ ಹೂಡಿಕೆ ಯೋಜನೆಯು ಸರಿಸುಮಾರು ಶೇ 9.9ರಷ್ಟು, ಕಾರ್ಪೊರೇಟ್ ಬಾಂಡ್‌ಗಳಲ್ಲಿನ ಹೂಡಿಕೆ ಯೋಜನೆಯು ಶೇ 9.59ರಷ್ಟು ಲಾಭಾಂಶ ತಂದುಕೊಟ್ಟಿದೆ ಎಂದು ಅವರು ತಿಳಿಸಿದ್ದಾರೆ. ಸಿಐಐ ಆಯೋಜಿಸಿದ್ದ ವಿಮೆ ಮತ್ತು ಪಿಂಚಣಿ ಶೃಂಗದಲ್ಲಿ ಅವರು ಈ ವಿಚಾರ ತಿಳಿಸಿದ್ದಾರೆ.

ಭಾರತದಲ್ಲಿ ಪಿಂಚಣಿ ಲಭ್ಯತೆಯನ್ನು ಹೆಚ್ಚಿಸಲು ಇನ್ನಷ್ಟು ಉಪಕ್ರಮಗಳ ಅಗತ್ಯ ಇದೆ. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ), ಪಿಎಫ್‌ಆರ್‌ಡಿಎ ಮತ್ತು ಸಿಐಐ ಜೊತೆಯಾಗಿ ಪಿಂಚಣಿ ವಿಚಾರವಾಗಿ ಜಾಗೃತಿ ಮೂಡಿಸಬಹುದು ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

6-12-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1180 (-)
ಪಾಮ್ ವಾರದ ಡೆಲಿವರಿ	1183 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,750 (47,900)
ಬೆಳ್ಳಿ ಕೆ.ಜಿ
60,950 (61,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500- 550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	515
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43500
ಹಳತು	46000-52500
ಚಿತ್ರದುರ್ಗ	
ಆಪಿ	46839-47269
ಬೆಟ್ಟೆ	39919-40389
ಕೆಂಪುಗೋಟು	31009-31410
ರಾಶಿ	46339-46779
ಹೊನ್ನಾಳಿ	
ರಾಶಿ	46399-46399
ಕಾರ್ಕಳ	
ಹೊಸತು	38000-43500
ಹಳತು	45000-52500
ಕುಮಟಾ	
ಚಿಪ್ಪು	24569-40601
ಕೋಕ	20869-38019
ಫ್ಯಾಕ್ಟರಿ	12999-18429
ಹಳೆಚಾಲಿ	47269-50149
ಹೊಸಚಾಲಿ	38099-41549
ಮಂಗಳೂರು	
ಕೋಕ	22780-30000
ಪುತ್ತೂರು	
ಕೋಕ	27500-43500
ಸಾಗರ	
ಬಿಳಿಗೋಟು	24899-38699
ಚಾಲಿ	36199-48699
ಕೋಕ	26099-36144
ಕೆಂಪುಗೋಟು	35699-37889
ರಾಶಿ	40699-48399
ಸಿಪ್ಪೆಗೋಟು	5690-26852
ಶಿವಮೊಗ್ಗ	
ಬೆಟ್ಟೆ	48009-54009
ಗೊರಬಲು	17560-38469
ರಾಶಿ	41009-47299
ರಾಶಿ	51599-73199
ಮಂಗಳೂರು	
ಕೋಕ	22780-30000
ಸಿದ್ದಾಪುರ	
ಬಿಳಿಗೋಟು	32109-43699
ಕೋಕ	22899-37399
ಚಾಲಿ	46808-50799
ಹೊಸಚಾಲಿ	30699-38699
ಕೆಂಪುಗೋಟು	26899-28899
ರಾಶಿ	42099-48599
ತಟ್ಟಿಬೆಟ್ಟೆ	33699-43299
ಶಿರಸಿ	
ಬೆಟ್ಟೆ	44009-44599
ಬಿಳಿಗೋಟು	25299-44280
ಚಾಲಿ	46399-50899
ರಾಶಿ	46899-50399
ಸುಳ್ಯ	
ಹಳತು	45000-52500
ತುಮಕೂರು	
ರಾಶಿ	45100-46200
ಯಲ್ಲಾಪುರ	
ಬಿಳಿಗೋಟು	32914-42169
ಕೋಕ	22899-34899
ಚಾಲಿ	44619-50620
ಕೆಂಪುಗೋಟು	30110-33901
ರಾಶಿ	46179-53999
ತಟ್ಟಿಬೆಟ್ಟೆ	38350-45400
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	330-577
ದ್ವಿತಳಿ (ಬಿ.ವಿ)	212-768

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,200	15,000	14,800	243.35ಸೆಂಟ್ಸ್
ಎಸಿ	6,600	6,300	6200	
ಆರ್‌ಪಿ	6,200	-	-	ಲಂಡನ್
ಆರ್‌ಸಿ	3,770	142/kg on O.T	-	2386ಡಾಲರ್ಸ್

ಕರ್ಣಾಟಕ ಬ್ಯಾಂಕ್- ಟೊಯೋಟಾ ಕಿರ್ಲೋಸ್ಕರ್ ಒಪ್ಪಂದ

ಮಂಗಳೂರು: ಟೊಯೋಟಾ ವಾಹನ ಖರೀದಿಗೆ ತ್ವರಿತವಾಗಿ ಸಾಲ ಪಡೆಯಲು ಅನುಕೂಲವಾಗುವಂತೆ, ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಸಂಸ್ಥೆಯ ಜೊತೆಗೆ ಕರ್ಣಾಟಕ ಬ್ಯಾಂಕ್ ಒಪ್ಪಂದ ಮಾಡಿಕೊಂಡಿದೆ.

'ಕಾರು ಸಾಲವನ್ನು ಡಿಜಿಟಲ್ ಪ್ಲಾಟ್‌ಫಾರಂ ಮೂಲಕ ಅತಿ ಶೀಘ್ರವಾಗಿ ಮಂಜೂರು ಮಾಡಲಾಗುವುದು. ಇದರಿಂದ ನಮ್ಮ ಗ್ರಾಹಕರಿಗೆ ವಾಹನ ಖರೀದಿಸಲು ಅನುಕೂಲವಾಗಲಿದೆ' ಎಂದು ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್ ತಿಳಿಸಿದ್ದಾರೆ.

ಉಗ್ರ, ಸಹಚರನ ಬಂಧನ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಸೋಪುರೆ ಎಂಬಲ್ಲಿ ಸೋಮವಾರ ಉಗ್ರ ಹಾಗೂ ಆತನ ಸಹಚರ ಸೇರಿ ಇಬ್ಬರನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಬಂಧಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

ಶ್ರೀ ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ. ಶ್ರೀ ವಾಸುದೇವ ಗುರೂಜಿ Ph:9606064461. ಫೋನಿನ ಮೂಲಕವೇ ಪರಿಹಾರ ತಿಳಿಸುತ್ತಾರೆ. ಜೀವನದ ಹಲವಾರು ಸಮಸ್ಯೆಗಳಿಗೆ ಕೇರಳ ಮಹಾರಾಷ್ಟ್ರ ಮಾಂತ್ರಿಕ ಶಕ್ತಿಯಿಂದ 2ಗಂಟೆಯಲ್ಲಿ ಪರಿಹಾರ. ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಕೆಲಸವಾಗದಿದ್ದಲ್ಲಿ ಹಣವಾಪಾಸ್.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ. 9886755306

★||ಶ್ರೀಕಬ್ಬಾಳಮ್ಮ ದೇವಿ||★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಶಾಶ್ವತಪರಿಹಾರ. ''ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ವಿಶೇಷ ಪರಿಹಾರ'' ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

★||ಕೆಲಸ ಆದ ನಂತರ ಕಾಣಿಕೆ||* ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ,7ಗಂಟೆಗಳಲ್ಲಿ ಪರಿಹಾರ. 9482529984

ಗುರು ಕಬೀರ್ ಭಾರತಿ. ಫೋನ್ ಮುಖಾಂತರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಪ್ರೇಮ, ವ್ಯವಹಾರ, ಶತ್ರು ನಿವಾರಣೆ, ಗಂಡ ಹೆಂಡತಿ ಕಲಹ, ಮದುವೆ, ಕೋರ್ಟ್ ಕೇಸ್, ಕರಿಯರ್, ರಾಜಕೀಯ ಸಂಪರ್ಕಿಸಿ : 9311241624 .

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷಅನೈತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ. 9538276534

ವೈಯಕ್ತಿಕ

Announcements

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜನಪ್ರಿಯ ನಾಯಕರಾದ ಹಾಗೂ ಮಾಜಿ ಶಾಸಕರಾದ ಆರ್.ವಿ.ದೇವರಾಜ್ ಅಣ್ಣಾರವರ ಹುಟ್ಟುಹಬ್ಬದ ಪ್ರಯುಕ್ತ ಅವರ ಅಭಿಮಾನಿಗಳಾದ ಬೆಂಗಳೂರು ನಗರ ಕಾಂಗ್ರೆಸ್ ಉಪಾಧ್ಯಕ್ಷರಾದ ಬಿ.ಪಿ.ದಿನೇಶ್ ಅಣ್ಣಾರವರು, ಕೇಶವ ನಾಯಕರು, ಹರೀಶ್ ರೆಡ್ಡಿ, ಗುರುರಾಜ್, ಮೋಹನ್ ಸಿಂಗ್, ಇತರರು ಹೂವಿನ ಹಾರ ಹಾಕಿ ಶುಭಾಶಯ ಕೋರಿದರು.

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ 15000 to 28000 ಸಂಪರ್ಕಿಸಿರಿ: 9980814578, 9980812378

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವ್ಯಾಪಾರ

Business to Business

Business

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.8792252077, ಶಿವಮೊಗ್ಗ.9008013895

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 18/12/21 ಹೈದರಾಬಾದ್, ಭದ್ರಾಚಲಂ, ವಿಜಯವಾಡ. 23/12/21 ಶಿರಡಿ, 3 ಜ್ಯೋತಿರ್ಲಿಂಗ, ಪಂಡರಾಪುರ. 10/01/2022 ಕಾಶಿ, ಗಯ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

	Ordinary	Bold	Ordinary Semi Display	Bold Semi Display
Per word	60	85	70	115

	Single Col	Double Col	Multi Col
CD Per Sqcm	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಆಂಗ್ ಸಾನ್ ಸೂಕಿಗೆ 4 ವರ್ಷ ಜೈಲು ಶಿಕ್ಷೆ

ಬ್ಯಾಂಕಾಕ್ (ಎಪಿ): ಕೋವಿಡ್ ನಿಯಮ ಉಲ್ಲಂಘನೆ, ಶಾಂತಿಗೆ ಭಂಗ ಉಂಟು ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಾಗರಿಕ ಹೋರಾಟಗಾರ್ತಿ ಆಂಗ್ ಸಾನ್ ಸೂಕಿ ಅವರಿಗೆ 4 ವರ್ಷ ಜೈಲು ಶಿಕ್ಷೆ ವಿಧಿಸಿ ಮ್ಯಾನ್ಮಾರ್ ನ್ಯಾಯಾಲಯವು ತೀರ್ಪು ನೀಡಿದೆ.

ಫೆಬ್ರುವರಿ ತಿಂಗಳಲ್ಲಿ ಮ್ಯಾನ್ಮಾರ್‌ನಲ್ಲಿ ನಡೆದ ಸೇನಾ ಕ್ಷಿಪ್ರಕ್ರಾಂತಿಯ ಬಳಿಕ 76 ವರ್ಷದ ಸೂಕಿ ಅವರನ್ನು ಗೃಹಬಂಧನದಲ್ಲಿ ಇರಿಸಲಾಗಿತ್ತು.

ಕೋವಿಡ್ ನಿಯಮ ಉಲ್ಲಂಘನೆ ಮತ್ತು ಸಾರ್ವಜನಿಕ ಶಾಂತಿಗೆ ಭಂಗ ತಂದಿರುವ ಆರೋಪಗಳು ಸೇರಿದಂತೆ ಒಟ್ಟು 10 ಆರೋಪಗಳು ಅವರ ಮೇಲಿವೆ. ಇತರ ಆರೋಪಗಳ ಕುರಿತಂತೆ ಮುಂದಿನ ವಾರ ತೀರ್ಪುಗಳು ಪ್ರಕಟವಾಗುವ ನಿರೀಕ್ಷೆ ಇದೆ." ಎಂದು ಹೇಳಲಾಗುತ್ತಿದೆ.

ಬೆಲೆ ಇದ್ದರೂ ಬೆಳೆ ಇಲ್ಲ; ಅಕಾಲಿಕ ಮಳೆ ತಂದ ಸಂಕಷ್ಟ

ಏರುಗತಿಯಲ್ಲಿ ಅರೇಬಿಕಾ ಕಾಫಿ ಧಾರಣೆ

• ಆದಿತ್ಯ ಕೆ.ಎ.

ಮಡಿಕೇರಿ: ಅತಿವೃಷ್ಟಿಯಿಂದ ಸಂಕಷ್ಟಕ್ಕೆ ಸಿಲುಕಿರುವ ಕಾಫಿ ಬೆಳೆಗಾರರಿಗೆ ಅರೇಬಿಕಾ ಪಾರ್ಚ್‌ಮೆಂಟ್‌ನ ಧಾರಣೆ ಏರಿಕೆಯು ತುಸು ನೆಮ್ಮದಿ ತಂದಿದೆ. ಆದರೆ, ಈಚೆಗೆ ಸುರಿದ ಅಕಾಲಿಕ ಮಳೆಯಿಂದಾಗಿ ಫಸಲು ನೆಲಕಚ್ಚಿದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ, ಶನಿವಾರಸಂತೆ, ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಚಿಕ್ಕಮಗಳೂರು ಜಿಲ್ಲೆಯ ಮಾರುಕಟ್ಟೆಗಳಲ್ಲಿ ಸೋಮವಾರ ಅರೇಬಿಕಾ ಮಾರ್ಚ್‌ಮೆಂಟ್‌ನ 50 ಕೆ.ಜಿ ತೂಕದ ಚೀಲಕ್ಕೆ ₹ 15,100ರಿಂದ ₹ 15,250 ದರವಿತ್ತು. 'ಕಾಫಿಗೆ ಮುಕ್ತ ಮಾರುಕಟ್ಟೆ ಲಭಿಸಿದ ಬಳಿಕ ಅರೇಬಿಕಾಗೆ ಸಿಗುತ್ತಿರುವ ಉತ್ತಮ ಬೆಲೆ ಇದು' ಎಂದು ಬೆಳೆಗಾರರು ಹೇಳುತ್ತಾರೆ.

ಕಾಫಿ ದರ ಏರಿಕೆಯು ಅರೇಬಿಕಾ ಪಾರ್ಚ್‌ಮೆಂಟ್‌ಗೆ ಸೀಮಿತವಾಗಿದ್ದು, ಅರೇಬಿಕಾ ಚೆರ್ರಿಯ 50 ಕೆ.ಜಿ ತೂಕದ ಚೀಲಕ್ಕೆ ₹ 6,450ರಿಂದ ₹ 6,500 ಇದೆ. ಅಷ್ಟೇ ತೂಕದ ರೋಬಸ್ಟಾ ಪಾರ್ಚ್‌ಮೆಂಟ್ ಬೆಲೆಯು ₹ 6,100ರಿಂದ ₹ 6,200 ಆಗಿದೆ. ರೋಬಸ್ಟಾ ಚೆರ್ರಿ ಬೆಲೆ ₹ 3,700ಕ್ಕೆ ಸೀಮಿತವಾಗಿದೆ.

ಕಾಫಿ ಬೆಳೆಯುವ ಜಿಲ್ಲೆಗಳಲ್ಲಿ ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ಅಕಾಲಿಕ ಮಳೆಯಾಗಿ ಕೊಯ್ಲು ಮಾಡಲಾಗದೆ ಫಸಲು ನೆಲ ಕಚ್ಚಿತ್ತು. ಉಳಿದ ಫಸಲು ಕೊಯ್ಲು ಮಾಡಿದ್ದರೂ, ಮೋಡ ಕವಿದ ವಾತಾವರಣವಿರುವುದರಿಂದ ಒಣಗಿಸಲು ರೈತರು ಬಿಸಿಲಿಗಾಗಿ ಕಾಯುತ್ತಿದ್ದಾರೆ.

'ಬ್ರೆಜಿಲ್ ಸೇರಿದಂತೆ ಕಾಫಿ ಬೆಳೆಯುವ ರಾಷ್ಟ್ರಗಳಲ್ಲಿ ಹಿಮಪಾತ ಹಾಗೂ ವಿಪರೀತ ಮಳೆಯಿಂದ ಕಾಫಿ ಉತ್ಪಾದನೆ ಕಡಿಮೆಯಾಗಿದೆ. ನಮ್ಮ ದೇಶದ ಕಾಫಿ ಬೆಳೆಯುವ ಭಾಗದಲ್ಲೂ ಮಳೆಯಿಂದ ಶೇ 30ರಷ್ಟು ಫಸಲು ನೆಲಕಚ್ಚಿದೆ. ಈಗ ಚಳಿ ಆರಂಭವಾಗಿದ್ದು, ಕಾಫಿಗೆ ಬೇಡಿಕೆ ಬಂದಿದೆ. ಬೆಲೆ ಏರಿಕೆಯಾಗಿದೆ' ಎಂದು ಕಾಫಿ ವ್ಯಾಪಾರಿ ಅಬ್ದುಲ್ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಕೊಡಗು, ಚಿಕ್ಕಮಗಳೂರು, ಹಾಸನದಲ್ಲಿ ದರ ಹೆಚ್ಚಳ
- ಅರೇಬಿಕಾ ಪಾರ್ಚ್‌ಮೆಂಟ್ ಗಷ್ಟೇ ಸೀಮಿತ

ಡಿಸೆಂಬರ್‌ನಲ್ಲೂ ಬಿಸಿಲಿಲ್ಲ. ಕಾಫಿಯಲ್ಲಿ ತೇವಾಂಶ ಉಳಿಯುತ್ತಿದೆ. 50 ಕೆ.ಜಿ ತೂಕದ ಚೀಲ ಕೊಂಡೊಯ್ದರೆ, 47 ಕೆ.ಜಿಗೆ ಮಾತ್ರ ಹಣ ನೀಡುತ್ತಾರೆ. 3 ಕೆ.ಜಿ ತೂಕ ಕಳೆಯುತ್ತಾರೆ

ಪ್ರಸಾದ್, ಕಾಫಿ ಬೆಳೆಗಾರ, ಕೊಡ್ಲಿಪೇಟೆ

ಒಣಗಿಸಲು ಹಾಕಿರುವ ಕಾಫಿ ಬೆಳೆ

'ನಾಲ್ಕನೆಯ ಅತಿಹೆಚ್ಚಿನ ವಿದೇಶಿ ವಿನಿಮಯ ಮೀಸಲು'

ನವದೆಹಲಿ (ಪಿಟಿಐ): ಭಾರತದ ಬಳಿ ಈಗ ಇರುವ ವಿದೇಶಿ ವಿನಿಮಯ ಮೀಸಲಿನ ಮೊತ್ತವು ವಿಶ್ವದಲ್ಲಿಯೇ ನಾಲ್ಕನೆಯ ಅತಿಹೆಚ್ಚಿನದು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ತಿಳಿಸಿದ್ದಾರೆ.

ನವೆಂಬರ್ 19ರ ಅಂಕಿ–ಅಂಶದ ಪ್ರಕಾರ ದೇಶದಲ್ಲಿ ₹ 48.24 ಲಕ್ಷ ಕೋಟಿ ವಿದೇಶಿ ವಿನಿಮಯ ಮೀಸಲು ಇದೆ ಎಂದು ಅವರು ಹೇಳಿದ್ದಾರೆ.

ಕಳೆದ ಏಳು ವರ್ಷಗಳಿಂದ ಆಗಿರುವ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್ ಮತ್ತು ಎಕ್ಸೈಸ್ ಸುಂಕ ಸಂಗ್ರಹದ ಮೊತ್ತವು ₹ 16.7 ಲಕ್ಷ ಕೋಟಿ ಎಂದು ಅವರು ಇನ್ನೊಂದು ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ತಿಳಿಸಿದ್ದಾರೆ.

ಫೆಬ್ರವರಿ 23, 24 ರಂದು ದೇಶದಾದ್ಯಂತ ಸಾರ್ವತ್ರಿಕ ಮುಷ್ಕರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಜನವಿರೋಧಿ, ಕಾರ್ಮಿಕ ವಿರೋಧಿ ಮತ್ತು ರಾಷ್ಟ್ರ ವಿರೋಧಿ ನೀತಿಗಳ ವಿರುದ್ಧ 'ಜನರನ್ನು ಉಳಿಸಿ ಮತ್ತು ದೇಶ ಉಳಿಸಿ' ಎಂಬ ಘೋಷಣೆಯೊಂದಿಗೆ ಫೆಬ್ರವರಿ 23 ಮತ್ತು 24 ರಂದು ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು 10 ಕೇಂದ್ರ ಕಾರ್ಮಿಕ ಸಂಘಟನೆಗಳು ಸೋಮವಾರ ಘೋಷಿಸಿವೆ.

ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ನಾಯಕರ ಸಹಯೋಗದಲ್ಲಿಯೇ ಪೂರ್ವಸಿದ್ಧತಾ ಸಭೆಗಳನ್ನು ನಡೆಸಲು ಕಾರ್ಮಿಕ ಸಂಘಟನೆಗಳು ನಿರ್ಧರಿಸಿವೆ.

ಭಾನುವಾರ ಇಲ್ಲಿ ನಡೆದ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ವಲಯದ ಅಖಿಲ ಭಾರತ ಒಕ್ಕೂಟಗಳು ಹಾಗೂ ಸಂಘಗಳ ಜಂಟಿ ವೇದಿಕೆಯ ಸಭೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಸಂಘಟನೆಗಳು ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿವೆ.

ಸಂಕ್ಷಿಪ್ತ ಸುದ್ದಿ

ಇಂಡೋನೇಷ್ಯಾ ಜ್ವಾಲಾಮುಖಿ: ಇನ್ನೂ 27 ಮಂದಿ ನಾಪತ್ತೆ

ಸಂಬರ್‌ವುಲು (ಇಂಡೋನೇಷ್ಯಾ) (ಎಪಿ): ಇಂಡೋನೇಷ್ಯಾದ ಜಾವಾ ದ್ವೀಪದಲ್ಲಿ ಸಂಭವಿಸಿದ ಬಹುದೊಡ್ಡ ಜ್ವಾಲಾಮುಖಿಯ ಅವಶೇಷಗಳ ಅಡಿಯಿಂದ 13 ವರ್ಷದ ಬಾಲಕನ ಮೃತದೇಹ ಹೊರತೆಗೆಯಲಾಗಿದ್ದು, ಮೃತರ ಸಂಖ್ಯೆ 15ಕ್ಕೆ ಏರಿದೆ. ಇನ್ನೂ 27 ಮಂದಿ ನಾಪತ್ತೆಯಾಗಿದ್ದಾರೆ.

ಪೂರ್ವ ಜಾವಾ ಪ್ರಾಂತ್ಯದ ಜುಮಜಂಗ್ ಜಿಲ್ಲೆಯ ಸೆಮೆರು ಪರ್ವತದಲ್ಲಿ ಈ ಜ್ವಾಲಾಮುಖಿ ಸ್ಫೋಟಿಸಿತ್ತು. ಲಾವಾರಸದಿಂದ ಉತ್ಪತ್ತಿಯಾದ ಬೂದಿ 12 ಸಾವಿರ ಮೀಟರ್‌ನಷ್ಟು (40 ಸಾವಿರ ಅಡಿ) ಎತ್ತರಕ್ಕೆ ಚಿಮ್ಮಿತ್ತು.

ತೀವ್ರ ಸುಟ್ಟ ಗಾಯಗಳೊಂದಿಗೆ 56 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದುರಂತದಲ್ಲಿ 3 ಸಾವಿರಕ್ಕೂ ಅಧಿಕ ಮನೆಗಳು ಮತ್ತು 38 ಶಾಲೆಗಳು ಹಾನಿಗೊಂಡಿವೆ.

ಪರಮ್ ಬೀರ್ ಸಿಂಗ್ ವಿರುದ್ಧದ ತನಿಖೆ ಸಿಬಿಐಗೆ: 'ಸುಪ್ರೀಂ'

ನವದೆಹಲಿ: ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ವಿರುದ್ಧದ ತನಿಖೆಯನ್ನು ಸಿಬಿಐಗೆ ವರ್ಗಾಯಿಸುವ ಕುರಿತು ಸುಪ್ರೀಂಕೋರ್ಟ್ ಸೋಮವಾರ ಸುಳಿವು ನೀಡಿದೆ. ಸದ್ಯಕ್ಕೆ ತನಿಖೆಯನ್ನು ಮುಂದುವರೆಸುವಂತೆ ರಾಜ್ಯ ಪೊಲೀಸ್ ಇಲಾಖೆಗೆ ನಿರ್ದೇಶಿಸಿದ್ದು ಪರಮ್ ಬೀರ್ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸದಂತೆ ನಿರ್ಬಂಧ ಹೇರಿದೆ.

ಮಹಾರಾಷ್ಟ್ರದ ಮಾಜಿ ಗೃಹ ಸಚಿವರ ವಿರುದ್ಧ ₹100 ಕೋಟಿ ಸುಲಿಗೆ ಆರೋಪ ಮಾಡಿದ ನಂತರ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಮ್ ಬೀರ್ ಸಿಂಗ್ ಹುದ್ದೆಯಿಂದ ಅಮಾನತುಗೊಂಡಿದ್ದರು.

ಈ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಬಹುದು ಎಂದು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ಪೀಠ ಹೇಳಿದೆ.

ಕೊಲಂಬೊ ತಲುಪಿದ ಲಂಕಾ ಪ್ರಜೆಯ ಮೃತದೇಹ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಶುಕ್ರವಾರ ಉದ್ರಿಕ್ತ ಜನರ ದಾಳಿಗೆ ಸಿಕ್ಕಿ ಮೃತಪಟ್ಟ ಶ್ರೀಲಂಕಾದ ಪ್ರಜೆ ಪ್ರಿಯಾಂತ ಕುಮಾರ್ ದಿಯಾವಾದಾನಾಗೆ ಅವರ ಮೃತದೇಹವನ್ನು ಸೋಮವಾರ ಕೊಲಂಬೊಗೆ ಕಳುಹಿಸಿಕೊಡಲಾಗಿದೆ.

ಜೂಮ್ ಕರೆ ಮೂಲಕ 900 ನೌಕರರ ವಜಾ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಕಂಪನಿ 'ಬೆಟರ್. ಕಾಂ'ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ವಿಶಾಲ್ ಗರ್ಗ್ ಅವರು 900ಕ್ಕೂ ಹೆಚ್ಚಿನ ನೌಕರರನ್ನು ಕೆಲಸದಿಂದ ವಜಾಗೊಳಿಸಿದ್ದಾರೆ. ವಜಾಗೊಳಿಸುವ ತೀರ್ಮಾನವನ್ನು ಅವರು ನೌಕರರಿಗೆ ಜೂಮ್ ಆ್ಯಪ್ ಮೂಲಕ ವೆಬಿನಾರ್ ಆಯೋಜಿಸಿ ತಿಳಿಸಿದ್ದಾರೆ.

ಸಾಮರ್ಥ್ಯ, ಉತ್ಪಾದಕತೆಯನ್ನು ಆಧಾರವಾಗಿ ಇರಿಸಿಕೊಂಡು ನೌಕರರನ್ನು ವಜಾಗೊಳಿಸಲಾಗಿದೆ ಎಂದು ವಿಶಾಲ್ ಅವರು ಹೇಳಿರುವುದಾಗಿ ಸಿಎನ್‌ಎನ್ ವಾಹಿನಿ ವರದಿ ಮಾಡಿದೆ. ವಿಶಾಲ್ ಅವರು ಭಾರತ ಮೂಲದವರು.

'ನಾನು ಈ ರೀತಿ ಮಾಡುತ್ತಿರುವುದು ನನ್ನ ವೃತ್ತಿ ಜೀವನದಲ್ಲಿ ಇದು ಎರಡನೆಯ ಬಾರಿ. ಈ ರೀತಿ ಮಾಡುವುದು ನನಗೆ ಇಷ್ಟವಿಲ್ಲ. ಹಿಂದಿನ ಬಾರಿ ನೌಕರರನ್ನು ವಜಾಗೊಳಿಸುವ ತೀರ್ಮಾನ ಪ್ರಕಟಿಸುವಾಗ ನಾನು ಅತ್ತಿದ್ದೆ' ಎಂದು ಗರ್ಗ್ ಅವರು ಜೂಮ್ ಕರೆಯಲ್ಲಿ ಹೇಳಿದ್ದಾರೆ.

ನಾಗಾಲ್ಯಾಂಡ್: ಸೈನಿಕರ ವಿರುದ್ಧ ಪೊಲೀಸ್ ಎಫ್‌ಐಆರ್‌ನಲ್ಲಿ ಉಲ್ಲೇಖ • ಕೊಲೆ ಪ್ರಕರಣ ದಾಖಲು

‘ಕೊಲ್ಲುವ ಉದ್ದೇಶದಿಂದಲೇ ಕಾರ್ಯಾಚರಣೆ’

ಕೊಹಿಮಾ (ಪಿಟಿಐ): ‘ನಾಗರಿಕರನ್ನು ಕೊಲ್ಲುವ ಉದ್ದೇಶದಿಂದಲೇ ಸೈನಿಕರು ಕಾರ್ಯಾಚರಣೆ ನಡೆಸಿದ್ದಾರೆ’ ಎಂದು ಸೇನೆಯ 21ನೇ ಪ್ಯಾರಾ ವಿಶೇಷ ಪಡೆಯ ವಿರುದ್ಧ ನಾಗಾಲ್ಯಾಂಡ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಸೈನಿಕರ ವಿರುದ್ಧ ಕೊಲೆ, ಕೊಲೆ ಯತ್ನ ಮತ್ತು ಏಕ ಉದ್ದೇಶದಿಂದ ಸಂಘಟಿತ ಕೃತ್ಯ ಎಸಗಿದ ಆರೋಪಗಳ ಅಡಿ ಎಫ್‌ಐಆರ್ ದಾಖಲಿಸಲಾಗಿದೆ.

ರಾಜ್ಯದ ಮೊನ್ ಜಿಲ್ಲೆಯ ಟಿರು ಮತ್ತು ಒಟಿಂಗ್ ಗ್ರಾಮಗಳ ಬಳಿ ಶನಿವಾರ ಸಂಜೆ ನಾಗರಿಕರ ಮೇಲೆ ಸೈನಿಕರು ಗುಂಡು ಹಾರಿಸಿ ಕೊಂದ ಕೃತ್ಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇಲ್ಲಿನ ಟಿಝಿಟ್ ಪೊಲೀಸ್ ಠಾಣೆಯಲ್ಲಿ ಪೊಲೀಸರು ಸ್ವಯಂಪ್ರೇರಿತರಾಗಿ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

‘4ನೇ ಡಿಸೆಂಬರ್‌ನ ಮಧ್ಯಾಹ್ನ 3.30ರ ವೇಳೆಗೆ ಟಿರು ಗ್ರಾಮದ ಬಳಿ ಇದ್ದ ಕಲ್ಲಿದ್ದಲು ಗಣಿಯಿಂದ ಕೆಲಸ ಮುಗಿಸಿ ಒಟಿಂಗ್ ಗ್ರಾಮಕ್ಕೆ ನಾಗರಿಕರು ಬೊಲೆರೊ ಪಿಕ್‌ಅಪ್ ವಾಹನದಲ್ಲಿ ವಾಪಸಾಗುತ್ತಿದ್ದರು. ಟಿರು ಮತ್ತು ಒಟಿಂಗ್ ಮಧ್ಯೆ ಇರುವಾಗ ಆ ಪಿಕ್‌ಅಪ್ ವಾಹನದ ಮೇಲೆ ಸೈನಿಕರು ಯಾವುದೇ ಕಾರಣ ಮತ್ತು ಪ್ರಚೋದನೆ ಇಲ್ಲದೆ ಗುಂಡು ಹಾರಿಸಿದ್ದಾರೆ. ಇದರಿಂದ ಒಟಿಂಗ್‌ನ ಹಲವು ಗ್ರಾಮಸ್ಥರು ಸತ್ತಿದ್ದಾರೆ ಮತ್ತು ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

‘ಘಟನೆ ನಡೆದ ಸಮಯದಲ್ಲಿ ಸಶಸ್ತ್ರ ಪಡೆಯ ಸೈನಿಕರು ಸ್ಥಳೀಯ ಪೊಲೀಸರ ಮಾರ್ಗದರ್ಶನ ಕೇಳಿರಲಿಲ್ಲ ಮತ್ತು ಮಾರ್ಗದರ್ಶನ ನೀಡಿ ಎಂದು ಪೊಲೀಸರಿಗೆ ಮನವಿಯನ್ನೂ ಸಲ್ಲಿಸಿರಲಿಲ್ಲ. ನಾಗರಿಕರನ್ನು ಕೊಲ್ಲುವ ಮತ್ತು ನಾಗರಿಕರನ್ನು ಗಾಯಗೊಳಿಸುವ ಉದ್ದೇಶದಿಂದಲೇ ಸೇನಾ ಪಡೆಯು ಪೊಲೀಸರ ಮಾರ್ಗದರ್ಶನ ಪಡೆದಿಲ್ಲ ಎಂಬುದು ಗೊತ್ತಾಗುತ್ತದೆ’ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

ಭಾರತೀಯ ದಂಡ ಸಂಹಿತೆಯ 302, 307 ಮತ್ತು 34ನೇ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ.

ನಾಗರಿಕರನ್ನು ಸೈನಿಕರು ಗುಂಡಿಟ್ಟು ಕೊಂದಿದ್ದನ್ನು ಖಂಡಿಸಿ ಮೊನ್‌ನಲ್ಲಿ ಸಾರ್ವಜನಿಕರು ಸೋಮವಾರ ಪ್ರತಿಭಟನೆ ನಡೆಸಿದರು. ‘ಅಮಾಯಕ ನಾಗರಿಕರನ್ನು ಕೊಲ್ಲುವುದು ಭಯೋತ್ಪಾದನೆ’ ಎಂಬ ಬ್ಯಾನರ್ ಅನ್ನು ಪ್ರತಿಭಟನಕಾರರು ಪ್ರದರ್ಶಿಸಿದರು —ಪಿಟಿಐ ಚಿತ್ರ

- ಮೃತರ ಕುಟುಂಬಗಳಿಗೆ ರಾಜ್ಯ ಸರ್ಕಾರವು ತಲಾ ₹5 ಲಕ್ಷ ಪರಿಹಾರವನ್ನು ಘೋಷಿಸಿದೆ
- ನಾಗಾಲ್ಯಾಂಡ್‌ನ ಬುಡಕಟ್ಟು ಸಮುದಾಯಗಳು ಸೋಮವಾರ ಬಂದ್ ಆಚರಣೆಗೆ ಕರೆ ನೀಡಿದ್ದವು. ಬಂದ್ ಶಾಂತಿಯುತವಾಗಿ ನಡೆದಿದೆ
- ಸೈನಿಕರಿಂದ ನಾಗರಿಕರ ಹತ್ಯೆಯನ್ನು ಖಂಡಿಸಿ ಮಣಿಪುರ ಮತ್ತು ಅಸ್ಸಾಂನ ಹಲವೆಡೆ ಪ್ರತಿಭಟನೆ ನಡೆಸಲಾಗಿದೆ
- ಸೈನಿಕರ ಗುಂಡಿಗೆ ಬಲಿಯಾದ ನಾಗರಿಕರ ಅಂತ್ಯ ಸಂಸ್ಕಾರವನ್ನು ಟಿರು ಸಮೀಪದ ಹೆಲಿಪ್ಯಾಡ್‌ನಲ್ಲಿ ನಡೆಸಲಾಗಿದೆ. ನಿಷೇಧಾಜ್ಞೆ ಜಾರಿಯಲ್ಲಿದ್ದರೂ, ನೂರಾರು ಜನರು ಅಂತ್ಯ ಸಂಸ್ಕಾರದಲ್ಲಿ ಭಾಗಿಯಾಗಿದ್ದರು
- ಸೇನೆಗೆ ವಿಶೇಷಾಧಿಕಾರ ನೀಡುವ ಆಫ್‌ಸ್ಪ ಕಾಯ್ದೆಯನ್ನು ರದ್ದುಪಡಿಸಬೇಕು ಮತ್ತು ಕಾಯ್ದೆಯಿಂದ ತಮ್ಮ ರಾಜ್ಯವನ್ನು ಹೊರಗಿಡಬೇಕು ಎಂದು ಮಣಿಪುರ, ನಾಗಾಲ್ಯಾಂಡ್ ಜನರು ಒತ್ತಾಯಿಸಿದ್ದಾರೆ
- ನಾಗಾಲ್ಯಾಂಡ್‌ನಲ್ಲಿ ಸೋಮವಾರ ಹಾರ್ನ್‌ಬಿಲ್ ಉತ್ಸವವನ್ನು ಸ್ಥಗಿತಗೊಳಿಸಲಾಗಿತ್ತು

‘ಕೃತ್ಯ ಮರೆಮಾಚಲು ಯತ್ನ’

ಎಫ್‌ಐಆರ್ ದಾಖಲಿಸಿಕೊಂಡಿರುವ ಟಿಝಿಟ್ ಪೊಲೀಸರು ತನಿಖೆ ನಡೆಸಿ, ಪೂರ್ವಭಾವಿ ವರದಿಯನ್ನು ಸಿದ್ಧಪಡಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ವರದಿಯ ಪುಟಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

‘ಒಟಿಂಗ್ ಗ್ರಾಮಸ್ಥರು ಕಲ್ಲಿದ್ದಲು ಗಣಿಯಿಂದ ಮಹೀಂದ್ರಾ ಪಿಕ್‌ಅಪ್‌ನಲ್ಲಿ ವಾಪಸಾಗುತ್ತಿದ್ದರು. ಪಿಕ್‌ಅಪ್‌ನಲ್ಲಿ ಎಂಟು ಜನರಿದ್ದರು. ಅವರ ಮೇಲೆ ಸೈನಿಕರು ಗುಂಡು ಹಾರಿಸಿದ್ದಾರೆ. ಆಗ ಆರು ನಾಗರಿಕರು ಮೃತಪಟ್ಟಿದ್ದಾರೆ. ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಒಟಿಂಗ್ ಗ್ರಾಮದಿಂದ ಕೆಲವೇ ಕಿ.ಮೀ. ದೂರದಲ್ಲಿ ಈ ಘಟನೆ ನಡೆದಿದೆ.

‘ಗುಂಡಿನ ಸದ್ದು ಕೇಳಿದ ಒಟಿಂಗ್ ಗ್ರಾಮಸ್ಥರು ಘಟನಾ ಸ್ಥಳಕ್ಕೆ ಹೋಗಿದ್ದಾರೆ. ಅವರಿಗೆ ಮೊದಲು ಮಹೀಂದ್ರಾ ಪಿಕ್‌ಅಪ್ ಕಾಣಿಸಿದೆ. ಸಮೀಪದಲ್ಲೇ ಇದ್ದ ಟಾಟಾ ಮೊಬೈಲ್ ಪಿಕ್‌ಅಪ್ ವಾಹನಕ್ಕೆ, ಸೈನಿಕರು ಶವಗಳನ್ನು ತುಂಬಿಸುತ್ತಿರುವುದು ಅವರಿಗೆ ಕಾಣಿಸಿದೆ. ಶವಗಳನ್ನು ಟಾರ್ಪಲ್ ಮತ್ತು ಬ್ಯಾಗ್‌ಗಳ ಅಡಿಯಲ್ಲಿ ಮುಚ್ಚಿಡಲು ಸೈನಿಕರು ಯತ್ನಿಸಿದ್ದಾರೆ. ಶವಗಳನ್ನು ತಮ್ಮ ಶಿಬಿರಕ್ಕೆ ಕೊಂಡೊಯ್ದು, ಕೃತ್ಯವನ್ನು ಮರೆಮಾಚಲು ಸೈನಿಕರು ಹೀಗೆ ಮಾಡಿದ್ದಾರೆ. ಆಗ ಗ್ರಾಮಸ್ಥರು ಸೈನಿಕರ ಮೇಲೆ ದಾಳಿ ನಡೆಸಿದ್ದಾರೆ. ಸೈನಿಕರು ಆಗ ಗ್ರಾಮಸ್ಥರ ಮೇಲೆ ಗುಂಡು ಹಾರಿಸಿದ್ದರಿಂದ ಮತ್ತೆ ಏಳು ನಾಗರಿಕರು ಮೃತಪಟ್ಟಿದ್ದಾರೆ.

‘ಗಾಯಗೊಂಡಿದ್ದ ಇಬ್ಬರು ನಾಗರಿಕರನ್ನು ಎತ್ತಿಕೊಂಡು ಸೈನಿಕರು ಅಸ್ಸಾಂ ಗಡಿ ದಾಟಿದ್ದಾರೆ ಎಂಬುದನ್ನು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಅವರಿಬ್ಬರಿಗೆ ಈಗ ದಿಬ್ರುಗಡ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ಪೂರ್ವಭಾವಿ ವರದಿಯಲ್ಲಿ ವಿವರಿಸಲಾಗಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಟಾಟಾ ಕ್ಸೆನಾನ್ ಪಿಕ್‌ಅಪ್ ಟ್ರಕ್‌ನಲ್ಲಿ ಶವಗಳನ್ನು ಟಾರ್ಪಲ್‌ನಿಂದ ಮುಚ್ಚಿಟ್ಟಿರುವ ದೃಶ್ಯಗಳಿರುವ ವಿಡಿಯೊ ಮತ್ತು ಚಿತ್ರಗಳು ವೈರಲ್ ಆಗಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ದಿನದ ವಿಶೇಷ: ಪ್ರತೀ ದಿನ ಬೆಳಿಗ್ಗೆ 7 **ವಚನವಾಣಿ**, ಬೆ. 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9.30 **ಸಂಪಾದಕೀಯ**, ಬೆಳಿಗ್ಗೆ 9 **ಪ್ರಚಲಿತ**
Prajavani.net Prajavani Prajavani

ಬ್ಯಾಡ್ಮಿಂಟನ್: ಸೈನಿಗೆ ಪ್ರಶಸ್ತಿ

ಢಾಕಾ (ಪಿಟಿಐ): ಭಾರತದ ಅಭಿಷೇಕ್ ಸೈನಿ ಅವರು ಬಾಂಗ್ಲಾದೇಶ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಅವರು 21-15 21-18 ಭಾರತದವರೇ ಆದ ಋತ್ವಿಕ್ ಸಂಜೀವಿ ಅವರನ್ನು ಮಣಿಸಿದರು. 34 ನಿಮಿಷಗಳಲ್ಲಿ ಪಂದ್ಯ ಅಂತ್ಯವಾಯಿತು.

ಮಹಿಳಾ ಡಬಲ್ಸ್‌ನಲ್ಲಿ ಭಾರತದ ಮೆಹರೀನ್ ರಿಜಾ– ಆರತಿ ಸಾರಾ ಸುನಿಲ್ ಅವರು ಪ್ರಶಸ್ತಿಗೆ ಮುತ್ತಿಕ್ಕಿದರು. ಫೈನಲ್‌ನಲ್ಲಿ ಇವರು 22-20, 21-12ರಿಂದ ಮಲೇಷ್ಯಾದ ಕಸ್ತೂರಿ ರಾಧಾಕೃಷ್ಣನ್ ಮತ್ತು ವೆನೋಶಾ ರಾಧಾಕೃಷ್ಣ ಅವರನ್ನು ಸೋಲಿಸಿದರು.

‘ಸಶಸ್ತ್ರ ಸೀಮಾ ಬಲ್’ ತಂಡದ ಮನೀಷಾ (ಎಡ) ಹಾಗೂ ಮಹಾರಾಷ್ಟ್ರ ಪೊಲೀಸ್ ತಂಡದ ರೋಹಿಣಿ ನೆವಾರೆ ನಡುವೆ ಚೆಂಡಿಗಾಗಿ ಪೈಪೋಟಿ— ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಎರಡನೇ ಅಲೆಗೆ ಹೋಲಿಸಿದರೆ ಸೌಮ್ಯ–ಐಐಟಿ ವಿಜ್ಞಾನಿಯ ಗಣಿತಶಾಸ್ತ್ರೀಯ ಅಂದಾಜು

ಫೆಬ್ರುವರಿಯಲ್ಲಿ ಮೂರನೇ ಅಲೆ ಸಾಧ್ಯತೆ

ಮುಂಬೈ (ಪಿಟಿಐ): ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ಕೆಲವು ರಾಜ್ಯಗಳಲ್ಲಿ ಕಾಣಿಸಿಕೊಂಡಿದ್ದು, ದೇಶದಲ್ಲಿ ಫೆಬ್ರುವರಿ ಹೊತ್ತಿಗೆ ಮೂರನೇ ಅಲೆ ಏಳುವ ಸಾಧ್ಯತೆಯಿದೆ ಎಂದು ಐಐಟಿ ವಿಜ್ಞಾನಿ ಮಣೀಂದ್ರ ಅಗರ್‌ವಾಲ್ ಅಂದಾಜಿಸಿದ್ದಾರೆ. ಗಣಿತಶಾಸ್ತ್ರೀಯ ಮಾದರಿಯ ಆಧಾರದ ಮೇಲೆ ಅವರು ಈ ಅಂದಾಜು ಮಾಡಿದ್ದಾರೆ.

‘ಮೂರನೇ ಅಲೆಗೆ ಓಮೈಕ್ರಾನ್ ಕಾರಣವಾಗಲಿದೆ. ಆದರೆ ಎರಡನೇ ಅಲೆಯ ತೀವ್ರತೆಗೆ ಹೋಲಿಸಿದರೆ, ಮೂರನೇ ಅಲೆ ಸೌಮ್ಯ ಸ್ವರೂಪದಲ್ಲಿ ಇರಲಿದೆ. ಈ ಹಿಂದಿನ ಡೆಲ್ಟಾ ತಳಿಗೆ ಹೋಲಿಸಿದರೆ, ಓಮೈಕ್ರಾನ್ ಸೋಂಕಿತರಲ್ಲಿ ತೀವ್ರತೆ ಅಷ್ಟಾಗಿ ಕಂಡುಬಂದಿಲ್ಲ’ ಎಂದು ಅವರು ಹೇಳಿದ್ದಾರೆ.

ಆದರೂ, ಓಮೈಕ್ರಾನ್‌ನ ಹೆಚ್ಚು ಪ್ರಕರಣಗಳು ವರದಿಯಾಗಿರುವ ದಕ್ಷಿಣ ಆಫ್ರಿಕಾದ ಬೆಳವಣಿಗೆಗಳ ಮೇಲೆ ಕಣ್ಣಿಡಬೇಕು. ಅಲ್ಲಿ ಈವರೆಗೆ ಹೆಚ್ಚಾಗಿ ಆಸ್ಪತ್ರೆ ಸೇರುವ ಪ್ರವೃತ್ತಿ ಕಂಡುಬಂದಿಲ್ಲ ಎಂದಿದ್ದಾರೆ.

ಓಮೈಕ್ರಾನ್‌ನ ಹೊಸ ದತ್ತಾಂಶಗಳು ಮತ್ತು ಆಸ್ಪತ್ರೆ ಸೇರುವವರ ಸಂಖ್ಯೆಯು ವೈರಸ್ ಹರಡುವಿಕೆಯ ಸ್ಪಷ್ಟ ಚಿತ್ರಣವನ್ನು ಕೊಡಲಿದೆ. ವೈರಸ್‌ನ ಪ್ರಸರಣ ಅತಿಹೆಚ್ಚು ಎಂದು ತೋರಿದ್ದರೂ, ಅದರ ಪರಿಣಾಮ ಅಷ್ಟಾಗಿಲ್ಲ ಎಂದು ಅವರು ಹೇಳಿದ್ದಾರೆ.

ಡೆಲ್ಟಾಗಿಂತ ಹೆಚ್ಚು ಪ್ರಸರಣ ಸಾಮರ್ಥ್ಯದ, ತೀವ್ರವಾಗಿರುವ ಕೊರೊನಾ ವೈರಸ್‌ನ ಹೊಸ ತಳಿ ಪತ್ತೆಯಾದಲ್ಲಿ, ಅಕ್ಟೋಬರ್‌ನಲ್ಲಿ ಮೂರನೇ ಅಲೆ ಉಂಟಾಗಲಿದೆ ಎಂದು ವಿಜ್ಞಾನಿಗಳು ಹೇಳಿದ್ದರು. ಆದರೆ ನವೆಂಬರ್ ಕೊನೆಯವರೆಗೂ ಹೊಸ ತಳಿ ಕಾಣಿಸಿರಲಿಲ್ಲ.

ಹೊಸ ರೂಪಾಂತರ ತಳಿಯು ತೀವ್ರ ಸ್ವರೂಪದ್ದಾಗಿರಲಿದೆಯೇ ಅಥವಾ ಮಾನವನ ರೋಗನಿರೋಧಕ ಶಕ್ತಿಯನ್ನು ಭೇದಿಸಲಿದೆಯೇ ಎಂಬ ಬಗ್ಗೆ ಇನ್ನೂ ಸ್ಪಷ್ಟ ಮಾಹಿತಿ ಇಲ್ಲ ಎಂದು ಅಗರ್‌ವಾಲ್ ಹೇಳಿದ್ದಾರೆ.

ಸಮೀಕ್ಷೆ: 20ಕ್ಕೂ ಹೆಚ್ಚು ಓಮೈಕ್ರಾನ್ ಪ್ರಕರಣ ಪತ್ತೆಯಾಗಿರುವ ದೇಶಗಳಿಗೆ ವಿಮಾನಯಾನ ನಿರ್ಬಂಧಿಸುವಂತೆ ಶೇ 50ರಷ್ಟು ಜನರು ಅಭಿಪ್ರಾಯಪಟ್ಟಿದ್ದಾರೆ ಎಂದು ಲೋಕಲ್ ಸರ್ಕಲ್ಸ್ ನಡೆಸಿದ ಸಮೀಕ್ಷೆ ಅಭಿಪ್ರಾಯಪಟ್ಟಿದೆ. ಸಮೀಕ್ಷೆಗೆ ಪ್ರತಿಕ್ರಿಯಿಸಿದ ಪ್ರತೀ ಇಬ್ಬರಲ್ಲಿ ಒಬ್ಬರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜಮ್ಮುವಿನ ಕತ್ರಾ ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರು ಕೋವಿಡ್ ಪರೀಕ್ಷೆಗಾಗಿ ಸೋಮವಾರ ಸರದಿಯಲ್ಲಿ ನಿಂತಿದ್ದರು—ಪಿಟಿಐ ಚಿತ್ರ

ಎಲ್ಲೆಲ್ಲಿ ಓಮೈಕ್ರಾನ್?

- ದಕ್ಷಿಣ ಆಫ್ರಿಕಾ ಹಾಗೂ ಅಮೆರಿಕದಿಂದ ಮುಂಬೈಗೆ ಬಂದಿದ್ದ ಇಬ್ಬರಲ್ಲಿ ಓಮೈಕ್ರಾನ್ ಪತ್ತೆ; ಮಹಾರಾಷ್ಟ್ರದಲ್ಲಿ ಸೋಂಕಿತರ ಸಂಖ್ಯೆ 10ಕ್ಕೆ ಏರಿಕೆ
- ಗೋವಾಕ್ಕೆ ಹಡಗಿನಲ್ಲಿ ಬಂದಿಳಿದ ಐವರು ನಾವಿಕರಲ್ಲಿ ಓಮೈಕ್ರಾನ್ ಇರುವ ಶಂಕೆ; ಪ್ರತ್ಯೇಕವಾಸ
- ವಿದೇಶಗಳಿಂದ ದೆಹಲಿಗೆ ಬಂದ ಮೂವರು ಪ್ರಯಾಣಿಕರ ಪೈಕಿ ಇಬ್ಬರಿಗೆ ಕೋವಿಡ್ ದೃಢ, ಮತ್ತೊಬ್ಬರಿಗೆ ಸೋಂಕು ಶಂಕೆ; ಆಸ್ಪತ್ರೆಯಲ್ಲಿ ಪ್ರತ್ಯೇಕವಾಸ
- ತೆಲಂಗಾಣದ ಕರೀಂನಗರ ಜಿಲ್ಲೆಯ ಚಲ್ಮೇಡಾ ಆನಂದರಾವ್ ವೈದ್ಯಕೀಯ ಸಂಸ್ಥೆಯ 43 ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಪತ್ತೆ
- ಕೇಂದ್ರ ಸರ್ಕಾರದ ಜೊತೆ ಸಂವಹನದ ಬಳಿಕವೇ ಮಹಾರಾಷ್ಟ್ರದಲ್ಲಿ ನಿರ್ಬಂಧ ವಿಧಿಸುವ ನಿರ್ಧಾರ–ಆರೋಗ್ಯ ಸಚಿವ ರಾಜೇಶ್ ಟೋಪೆ
- ಕೋವಿಡ್ ನಿಯಮಾವಳಿ ಉಲ್ಲಂಘಿಸಿದ ಇತಿಹಾದ್ ಏರ್‌ಲೈನ್ಸ್‌ಗೆ ನೋಟಿಸ್
- ರಷ್ಯಾ, ಅರ್ಜೆಂಟಿನಾ, ಕ್ರೊವೇಷಿಯಾ, ನೇಪಾಳದಲ್ಲಿ ಮೊದಲ ಬಾರಿಗೆ ಓಮೈಕ್ರಾನ್ ಪ್ರಕರಣ ಪತ್ತೆ

ಡೆಲ್ಟಾ ತಳಿಯಂತೆ ಪ್ರಸರಣ ಕಂಡುಬಂದಲ್ಲಿ, ರಾತ್ರಿ ಕರ್ಫ್ಯೂ, ಜನಸಂದಣಿ ನಿರ್ಬಂಧದಂತಹ ಸೌಮ್ಯ ರೀತಿಯ ಲಾಕ್‌ಡೌನ್‌ನಿಂದ ಅದನ್ನು ನಿಯಂತ್ರಿಸಬಹುದು
ಮಣೀಂದ್ರ ಅಗರ್‌ವಾಲ್
ಐಐಟಿ ವಿಜ್ಞಾನಿ

ಹತ್ಯಾಕಾಂಡಕ್ಕೆ ಕೇಂದ್ರದ ವಿಷಾದ

ಒಂದನೇ ಪುಟದಿಂದ...

ಗಣಿ ಕಾರ್ಮಿಕರು ಇದ್ದ ವಾಹನವನ್ನು ನಿಲ್ಲಿಸುವಂತೆ ಸೈನಿಕರು ಸೂಚಿಸಿದ್ದರು. ವಾಹನವನ್ನು ನಿಲ್ಲಿಸುವ ಬದಲಿಗೆ ವೇಗವಾಗಿ ಕೊಂಡೊಯ್ಯಲಾಯಿತು. ವಾಹನದಲ್ಲಿ ಇದ್ದವರು ಬಂಡುಕೋರರು ಎಂಬ ಅನುಮಾನಕ್ಕೆ ಇದು ಕಾರಣವಾಯಿತು. ಹಾಗಾಗಿ ಸೈನಿಕರು ಗುಂಡು ಹಾರಿಸಿದರು ಎಂದು ಶಾ ಹೇಳಿದರು.

ಹೀಗೆ ಗುಂಡು ಹಾರಿಸಿದಾಗ, ವಾಹನದಲ್ಲಿ ಇದ್ದ ಆರು ಮಂದಿ ಮೃತಪಟ್ಟರು. ಸ್ವರಕ್ಷಣೆಗಾಗಿ ಮತ್ತು ಜನರ ಗುಂಪು ಚದುರಿಸಲು ಸೈನಿಕರು ಗುಂಡು ಹಾರಿಸಿದ್ದರಿಂದ ಮತ್ತೆ ಏಳು ಮಂದಿ ಮೃತಪಟ್ಟರು ಎಂದು ಘಟನೆಯ ವಿವರವನ್ನು ಶಾ ಅವರು ಸದನಕ್ಕೆ ನೀಡಿದರು.

ವಿರೋಧ ಪಕ್ಷಗಳ ಸದಸ್ಯರು ಶಾ ಅವರ ಹೇಳಿಕೆಯಿಂದ ಸಂತೃಪ್ತರಾಗಲಿಲ್ಲ. ಕಾಂಗ್ರೆಸ್, ಡಿಎಂಕೆ, ಎಸ್‌ಪಿ, ಬಿಎಸ್‌ಪಿ ಮತ್ತು ಎನ್‌ಸಿಪಿ ಸದಸ್ಯರು ಸಭಾತ್ಯಾಗ ನಡೆಸಿದರು. ಮೃತರ ಕುಟುಂಬಗಳಿಗೆ ಪರಿಹಾರ ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮದ ಬಗ್ಗೆ ಶಾ ಹೇಳಿಕೆಯಲ್ಲಿ ಉಲ್ಲೇಖವೇ ಇರಲಿಲ್ಲ ಎಂದು ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪೊಲೀಸ್ ಹಾಕಿ: ದೆಹಲಿ, ಜಲಂಧರ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಐಎಸ್‌ಎಫ್ ದೆಹಲಿ ಮತ್ತು ಐಟಿಬಿಪಿ ಜಲಂಧರ್ ತಂಡಗಳು ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಜಯದ ಓಟ ಮುಂದುವರಿಸಿದವು.

ಫೀಲ್ಡ್‌ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಮಣಿಪುರ ಪೊಲೀಸ್ ಮತ್ತು ಜಾರ್ಖಂಡ್ ಪೊಲೀಸ್ ತಂಡಗಳೂ ಗೆಲುವು ದಾಖಲಿಸಿದವು. ಮಹಿಳಾ ವಿಭಾಗದ ‘ಬಿ’ ಗುಂಪಿನ ಪಂದ್ಯದಲ್ಲಿ ‘ಸಶಸ್ತ್ರ ಸೀಮಾ ಬಲ್’ ತಂಡವು 11–0ರಿಂದ ಮಹಾರಾಷ್ಟ್ರ ಪೊಲೀಸ್ ತಂಡದ ಸವಾಲು ಮೀರಿತು.

ಪುರುಷರ ವಿಭಾಗದ ‘ಜಿ’ ಗುಂಪಿನ ಪಂದ್ಯದಲ್ಲಿ ಸಿಐಎಸ್‌ಎಫ್ ದೆಹಲಿ 8–3ರಿಂದ ಜಮ್ಮು ಮತ್ತು ಕಾಶ್ಮೀರ ತಂಡವನ್ನು ಪರಾಭವಗೊಳಿಸಿತು. ಇದರೊಂದಿಗೆ ಕ್ವಾರ್ಟರ್‌ಫೈನಲ್ ಪ್ರವೇಶದ ಆಸೆಯನ್ನು ಜೀವಂತವಾಗಿರಿಸಿಕೊಂಡಿತು. ವಿಜೇತ ತಂಡದ ನೀರಜ್ ಯಾದವ್ (23 ಮತ್ತು 33ನೇ ನಿಮಿಷ), ಅಭಾಶ್ ಶರ್ಮಾ (28 ಮತ್ತು 40ನೇ ನಿ.) ತಲಾ ಎರಡು ಗೋಲು ಹೊಡೆದರೆ, ಅಂಜೆಲ್ ಮಿಂಜ್ (16ನೇ ನಿ.) ನಾಯಕ ಹರ್‌ಪ್ರೀತ್ ಸಿಂಗ್ (17ನೇ ನಿ.), ಅದ್ನಾನ್ ವಾಸೀಂ (41ನೇ ನಿಮಿಷ) ಹಾಗೂ ಅಶೋಕ ಕುಮಾರ್ ಸೋನಿ (47ನೇ ನಿ.) ಮಿಂಚಿದರು.

ಜಮ್ಮು ಮತ್ತು ಕಾಶ್ಮೀರದ ಜಸ್‌ಪ್ರೀತ್ ಸಿಂಗ್ (45 ಮತ್ತು 56ನೇ ನಿ.) ಮತ್ತು ಕರಣ್‌ಜೀತ್ ಸಿಂಗ್ (53ನೇ ನಿ.) ಕಾಲ್ಚಳಕ ತೋರಿದರು.

‘ಎಚ್’ ಗುಂಪಿನಲ್ಲಿ ಐಟಿಬಿಪಿ ಜಲಂಧರ್ 12–0ರಿಂದ ಕೇರಳ ಪೊಲೀಸ್ ಎದುರು, ಮಣಿಪುರ ಪೊಲೀಸ್ 3–2ರಿಂದ ಮಹಾರಾಷ್ಟ್ರ ಪೊಲೀಸ್ ವಿರುದ್ಧ, ಜಾರ್ಖಂಡ್ ಪೊಲೀಸ್ 2–0ಯಿಂದ ಛತ್ತೀಸಗಡ ಪೊಲೀಸ್ ಮೇಲೆ ಜಯ ಸಾಧಿಸಿದವು.

‘ಡಿ‘ ಗುಂಪಿನ ಎರಡನೇ ಪಂದ್ಯದಲ್ಲಿ ಕರ್ನಾಟಕ ತಂಡವು ಉತ್ತರಪ್ರದೇಶ ತಂಡವನ್ನು ಎದುರಿಸಲಿದೆ.

ಸೌದಿ ಗ್ರ್ಯಾನ್‌ಪ್ರಿ: ಹ್ಯಾಮಿಲ್ಟನ್‌ಗೆ ಪ್ರಶಸ್ತಿ

ಜೆದ್ದಾ, ಸೌದಿ ಅರೇಬಿಯಾ (ಎಎಫ್‌ಪಿ): ಬ್ರಿಟನ್‌ನ ಲೂಯಿಸ್ ಹ್ಯಾಮಿಲ್ಟನ್ ಅವರು ಸೌದಿ ಅರೇಬಿಯಾ ಫಾರ್ಮುಲಾ ಒನ್ ಗ್ರ್ಯಾನ್‌ಪ್ರಿಯಲ್ಲಿ ಭಾನುವಾರ ಪ್ರಶಸ್ತಿ ಜಯಿಸಿದರು. ಇದರೊಂದಿಗೆ ಎಂಟನೇ ಬಾರಿ ವಿಶ್ವ ಚಾಂಪಿಯನ್‌ಷಿಪ್ ಜಯದ ಆಸೆಗೆ ಜೀವಂತವಾಗಿರಿಸಿದರು.

ಮರ್ಸಿಡಿಸ್ ತಂಡದ ಹ್ಯಾಮಿಲ್ಟನ್ 1 ತಾಸು 6.15 ನಿಮಿಷಗಳಲ್ಲಿ ನಿಗದಿತ ಗುರಿ ತಲುಪಿದರು. ಹ್ಯಾಮಿಲ್ಟನ್ ಅವರಿಗಿಂತ 21 ಸೆಕೆಂಡುಗಳಷ್ಟು ಹೆಚ್ಚು ಸಮಯ ತೆಗೆದುಕೊಂಡ ಮ್ಯಾಕ್ಸ್ ವರ್ಸ್ಟ್ಯಾಪನ್ (ರೆಡ್‌ಬುಲ್ ತಂಡ) ಎರಡನೇ ಸ್ಥಾನ ಗಳಿಸಿದರೆ, 27 ಸೆಕೆಂಡುಗಳಿಗಿಂತ ಅಧಿಕ ಸಮಯ ತೆಗೆದುಕೊಂಡ ಮರ್ಸಿಡಿಸ್ ತಂಡದ ವಾಲ್ಟೆರಿ ಬೊಟ್ಟಾಸ್ ಮೂರನೇ ಸ್ಥಾನ ಗಳಿಸಿದರು.

ಪ್ರಶಸ್ತಿಯೊಂದಿಗೆ ಹ್ಯಾಮಿಲ್ಟನ್– ಎಎಫ್‌ಪಿ

ಟೆಸ್ಟ್: ಮಳೆಗೆ ಕೊಚ್ಚಿಹೋದ 3ನೇ ದಿನದಾಟ

ಢಾಕಾ (ಎಪಿ): ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳ ನಡುವಣ ಎರಡನೇ ಟೆಸ್ಟ್‌ನ ಮೂರನೇ ದಿನದಾಟವು ಭಾರಿ ಮಳೆಯಿಂದಾಗಿ ನಡೆಯಲಿಲ್ಲ. ಸೋಮವಾರ ಒಂದೂ ಎಸೆತವನ್ನು ಹಾಕಲು ಸಾಧ್ಯವಾಗಲಿಲ್ಲ.

ಜವಾದ್ ಚಂಡಮಾರುತದಿಂದ ಉಂಟಾದ ಮಳೆಯು ಅಂತ್ಯಗೊಳ್ಳುವ ಯಾವುದೇ ಲಕ್ಷಣಗಳಿಲ್ಲದ ಕಾರಣ ನಿಗದಿತ ಭೋಜನ ವಿರಾಮದ ನಂತರ ಸುಮಾರು 90 ನಿಮಿಷಗಳ ನಂತರ ದಿನದಾಟ ಕೊನೆಗೊಳಿಸಲು ನಿರ್ಧರಿಸಲಾಯಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಆರಿಸಿಕೊಂಡಿರುವ ಪಾಕಿಸ್ತಾನ 63.2 ಓವರ್‌ಗಳಲ್ಲಿ ಎರಡು ವಿಕೆಟ್‌ಗಳಿಗೆ 188 ರನ್ ಗಳಿಸಿದೆ.

ಮಂಗಳೂರಿನಲ್ಲೂ 9 ವಿದ್ಯಾರ್ಥಿಗಳಿಗೆ ಕೋವಿಡ್

ನವೋದಯ ವಿದ್ಯಾಲಯ ಸೋಂಕಿತರ ಸಂಖ್ಯೆ 103ಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಸೀಗೊಡಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ 103ಕ್ಕೆ ಏರಿದೆ. ಇದರ ಜತೆಯಲ್ಲೇ ಮಂಗಳೂರಿನ ಡಾ. ಎಂ.ವಿ. ಶೆಟ್ಟಿ ಅರೆವೈದ್ಯಕೀಯ ಕಾಲೇಜಿನಲ್ಲೂ 9 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ.

ಜವಾಹರ್ ನವೋದಯ ವಿದ್ಯಾಲಯದಲ್ಲಿ ಸೋಮವಾರ ಇನ್ನೂ 34 ಮಂದಿಗೆ ಕೋವಿಡ್ ದೃಢಪಟ್ಟಿದೆ. 448 ಮಂದಿಯ ಮಾದರಿ ಪರೀಕ್ಷೆ ನಡೆದಿತ್ತು. ಈವರೆಗೆ 92 ವಿದ್ಯಾರ್ಥಿಗಳು, 9 ಶಿಕ್ಷಕರು ಹಾಗೂ ಇಬ್ಬರು ಪೋಷಕರು ಸೇರಿ 103 ಮಂದಿಗೆ ಸೋಂಕು ದೃಢಪಟ್ಟಿದೆ.

‘ಎಲ್ಲ 103 ಮಂದಿ ಮಾದರಿಯನ್ನು ‘ಜಿನೋಮ್ ಸಿಕ್ವೆನ್ಸ್’ ಪರೀಕ್ಷೆಗೆ ಬೆಂಗಳೂರಿಗೆ ಕಳುಹಿಸಿದ್ದು, ವರದಿ ನಿರೀಕ್ಷಿಸಲಾಗಿದೆ’ ಎಂದು ಚಿಕ್ಕಮಗಳೂರು ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ತಿಳಿಸಿದರು.

‘ಸಿಬ್ಬಂದಿಗೆ ವಸತಿ ಗೃಹದಲ್ಲಿ, ವಿದ್ಯಾರ್ಥಿಗಳಿಗೆ ವಿದ್ಯಾಲಯದ ವಿವಿಧ ಬ್ಲಾಕ್‌ಗಳಲ್ಲಿ ಪ್ರತ್ಯೇಕ ವಾಸದ ವ್ಯವಸ್ಥೆ ಮಾಡಲಾಗಿದೆ. ಸೋಂಕು ದೃಢಪಟ್ಟಿರುವ ಯಾರಿಗೂ ರೋಗಲಕ್ಷಣಗಳಿರಲಿಲ್ಲ‘ ಎಂದು ಮಾಹಿತಿ ನೀಡಿದರು.

ಮಂಗಳೂರಿನ ಎಂ.ವಿ. ಶೆಟ್ಟಿ ಅರೆವೈದ್ಯಕೀಯ ಕಾಲೇಜಿನಲ್ಲಿ 173 ಮಂದಿಯ ಗಂಟಲುದ್ರವ ಪರೀಕ್ಷೆ ಮಾಡಿದ್ದು, ಅವರಲ್ಲಿ ಭಾನುವಾರ 7 ಮಂದಿಗೆ ಹಾಗೂ ಸೋಮವಾರ ಇಬ್ಬರಿಗೆ ಕೋವಿಡ್ ದೃಢಪಟ್ಟಿದೆ.

‘ಬಾಲಕರು ಮತ್ತು ಬಾಲಕಿಯರ ಹಾಸ್ಟೆಲ್ ಅನ್ನು ಕಂಟೈನ್‌ಮೆಂಟ್ ಪ್ರದೇಶ ಎಂದು ಘೋಷಿಸಲಾಗಿದೆ. ಮಾದರಿಗಳನ್ನು ಜಿನೋಮ್ ಸಿಕ್ವೆನ್ಸ್ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದು ಡಾ.ರಾಜೇಂದ್ರ ಕೆ.ವಿ. ತಿಳಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,98,400 ▲	ಒಟ್ಟು ಸೋಂಕಿತರು (29,97,643 ನಿನ್ನೆಯ ವಿವರ)
7,067 ▲	ಸಕ್ರಿಯ ಪ್ರಕರಣಗಳು
29,53,067 ▲	ಗುಣಮುಖರಾದವರು
38,237 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	301	▼
ಗುಣಮುಖ	359	▲
ಸಾವು	7	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಜಂತರ್ ಮಂತರ್‌ನಲ್ಲಿ ಮುಫ್ತಿ ಧರಣಿ

ನವದೆಹಲಿ: ಕೇಂದ್ರಾಡಳಿತ ಪ್ರದೇಶದ ಜನರ ಮೇಲಿನ ದಬ್ಬಾಳಿಕೆಯನ್ನು ಖಂಡಿಸಿ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಅವರು ದೆಹಲಿಯ ಜಂತರ್ ಮಂತರ್‌ನಲ್ಲಿ ಸೋಮವಾರ ಧರಣಿ ನಡೆಸಿದ್ದು, ಅಮಾಯಕರ ಹತ್ಯೆಯನ್ನು ತಕ್ಷಣವೇ ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

'ಕಾಶ್ಮೀರ ನೋವಿನಲ್ಲಿದೆ' ಎಂಬ ಭಿತ್ತಿಪತ್ರದೊಂದಿಗೆ ಪಕ್ಷದ ಬೆಂಬಲಿಗರ ಜತೆ ಅವರು ಪ್ರತಿಭಟನೆ ನಡೆಸಿದರು.

ಕಾಶ್ಮೀರದಲ್ಲಿ ಪ್ರತಿಭಟನೆಯನ್ನು ನಡೆಸಲು ಎಂದಿಗೂ ಅನುಮತಿ ಸಿಗದ ಕಾರಣ ರಾಷ್ಟ್ರ ರಾಜಧಾನಿಯಲ್ಲಿ ಧರಣಿ ನಡೆಸಲು ನಿರ್ಧರಿಸಿದ್ದಾಗಿ ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ (ಪಿಡಿಪಿ) ಅಧ್ಯಕ್ಷೆ ಮೆಹಬೂಬಾ ಮುಫ್ತಿ ತಿಳಿಸಿದ್ದಾರೆ.

ಪ್ರತಿ ಬಾರಿಯೂ ಕಾಶ್ಮೀರದಲ್ಲಿ ಧರಣಿ ಯೋಜಿಸಿದಾಗ ಪೊಲೀಸರು ಗೃಹ ಬಂಧನದಲ್ಲಿರಿಸುತ್ತಿದ್ದರು ಎಂದು ಆರೋಪಿಸಿದ್ದಾರೆ.

'ಕಾಶ್ಮೀರವು ಕಾರಾಗೃಹವಾಗಿ ಮಾರ್ಪಾಟ್ಟಿದ್ದು, ಜನರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದನ್ನು ನಿರಾಕರಿಸಲಾಗಿದೆ. 2019ರಿಂದ ಎಲ್ಲವನ್ನು ದಮನ ಮಾಡಲಾಗಿದೆ. ಕೆಲವು ಪ್ರಾಯೋಜಿತ ಮಾಧ್ಯಮಗಳ ಬೆಂಬಲದೊಂದಿಗೆ ಸರ್ಕಾರವು ಕಣಿವೆ ರಾಜ್ಯದಲ್ಲಿ ಎಲ್ಲವೂ ಸರಿಯಾಗಿದೆ ಎಂದು ಚಿತ್ರಿಸುವಲ್ಲಿ ನಿರತವಾಗಿದೆ' ಎಂದು ಹೇಳಿದ್ದಾರೆ.

ಸಿಬಿಎಸ್‌ಇ ಮೌಲ್ಯಮಾಪನ ಯೋಜನೆ: ‘ಸುಪ್ರೀಂ’ ಆದೇಶವೇ ಅಂತಿಮ

ನವದೆಹಲಿ (ಪಿಟಿಐ): ಸಿಬಿಎಸ್‌ಇ 12ನೇ ತರಗತಿಯ ಅಂಕಗಳ ಮೌಲ್ಯಮಾಪನಕ್ಕಾಗಿ ನಿರ್ಧರಿಸುವ ಯೋಜನೆ ವಿಚಾರದಲ್ಲಿ ತಾನು ಈಗಾಗಲೇ ನೀಡಿರುವ ಆದೇಶವೇ ಅಂತಿಮವಾಗಿದ್ದು, ಅದನ್ನು ಮತ್ತೆ ಮರುಪರಿಶೀಲಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

‘ಮೌಲ್ಯಮಾಪನ ನಿರ್ಧರಿಸುವ ಸೂತ್ರಕ್ಕೆ ನಾವು ಈಗಾಗಲೇ ಸ್ಪಷ್ಟ ಸೂಚನೆ ನೀಡಲಾಗಿದೆ. ಅದನ್ನು ಪ್ರಶ್ನಿಸುವಂತಿಲ್ಲ’ ಎಂದು ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ಪೀಠ ಹೇಳಿತು.

ಕಳೆದ ವರ್ಷ ಕೋವಿಡ್ ಕಾರಣ ವಾರ್ಷಿಕ ಪರೀಕ್ಷೆ ನಡೆಸಿರಲಿಲ್ಲ. 10ನೇ ತರಗತಿಯ ಶೇ 30ರಷ್ಟು ಅಂಕ, 11ನೇ ತರಗತಿಯ ಶೇ 30ರಷ್ಟು ಅಂಕ ಹಾಗೂ 12ನೇ ತರಗತಿಯಲ್ಲಿ ಘಟಕ, ಮಧ್ಯಾವಧಿ ಮತ್ತು ಪೂರ್ವಸಿದ್ಧತಾ ಪರೀಕ್ಷೆಗಳ ಶೇ 40ರಷ್ಟು ಅಂಕಗಳನ್ನು ಆಧರಿಸಿ ಫಲಿತಾಂಶ ನಿರ್ಧರಿಸಬಹುದು ಎಂದು ತೀರ್ಪು ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ಸಂಬಂಧ ಸುಪ್ರೀಂ ಕೋರ್ಟ್ ಈ ಸ್ಪಷ್ಟನೆ ನೀಡಿದೆ.

ಶಿಯಾ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ಮತಾಂತರ

ಲಖನೌ: ಶಿಯಾ ಧರ್ಮಗುರುಗಳು ಈಚೆಗೆ ಇಸ್ಲಾಂ ಧರ್ಮದಿಂದ ಬಹಿಷ್ಕಾರ ಹಾಕಿದ್ದ ಉತ್ತರ ಪ್ರದೇಶದ ಶಿಯಾ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ವಾಸೀಂ ರಿಜ್ವಿ ಅವರು ಸೋಮವಾರ ಹಿಂದೂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ.

ಗಾಜಿಯಾಬಾದ್ ಜಿಲ್ಲೆಯ ದಸ್ನಾದ ದೇವಾಲಯವೊಂದರಲ್ಲಿ ರಿಜ್ವಿ ಮತಾಂತರಗೊಂಡಿದ್ದು, ತಮ್ಮ ಹೆಸರನ್ನು ಜಿತೇಂದ್ರ ನಾರಾಯಣ ಸಿಂಗ್ ತ್ಯಾಗಿ ಎಂದು ಬದಲಿಸಿರುವುದಾಗಿ ತಿಳಿಸಿದ್ದಾರೆ.

ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ ಅಭಿಪ್ರಾಯ

‘ಕೆಲವೆಡೆ ಸೋಂಕು ಕಾರಣಕ್ಕೆ ಎಲ್ಲ ಶಾಲೆ ಸ್ಥಗಿತ ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಸತಿ, ನವೋದಯ ಶಾಲೆಯಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡ ಕಾರಣಕ್ಕೆ ಎಲ್ಲ ಶಾಲೆಗಳಿಗೂ ಅನ್ವಯವಾಗುವಂತೆ ರಾಜ್ಯ ಸರ್ಕಾರ ರಜೆ ಘೋಷಿಸಿದರೆ ವಿದ್ಯಾರ್ಥಿಗಳ ಕಲಿಕೆ, ಭವಿಷ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ’ ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸ) ಅಭಿಪ್ರಾಯಪಟ್ಟಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, ‘ಶಾಲೆಗಳಲ್ಲಿ ಕೋವಿಡ್ ಹಬ್ಬುತ್ತಿರುವ ಬಗ್ಗೆ ಕೆಲವು ದಿನಗಳಿಂದ ಚರ್ಚೆಯಾಗುತ್ತಿದ್ದು, ಅನೇಕ ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ. ಅದರ ನೇರ ದುಷ್ಪರಿಣಾಮ ಮಕ್ಕಳ ಕಲಿಕೆಯ ಮೇಲೆ ಆಗುತ್ತಿದೆ’ ಎಂದಿದ್ದಾರೆ.

‘ಕೆಲವು ಶಾಲೆಗಳಲ್ಲಿ ಮಾತ್ರ ಸೋಂಕು ಕಾಣಿಸಿಕೊಂಡಿದೆ. ಅಂಥ ಶಾಲೆಗಳಿಗೆ 8 ರಿಂದ 10 ದಿನ ರಜೆ ಘೋಷಿಸಬೇಕು. ಅಲ್ಲಿನ ಮಕ್ಕಳು ಮತ್ತು ಪೋಷಕರ ಆತಂಕ ನಿವಾರಣೆಯಾದ ನಂತರ ಶಾಲೆಗಳನ್ನು ಮತ್ತೆ ಆರಂಭಿಸಬಹುದು. ಇದೇ ಕಾರಣ ಮುಂದಿಟ್ಟು ಇಡೀ ರಾಜ್ಯದಲ್ಲಿನ ಶಾಲೆಗಳನ್ನು ಮುಚ್ಚಲು ಮುಂದಾಗುವುದು ಸರಿಯಲ್ಲ. ಈಗಾಗಲೇ ಕಲಿಕೆಯಲ್ಲಿ ಪ್ರಗತಿ ತೋರಿಸುತ್ತಿರುವ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡಿದಂತಾಗುತ್ತದೆ. ಆದ್ದರಿಂದ, ಸರ್ಕಾರ, ಶಿಕ್ಷಣ ಇಲಾಖೆ ಈ ಬಗ್ಗೆ ತಜ್ಞರ ಜೊತೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು’ ಎಂದೂ ಸಲಹೆ ನೀಡಿದ್ದಾರೆ.

ಪ್ರತ್ಯೇಕ ಎಸ್‌ಒಪಿ ಅಗತ್ಯ: ‘ಕೋಚಿಂಗ್ ಸೆಂಟರ್, ಟ್ಯುಟೋರಿಯಲ್ಸ್, ಮನೆ ಪಾಠ, ವಸತಿಶಾಲೆಗಳು ಮತ್ತು ಸಾಮಾಜಿಕ ಸ್ಥಳಗಳಾದ ಬಸ್ ನಿಲ್ದಾಣ, ರೆಸ್ಟೋರೆಂಟ್‌ಗಳಂಥ ಸಾಮಾಜಿಕ ಸ್ಥಳಗಳಲ್ಲಿ ಕೊರೊನಾ ಸೋಂಕು ಹರಡದಂತೆ ಪ್ರತ್ಯೇಕ ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು (ಎಸ್‌ಒಪಿ) ಸರ್ಕಾರ ಹೊರಡಿಸಬೇಕು’ ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟಗಳ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದ್ದಾರೆ.

‘ಈ ಬಗ್ಗೆ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆ ನೀಡಿರುವ ಎಸ್‌ಒಪಿ ಪಾಲಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಸಾಕಷ್ಟು ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಆದರೆ, ಶಾಲೆ, ಕಾಲೇಜುಗಳಿಗೆ ಬರುವಾಗ ಮತ್ತು ಮರಳಿ ಮನೆಗೆ ಹೋಗುವಾಗ ಕೋವಿಡ್ ನಿಯಮಗಳನ್ನು ಮಕ್ಕಳು ಪಾಲಿಸುತ್ತಿಲ್ಲ’ ಎಂದೂ ಅವರು ಹೇಳಿದ್ದಾರೆ.


ಸೋಂಕು ಕಾಣಿಸಿಕೊಂಡ ಪ್ರದೇಶಗಳನ್ನು ಮೈಕ್ರೋ ಕಂಟೋನ್ಮೆಂಟ್ ವಲಯ ಮಾಡಬೇಕು. ಇಡೀ ರಾಜ್ಯಕ್ಕೆ ಅನ್ವಯಿಸಿ ಶಾಲೆಗಳಿಗೆ ರಜೆ ನೀಡಿದರೆ ಕಲಿಕೆಗೆ ಸಮಸ್ಯೆ ಆಗಲಿದೆ
ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ರುಪ್ಸ

ಶಾಲೆ- ಕಾಲೇಜು ಹೊರಗಡೆ, ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ನಿಯಮ ಪಾಲನೆ ಆಗದೇ ಇರುವುದರಿಂದ ಪ್ರತ್ಯೇಕ ಎಸ್‌ಒಪಿ ಹೊರಡಿಸಿ, ಸರ್ಕಾರ ಅನುಷ್ಠಾನಗೊಳಿಸಬೇಕು
ಡಿ. ಶಶಿಕುಮಾರ್, ಅಧ್ಯಕ್ಷ, ಕ್ಯಾಮ್ಸ್

ಯುವಕುಮಾರ್

ಮೋಟರ್‌ಸ್ಪೋರ್ಟ್ಸ್: ಹೀರೊ ತಂಡದ ಯುವಕುಮಾರ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೀರೊ ಮೋಟರ್‌ಸ್ಪೋರ್ಟ್ಸ್ ತಂಡವು ರಾಷ್ಟ್ರೀಯ ರ‍್ಯಾಲಿ ಸ್ಪ್ರಿಂಟ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿತು.

ಗೋವಾದಲ್ಲಿ ನಡೆದ ಎರಡು ದಿನಗಳ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿದೆ. ತಂಡದ ಯುವಕುಮಾರ್ ಅವರು ‘ಡಿ’ ಗುಂಪಿನ ಸ್ಟಾಕ್ ಹಾಗೂ ‘ಬಿ’ ಗುಂಪಿನ ಮಾಡಿಫೈಡ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು. ಸತ್ಯರಾಜ್ ಆರ್ಮುಗಂ ಅವರು ಸ್ಟಾಕ್ ವಿಭಾಗದಲ್ಲಿ ರನ್ನರ್‌ಅಪ್ ಮತ್ತು ಮೋಡಿಫೈಡ್‌ನಲ್ಲಿ ನಾಲ್ಕನೇ ಸ್ಥಾನ ಪಡೆದರು.

‘ಬಿ’ ಗುಂಪಿನ ಚಾಂಪಿಯನ್‌ಷಿಪ್ ಟೈನಲ್ಲಿ ಅಂತ್ಯವಾದರೂ ಸರಾಸರಿ ಸಮಯದ ಆಧಾರದಲ್ಲಿ 900 ಮಿಲಿ ಸೆಕೆಂಡುಗಳ ಅಂತರದಿಂದ ವಿಜಯಿಯಾದರು.

ಮುಂಬೈನಲ್ಲಿ ನಡೆದ ಎರಡನೇ ಪಂದ್ಯ ಗೆಲ್ಲುವುದರೊಂದಿಗೆ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿ ಕೈವಶ ಮಾಡಿಕೊಂಡ ಭಾರತ ತಂಡದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ನ್ಯೂಜಿಲೆಂಡ್ ವಿರುದ್ಧದ ಎರಡನೇ ಟೆಸ್ಟ್: ಭಾರತದ ಜಯಂತ್ ಯಾದವ್, ರವಿಚಂದ್ರನ್ ಅಶ್ವಿನ್‌ಗೆ ತಲಾ 4 ವಿಕೆಟ್

ಸ್ಪಿನ್ನರ್‌ಗಳ ಕೈಚಳಕ; ಸರಣಿ ಜಯದ ಪುಳಕ

ಪ್ರಜಾವಾಣಿ ವಾರ್ತೆ

ಮುಂಬೈ: ಸ್ಪಿನ್ನರ್‌ಗಳು ಪಾರಮ್ಯ ಮೆರೆದ ಪಿಚ್‌ನಲ್ಲಿ ವಿಶ್ವ ಚಾಂಪಿಯನ್ ನ್ಯೂಜಿಲೆಂಡ್ ತಂಡದ ಬ್ಯಾಟರ್‌ಗಳನ್ನು ಸುಲಭವಾಗಿ ಕೆಡವಿದ ಭಾರತ ತಂಡ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ಮುಕ್ತಾಯಗೊಂಡ ಟೆಸ್ಟ್ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 372 ರನ್‌ಗಳಿಂದ ಗೆದ್ದ ವಿರಾಟ್ ಕೊಹ್ಲಿ ಬಳಗ ಎರಡು ಪಂದ್ಯಗಳ ಸರಣಿಯನ್ನು 1–0 ಅಂತರದಲ್ಲಿ ತನ್ನದಾಗಿಸಿಕೊಂಡಿತು.

540 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ಮೂರನೇ ದಿನವಾದ ಭಾನುವಾರ ಆಟದ ಮುಕ್ತಾಯಕ್ಕೆ 140 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಸೋಮವಾರ ಭೋಜನ ವಿರಾಮಕ್ಕೂ ಮೊದಲೇ ಉಳಿದ ಐದು ವಿಕೆಟ್‌ಗಳನ್ನು ಭಾರತದ ಬೌಲರ್‌ಗಳು ಉರುಳಿಸಿದರು.

ನ್ಯೂಜಿಲೆಂಡ್‌ಗೆ 167 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಈ ಜಯದೊಂದಿಗೆ ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಭಾರತ ಅಗ್ರ ಸ್ಥಾನಕ್ಕೆ ಜಿಗಿಯಿತು.

ಭಾರತದ ಮೊದಲ ಇನಿಂಗ್ಸ್‌ನಲ್ಲಿ ಎಲ್ಲ 10 ವಿಕೆಟ್‌ಗಳನ್ನು ಗಳಿಸಿದ ನ್ಯೂಜಿಲೆಂಡ್‌ನ ಎಜಾಜ್ ಪಟೇಲ್ ಸೇರಿದಂತೆ ಸ್ಪಿನ್ನರ್‌ಗಳೇ ಮಿಂಚಿದ ಪಂದ್ಯದಲ್ಲಿ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ (8ಕ್ಕೆ4 ಮತ್ತು 34ಕ್ಕೆ4) ಒಟ್ಟು ಎಂಟು ವಿಕೆಟ್ ಉರುಳಿಸಿದರು. ತವರಿನಲ್ಲಿ 300 ವಿಕೆಟ್ ಕಬಳಿಸಿದ ಸಾಧನೆಗೂ ಪಾತ್ರರಾದರು.

ಭಾನುವಾರ ಕೊನೆಯ ಅವಧಿಯಲ್ಲಿ ಮೂರು ವಿಕೆಟ್ ಉರುಳಿಸಿ ಪ್ರವಾಸಿ ತಂಡವನ್ನು ಸಂಕಷ್ಟಕ್ಕೆ ಸಿಲುಕಿಸಿದ್ದ ರವಿಚಂದ್ರನ್ ಅಶ್ವಿನ್ ಐದನೇ ಕ್ರಮಾಂಕದ ಹೆನ್ರಿ ನಿಕೋಲ್ಸ್ ಅವರ ವಿಕೆಟ್ ಗಳಿಸುವ ಮೂಲಕ ಪಂದ್ಯಕ್ಕೆ ತೆರೆ ಎಳೆದರು.ನಾಲ್ಕನೇ ದಿನದ ಏಳನೇ ಓವರ್‌ನಲ್ಲಿ ರಚಿನ್ ರವೀಂದ್ರ ಅವರನ್ನು ಬೌಲ್ಡ್ ಮಾಡುವ ಮೂಲಕ ಜಯಂತ್ ಯಾದವ್ ಸಂಭ್ರಮಿಸಿದರು. ಒಂದೇ ಓವರ್‌ನಲ್ಲಿ ಕೈಲ್ ಜೆಮಿಸನ್ ಮತ್ತು ಟಿಮ್ ಸೌಥಿ ವಿಕೆಟ್ ಉರುಳಿಸಿದರು.49ಕ್ಕೆ4 ವಿಕೆಟ್ ಗಳಿಸಿದ ಅವರು ಜೀವನಶ್ರೇಷ್ಠ ಸಾಧನೆ ಮಾಡಿದರು.

> ವಿಶ್ರಾಂತಿ ನಂತರ ಮರಳಿ ಜಯದೊಂದಿಗೆ ಶುಭಾರಂಭ ಮಾಡಿದ್ದೇನೆ. ಇದರಿಂದ ಖುಷಿಯಾಗಿದೆ. ತಂಡ ಈ ಪಂದ್ಯದಲ್ಲಿ ಅಮೋಘ ಸಾಧನೆ ಮಾಡಿದೆ.
> **ವಿರಾಟ್ ಕೊಹ್ಲಿ** ಭಾರತ ತಂಡದ ನಾಯಕ

> ಮೊದಲ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದೇ ಸೋಲಿಗೆ ಕಾರಣ. ನಮ್ಮ ಬೌಲರ್‌ಗಳು ಉತ್ತಮ ಸಾಧನೆ ಮಾಡಿದ್ದಾರೆ. ಆದರೆ ಅದು ಕೈ ಹಿಡಿಯಲಿಲ್ಲ.
> **ಟಾಮ್ ಲಥಾಮ್** ನ್ಯೂಜಿಲೆಂಡ್‌ನ ಹಂಗಾಮಿ ನಾಯಕ

ಎಜಾಜ್ ಪಟೇಲ್‌ಗೆ ಎಂಸಿಎ ಗೌರವ

ಮುಂಬೈ (ಪಿಟಿಐ): ಟೆಸ್ಟ್ ಪಂದ್ಯವೊಂದರ ಒಂದು ಇನಿಂಗ್ಸ್‌ನ ಎಲ್ಲ 10 ವಿಕೆಟ್ ಉರುಳಿಸಿದ ಮೂರನೇ ಬೌಲರ್ ಎಂಬ ದಾಖಲೆ ಬರೆದ ನ್ಯೂಜಿಲೆಂಡ್‌ನ ಎಜಾಜ್ ಪಟೇಲ್ ಅವರನ್ನು ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಸೋಮವಾರ ಗೌರವಿಸಿತು.

ಮುಂಬೈ ಮೂಲದ ಎಜಾಜ್ ಪಟೇಲ್ ಭಾರತದ ಮೊದಲ ಇನಿಂಗ್ಸ್‌ನ ಎಲ್ಲ ವಿಕೆಟ್‌ಗಳನ್ನು ಗಳಿಸಿದ್ದರು. ಈ ಮೂಲಕ ಇಂಗ್ಲೆಂಡ್‌ನ ಜಿಮ್ ಲೇಕರ್ ಮತ್ತು ಭಾರತದ ಅನಿಲ್ ಕುಂಬ್ಳೆ ಅವರ ಸಾಧನೆಯ ಸಾಲಿಗೆ ಸೇರಿದ್ದರು.

ಎಂಸಿಎ ಅಧ್ಯಕ್ಷ ವಿಜಯ್ ಪಾಟೀಲ್ ಅವರು ಪಂದ್ಯದ ಸ್ಕೋರ್ ಕಾರ್ಡ್ ಮತ್ತು ಸ್ಮರಣಿಕೆ ನೀಡಿ ಎಜಾಜ್ ಅವರನ್ನು ಸನ್ಮಾನಿಸಿದರು. ಎಜಾಜ್ ಅವರು ಚೆಂಡು ಮತ್ತು ಟಿ-ಶರ್ಟ್ ಅನ್ನು ವಸ್ತುಸಂಗ್ರಹಾಲಯಕ್ಕೆ ಕೊಡುಗೆ ನೀಡಿದರು ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ರನ್ ಅಂತರದಲ್ಲಿ ಭಾರತದ ಅತಿದೊಡ್ಡ ಜಯ

ಅಂತರ	ಎದುರಾಳಿ	ಸ್ಥಳ	ವರ್ಷ
372	ನ್ಯೂಜಿಲೆಂಡ್	ಮುಂಬೈ	2021
337	ದಕ್ಷಿಣ ಆಫ್ರಿಕಾ	ದೆಹಲಿ	2015
321	ನ್ಯೂಜಿಲೆಂಡ್	ಇಂದೋರ್	2016
320	ಆಸ್ಟ್ರೇಲಿಯಾ	ಮೊಹಾಲಿ	2008
318	ವೆಸ್ಟ್ ಇಂಡೀಸ್	ನಾರ್ತ್ ಸೌಂಡ್	2019

ಇನಿಂಗ್ಸ್ ಅಂತರದಲ್ಲಿ ಭಾರತದ ದೊಡ್ಡ ಜಯ

ಇನಿಂಗ್ಸ್,272	ವೆಸ್ಟ್ ಇಂಡೀಸ್	ರಾಜ್‌ಕೋಟ್	2018
ಇನಿಂಗ್ಸ್,262	ಅಫ್ಗಾನಿಸ್ತಾನ	ಬೆಂಗಳೂರು	2018
ಇನಿಂಗ್ಸ್,239	ಬಾಂಗ್ಲಾದೇಶ	ಢಾಕಾ	2007
ಇನಿಂಗ್ಸ್,239	ಶ್ರೀಲಂಕಾ	ನಾಗ್ಪುರ	2017
ಇನಿಂಗ್ಸ್,219	ಆಸ್ಟ್ರೇಲಿಯಾ	ಕೋಲ್ಕತ್ತ	1998

ಟೆಸ್ಟ್ ರ‍್ಯಾಂಕಿಂಗ್: ಅಗ್ರ 5 ಸ್ಥಾನ

ರ‍್ಯಾಂಕ್	ತಂಡ	ರೇಟಿಂಗ್
1	ಭಾರತ	124
2	ನ್ಯೂಜಿಲೆಂಡ್	121
3	ಆಸ್ಟ್ರೇಲಿಯಾ	108
4	ಇಂಗ್ಲೆಂಡ್	107
5	ಪಾಕಿಸ್ತಾನ	92

ರಚಿನ್ ರವೀಂದ್ರ ಅವರ ವಿಕೆಟ್‌ಗಾಗಿ ಮನವಿ ಸಲ್ಲಿಸಿದ ಜಯಂತ್ ಯಾದವ್ –ಪಿಟಿಐ ಚಿತ್ರ

ಭಾರತದ ಅಕ್ಷರ್, ನ್ಯೂಜಿಲೆಂಡ್‌ನ ಪಟೇಲ್...

ರವಿಚಂದ್ರನ್ ಅಶ್ವಿನ್ ಟ್ವೀಟ್ ಮಾಡಿರುವ ಚಿತ್ರ

ಬೆಂಗಳೂರು: ಅಕ್ಷರ್ ಪಟೇಲ್ ಮತ್ತು ಎಜಾಜ್ ಪಟೇಲ್, ರಚಿನ್ ರವೀಂದ್ರ ಮತ್ತು ರವೀಂದ್ರ ಜಡೇಜ ಅವರು ವಾಂಖೆಡೆ ಕ್ರೀಡಾಂಗಣದಲ್ಲಿ ಬೆನ್ನು ತೋರಿಸಿ ನಿಂತಿರುವ ಚಿತ್ರವೊಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಟ್ವಿಟರ್ ಖಾತೆಯಲ್ಲಿ ಸೋಮವಾರ ಗಮನ ಸೆಳೆಯಿತು.

ಭಾರತದ ರವಿಚಂದ್ರನ್ ಅಶ್ವಿನ್ ಅವರು ಸರಣಿಗೆ ಸಂಬಂಧಿಸಿದ ವಿವಿಧ ಚಿತ್ರಗಳನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಹಾಕಿದ್ದಾರೆ. ಅದರಲ್ಲಿ ಒಂದು, ಅಕ್ಷರ್–ಎಜಾಜ್; ರವೀಂದ್ರ–ಜಡೇಜ ಅವರ ಟಿ-ಶರ್ಟ್‌ನಲ್ಲಿ ಹೆಸರು ಕಾಣಿಸುವಂಥ ಚಿತ್ರ. ಭಾರತ ಮತ್ತು ನ್ಯೂಜಿಲೆಂಡ್‌ನ ನಾಲ್ವರು ಸೇರಿದಾಗಿ ಭಾರತದ ಇಬ್ಬರ ಹೆಸರು ಸೃಷ್ಟಿಯಾಗುವ ಈ ಚಿತ್ರವನ್ನು ಐಸಿಸಿ ತನ್ನ ಖಾತೆಯಲ್ಲಿ ಪ್ರಕಟಿಸಿದೆ. ಅಶ್ವಿನ್ ಅವರಿಗೆ ಚಿತ್ರದ 'ಕ್ರೆಡಿಟ್' ಕೊಟ್ಟಿದೆ.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 325 (109.5 ಓವರ್‌ಗಳಲ್ಲಿ)
ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 62 (28.1 ಓವರ್)
ಭಾರತ ಎರಡನೇ ಇನಿಂಗ್ಸ್ 7ಕ್ಕೆ 276 ಡಿಕ್ಲೇರ್ಡ್ (70 ಓವರ್)
(ನ್ಯೂಜಿಲೆಂಡ್ ಎರಡನೇ ಇನಿಂಗ್ಸ್ 169 (56.3 ಓವರ್)
(ಭಾನುವಾರ 45 ಓವರ್‌ಗಳಲ್ಲಿ 5ಕ್ಕೆ 140)
ನಿಕೋಲ್ಸ್ ಸ್ಟಂಪ್ಡ್ ಸಹಾ ಬಿ ಅಶ್ವಿನ್ 44 (111ಎ, 4X8), ರವೀಂದ್ರ ಸಿ ಪೂಜಾರ ಬಿ ಜಯಂತ್ 18 (50ಎ, 4X4), ಜೆಮಿಸನ್ ಎಲ್‌ಬಿಡಬ್ಲ್ಯು ಬಿ ಜಯಂತ್ 0 (4 ಎ), ಸೌಥಿ ಬಿ ಜಯಂತ್ 0 (2 ಎ), ಸೋಮರ್‌ವಿಲ್ ಸಿ ಅಗರವಾಲ್ ಬಿ ಜಯಂತ್ 1 (7 ಎ), ಎಜಾಜ್ ಔಟಾಗದೆ 0 (5 ಎ). **ಇತರೆ** (ಬೈ 9, ಲೆಗ್‌ಬೈ 1, ನೋಬಾಲ್ 2) 12
ವಿಕೆಟ್ ಪತನ: 6-162 (ರಚಿನ್ ರವೀಂದ್ರ, 51.5), 7-165 (ಕೈಲ್ ಜೆಮಿಸನ್, 53.2), 8-165 (ಟಿಮ್ ಸೌಥಿ, 53.4), 9-167 (ವಿಲಿಯಂ ಸೋಮರ್‌ವಿಲ್, 55.1), 10-167 (ಹೆನ್ರಿ ನಿಕೋಲ್ಸ್, 56.3)
ಬೌಲಿಂಗ್: ಮೊಹಮ್ಮದ್ ಸಿರಾಜ್ 5–2–13–0, ರವಿಚಂದ್ರನ್ ಅಶ್ವಿನ್ 22.3–9–34–4, ಅಕ್ಷರ್ ಪಟೇಲ್ 10–2–42–1, ಜಯಂತ್ ಯಾದವ್ 14–4–49–4, ಉಮೇಶ್ ಯಾದವ್ 5–1–19–0

ಫಲಿತಾಂಶ: ಭಾರತಕ್ಕೆ 372 ರನ್‌ಗಳ ಜಯ; ಸರಣಿ 1-0ಯಲ್ಲಿ ಕೈವಶ
ಪಂದ್ಯಶ್ರೇಷ್ಠ: ಮಯಂಕ್ ಅಗರವಾಲ್; **ಸರಣಿಶ್ರೇಷ್ಠ ಆಟಗಾರ:** ಆರ್. ಅಶ್ವಿನ್

ರಹಾನೆಗೆ ವಿರಾಟ್ ಬೆಂಬಲ

ಮುಂಬೈ (ಎಎಫ್‌ಪಿ): ಮಧ್ಯಮ ಕ್ರಮಾಂಕದ ಬ್ಯಾಟರ್ ಅಜಿಂಕ್ಯ ರಹಾನೆ ಅವರ ಬ್ಯಾಟಿಂಗ್ ವೈಫಲ್ಯದ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗಲೇ ಅವರನ್ನು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಸಮರ್ಥಿಸಿಕೊಂಡಿದ್ದಾರೆ.

ನ್ಯೂಜಿಲೆಂಡ್ ಎದುರಿನ ಮೊದಲ ಪಂದ್ಯ ಡ್ರಾ ಆಗಿತ್ತು. ಆ ಪಂದ್ಯದಲ್ಲಿ ಭಾರತ ತಂಡವನ್ನು ಅಜಿಂಕ್ಯ ರಹಾನೆ ಮುನ್ನಡೆಸಿದ್ದರು. ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 35 ಮತ್ತು ಎರಡನೇ ಇನಿಂಗ್ಸ್‌ನಲ್ಲಿ ನಾಲ್ಕು ರನ್ ಮಾತ್ರ ಗಳಿಸಲು ಅವರಿಗೆ ಸಾಧ್ಯವಾಗಿತ್ತು. ಹಿಂದಿನ 12 ಪಂದ್ಯಗಳಲ್ಲಿ ಅವರ ಒಟ್ಟಾರೆ ಸರಾಸರಿ 20ಕ್ಕೂ ಕಡಿಮೆ. 32 ವರ್ಷದ ಅಜಿಂಕ್ಯ ಅವರನ್ನು ಮುಂಬೈ ಟೆಸ್ಟ್‌ಗೆ ಆಯ್ಕೆ ಮಾಡಿರಲಿಲ್ಲ. 'ಹಿಂದಿನ ಪಂದ್ಯಗಳಲ್ಲಿ ಉತ್ತಮ ಸಾಮರ್ಥ್ಯ ತೋರಿದವರು ಸ್ವಲ್ಪ ಹಿನ್ನಡೆ ಅನುಭವಿಸಿದಾಗ ಎಲ್ಲರೂ ನೈತಿಕ ಬೆಂಬಲ ನೀಡಬೇಕು. ನಿಮಗೆ ಈಗ ಏನಾಗಿದೆ ಎನ್ನಬಾರದು' ಎಂದು ಕೊಹ್ಲಿ ಹೇಳಿದರು.

ಶೂಟಿಂಗ್: ರಾಹಿ ಸರ್ನೋಬತ್‌ಗೆ ಚಿನ್ನ

ನವದೆಹಲಿ (ಪಿಟಿಐ): ರಾಹಿ ಸರ್ನೋಬತ್ ಅವರು ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಚಾಂಪಿಯನ್‌ಷಿಪ್‌ನ 25 ಮೀಟರ್ಸ್ ಪಿಸ್ತೂಲ್ ಫೈನಲ್‌ನಲ್ಲಿ ಮಹಾರಾಷ್ಟ್ರದ ರಾಹಿ 37 ಸ್ಕೋರ್ ದಾಖಲಿಸಿದರು. ದೆಹಲಿಯ ನಮ್ಯಾ ಕಪೂರ್ (31) ಬೆಳ್ಳಿ ಮತ್ತು ಹರಿಯಾಣದ ಮನು ಭಾಕರ್ (27) ಕಂಚು ಜಯಿಸಿದರು.

ಮೂರು ಮಾದರಿಯಲ್ಲಿ ಕೊಹ್ಲಿ '50'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಸೋಮವಾರ ಅಪರೂಪದ ದಾಖಲೆ ಬರೆದರು. ಕ್ರಿಕೆಟ್‌ನ ಮೂರೂ ಮಾದರಿಯಲ್ಲಿ 50 ಅಂತರರಾಷ್ಟ್ರೀಯ ಪಂದ್ಯಗಳನ್ನು ಗೆದ್ದ ವಿಶ್ವದ ಮೊದಲ ಆಟಗಾರ ಎಂಬ ಖ್ಯಾತಿ ಅವರದಾಯಿತು.

ಮುಂಬೈ ಟೆಸ್ಟ್‌ನಲ್ಲಿ ತಂಡ ಜಯ ಗಳಿಸಿದ ನಂತರ ಕೊಹ್ಲಿ ಅವರನ್ನು ಅಭಿನಂದಿಸಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಟ್ವೀಟ್ ಮಾಡಿದೆ.

ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಟೆಸ್ಟ್	
ಪಂದ್ಯ	97
ಜಯ	50
ಡ್ರಾ	19
ಏಕದಿನ	
ಪಂದ್ಯ	254
ಜಯ	153
ಟ್ವೆಂಟಿ 20	
ಪಂದ್ಯ	95
ಜಯ	59

(ಮಾಹಿತಿ: ಕ್ರಿಕ್‌ಇನ್ಫೋ)

ದಕ್ಷಿಣ ಆಫ್ರಿಕಾಗೆ ಸರೆಲ್ ಆಸರೆ

ಬ್ಲೂಮ್‌ಫೌಂಟೇನ್ (ಎಎಫ್‌ಪಿ): ಆರಂಭದಲ್ಲೇ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ದಕ್ಷಿಣ ಆಫ್ರಿಕಾ 'ಎ' ತಂಡಕ್ಕೆ ಆರಂಭಿಕ ಬ್ಯಾಟರ್ ಸರೆಲ್ ಎರ್ವಿ (75; 180 ಎಸೆತ, 8 ಬೌಂಡರಿ) ಮತ್ತು ನಾಲ್ಕನೇ ಕ್ರಮಾಂಕದ ಟೋನಿ ಜಾರ್ಜಿ (58; 104ಎ, 8 ಬೌಂ) ಆಸರೆಯಾದರು.

ಸೋಮವಾರ ಆರಂಭಗೊಂಡ ಭಾರತ 'ಎ' ಎದುರಿನ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 'ಎ' ತಂಡ 89 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 249 ರನ್ ಗಳಿಸಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ 'ಎ' ತಂಡಕ್ಕೆ ನವದೀಪ್ ಸೈನಿ ಆರಂಭದಲ್ಲೇ ಆಘಾತ ನೀಡಿದರು. ತಂಡದ ಮೊತ್ತ 11 ರನ್ ಆಗಿದ್ದಾಗ ನಾಯಕ ಪೀಟರ್ ಮಲಾನ್ ಶೂನ್ಯಕ್ಕೆ ಔಟಾದರು. ಜುಬೇರ್ ಹಂಝ ಕೂಡ ಬೇಗನೇ ಮರಳಿದರು.ಈ ಸಂದರ್ಭದಲ್ಲಿ ಜೊತೆಗೂಡಿದ ಎರ್ವಿ ಮತ್ತು ಟೋನಿ 111 ರನ್‌ಗಳ ಜೊತೆಯಾಟವಾಡಿದರು. ನಂತರ ಖಯಾ ಜೊಂಡೊ (56; 98 ಎ, 8 ಬೌಂ, 1 ಸಿಕ್ಸರ್) ತಂಡದ ರಕ್ಷಣೆಗೆ ನಿಂತರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ 'ಎ', ಮೊದಲ ಇನಿಂಗ್ಸ್: 89 ಓವರ್‌ಗಳಲ್ಲಿ 7ಕ್ಕೆ 249 (ಸರೆಲ್ ಎರ್ವಿ 75, ಜುಬೇರ್ ಹಂಝ 16, ಟೋನಿ ಜಾರ್ಜಿ 58, ಖಯಾ ಜೊಂಡೊ 56, ಶಿನೆತೆಂಬ ಕ್ವೆಸಿಲೆ 22; ದೀಪಕ್ ಚಾಹರ್ 35ಕ್ಕೆ1, ನವದೀಪ್ ಸೈನಿ 42ಕ್ಕೆ3, ಸೌರಭ್ ಕುಮಾರ್ 52ಕ್ಕೆ2).

ಐಎಸ್‌ಎಲ್: ಎಟಿಕೆಗೆ ಆಘಾತ ನೀಡಿದ ಜೆಎಫ್‌ಸಿ

ಬ್ಯಾಂಬೊಲಿಮ್: ಮೊದಲಾರ್ಧ ಮತ್ತು ದ್ವಿತೀಯಾರ್ಧದಲ್ಲಿ ತಲಾ ಒಂದೊಂದು ಗೋಲು ಗಳಿಸಿದ ಜೆಮ್ಶೆಡ್‌ಪುರ ಎಫ್‌ಸಿ ತಂಡ ಬಲಿಷ್ಠ ಎಟಿಕೆಎಂಬಿ ಎದುರು ಜಯ ಗಳಿಸಿತು.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜೆಮ್ಶೆಡ್‌ಪುರ 2–1ರಲ್ಲಿ ಜಯ ಗಳಿಸಿತು.

37ನೇ ನಿಮಿಷದಲ್ಲಿ ಸೆಮಿನ್ಲೆನ್ ಡೊಂಗೆಲ್ ಜೆಮ್ಶೆಡ್‌ಪುರಕ್ಕೆ ಮೊದಲ ಗೋಲು ಗಳಿಸಿಕೊಟ್ಟರು. ಮಿಡ್‌ಫೀಲ್ಡ್‌ನಲ್ಲಿ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದ ಜಿತೇಂದ್ರ ಸಿಂಗ್ ವೇಗವಾಗಿ ಮುನ್ನುಗ್ಗಿದರು.

ಸೆಮಿನ್ಲೆನ್ ಡೊಂಗೆಲ್ ಓಡಿ ಬರುತ್ತಿರುವುದನ್ನು ಗಮನಿಸಿದ ಅವರು ಚೆಂಡನ್ನು ಅವರತ್ತ ತಳ್ಳಿದರು. ಡೊಂಗೆಲ್ ನಿಖರವಾಗಿ ಗೋಲುಪೆಟ್ಟಿಗೆಯತ್ತ ಒದ್ದು ಸಂಭ್ರಮಿಸಿದರು. 84ನೇ ನಿಮಿಷದಲ್ಲಿ ಅಲೆಕ್ಸಾಂಡರ್ ಲೀಮಾ ಅವರು ಜೆಮ್ಶೆಡ್‌ಪುರದ ಮುನ್ನಡೆ ಹೆಚ್ಚಿಸಿದರು. ಅಂಗಣದ ಮಧ್ಯಭಾಗದಿಂದ ಡ್ರಿಬಲ್ ಮಾಡುತ್ತ ಬಂದ ಬೋರಿಸ್ ಸಿಂಗ್ ಅವರಿಂದ ಚೆಂಡನ್ನು ಪಡೆದ ಲೀಮಾ ಸುಲಭವಾಗಿ ಗೋಲು ದಾಖಲಿಸಿದರು.

ಸೆಮಿನ್ಲೆನ್ ಡೊಂಗೆಲ್ ಸಂಭ್ರಮ – ಐಎಸ್‌ಎಲ್ ಚಿತ್ರ

89ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದ ಪ್ರೀತಂ ಕೊತಾಲ್ ಅವರು ಎಟಿಕೆಎಂಬಿ ಪಾಳಯದಲ್ಲಿ ನಿರೀಕ್ಷೆ ಮೂಡಿಸಿದರು. ಆದರೆ ಎದುರಾಳಿಗಳ ಭದ್ರ ಕೋಟೆ ಭೇದಿಸಿ ಸಮಬಲ ಸಾಧಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ.

ಮೊದಲ ಜಯದ ನಿರೀಕ್ಷೆಯಲ್ಲಿ ಬೆಂಗಾಲ್, ಗೋವಾ: ವಾಸ್ಕೊದಲ್ಲಿ ಮಂಗಳವಾರ ಎಫ್‌ಸಿ ಗೋವಾ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ತಂಡಗಳು ಸೆಣಸಲಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡೇವಿಸ್ ಕಪ್: ಡೆನ್ಮಾರ್ಕ್‌ಗೆ ಭಾರತ ಆತಿಥ್ಯ

ನವದೆಹಲಿ (ಪಿಟಿಐ): ಭಾರತವು ಮುಂದಿನ ವರ್ಷದ ಮಾರ್ಚ್‌ನಲ್ಲಿ ಡೆನ್ಮಾರ್ಕ್ ಎದುರಿನ ಡೇವಿಸ್ ಕಪ್ ವಿಶ್ವಗುಂಪು ಒಂದರ ಪಂದ್ಯಕ್ಕೆ ಆತಿಥ್ಯ ವಹಿಸಲಿದೆ. 2019ರ ಫೆಬ್ರುವರಿ ಬಳಿಕ ದೇಶವು ಮೊದಲ ಬಾರಿ ಡೇವಿಸ್ ಕಪ್ ಪಂದ್ಯ ಆಯೋಜಿಸಲಿದೆ.

ಡೆನ್ಮಾರ್ಕ್ ಎದುರಿನ ಪಂದ್ಯವು 2022ರ ಮಾರ್ಚ್ 4 ಹಾಗೂ 5ರಂದು ನಡೆಯಲಿದೆ.

ಭಾರತವು ಕಳೆದ ಮೂರು ಪಂದ್ಯಗಳನ್ನು ಆಡಲು ಫಿನ್ಲೆಂಡ್ (2021), ಕ್ರೊವೇಷ್ಯಾ (2020) ಮತ್ತು ಕಜಕಸ್ತಾನಕ್ಕೆ (2019, ಪಾಕಿಸ್ತಾನ ಎದುರಿನ ಪಂದ್ಯ) ತೆರಳಿತ್ತು.

2019ರ ಫೆಬ್ರುವರಿಯಲ್ಲಿ ಇಟಲಿ ತಂಡಕ್ಕೆ ಆತಿಥ್ಯ ವಹಿಸಿದ್ದ ಭಾರತ 1–3ರಿಂದ ಸೋತಿತ್ತು. ಕೋಲ್ಕತ್ತದಲ್ಲಿ ಈ ಹಣಾಹಣಿ ನಡೆದಿತ್ತು.

ಭಾರತದ ಎಲ್ಲ ಆಟಗಾರರಿಗಿಂತ ಹೆಚ್ಚಿನ ರ‍್ಯಾಂಕಿಂಗ್ ಹೊಂದಿರುವ ಸಿಂಗಲ್ಸ್ ವಿಭಾಗದ ಆಟಗಾರ ಹೋಲ್ಗರ್ ರೂನ್ (103) ಡೆನ್ಮಾರ್ಕ್ ತಂಡದಲ್ಲಿದ್ದಾರೆ. ಭಾರತದ ಪ್ರಜ್ನೇಶ್ ಗುಣೇಶ್ವರನ್ 215ನೇ ರ‍್ಯಾಂಕಿಂಗ್‌ನಲ್ಲಿದ್ದು, ಸುಮಿತ್ ನಗಾಲ್ 218ನೇ ಸ್ಥಾನದಲ್ಲಿದ್ದಾರೆ.

ಕ್ರಿಕೆಟ್: ಸೆಮಿಫೈನಲ್‌ಗೆ ಕರ್ನಾಟಕ ತಂಡ

ಬೆಂಗಳೂರು: ಕರ್ನಾಟಕ ತಂಡ ಬಿಸಿಸಿಐ ಆಯೋಜಿಸಿರುವ 25 ವರ್ಷದೊಳಗಿನವರ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಜಯ ಸಾಧಿಸಿತು. ಆಲೂರು ಒಂದನೇ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ 3 ವಿಕೆಟ್‌ಗಳಿಂದ ಗೆದ್ದಿತು..

ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 50 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 345 ರನ್ ಗಳಿಸಿತ್ತು. ಇದಕ್ಕೆ ಉತ್ತರಿಸಿದ ಕರ್ನಾಟಕ ಇನ್ನೂ 2 ಎಸೆತ ಬಾಕಿ ಇರುವಾಗ 7 ವಿಕೆಟ್ ಕಳೆದುಕೊಂಡು 351 ರನ್ ಗಳಿಸಿತು. ಈ ಮೂಲಕ ಸೆಮಿಫೈನಲ್ ಪ್ರವೇಶಿಸಿತು.

ಸಂಕ್ಷಿಪ್ತ ಸ್ಕೋರು: ಮುಂಬೈ: 50 ಓವರ್‌ಗಳಲ್ಲಿ 6ಕ್ಕೆ 345 (ದಿವ್ಯಾಂಶ್ 76, ರುದ್ರ ಧಂಡೆ 74, ಓಎಚ್ ಜಾಧವ್ 78, ಖಿಜರ್ ದಫೇದಾರ್ 72; ನಿಶ್ಚಿತ್ ರಾವ್ 47ಕ್ಕೆ4); ಕರ್ನಾಟಕ: 49.4 ಓವರ್‌ಗಳಲ್ಲಿ 7ಕ್ಕೆ 351 (ಲವನೀತ್ ಸಿಸೋಡಿಯ 48, ಶಿವಕುಮಾರ್ ಬಿಯು 52, ಅನೀಶ್ ಕೆ.ವಿ 56, ಕೃತಿಕ್ ಕೃಷ್ಣ 65, ಮನೋಜ್ ಭಾಂಡಗೆ ಔಟಾಗದೆ 67). ಫಲಿತಾಂಶ: ಕರ್ನಾಟಕಕ್ಕೆ 3 ವಿಕೆಟ್‌ಗಳ ಜಯ.

ಶಿವಕುಮಾರ್‌ಗೆ 4 ವಿಕೆಟ್: ಶಿವಕುಮಾರ್ ಮತ್ತು ಯಶೋವರ್ಧನ್ ಅವರ ಅತ್ಯುತ್ತಮ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡ 19 ವರ್ಷದೊಳಗಿನವರ ಕೂಚ್ ಬೆಹಾರ್ ಟ್ರೋಫಿ ಟೂರ್ನಿ ಪಂದ್ಯದಲ್ಲಿ ಮೇಲುಗೈ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಹರಿಯಾಣ: 91 ಓವರ್‌ಗಳಲ್ಲಿ 8ಕ್ಕೆ 196 (ಪಾರ್ಥ್ ವತ್ಸ್ 29, ಯಶ್ ವರ್ಧನ್ ಬ್ಯಾಟಿಂಗ್ 68,; ಯಶೋವರ್ಧನ್ ಪರಾಂತಪ್ 27ಕ್ಕೆ2, ಶಶಿಕುಮಾರ್ ಕೆ 25ಕ್ಕೆ4).